ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ

ದ್ವಿತೀಯರತ್ನವು—ಪ್ರಥಮಸಂಚಿಕೆ

ಶ್ರೀಮನ್ನಿಗಮಾಂತಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಗುರುಪರಂಪರಾಸಾರವು

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಭಾಷಾಂತರ ತಾತ್ಪರ್ಯಗಳೂ ಸಹ

ಕಾಪೀರೈಟು ರಿಜಿಸ್ಟರು ಮಾಡಲ್ಪಟ್ಟಿರುತ್ತದೆ

ಬೆಂಗಳೂರು ಸಿಟಿ

1925

ಕ್ರಯ ೧೨ ಆಣೆಗಳು

ಬೆಂಗಳೂರು ಸಿಟಿ
ಶ್ರೀ ಲಕ್ಷ್ಮೀನೃಸಿಂಹ ಮುದ್ರಣಾಲಯದಲ್ಲಿ
ಮುದ್ರಿಸಲ್ಪಟ್ಟಿದೆ — ೧,೦೦೦ — ೧೯೨೫.

K. Srinivasa-
Jayanagar

ಶ್ರೀಮತೆ ರಾಮಾನುಜಾಯನಮಃ

ಶ್ರೀಮತೆ ನಿಗಮಾಂತಮಹಾದೇಶಿಕಾಯನಮಃ

ಶ್ರೀಮತೆ ಶ್ರೀನಿವಾಸಮಹಾದೇಶಿಕಾಯನಮಃ

ಗುರುರೇವ ಪರಂಬ್ರಹ್ಮ ಗುರುರೇವ ಪರಾಗತಿಃ ।
ಗುರುರೇವ ಪರಾವಿದ್ಯಾ ಗುರುರೇವ ಪರಾಯಣಂ ॥
ಗುರುರೇವಪರಃಕಾಮಃ ಗುರುರೇವ ಪರಂಧನಂ ।
ಯಸ್ಮಾತ್ತದುಪದೇಷ್ಟಾಸೌ ತಸ್ಮಾದ್ಗುರುತರೋ ಗುರುಃ ॥

ಎಂಬ ಅಮೋಘೋಕ್ತ್ಯನುಸಾರವಾಗಿ, "ದೇಶಿಕೋ ಮೇ ದಯಾಳುಃ" ಎಂಬದಾಗಿ ಶ್ರೀನಿಗಮಾಂತದೇಶಿಕರವರು ಅಪ್ಪಣೆಕೊಡಿಸಿರುವ ಹಾಗೆ ಪರಮೋದಾರ ಭಾವದಿಂದ ಈ ಜೀವನನಿಗೆ ಮಾಡಿದ ಮಹೋಪಕಾರಕ್ಕೆ ಕೃತಜ್ಞತಾ ಸೂಚಕವಾಗಿ ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯರಾದ,

ಪರಮಹಂಸ ಪರಿವ್ರಾಜಕಾಚಾರ್ಯರಾದ,

ಸರ್ವತಂತ್ರ ಸ್ವಂತಂತ್ರೋಭಯ ವೇದಾಂತಾಚಾರ್ಯರಾದ,

ಭಗವದ್ರಾಮಾನುಜ ಸಿದ್ಧಾಂತ ನಿರ್ಧಾರಣಸಾರ್ವಭೌಮರಾದ,

ಶ್ರೀಮನ್ನಾಥಮುನಿ, ಶ್ರೀಮದ್ಯಾಮುನಮುನಿ, ಶ್ರೀಮದ್ರಾಮಾನುಜ ಮುನಿ ಮುನಿತ್ರಯರೂಪ ಸಿದ್ಧಾಂತಸ್ಥಾಪನಾಚಾರ್ಯರಾದ,

ಶ್ರೀಮನ್ನಾರಾಯಣಾರ್ಯ ಮಹಾದೇಶಿಕ ಕಟಾಕ್ಷಲಬ್ಧಸಾರ್ವಜ್ಞರಾದ,

ಶ್ರೀ ಶ್ರೀನಿವಾಸ ಮಹಾದೇಶಿಕರವರ

ದಿವ್ಯಚರಣಾರವಿಂದಗಳಲ್ಲಿ ಈ **ಗುರುಪರಂಪರಾಸಾರ** ವ್ಯಾಖ್ಯಾರೂಪಕೃತಿಯು ಈ ಶ್ರೀನಿವಾಸ ಮುನಿವರ್ಯರವರಿಗೆ ಶ್ರೀನಿಗಮಾಂತ ದೇಶಿಕರವರಲ್ಲಿರುವ ನಿರತಿಶಯ ಭಕ್ತಿಯನ್ನು ನೋಡಿ, ಶ್ರೀನಿಗಮಾಂತದೇಶಿಕರವರ ದಿವ್ಯಸೂಕ್ತಿಗಳನ್ನು ಪ್ರಚುರಗೊಳಿಸುವದೇ ಸ್ವಾಮಿಯವರಿಗೆ ಪ್ರಿಯತಮವಾದ ಕೈಂಕರ್ಯವೆಂದು ಭಾವಿಸಿ ಸಮರ್ಪಿಸಲ್ಪಟ್ಟಿರುತ್ತದೆ.

ತಿರುವಡಿದಾಸರ್.

ಚುಂಚನಕಟ್ಟೆ ಮೇಲುಕೋಟೆ ವಿಜಯರಾಘವಶರ್ಮಾ,

ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್, ಬೆಂಗಳೂರು ಸಿಟಿ.

ಶುದ್ಧಾಶುದ್ಧ ಪತ್ರಿಕೆ.

ಪುಟ	ಪಜ್ಜಿ	ಅಶುದ್ಧ	ಶುದ್ಧ
7	18	ಉತ್ಥಾಯೋತ್ಥಾಯ	ಉತ್ಥಾಯೋತ್ಥಾಯ
7	23	ನಮಃ	ನಮೋನಮಃ
10, 12 14, 16	1	ತ್ರಯಸಾರ	ತ್ರಯಸಾರೆ
28	14	ಸಹಸ್ರಾಣಾ	ಸಹಸ್ರಾಣಾಂ
30	4	ಭಗವತ್ಪ್ರಪತ್ತಿ	ಭಗವತ್ಪ್ರತಿಪತ್ತಿ
30	4	ಭಾಗವತಪ್ರಪತ್ತಿ	ಭಾಗವತಪ್ರತಿಪತ್ತಿ
31	1	ಶ್ಲೋಕಗಳಿಂದ	ಶ್ಲೋಕಗಳಾದ
32	20	ಹೇಳಿ	ಹೇಳಿದರೆಂದು
35	1	ಕಂಡ	ಕಂಡು
40	21	....	ಮಧುರಕವಿಯಾಳ್ವಾರವರ ಆಚಾರ್ಯನಿಷ್ಠೆಯನ್ನು ಕೊಂಡಾಡುತ್ತಾರೆಂಬುದು ಬಿಟ್ಟುಹೋಗಿರುತ್ತದೆ
47	25	ಆಚಾರ್ಯರಾದರೂ	ಆಚಾರ್ಯರಾದರೋ
63	20	ಶಾಜೇನ	ಶೌಜೇನ
64	14	ಮತ್ನಾಕ್	ಮಗ್ನಾಕ್
66	1	ಪರಾಯಣಃ	ಪರಾಯಣಾಃ
77	3	ಆಳ್ವಾರವರು	ಆಳ್ವಾರವರೂ ಮತ್ತು ನಮ್ಮಾಳ್ವಾರವರೂ
94	2	ಕ್ಷೀಯತೇ	ಕ್ಷೀಯೇತೆ
95	10	ಕ್ಷೀಯತೆ	ಕ್ಷೀಯೇತೆ
97	3	ಕಡುಗ	1 ಕಡುಗ
97	5	1 ರೈಕ್ವಾದಿ	ರೈಕ್ವಾದಿ
99	8	ಗೋಗಳು	ಗೋವುಗಳು
111	9	ಕೃಪೋದಾರ್ಯ	ಕೃಪೌದಾರ್ಯ
121	20	ನಿರಪನವು	ನಿರಸನವು
123	24	ಳವಂದಾರ್	ಆಳವಂದಾರ್
124	3	ತವಜಾರ್ಜುನ	ತವಚಾರ್ಜುನ
124	23	ಮತದ	ಮತ್ತು
124	24	ಮಾಡಿ	ಮಾಡಿದ
126	20	ಅವರಿಗ	ಅವರಿಗೆ

ವಿಜ್ಞಾಪನಾ.

ಈ ಅಮೋಘವಾದ **ಶ್ರೀಮದ್ರಹಸ್ಯತ್ರಯಸಾರಕ್ಕೆ ಆಚಾರ್ಯಹೃದಯಾನ್ವೇಷಿಣೀ** ಎಂಬ ಕನ್ನಡ ಅರ್ಥತಾತ್ಪರ್ಯಗಳನ್ನು ಬರೆಯುವದರಲ್ಲಿ ದಾಸನಿಗೆ ಎರಡು ಅಭಿಪ್ರಾಯಗಳುಂಟು—

ಒಂದನೇದು—ಸಂಸ್ಕೃತ, ತಮಿಳ್ ಭಾಷೆಗಳಲ್ಲಿ ಪರಿಶ್ರಮವಿಲ್ಲದ ಶ್ರೀವೈಷ್ಣವ ಮಂಡಲಿಯು ಇಂತಹ ಸರ್ವಶಾಸ್ತ್ರಸಾರಭೂತವಾದ ಗ್ರಂಥಸ್ವಾರಸ್ಯವೆಂಬ ಅಮೃತಪಾನಮಾಡದೆಯೂ ಅದರಿಂದುಂಟಾಗುವ ಶ್ರೇಯಸ್ಸಿಗೆ ಭಾಗಿಗಳಾಗದೆಯೂ ಇರುತ್ತಾರಲ್ಲಾ ಎಂಬ ಪರಿತಾಪದಿಂದ ಅಂಥಾವರಿಗೂ ಉಪಕಾರಕವಾಗಿ ಅವರೂ ಶಾಸ್ತ್ರಜ್ಞಾನವನ್ನು ಹೊಂದಲಿ ಎಂಬುದು.

ಎರಡನೇದು—ನಮ್ಮ ಸ್ತ್ರೀಯರುಗಳು ಇಂತಹ ಶಾಸ್ತ್ರಜ್ಞಾನಪರಿಚಯವೇ ಇಲ್ಲದೆ, ಹೀನಸ್ಥಿತಿಯಲ್ಲಿರುವದು ಯುಕ್ತವಲ್ಲವಾದುದರಿಂದ, ಅವರು ವ್ಯರ್ಥಕಾಲಕ್ಷೇಪವನ್ನು ತ್ಯಜಿಸಿ, ಆತ್ಮೋಜ್ಜೀವನಕ್ಕೆ ಬೇಕಾದ ಜ್ಞಾನವನ್ನು ಸಂಪಾದಿಸಿಕೊಳ್ಳಲಿ ಎಂಬುದು.

ಈ ಎರಡು ಕೋರಿಕೆಗಳೂ ಪೂರ್ಣವಾದುದಾದರೆ ದಾಸನ ಈ ಆಚಾರ್ಯಸೂಕ್ತಿಯನ್ನು ಪ್ರಚುರಗೊಳಿಸುವ ಕೈಂಕರ್ಯವು ಸಾರ್ಥಕ್ಯವನ್ನು ಹೊಂದಿತೆಂದು ಭಾವಿಸುವೆನು.

ಅಲ್ಪಾಸ್ಥಿರಫಲಪ್ರದಗಳಾದ ಐಹಿಕವ್ಯಾಪಾರಗಳಲ್ಲೇ ಮಗ್ನರಾಗಿ ಕಾಲವನ್ನೆಲ್ಲಾ ಕಳೆಯುವದರೊಂದಿಗೆ, ಇದ್ದಿದ್ದರಲ್ಲೇ ಸ್ವಲ್ಪ ಅವಕಾಶವನ್ನು ಮಾಡಿಕೊಂಡು ಪ್ರತಿದಿನದಲ್ಲೂ ಒಂದು ಅರ್ಧಘಂಟೆಯ ಕಾಲವನ್ನಾದರೂ ಕೊಟ್ಟು, ಇಂತಹ ಸಚ್ಛಾಸ್ತ್ರಗಳ ಸಾರತಮಭಾಗಗಳ ಉಪಪಾದನರೂಪವಾದ ಆಚಾರ್ಯಸೂಕ್ತಿಗಳನ್ನು ಅರ್ಥದೊಂದಿಗೆ ಪಠನಮಾಡುವದೂ ಅದರಂತೆ ಅನುವರ್ತನವೂ ಪರಮಪುರುಷಾರ್ಥದಾಯಕವು.

ಶ್ರೀಮದಾಚಾರ್ಯವರ್ಯರ ಸೂಕ್ತಿಯ ಭಾಷಾಂತರ ಭಾಗವನ್ನು ಬ್ರಾಕೆಟ್ಟುಗಳಿಲ್ಲದೆ ಮುದ್ರಿಸಿರುತ್ತದೆ. ಆಚಾರ್ಯಾನುಗ್ರಹದಿಂದ ಬರದ ತಾತ್ಪರ್ಯ ಉಪಪಾದನಭಾಗಗಳು ಬ್ರಾಕೆಟ್ಟುಗಳಲ್ಲಿರುವ ಹಾಗೆ ಮುದ್ರಿಸಿರುತ್ತದೆ.

ಇದರಲ್ಲಿ ಅನೇಕ ಲೋಪಗಳೂ ಸ್ಖಾಲಿತ್ಯಗಳೂ ಇರಬಹುದು. "ಹಂಸೋ ಯಥಾಕ್ಷೀರಮಿವಾಂಬುಮಿಶ್ರಂ" ಎಂದು ಹೇಳಿರುವಹಾಗೆ, ಅವುಗಳನ್ನು ಪರಿಗಣಿ

ಸದೆ ಸ್ವಾಮಿನಿಗಮಾಂತಮಹಾದೇಶಿಕರವರ ದಿವ್ಯಸೂಕ್ತಿಯಾಗಿ ಸಾರತಮಭಾಗ ಗಳನ್ನೊಳಗೊಂಡಿರುವದರಿಂದ ಸಾಧುಜನಗಳು ಪರಮಾದರದಿಂದ ಇದನ್ನು ಪರಿಗ್ರಹಿಸಲಿ ಎಂಬ ಪ್ರಾರ್ಥನೆಯು. ಹಾಗೆ ಭಾಗವತರು ಪರಿಗ್ರಹಿಸಿದರೇನೇ, ಈ ಕೈಂಕರ್ಯದಿಂದ "ಪ್ರೀಯತಾಂ ವಾಸುದೇವಃ" ಎಂಬ ನನ್ನ ಮನೋರಥವು ಸಫಲವಾದುದಾಗುತ್ತದೆ.

ಈ ಗ್ರಂಥಕಾಲಕ್ಷೇಪೋಕ್ತಮರೂಪವಾದ ಅನುಗ್ರಹವು ದಾಸನಿಗೆ ಅರಮನೆ ಮಹಾವಿದ್ವಾನರಾಗಿಯೂ ತಾರ್ಕಿಕಶಿಖಾಮಣಿಯಾಗಿಯೂ ಆದ ಉಭಯವೇದಾಂತಪ್ರವರ್ತಕರಾದ ಶ್ರೀಮಾನ್ ನುಗ್ಗೆಹಳ್ಳಿ ತಿರುಮಲಾಚಾರ್ಯರವರಿಂದ ದೊರೆತು, ಆ ಅನುಗ್ರಹವು ಈರೀತಿಯಾಗಿ ಮೂರ್ತೀಭವಿಸಿ ಗ್ರಂಥರೂಪವನ್ನು ತಾಳಿದುದರಿಂದ, ಈ ಮಹಾನುಭಾವರಿಗೆ ದಂಡವತ್ಪ್ರಣಾಮಗಳನ್ನು ಸಮರ್ಪಿಸುತ್ತೇನೆ.

ಈ ಗ್ರಂಥರಚನೆಯಲ್ಲಿ ಬೆಂಗಳೂರು ಕೊಲಿಜಿಯೇಟ್ ಹೈಸ್ಕೂಲ್ ಸಂಸ್ಕೃತ ಪಂಡಿತರಾದ ಉ|| ವೇ|| ಶ್ರೀಮಾನ್ ಹೆಮ್ಮಿಗೆ ಶ್ರೀನಿವಾಸೈಯ್ಯಂಗಾರ್ಯರವರು ತುಂಬಾ ಸಹಾಯಮಾಡಿ ಶ್ರಮವನ್ನು ವಹಿಸಿ ಪ್ರೂಫುಗಳನ್ನು ಪರಿಷ್ಕರಿಸಿದುದಕ್ಕಾಗಿ ಅವರಿಗೆ ಪ್ರಣಾಮಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇನೆ.

ಮುಂದಕ್ಕೆ "ಉಪೋದ್ಘಾತಾಧಿಕಾರ" ಮತ್ತು "ಸಾರನಿಷ್ಕರ್ಷಾಧಿಕಾರಗಳನ್ನು" ಒಟ್ಟಿಗೆ ಸೇರಿಸಿ, ಅರ್ಥತಾತ್ಪರ್ಯಗಳೊಂದಿಗೆ, ಮುದ್ರಿಸಿ ಕಳುಹಿಸಲ್ಪಡುತ್ತದೆ. ಪ್ರತಿಗಳನ್ನಪೇಕ್ಷಿಸುವವರು ಮುಂದಾಗಿ ತಿಳಿಸಿದರೆ ಪ್ರತಿಗಳು ಸಿದ್ಧವಾದ ಒಡನೆಯೇ ಕಳುಹಿಸಲ್ಪಡುತ್ತವೆ. ವಿ. ಪಿ. ಮೂಲಕ ಪುಸ್ತಕಗಳನ್ನು ಪಡೆಯುವದು ತುಂಬಾ ನಷ್ಟವಾದುದರಿಂದ ಮುಂಗಡವಾಗಿ ಮೂರು ರೂಪಾಯಿಗಳನ್ನು ಕಳುಹಿಸಿದರೆ ಲೆಖ್ಖವಿಟ್ಟು, ಪ್ರತಿಗಳು ಸಿದ್ಧವಾದ ಹಾಗೆಲ್ಲಾ ಕಳುಹಿಸಲ್ಪಡುವುವು. ಚಂದಾಮುಗಿದ ನಂತರ ಪತ್ರಮುಖೇನ ವಿಜ್ಞಾಪಿಸಿಕೊಳ್ಳುವೆನು.

ಶ್ರೀಕೃಷ್ಣಾರ್ಪಣಮಸ್ತು.

ಸಿ. ಯಂ. ವಿಜಯರಾಘವ ಶರ್ಮಾ,
ರಿಟೈರ್ಡ್ ಸರ್ಕಲ್ ಇನ್‌ಸ್ಪೆಕ್ಟರ್, ಬಸವನಗುಡಿ.

ಬೆಂಗಳೂರು,
1-12-1925.

ಶ್ರೀ ಸೀತಾರಾಮಾಯನಮಃ,



ಶ್ರೀಮತೇ ರಾಮಾನುಜಾಯನಮಃ.

ಶ್ರೀ ಮತೆ ನಿಗಮಾಂತ ಮಹಾದೇಶಿಕಾಯನಮಃ.

ಶ್ರೀಮತೆ ಶ್ರೀನಿವಾಸ ಮಹಾದೇಶಿಕಾಯನಮಃ.

ಶ್ರೀಮದ್ರಹಸ್ಯತ್ರಯಸಾರಂ.

ಶ್ರೀ ನಾರಾಯಣ ಯೋಗೀಂದ್ರ ವರದಾರ್ಯ ಕೃಪಾಶ್ರಯಂ ।
ರಂಗೇಶಪಾದವಿನತಂ ಶ್ರೀನಿವಾಸಮುನಿಂ ಭಜೆ ॥
ಶ್ರೀಮಾ ವೇಂಕಟನಾಥಾರ್ಯಃ ಕವಿತಾರ್ಕಿಕಕೇಸರೀ ।
ವೇದಾಂತಾಚಾರ್ಯವರ್ಯೋ ಮೆ ಸನ್ನಿಧತ್ತಾಂ ಸದಾಹೃದಿ ॥

ಅಖಿಲಹೇಯ ಪ್ರತ್ಯನೀಕನಾಗಿಯೂ ಅನಂತ ಕಲ್ಯಾಣ ಗುಣ ಗಣ ಮಹೋದಧಿಯಾಗಿಯೂ ಇರುವ ಶ್ರಿಯಃಪತಿಯು, ತನ್ನ ನಿರತಿಶಯ ಕೃಪೋದಾರ ಭಾವಗಳಿಂದ ಈ ಜಗತ್ತಿನ ಜೀವಕೋಟಿಯು ಉಜ್ಜೀವಿಸಲಿ ಎಂಬ ಸತ್ಯ ಸಂಕಲ್ಪದಿಂದ ಪೆರಿಯಾಳ್ವಾರ್, ನಮ್ಮಾಳ್ವಾರ್ ಮೊದಲಾದ ಆಳ್ವಾರುಗಳನ್ನೂ, ಶ್ರೀಮನಾಥಮುನಿ, ಆಳವಂದಾರ್, ಯತಿರಾಜರಾದ ಮುನಿತ್ರಯರನ್ನೂ, ಅವರುಗಳ ಶಿಷ್ಯ ಪ್ರಶಿಷ್ಯರುಗಳು ಮುಂತಾದ ಆಚಾರ್ಯ ಪರಂಪರೆಗಳನ್ನೂ, ಈ ಭರತಖಂಡದಲ್ಲಿ ಅವತರಿಸುವಹಾಗೆ ಮಾಡಿದನು. ಇವರುಗಳೆಲ್ಲಾ ಅನುಗ್ರಹಿಸಿದ ನಮ್ಮ ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದನಾರೂಪವಾದ ದಿವ್ಯಸೂಕ್ತಿಗಳನ್ನೆಲ್ಲಾ ಸ್ಥಿರೀಕರಿಸಿ ಶ್ರೀ ಭಾಷ್ಯಕಾರ ಸಿದ್ಧಾಂತವು ಜಗನ್ನಾಗಿ ಪ್ರಕಾಶಿಸುವ ಹಾಗೆ ಮಾಡುವದಕ್ಕೋಸ್ಕರ ಸ್ವಾಮಿ ಶ್ರೀನಿವಾಸನು ತನ್ನ ಘಂಟಾರೂಪದಲ್ಲಿರುವ ದಿವ್ಯಸೂರಿಗಳನ್ನು "ತೂಪ್ಪಿಲ್ ಪಿಳ್ಳೆ" ಯಾದ ವೇದಾಂತ ದೇಶಿಕರಾಗಿ ಅವತರಿಸುವ ಹಾಗೆ ಮಾಡಿ ಅವರಿಗೆ ದಿವ್ಯ ಚಕ್ಷುಸ್ಸು ಜ್ಞಾನ ಮೊದಲಾದವುಗಳನ್ನು ಕೃಪೆಗೈದು, ಪೂರಾ

ಚಾರ್ಯರುಗಳೆಲ್ಲಾ ಅನುಗ್ರಹಿಸಿದ ವಿಷಯಗಳನ್ನೆಲ್ಲಾ ವಿಶದೀಕರಿಸಿ ವಿಚಿತ್ರವಾದ ಕವಿತಾ ಶಕ್ತಿಮೂಲಕ ಗ್ರಂಥಗಳನ್ನು ರಚಿಸಿ ಎಂಭತ್ತು ವರುಷಕಾಲ ಶಾಸ್ತ್ರಜ್ಞಾನ ಪ್ರಕಾಶವನ್ನುಂಟುಮಾಡುವಹಾಗೆ ದಯ ಪಾಲಿಸಿದನು. ಆ ಗ್ರಂಥಗಳಲ್ಲಿ ಮುಖ್ಯವಾದುದು, ಮುಮುಕ್ಷುವಾದವನು ಪರಮಾದರದಿಂದ ಗ್ರಹಿಸಬೇಕಾಗಿ, ಸಾರತಮ ವಿಷಯಗಳನ್ನೆಲ್ಲಾ ಒಳಗೊಂಡಿರುವ ಶ್ರೀಮದ್ರಹಸ್ಯತ್ರಯಸಾರವೆಂಬ ಈಅಪೂರ್ವವಾದ ಪ್ರಬಂಧವಾಗಿರುತ್ತದೆ. ಇಂತಹ ಪರಮೋಪಕಾರಕರಾದ ಈ ಆಚಾರ್ಯವರ್ಯರ ವಿಷಯದಲ್ಲಿ ಕೃತಜ್ಞತಾಪೂರ್ವಕ ಗುರುಭಕ್ತಿಯು ಅನೇಕರಿಗಿರುವುದು ಅತಿಶಯವಾದುದೇನೂ ಅಲ್ಲವು. ಇಂತಹ ಸಾರತಮವಾದ ವಿಷಯವು ಸ್ತ್ರೀಮೊದಲಾಗಿ ಸರ್ವರಿಗೂ ಉಪಕಾರಕವಾಗಿರಲಿ ಎಂಬ ಪರಮ ಕೃಪೆಯಿಂದ ತಮಿಳ್ ಭಾಷೆಯಲ್ಲಿಯೇ ಬರದಿರುತ್ತಾರೆ. ಇದರಲ್ಲಿ ಮೊದಲಿರುವ ಗುರು ಪರಂಪರಾ ಸಾರವಲ್ಲದೆ ೫೨ ಅಧಿಕಾರಗಳುಂಟು. ತಾವು ಬರದಿರುವಈ ಗ್ರಂಥರತ್ನವು ಶ್ರುತಿ ಸ್ಮೃತಿ ಪುರಾಣೇತಿಹಾಸ ಭಗವಚ್ಛಾಸ್ತ್ರ ವ್ಯಾಸ ಸೂತಾದಿ ಪ್ರಮಾಣಗಳನ್ನನುಸರಿಸಿಯೇ ಇರುತ್ತದೆಂಬುವದನ್ನು ಸ್ಥಿರಪಡಿಸುವದಕ್ಕಾಗಿ ಅಂತಹ ಪ್ರಮಾಣಗಳನ್ನು ಪ್ರತಿ ಸಂದರ್ಭದಲ್ಲೂ ವಿಪುಳವಾಗಿ ಉದಾಹರಿಸಿರುತ್ತಾರೆ. ಇದರಲ್ಲಿ ಮುಖ್ಯವಾಗಿ ಉಪಪಾದಿತವಾಗಿರುವದು ಸರ್ವ ಶಾಸ್ತ್ರ ಸಮ್ಮತವಾದ ಮೋಕ್ಷೋಪಾಯವು. ಈ ಗ್ರಂಥದ ಸಾರಾಂಶ ವೇನಂದರೆ:—ಚೇತನನಿಗೆ ಈಶ್ವರ ಕೃಪೆಯಿಂದ ಕರ್ಮ ಪರಿಪಾಕ ಉಂಟಾಗುವ ಕಾಲದಲ್ಲಿ ಜ್ಞಾನವಿಲ್ಲವೇ ಎಂಬ ಖೇದವು ಅತನಿಗೆ ಉಂಟಾಗಿ, ಆಗ ಸ್ವಾಮಿ ಕೃಪೆಯು ಅತನನ್ನು ಸದ್ಗುರುವನ್ನು ಹೊಂದುವಹಾಗೆಮಾಡುತ್ತದೆ. ಆ ಸದ್ಗುರುವಿನ ಕೃಪೆಯಿಂದ ಜ್ಞಾನವನ್ನು ಸಂಪಾದಿಸಿಕೊಂಡು ಶಾಸ್ತ್ರದಲ್ಲಿ ಮುಮುತೆಯು ಹುಟ್ಟಿ ಜ್ಞಾನ ಸಂಪಾದನೆಯಲ್ಲಿ ಸಾರತಮವಾದುದು ರಹಸ್ಯತ್ರಯಜ್ಞಾನವೆಂಬ ನಿಷ್ಕರ್ಷೆಯು ಸದ್ಗುರುವಿನ ಉಪದೇಶ ಬಲದಿಂದುಂಟಾಗುತ್ತದೆ. ಈ ರಹಸ್ಯತ್ರಯದ ಸಾರರಸ್ಯವನ್ನು ಗ್ರಹಿಸಲು ಪ್ರಥಮತಃ ತಿಳಿಯಬೇಕಾದುದು, ಪ್ರತಿತಂತ್ರ ರೂಪವಾದ ಯಥಾರ್ಥವಾದ ಸಿದ್ಧಾಂ

ತವೂ, ದೇಹಾತ್ಮ ಸಂಬಂಧವೂ, ಸ್ವಾಮಿಗೂ ತನಗೂ ಜಗತ್ತಿಗೂ ಇರುವ ಸಂಬಂಧವೂ ಎಂಬಪರಿಗಿ ಹೇಳಿ ಅವುಗಳೆಲ್ಲಾ ಬಹು ಸ್ಪುಟವಾಗಿ ಚರ್ಚಿಸಲ್ಪಡುತ್ತದೆ. ಅನಂತರ ಅರ್ಥಪಂಚಕವನ್ನು ತಿಳಿದವನೀಗ ಜ್ಞಾನಿ ಎಂಬದಾಗಿ ಹೇಳಿ, ಸರ್ವಶಾಸ್ತ್ರಗಳೂ, ಈ ಮಂತ್ರಗಳಾದ ರಹಸ್ಯ ತ್ರಯವೂ, ಆ ಅರ್ಥ ಪಂಚಕವನ್ನೇ ವಿಶದವಾಗಿ ಬೋಧಿಸುತ್ತವೆಂಬುವದನ್ನು ಹೇಳುವದಕ್ಕಾಗಿ ಅರ್ಥಪಂಚಕವು ಆವುದೆಂಬುವದನ್ನುಪದೇಶಿಸುತ್ತಾರೆ. ಮುಮುಕ್ಷುವಾದ ಚೇತನನಿಗೆ ಮುಖ್ಯವಾಗಿ ಪ್ರಕೃತ್ಯಾತ್ಮ ಭ್ರಾಂತಿಯೂ, ಸ್ವತಂತ್ರಾತ್ಮ ಭ್ರಾಂತಿಯೂ ತೊಲಗಬೇಕಾದ ಪ್ರಯುಕ್ತ, ತತ್ವತ್ರಯವಾದ ಚಿದಚಿದೀಶ್ವರರುಗಳ ಸ್ವರೂಪ ಸ್ಥಿತಿ ಪ್ರವೃತ್ತಿ ಭೇದಗಳೇ ಮೊದಲಾದವುಗಳ ಜ್ಞಾನವಿಲ್ಲದೆ ಇವುಗಳ ನಿವೃತ್ತಿ ಯುಂಟಾಗಲಾರದೆಂದು ಭಾವಿಸಿ, ತತ್ವತ್ರಯಾದಿ ನಿರೂಪಣವನ್ನು ಮಾಡುತ್ತಾರೆ. ಸ್ವಾಮಿಯಲ್ಲಿ ನಿಶ್ಚಲವಾದ ಭಕ್ತಿಯುಂಟಾಗಿ ವಿಕಾಂತಿ, ಪರಮೈಕಾಂತಿ ಎನಿಸಲು ಮೊದಲು ಪರಮಾರ್ಥ ಪರದೇವತೆಯಾರೆಂದು ತಿಳಿಯುವದು ಅತ್ಯಾವಶ್ಯಕವಾದುದರಿಂದ ಅಂತಹ ಪರಮಾರ್ಥ ಪರದೇವತೆಯು ಲಕ್ಷ್ಮೀನಾರಾಯಣನೆಂದು ಸ್ಥಾಪಿಸಿ, ಮೋಕ್ಷಾರ್ಥಿಗೆ ಶರಣಾಗತಿ ಧರ್ಮದಲ್ಲಭಿರುಚಿಯುಂಟಾಗಿ ಅಧಿಕಾರಿಯೆನಿಸುವದಕ್ಕೆ ಮೋಕ್ಷದಲ್ಲಿನ ನಿರತಿಶಯಾನಂದಕ್ಕೂ, ಸಂಸಾರದಲ್ಲಿರುವ ಅನಂತ ದುಃಖಗಳಿಗೂ, ಇರುವ ವ್ಯತ್ಯಾಸವನ್ನು ಬಹು ನಿಪುಣತರವಾಗಿ ತೋರ್ಪಡಿಸಿರುತ್ತಾರೆ.ಅನಂತರ ಮೋಕ್ಷಾರ್ಥಿಗೆ ಎರಡೇ ಮಾರ್ಗವಗಳೇ ಇರುವವೆಂದೂ, ಅವು ಭಕ್ತಿ ಪ್ರಪತ್ತಿಗಳೆಂದೂ ಹೇಳಿ, ಅವುಗಳಿರುವ ಪರಸ್ಪರ ವೈಲಕ್ಷಣ್ಯವನ್ನು ತೋರಿಸಿ, ಅವುಗಳಲ್ಲಿ ಶಕ್ತನಿಗೆ ಭಕ್ತಿ ಮಾರ್ಗವೇ ಉಪಾಯವೆಂಬದಾಗಿಯೂ, ಅಶಕ್ತನಿಗೆ ಪ್ರಪತ್ತಿಯೇ ಸುಲಭಮಾರ್ಗವೆಂಬದಾಗಿಯೂ ಹೇಳುತ್ತಾರೆ. ಅನಂತರ ಮುಮುಕ್ಷುವು ಹೇಗಿದ್ದರೆ ಅಶಕ್ತನೆಂಬುವದನ್ನುಪಪಾದನೆ ಮಾಡುತ್ತಾರೆ. ಮೋಕ್ಷಸಾಧನೋಪಾಯ ಚರ್ಚೆಯನ್ನ ನಂತರ ಹಿಡಿದಪರಾಗಿ ಉಪಾಯವು ಸಿದ್ಧೋಪಾಯ, ಸಾಧ್ಯೋಪಾಯವೆಂದು ಎರಡು ವಿಧವೆಂಬದಾಗಿಯೂ ಅದರಲ್ಲಿ ಸಿದ್ಧೋಪಾಯವು ಸರ್ವೇಶ್ವ

ರನೇ ಎಂಬವಾಗಿಯೂ, ಸಾಧ್ಯೋಪಾಯಗಳು ಭಕ್ತಿ ಪ್ರಪತ್ತಿ ಮಾರ್ಗಗಳೆಂಬವಾಗಿಯೂ, ಈ ಪ್ರಪತ್ತಿ ಮಾರ್ಗದಲ್ಲಿ ಸಮಸ್ತ ಅಶಕ್ತರಿಗೂ, ಚಂಡಾಲ ಮೊದಲುಗೊಂಡು ಸಮಸ್ತ ವರ್ಣದ ಜನರಿಗೂ ಅಧಿಕಾರ ಉಂಟೆಂಬುದು ಶ್ರುತಿ ಸ್ಮೃತಿ ಸಮ್ಮತವಾದ ವಿಷಯವೆಂಬದಾಗಿ ಸ್ಥಾಪಿಸುತ್ತಾರೆ. ತದನಂತರ ಪ್ರಪತ್ತ್ಯನುಷ್ಠಾನ ಕ್ರಮದಲ್ಲಿ ಅದಕ್ಕೆ ಅಂಗಗಳಾವುವು, ಅಂಗಿಯಾವುದು ಎಂಬುದಂ ತಿಳಿಸಿ, ಅನುಷ್ಠಾನ ಕ್ರಮವನ್ನುಪಪಾದಿಸಿ, ಅಂತಹ ಪ್ರಪದನಾನುಷ್ಠಾನಾನಂತರ ಮುಮುಕ್ಷುವು ಕೃತ ಕೃತ್ಯನೆಂಬದಾಗಿಯೂ, ಅಂತವನು ಸ್ವನಿಷ್ಠೆಯು ಮಾಹಾತ್ಮ್ಯಯುನ್ನರಿತವನಾಗಿರಬೇಕೆಂಬದಾಗಿಯೂ, ಅಧ್ಯಾತ್ಮ ವಿದ್ಯೆಯಲ್ಲಭಿರುಚಿಯುಳ್ಳವನಾಗಿ ಭಾಗವತರೊಂದಿಗೆ ಸೇರಿ, ಬ್ರಹ್ಮವಿದ್ಯೆಯನ್ನು ಸಂಗ್ರಹಿಸುತ್ತಾ ತನ್ನ ಶಿಷ್ಯರಿಗೆ ಅದನ್ನುಪದೇಶಿಸುತ್ತಾ ನಿತ್ಯ ಕರ್ಮಾನುಷ್ಠಾನನಿರತನಾಗಿ ಭಗವತ್ಕೈಂಕರ್ಯಗಳನ್ನಿಸಗುತ್ತಿರಬೇಕೆಂದು ಹೇಳಿದ್ದಲ್ಲದೆ, ಈ ಭಗವತ್ಕೈಂಕರ್ಯಕ್ಕೆ ಭಾಗವತ ಕೈಂಕರ್ಯದವರಿವಿಗೂ ಅನ್ವಯವೆಂಬುವದನ್ನು ಸ್ಪಷ್ಟ ಪಡಿಸಿದವರಾಗಿ ಶಾಸ್ತ್ರೀಯ ನಿಯಮನ ಪ್ರಕಾರ ಈತನು ವರ್ತಿಸತಕ್ಕದ್ದೆಂದು ವಿಧಿಸಿರುತ್ತಾರೆ. ಅಂತಹ ಕೃತಕೃತ್ಯನು ಸಾಪರಾಧಿಯಾದರೆ ಅದಕ್ಕೆ ಪರಿಹಾರ ಹೇಗೆಂಬುವದನ್ನು ತೋರ್ಪಡಿಸಿರುತ್ತಾರೆ. ಆ ಮೇಲೆ ಅಂತಹ ಕೃತ ಕೃತ್ಯನು ಎಂತಹ ಸ್ಥಾನ ವಿಶೇಷದಲ್ಲಿ ವಸಿಸತಕ್ಕದ್ದೆಂಬುವದನ್ನು ಚರ್ಚಿಸಿ, ದೇಹಾವಸಾನಕಾಲದಲ್ಲಿ ಜೀವನ ನಿರ್ಯಾಣ ಪ್ರಕಾರವನ್ನೂ, ಅರ್ಚಿರಾದಿ ಮಾರ್ಗಗಳಲ್ಲವನಿಗುಂಟಾಗುವ ಸತ್ಕಾರಗಳನ್ನೂ ಅನಂತರ ಪೂರ್ಣ ಬ್ರಹ್ಮಾನುಭವವನ್ನೂ ಬಹು ವಿಶದವಾಗಿ ವರ್ಣಿಸಿರುತ್ತಾರೆ.

ಅನಂತರ ಸ್ಥಿರೀಕರಣರೂಪವಾದ ದ್ವಿತೀಯ ಭಾಗದಲ್ಲಿ, ಸಿದ್ಧೋಪಾಯ ಸಾಧ್ಯೋಪಾಯಗಳ ಚರ್ಚೆಯನ್ನು ಅಂಗೀಕರಿಸಿರಾಗಿ, ಸಿದ್ಧೋಪಾಯನು ಲಕ್ಷ್ಮೀವಿಶಿಷ್ಟನಾದ ನಾರಾಯಣನೇ ಎಂಬದಾಗಿ ಸ್ಥಾಪನವಮಾಡಿ, ಇತರರು ಲಕ್ಷ್ಮಿಗೆ ಉಪಾಯತ್ವದಲ್ಲಿ ಸಂಧವಿಲ್ಲವೆನ್ನುವ ಪೂರ್ವ ಪಕ್ಷವನ್ನು ಖಂಡಿಸುತ್ತಾರೆ; ಇನ್ನೂ ಸಾಧ್ಯೋಪಾಯ

ವಾದ ಪ್ರಪತ್ತಿ ಧರ್ಮದ, ಅಧಿಕಾರ, ಸ್ವರೂಪ, ಪರಿಕರಂಗಳಲ್ಲಿ ಇತರರು ಹೇಳುವ ಶಂಕಾಗಳನ್ನು ನಿರಾಕರಿಸಿ, ಅವುಗಳ ಸರಿಯಾದ ಅಭಿಪ್ರಾಯಗಳನ್ನು ತಿಳಿಸುತ್ತಾರೆ. ಪ್ರಪತ್ತಿ ಧರ್ಮದ ಮಾಹಾತ್ಮ್ಯವನ್ನು ಅತಿಶಯೋಕ್ತಿಯಿಂದ ಹೇಳುವದೂ, ಅದರ ಮಾಹಾತ್ಮ್ಯವನ್ನು ತಗ್ಗಿಸಿ ಹೇಳುವದೂ, ಈ ಎರಡೂ ಅಶಾಸ್ತ್ರೀಯವಾದುದೆಂದು ಹೇಳಿ, ಅಂತವರಭಿಪ್ರಾಯವು ಸರ್ವಾತ್ಮನಾಗ್ರಾಹ್ಯವಲ್ಲವೆಂದು ತಿಳಿಸುತ್ತಾರೆ.

ಆಮೇಲೆ ಮೂರನೇ ಭಾಗದಲ್ಲಿ ಮೂರು ಅಧಿಕಾರಗಳಿಂದ ಮೂಲ ಮಂತ್ರ, ದ್ವಯ, ಚರಮ ಶ್ಲೋಕಗಳಾದ ಮೂರು ರಹಸ್ಯಗಳ ಅನೋಕ್ಷಾರ್ಥ, ತಾತ್ಪರ್ಯ, ಮಹಿಮೆಗಳು ಬಹು ಸ್ವಾರಸ್ಯವಾಗಿಯೂ ವಿಶದವಾಗಿಯೂ ಉಪಪಾದಿಸಲ್ಪಟ್ಟವೆ. ಇಷ್ಟು ಅಭಿಪ್ರಾಯಗಳು ಈ ಮಂತ್ರಗಳನ್ನು ಒಳಗೊಂಡಿವೆಯೇ ಎಂಬದಾಗಿ ಮನವು ಆಶ್ಚರ್ಯ ಪಡುವಹಾಗೆ ವಿಶದೀಕರಿಸಲ್ಪಟ್ಟವೆ.

ಕೊನೆಗೆ ನಾಲ್ಕನೇ ಭಾಗದಲ್ಲಿ ಆಚಾರ್ಯ ಕೃತ್ಯವೆಂಥಾದ್ದಾಗಿರಬೇಕೆಂಬವಾಗಿಯೂ, ಶಿಷ್ಯ ಕೃತ್ಯವು ಎಂಥಾದ್ದಾಗಿರಬೇಕೆಂಬದಾಗಿಯೂ ಹೇಳಿ, ಈ ಅಸದೃಶವಾದ ಗ್ರಂಥದ ಪರಿಸಮಾಪ್ತಿಯನ್ನು ಮಾಡಿರುತ್ತಾರೆ.

ಇಂತಹ ದಿವ್ಯ ಗ್ರಂಥರತ್ನವನ್ನು ವಿಶಿಷ್ಟಾದ್ವೈತ ಸಿದ್ಧಾಂತ ಸಂಪಕರಾದ ಯತಿವರ್ಯರ ದಿವ್ಯ ಸೂಕ್ತಿಗಳಿಗೇನೇ ತಮ್ಮ ಕಾಲವೆಲ್ಲಾ ಕೊಟ್ಟ ಈ ಮಹನೀಯರಾದ ಶ್ರೀ ಮನ್ನಿಗಮಾಂತ ದೇಶಿಕರವರು ರಚಿಸಿರುವದರಿಂದ ಪ್ರತಿಯೊಬ್ಬ ವಿಶಿಷ್ಟಾದ್ವೈತಿಯು ತನ್ನ ಲೌಕಿಕ ಕಾರ್ಯಗಳ ಮಧ್ಯದಲ್ಲಿ ಸ್ವಲ್ಪ ಅವಕಾಶ ಮಾಡಿಕೊಂಡು,ಅಂತಹ ಕಾರ್ಯಗಳಲ್ಲೇ ಮಗ್ನನಾಗದೆ ಪಠನವಾಡಿ ಪ್ರಪತ್ತಿ ಮಾರ್ಗವನ್ನು ಅವಲಂಬಿಸತಕ್ಕದ್ದು ಮುಖ್ಯ ಕರ್ತವ್ಯವಾಗಿದೆ.

ಈ ಗ್ರಂಥೋಪ ಕ್ರಮವು ಗುರುಮುಖೇನ ಉಪದೇಶರೀತ್ಯಾ ನಡೆಯು ಬೇಕಾದುದರಿಂದ, ಪ್ರಕರಣಾನುಷ್ಠಾನವು ಎಲ್ಲಿ ನಡೆಯ ಬೇ

ಕೆಂಬ ಉದ್ದೇಶವಿರುತ್ತೋ ಆ ಗುರುವಿನ ಮೂಲಕವಾಗಿ ಉಪದೇಶವನ್ನು ಹೊಂದತಕ್ಕದ್ದು. ಆದರೆ ಗ್ರಂಥವು ವಿಪುಳವಾದುದರಿಂದಲೂ ಆದರಲ್ಲಿರುವ ವಿಷಯಗಳನ್ನು ಚನ್ನಾಗಿ ಗ್ರಹಿಸಬೇಕಾದರೆ ಹೆಚ್ಚು ಕಾಲವು ಬೇಕಾದುದರಿಂದಲೂ ಪೂರ್ತಿಯಾಗಿ ಅವರ ಸಾನ್ನಿಧ್ಯದಲ್ಲೇ ಕಾಲಕ್ಷೇಪ ನಡಿಯುವದು ದುಸ್ತರವಾದುದರಿಂದ ಶಾಂತಿಯನ್ನು ಮಾಡಿ ಸಾವಕಾಶದಿಂದ ಸಮಯ ದೊರತ ರೀತ್ಯಾ ಯಥಾಶಕ್ತ್ಯಾ, ಕಾಲಕ್ಷೇಪವನ್ನು ನಡಿಸಬಹುದು. ಅಂಥಾವರುಗಳಿಗೆ ಸ್ವಲ್ಪ ಸಹಕಾರಿಯಾಗಿರಲಿ ಎಂಬಭಿಪ್ರಾಯದಿಂದ, ಆಚಾರ್ಯರು ಬರದಿರುವ ಈ ದಿವ್ಯಗ್ರಂಥಕ್ಕೆ ಕನ್ನಡ ಭಾಷಾಂತರವನ್ನೂ ಸ್ವಲ್ಪ ಕಷ್ಟವಾದ ಭಾಗಗಳಿಗೆ ತಾತ್ಪರ್ಯವನ್ನೂ ಬರದಿರುತ್ತೇನೆ. ಇದರಿಂದ ಕೆಲವರಿಗಾದರೂ ಪ್ರಯೋಜನ ಉಂಟಾದರೆ ಮುಮುಕ್ಷುವಾದ ಈ ಚೇತನನ ಕೈಂಕರ್ಯವು ಸಾರ್ಥಕ್ಯವನ್ನು ಹೊಂದಿತೆಂಬುದಾಗಿ ಭಾವಿಸುವೆನು.

ಈ ಪ್ರಪದನಾನುಷ್ಠಾನವು ಗುರುಮುಖೇನವೇ ಅನುಷ್ಠಿಸತಕ್ಕದ್ದು ವಿಧಾಯಕವೆಂಬುದನ್ನು ಸೂಚಿಸುವದಕ್ಕಾಗಿಯೂ, ಈ ಗುರುಪರಂಪರೆಯು ಅವೋಘ ಶಾಸ್ತ್ರಾರ್ಥಗಳನ್ನು ಯಥಾರ್ಥವಾಗಿ ಸರ್ವಸಮಂಜಸವಾಗಿ ತಿಳಿಯಲು ಸಹಾಯ ಮಾಡಿದುದಕ್ಕಾಗಿಯೂ, ವೇದಶಾಸ್ತ್ರಗಳಿಗೆ ಅಪಾರ್ಥಕಲ್ಪನೆ ಮಾಡಿದವರನ್ನು ಖಂಡಿಸಿ ಸಮೀಚೀನಾರ್ಥಗಳನ್ನು ಬೋಧಿಸಿದ್ದಕ್ಕಾಗಿಯೂ, ಆ ಕಾರಣದಿಂದ ತಮಗೆ ಅವರಲ್ಲಿರುವ ಅತ್ಯಂತ ಭಕ್ತಿ ವಿಶ್ವಾಸ ಕೃತಜ್ಞತಾ ಭಾವಗಳನ್ನು ಸೂಚಿಸುವದಕ್ಕಾಗಿಯೂ, ಇಂತಹ ಸಾರತಮವಾದ ವಿಷಯಗಳನ್ನು ಬರಿತು ಬರೆಯಲು ಉದ್ಯುಕ್ತರಾಗಿರುವ ತಮ್ಮ ಸಂಕಲ್ಪವು ಈಡೇರುವದಕ್ಕಾಗಿಯೂ, ಮೊದಲು "ಗುರುಪರಂಪರಾಸಾರವೆಂಬ ಹೆಸರಿನ ಮುಖ್ಯವಾದ ಗುರುಗಳನ್ನು ಸ್ತೋತ್ರ ಮಾಡಿ ಅವರುಗಳಿಂದುಂಟಾದ ಮಹೋಪಕಾರಗಳಾವುವೆಂಬುವದನ್ನು ನಮ್ಮ ಅವಗಾಹನೆಗೆ ತರುತ್ತಾ.

ಗುರುಭ್ಯಸ್ತದ್ಗುರುಭ್ಯಶ್ಚ ನಮೋವಾಕ ಮಧೀಮಹೆ।
ವೃಣೇಮಹೇಚ ತತ್ಪಾದ್ಯೌ ದಂಪತೀ ಜಗತಾಂಪತೀ ॥೧॥

ಅರ್ಥ:-ಇಷ್ಟೆಲ್ಲಾ ಉಪಕಾರ ಮಾಡಿದವರಿಗೆ ಪ್ರಥಮ ಕೈಂಕರ್ಯವು ಪ್ರಣಾಮ ಸಮರ್ಪಣೆಯೆಂದು ಭಾವಿಸಿ, "ಗುರುಭ್ಯಸ್ತದ್ಗುರುಭ್ಯಃ" ಎಂಬದಾಗಿ ಪ್ರಾರಂಭಿಸಿರುತ್ತಾರೆ. "ಅಧೀಮಹೆ" ಎಂಬದಾಗಿ ಹೇಳಿರುವದರಿಂದ ಪ್ರಣಾಮವು ಪುನಃ ಪುನಃ ಮಾತತಕ್ಕದ್ದು ಕರ್ತವ್ಯವೆಂಬದಾಗಿ ತೋರುತ್ತದೆ. "ಸಕೃದೇವ ಪ್ರಪನ್ನಾಯ" ಎಂಬದಾಗಿ ಹೇಳಿರುವದರಿಂದ ಪ್ರಣಾಮವು ಸರ್ವೇಶ್ವರನಿಗೂ ಗುರುಗಳು ಮುಂತಾದವರುಗಳಿಗೂ ಸಹ ಬಂದೇ ಸಲಮಾಡಿದರೆ ಸಾಕೆಂಬುವದು ಕೆಲವರ ಮತವು. "ಸಕೃದೇವ ಪ್ರಪನ್ನಾಯ" ಎಂದು ಆರಂಭಿಸಿದ ಶ್ಲೋಕವು, ಸ್ವಾಮಿಯು ಪ್ರಣತ ರಕ್ಷಣೆಯುಳ್ಳಿರುವ ಆದರವನ್ನು ಸಿದರ್ಶನ ಮಾಡುವ ವಾಕ್ಯವಾಗಿರುತ್ತದೆ. ಪ್ರಣಾಮವು ಕಾಯಿಕ ಕೈಂಕರ್ಯವಾಗಿ ಪ್ರವಾಹ ನಿತ್ಯದ ಹಾಗೆ ಪದೇ ಪದೇ ಮತ್ತು ಪ್ರತಿ ನಿತ್ಯವೂ ನಡಿಯು ತಕ್ಕದ್ದಾಗಿರುತ್ತದೆ. ಸಕೃತ್ಪ್ರಣಾಮ ಸಾಕಾದ ಪಕ್ಷದಲ್ಲಿ ಒಬ್ಬನು ಆತನ ಪುರುಷಾಯುಸ್ಸಿನಲ್ಲಿ ಬಂದು ಸಲ ಮಾಡಿದರೆ ಸಾಕೆಂಬದಾಗಿ ಯುಕ್ತಿಬರಬಹುದು. ಅದೂ ಅಲ್ಲದೆ ಅಷ್ಟೋತ್ತರ, ಸಹಸ್ರನಾಮ ಪತನಗಳು ಕೂಡ ವ್ಯರ್ಥವಾಗಬಹುದು. ಶ್ರೀ ಭಾಷ್ಯಕಾರರವರು ವೈಕುಂಠ ಗದ್ಯದಲ್ಲಿ "ಇತಿ ಪ್ರಣಮ್ಯೋತ್ಥಾಯೋತ್ಥಾಯ ಪುನಃ ಪುನಃ ಪ್ರಣಮ್ಯ", ಎಂಬುವಾಗಿ ಹೇಳಿರುವದರಿಂದಲೂ, ಆಳ್ವಂದಾರ್ ಸ್ತೋತ್ರದಲ್ಲಿ "ಭೂಯೋನಮೋ s ಪರಿಮಿತಾಚ್ಯುತ—" ಎಂಬದಾಗಿಯೂ "ನಮೋ ನಮೋ ವಾಙ್ಮನಸಾತಿ ಭೂಮಯೇ" ಎಂಬದಾಗಿಯೂ, ಜಿತಂತಾ ಸ್ತೋತ್ರದಲ್ಲಿ "ಸ್ಥಿತಾಯ ಪರಮವ್ಯೋಮ್ನಿ ಭೂಯೋ ಭೂಯೋ ನಮಃ" ಎಂಬದಾಗಿಯೂ ಹೇಳಿರುವದರಿಂದಲೂ ಹಾಗೆಯೇ ಶ್ರೀ ಪರಾಶರ ಶುಕ ಮಹರ್ಷಿಗಳೂ ಕೂಡ ಪ್ರಯೋಗಿಸಿರುವದರಿಂದಲೂ ಅನೇಕಾವರ್ತಿ ಪ್ರಣಾಮವೇ ದಾಸಭೂತವಾದ ಚೇತನನಿಗೆ ಉಚಿತವಾದುದು. ಸ್ವಾಮಿಯು ಬಂದು ಸಲ

ಪ್ರಣಾಮದಿಂದಲೇ ತೃಪ್ತನಾಗಬಹುದು. ಆದರೆ ಈ ಚೇತನನ ದಾಸ ಭಾವಕ್ಕೆ ಏಕಪ್ರಣಾಮವು ಸರಿಯಾದುದಲ್ಲವಾದುದರಿಂದಲೂ ಅದರಿಂದ ದಾಸನಾದ ತನಿಗೇನೆ ತೃಪ್ತಿಕರವಾಮದಲ್ಲವಾದುದರಿಂದಲೂ, ಅದೂ ಅಲ್ಲದೆ ನಮ್ಮಗಳ ಪೂರ್ವಾಚಾರ್ಯರಾದ ಆಳವಂದಾರ್ ಭಾಷ್ಯಕರ್ ಪ್ರಭೃತಿಗಳು ಅನುಷ್ಠಿಸಿದುದಕ್ಕೆ ವಿರೋಧವಾದುದರಿಂದಲೂ ಪ್ರಣಾಮವು "ಭೂಯೋ ಭೂಯಃ" ನಡಿಸುವದೇ ಯುಕ್ತವಾಗಿ ತೋರುತ್ತದೆ. ಶ್ರೀ ಭಾಷ್ಯಕಾರರ ಕಾಲದಲ್ಲಿ ಗುರುಗಳಿಗೆ ಪ್ರಣಾಮವನ್ನು ಅನೇಕಾವರ್ತಿ ಮಾಡುತ್ತಿದ್ದರೆಂಬುದು ಸ್ಫುಟವಾಗಿ ತೋರುವ ಒಂದು ಇತಿಹಾಸ ಕೂಡ ಉಂಟು. ಶ್ರೀ ಭಾಷ್ಯಕಾರವರು ಶ್ರೀರಂಗದಲ್ಲಿರುವಾಗ ಇವರಿಗೆ ಮಹಾನಸ (ಅಡಿಗೇ ಮನೆ) ಕೈಂಕರ್ಯಕ್ಕೆ ಸರಿಯಾದವರಿಲ್ಲದೇ ಇದ್ದುದರಿಂದ ಇವರಿಗೆ ಆಹಾರದಲ್ಲಿ ವಿಷಮಿಶ್ರ ಮಾಡಿಕೊಡಬೇಕೆಂಬವಾಗಿ ಶ್ರೀ ಭಾಷ್ಯಕಾರರ ದ್ವೇಷಿಗಳ ಪ್ರಯತ್ನವು ನಡೆಯಿತು. ಇದು ಶ್ರೀ ಭಾಷ್ಯಕಾರರಿಗೆ ತಿಳಿದು ಭಿಕ್ಷೆಯನ್ನು ಪರಿಗ್ರಹಿಸದೆ, ಸನ್ಯಾಸಿಗಳಿಗೆ ಸ್ವಯಂ ಪಾಕವು ಕೂಡದಾದುದರಿಂದ ಮೂರುದಿನ ಉಪವಾಸವಿದ್ದರು. ಈ ವರ್ತಮಾನವು ಈ ಯತಿವರ್ಯರ ಆಚಾರ್ಯರುಗಳಾದ ಪೆರಿಯನಂಬಿ, ತಿರುಕ್ಕೋಟಿಯೂರ್ ನಂಬಿಯವರು ಕೇಳಿ ಪರಿತಾಪಪಟ್ಟು ಯತಿವರ್ಯರನ್ನು ನೋಡುವದಕ್ಕೆ ಬರಲು; ಆಗ ಇವರು ಗುರುಗಳನ್ನು ಎದರು ಗೊಳ್ಳಲು ತಮ್ಮ ಶಿಷ್ಯರಾದ ಕಿಡಾಂಬಿಯಾಚ್ಚಾರಪರನ್ನು ಕರದುಕೊಂಡು, ಮಧ್ಯಾಹ್ನದಲ್ಲಿ ಕಾವೇರಿಯ ಕಾದ ಮರಳಿನಲ್ಲಿ ಬರುತ್ತಿದ್ದ ಆಚಾರ್ಯರುಗಳನ್ನು ಕಂಡು, ಶ್ರೀ ಭಾಷ್ಯಕಾರರು ಮೊದಲು ಪೆರಿಯ ನಂಬಿಯವರಿಗೆ ಪ್ರಣಾಮಗಳನ್ನೆಸಗಲು, ಸ್ವಲ್ಪ ಸಲ ಪ್ರಣಾಮವಾದನಂತರ ಸಾಕೆಂಬದಾಗಿ ಹೇಳಲು, ಅಲ್ಲಿಂದ ಯತಿಗಳವರು ತಿರುಕೋಟ್ಟಿಯೂರ್ ನಂಬಿಗೆ ಪ್ರಣಾಮಗಳನ್ನು ಮಾಡ ತೊಡಗಿದರು. ಆ ಮಧ್ಯಾನ್ಹದ ಕಾದ ಮರಳಿನ ಮೇಲೆ ಎಷ್ಟು ಸಲ ನಮಸ್ಕಾರ ಮಾಡಿದರೂ ಈ ನಂಬಿಯವರು ಸಾಕೆಂದು ಹೇಳದೆ ಯತೀಶ್ವರರನ್ನು ಪುನಃ ಪುನಃ ಪ್ರಣಾಮಮಾಡಿಸಿದರಲ್ಲಾ ಎಂಬ ಪರಿತಾಪದಿಂದ ಇವರ ಅಂತೇವಾಸಿಯಾದ

ಕಿಡಾಂಬಿಯಾಚ್ಚಾರ್ಯರವರು "ಇದೆಂತಹ ಗುರುಶಿಷ್ಯ ಕ್ರಮವು, ಪ್ರಾಣ ತೆಗೆಯುವವರಿವಿಗೂ ಪರೀಕ್ಷಿಸಬಹುದೇ?" ಎನ್ನಲು, ಅದಕ್ಕೆ ನಂಬಿಯವರು "ನಿನ್ನಂತಹ ಶಿಷ್ಯನು ಯತಿವರ್ಯರಿಗೆ ಯಾರಾದರೂ ಉಂಟೇ ಎಂಬದಾಗಿ ಹುಡುಕುತ್ತಿದ್ದೆನು. ನೀನೀಗ ನಿಮ್ಮ ಗುರುವಾದ ಯತಿವರ್ಯರಿಗೆ ಇನ್ನುಮೇಲೆ ಮಹಾನಸ (ಅಡಿಗೇಮನೆ) ಕೈಂಕರ್ಯ ಮಾಡಲು ಅರ್ಹನು" ಎಂಬದಾಗಿ ಆಜ್ಞಾಪಿಸಿದುದರಿಂದ ಪ್ರಾಚಾರ್ಯರವರ ಆಜ್ಞೆಯನ್ನು ಕೈಕೊಂಡು ನಡಿಸಿದರೆಂಬ ಉಪಾಖ್ಯಾನವಿರುತ್ತದೆ. ಆದುದರಿಂದ ಪ್ರಣಾಮವು ನಮಶ್ಶಬ್ದದಿಂದ ವಾಚಕರೂಪದಲ್ಲೇ ಆಗಲಿ ಅಥವಾ ಕಾಯಕವಾಗಿಯೇ ಆಗಲಿ ಅನೇಕಸಲ ಮಾಡತಕ್ಕದ್ದೇ ವಿಹಿತವೆಂಬದಾಗಿ ನಮ್ಮ ಆಚಾರ್ಯರುಗಳ ಮತವಾಗಿ ತೋರುತ್ತದೆ. ಇದೂ ಅಲ್ಲದೆ ನಮಸ್ಕಾರಗಳನ್ನು ದೇವಭಾಗವತೋತ್ತಮರುಗಳಿಗೆ ಯುಗ್ಮವಾಗಿ ನಡಿಸತಕ್ಕದ್ದೆಂಬ ಶಾಸ್ತ್ರವೂ ಇರುತ್ತದೆ. ಶ್ರೀಭಾಷ್ಯಕಾರರವರ ಅನುಷ್ಠಾನವೇ ನಮಗೆ ಪರಮಗ್ರಾಹ್ಯವಾದುದರಿಂದ ನಾವುಗಳೂ ಹಾಗೆಯೇ ಅನುವರ್ತಿಸತಕ್ಕದ್ದು ವಿಧಾಯಕವಾಗಿರುತ್ತದೆ. ಇದೂ ಅಲ್ಲದೆ ೧೧ನೇ ಅಧ್ಯಾಯವಾದ ವಿಶ್ವರೂಪಾಧ್ಯಾಯದಲ್ಲಿ ಅರ್ಜುನನು ತನ್ನ ಮನಸ್ಸಿನ ತೃಪ್ತಿಗಾಗಿ "ನಮೋನಮಸ್ತೇಸ್ತು ಸಹಸ್ರಕೃತ್ವಃ ಪುನಶ್ಚ ಭೂಯೋಪಿ ನಮೋನಮಸ್ತೇ।" "ಶ್ರೀಕೃಷ್ಣನಾದ ನಿನಗೆ ಸಾವಿರಸಲ ನಮಸ್ಕಾರವು, ಅಷ್ಟೇ ಅಲ್ಲದೆ ಇನ್ನೂ ಅನೇಕಾವರ್ತಿ ನಮಸ್ಕಾರವು" ಎಂಬದಾಗಿ ಹೇಳಿರುತ್ತಾನೆ. ಈ ಅಭಿಪ್ರಾಯದಿಂದಲೇ ಶ್ರೀನಿಗಮಾಂತದೇಶಿಕರವರು "ನಮೋವಾಕಮಧೀಮಹೆ" ಎಂಬದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಆದರೆ ಈ ಆಚಾರ್ಯರುಗಳಿಗೆ ಪ್ರಣಾಮ ಮಾಡುತ್ತೇನೆಂಬದಾಗಿ ಹೇಳದೆ. "ನಮಃ" ಎಂಬ ಶಬ್ದವನ್ನು ಪುನಃ ಪುನಃ ಅಧ್ಯಯನ ಮಾಡುತ್ತೇನೆಂಬದಾಗಿ ಹೇಳಿದುದರಭಿಪ್ರಾಯವೇನೆಂದರೆ, ಆಚಾರ್ಯರುಗಳ ವಿಷಯದಲ್ಲಿ, "ನಮಃ" ಎಂಬ ಶಬ್ದದಲ್ಲಿ ತೋರಿ, ಮುಂದೆ ಗ್ರಂಥದಲ್ಲಿ ವಿವರಿಸುವ ಸರ್ವ ಅಭಿಪ್ರಾಯಗಳೂ ಅನುಸಂಧಾನವಾಗಬೇಕೆಂದು ತಾತ್ಪರ್ಯವು. ಹೀಗೆ ಈ ಶ್ಲೋಕದ ಪೂರ್ವಾರ್ಧದಿಂದ

ತಮ್ಮ ಆಚಾರ್ಯರಿಗೂ ಪ್ರಾಚಾರ್ಯರಿಗೂ ಅವರುಗಳ ಆಚಾರ್ಯರುಗಳಿಗೂ ನಮಸ್ಕರಿಸಿ, ಉತ್ತರಾರ್ಧದಿಂದ ಆದಿದಂಪತಿಗಳಾಗಿ ಪರಮಾಚಾರ್ಯರಾಗಿರುವ ಲಕ್ಷ್ಮೀನಾರಾಯಣರಿಗೆ ಪ್ರಣಾಮವನ್ನು ಸಮರ್ಪಿಸುತ್ತಾರೆ.

ಅರ್ಥ :—ಗುರುಭ್ಯಃ - ಸ್ವಾಚಾರ್ಯರಾದ ಶ್ರೀರಾಮಾನುಜಾಚಾರ್ಯರಿಗೂ (ಗೌರವಾರ್ಥದಿಂದ ಬಹುವಚನ), ತದ್ಗುರುಭ್ಯಃ - ಅವರ ಗುರುಗಳಾದ ವಾದಿಹಂಸಾದಿಗಳಿಗೂ, ಮತ್ತು ಅವರವರ ಗುರುಗಳಿಗೂ, ನಮೋವಾಕಂ - ನಮಸ್ಕಾರವೆಂಬ ವಾಕ್ಯವನ್ನು, ಅಧೀಮಹೇ- ಪಠಿಸುವೆವು. ತತ್ರ - ಆ ಗುರುಪರಂಪರೆಯಲ್ಲಿ, ಆದ್ಯೌ - ಮೊದಲನೆಯವರಾದ, ಜಗತಾಂ ಲೋಕಗಳಿಗೆಲ್ಲಾ, ಪತೀ - ಈಶ್ವರೇಶ್ವರಿಗಳಾದ, ದಂಪತೀ - ದಿವ್ಯದಂಪತಿಗಳನ್ನು, ವೃಣೀಮಹೆ - ಶರಣುಹೊಂದುವೆವು. ಹೇಗೆ ಶರಣುಹೊಂದುವೆವೆಂದರೆ, ಈ ಲೋಕದಂಪತಿಗಳು ಪ್ರಾಪಕರೂ ಪ್ರಾಪ್ಯರೂ ಎಂಬುದಾಗಿ ಶರಣುಹೊಂದುವೆವೆಂಬ ಭಾವವು. ಜಗತ್ತಿಗೆ "ಪತೀ" ಇಬ್ಬರೂ ಈಶ್ವರರೇ ಎಂಬಾಕ್ಷೇಪ ಬಂದೀತೆಂದು ಭಾವಿಸಿ, ದಂಪತೀ ಎಂಬ ಪ್ರಯೋಗದಿಂದ ಲಕ್ಷ್ಮಿಯುಸ್ವಾಮಿಗೆ ಶೇಷಭೂತಳಾಗಿ ಈಶ್ವರಿಯಾದುದರಿಂದ ಅಂತಹ ಕಾರಣವಿಲ್ಲವೆಂಬ ಭಾವವು.

ಪ್ರತಿಯೊಂದು ಗ್ರಂಥಕ್ಕೂ ಅನುಬಂಧಿಚತುಷ್ಟಯವಿರಬೇಕು. ಇವು ಯಾವುವೆಂದರೆ :—(೧) ವಿಷಯ, (೨) ಪ್ರಯೋಜನ, (೩) ಸಂಬಂಧ, (೪) ಅಧಿಕಾರಿ ಎಂಬುದಾಗಿ ನಾಲ್ಕು. ಈ ಗುರುಪರಂಪರಾಸಾರವೆಂಬ ಗ್ರಂಥಕ್ಕೆ ಗುರುಗಳ ಮೂಲಕ ಮಾಡುವ ಶರಣಾಗತಿದ್ವಾರ ಮೋಕ್ಷವೇ ಪ್ರಯೋಜನ, ಗುರುಪಜ್ಞಿ ಭಜನವೇ ವಿಷಯವು, ಅಧಿಕಾರಿಗಳು ಸರ್ವರೂ, ಲೋಕದಲ್ಲಿರುವವರೆಲ್ಲಾ ಎಂಬುದಾಗಿ ತಿಳಿಯತಕ್ಕದ್ದು. ಏಕೆಂದರೆ ಗುರುಪಜ್ಞಿ ಭಜನವೂ ಮೋಕ್ಷಪ್ರಾಪ್ತಿಯೂ ಸರ್ವರಿಗೂ ಬೇಕಾದುದೇ.

ಈ "ಗುರುಪರಂಪರಾಸಾರ" ವೇನು ಪ್ರತ್ಯೇಕಗ್ರಂಥವೇ ಅಥವಾ ಶ್ರೀಮದ್ರಹಸ್ಯತ್ರಯಸಾರಕ್ಕೆ ಸೇರಿದುದೇ ಎಂಬ ಶಂಕೆಯು

ಪ್ರತಿಯೊಬ್ಬ ಗ್ರಂಥಾವಲೋಕನವಾಡುವವರಿಗೂ ಉಂಟಾಗಬಹುದು. ರಹಸ್ಯತ್ರಯಸಾರದಲ್ಲಿ ೩೨ ಅಧ್ಯಾಯಗಳಿವೆ. ಪ್ರತಿಯೊಂದಕ್ಕೂ ಅಧಿಕಾರವೆಂದು ಹೆಸರು ಕೊಡಲ್ಪಟ್ಟಿರುತ್ತದೆ. ಇದಕ್ಕೆ ಮಾತ್ರ ಹಾಗೆ ಹೆಸರು ಕೊಡದೆ, "ಗುರುಪರಂಪರಾಸಾರಃ" ಎಂಬ ನಾಮ ಧೇಯವು ಕೊಡಲ್ಪಟ್ಟಿರುತ್ತದೆ. ಅದೂ ಅಲ್ಲದೆ "ಉಪೋದ್ಘಾತಾಧಿಕಾರಃಪ್ರಥಮಃ" ಎಂಬದಾಗಿ ಉಪೋದ್ಘಾತಭಾಗಕ್ಕೆ ಕೊಟ್ಟಿರುವುದರಿಂದಲೂ ಮತ್ತು ಇದರ ಕೊನೆಯಲ್ಲಿ "ಗುರುಪರಂಪರಾಸಾರ ಸ್ಸಂಪೂರ್ಣಃ" ಎಂಬದಾಗಿ ಹೇಳಿರುವದರಿಂದಲೂ, ಇದು ರಹಸ್ಯತ್ರಯ ಸಾರಕ್ಕಿಂತಲೂ ಪೃಥಕ್ಕಾದುದೆಂದು ಭಾವಿಸಬೇಕಾಗಿರುತ್ತದೆ. ಆದರೆ ರಹಸ್ಯತ್ರಯಸಾರವನ್ನು ಅಚ್ಚು ಹಾಕಿರುವ ಸಂದರ್ಭಗಳಲ್ಲೆಲ್ಲಾ ಈ ಗುರುಪರಂಪರಾಸಾರವನ್ನು ಸೇರಿಸಿಯೇ ಇದನ್ನು ಗ್ರಂಥಾದಿಯಾಗಿ ಮುದ್ರಣಮಾಡಿರುವದರಿಂದಲೂ, ಸಂಪ್ರದಾಯ ಜ್ಞನ್ನಾಗಿ ತಿಳಿದ ಆಚಾರ್ಯರುಗಳು ಶ್ರೀಮದ್ರಹಸ್ಯತ್ರಯಸಾರದ ಉಪದೇಶಕಾಲದಲ್ಲಿ ಗುರುಪರಂಪರಾಸಾರವನ್ನು ಪ್ರಾರಂಭಿಸಿ ಅನಂತರ ಉಪೋದ್ಘಾತಾಧಿಕಾರಕಾಲಕ್ಷೇಪ ಹೇಳುವದರಿಂದಲೂ, ಈ ಪ್ರಥಮ ಶ್ಲೋಕದಿಂದ ಸಾರಪ್ರಕಾಶಿಕಾ ವ್ಯಾಖ್ಯಾನ ಬರೆದವರು ಮುಂದೆ ಈ ಪ್ರಬಂಧದಲ್ಲಿ ಉಪನ್ಯಸಿಸುವ ಅಧಿಕಾರ ವಿಷಯಗಳು ಇಲ್ಲಿ ಸ್ಫೂರ್ತಿಗೆ ಬರುವ ಹಾಗೆ ಬರೆಯಲ್ಪಟ್ಟವೆ ಎಂಬದಾಗಿ ಹೇಳಿರುವದರಿಂದಲೂ, ಇದು ಪ್ರತ್ಯೇಕ ಗ್ರಂಥವಾದರೂ ಆಚಾರ್ಯಭಜನರೂಪವಾಗಿಯೂ, ವಿಷಯಸೂಚಕವಾಗಿಯೂ, ಮುಖ್ಯಪ್ರಬಂಧಕ್ಕೂ ಈ ಗ್ರಂಥಕ್ಕೂ ಸಂಬಂಧವಿದೆ ಎಂಬದಾಗಿ ಭಾವಿಸತಕ್ಕದ್ದು. ವಿಷಯಸೂಚನೆ ಹೇಗೆಂದರೆ ಹೇಳುತ್ತಾರೆ:—ಈ ಶ್ಲೋಕದ ಪೂರ್ವಾರ್ಧದಿಂದ, ಗುರುಪರಂಪರಾಸಾರ, ಉಪೋದ್ಘಾತಾಧಿಕಾರ, ಆಚಾರ್ಯಕೃತ್ಯಶಿಷ್ಯಕೃತ್ಯಾಧಿಕಾರಗಳರ್ಥವು ಸೂಚಿಸಲ್ಪಟ್ಟಿತು. "ವೃಣೀಮಹೆ" ಎಂಬುವದರಿಂದ ಮುಮುಕ್ಷುತ್ವಾಧಿಕಾರ ಮೊದಲು ಸಾಂಗಪ್ರಪದನಾಧಿಕಾರದವರಿವಿಗೂ ಇರುವ ಅಧಿಕಾರಗಳು ಸಂಗ್ರಹಿಸಲ್ಪಟ್ಟವು. "ಆದ್ಯೌ" ಎಂಬ ಪದದಲ್ಲಿ ಜಗತ್ಕಾರಣತ್ವವು ತೋರುವದರಿಂದ ಚಿದಚಿದೀಶ್ವರರಂ ಕುರಿತು,

ಪೊಯ್ಕೈಮುನಿ, ಪೂದತ್ತಾರ್, ಪೇಯಾಳ್ವಾರ್
ತಣ್ಪೊರು ನಲ್ವರುಂ ಕುರುಕೇಶ, ವಿಷ್ಣುಶಿತ್ತನ್,

ಹೇಳುವ, ಅರ್ಥಪಂಚಕ, ತತ್ತ್ವತ್ರಯ ಪರದೇವತಾಪಾರಮಾರ್ಥ್ಯ ಮೊದಲಾದ ಅಧಿಕಾರಗಳರ್ಥವು ಸೂಚಿಸಲ್ಪಟ್ಟಿತು. "ದಂಪತೀ" ಎಂಬ ಪ್ರಯೋಗದಿಂದ ಸಿದ್ಧೋಪಾಯ ಶೋಧನಾಧಿಕಾರದರ್ಥವು ತೋರಿದಂತಾಯಿತು. "ಜಗತಾಂ ಪತೀ" ಎಂಬುವದರಿಂದ ಪ್ರಧಾನಪ್ರತಿತಂತ್ರಾಧಿಕಾರದಭಿಪ್ರಾಯವು ಗರ್ಭೀಕರಿಸಲ್ಪಟ್ಟಿತು. "ನವೋ ವಾಕಂ" ಎಂಬುವದರ ಮೂಲಕ ಕೈಂಕರ್ಯವನ್ನೂ ತನ್ಮೂಲಕ ಶೇಷವೃತ್ತಿಯನ್ನೂ ಪ್ರದರ್ಶನವಾಡುವದರಿಂದ ಪುರುಷಾರ್ಥಕಾಷ್ಠಾಧಿಕಾರದ ಸಾರವು ದ್ಯೋತಕವಾಗುತ್ತದೆ. ಉತ್ತರಾರ್ಧವನ್ನೆಲ್ಲಾ ಸಂಪೂರ್ಣವಾಗಿ ವಿಮರ್ಶೆಮಾಡಿದರೆ ಸಾರಭೂತವಾದ ಮೂಲಮಂತ್ರ, ದ್ವಯ, ಚರಮಶ್ಲೋಕಾಧಿಕಾರಗಳಭಿಪ್ರಾಯವು ಗೋಪ್ಯವಾಗಿ ಅಡಗಿವೆ ಎಂಬದಾಗಿ ತೋರುತ್ತದೆ.

ಇನ್ನು ಮುಂದೆ ತಾವು ರಹಸ್ಯತ್ರಯಸಾರದಲ್ಲಿ ಸಂಗ್ರಹಿಸಿರುವ ಅವೋಕ್ತಾಭಿಪ್ರಾಯಗಳೂ, ಸಕಲ ರಹಸ್ಯಾರ್ಥಗಳೂ ಎಲ್ಲವೂ, ಆಳ್ವಾರುಗಳ ದಿವ್ಯಸೂಕ್ತಿಗಳಿಂದಲ್ಲವೇ ತಮ್ಮ ಆಚಾರ್ಯರುಗಳಿಗೂ ವಿದಿತವಾಗಿ ಅವುಗಳು ಸ್ಥಿರೀಕರಿಸಲ್ಪಟ್ಟವು ಎಂಬ ವಿಶೇಷ ಕೃತಜ್ಞತಾಭಾವದಿಂದ ಆಳ್ವಾರುಗಳನ್ನು "ಪೊಯಿಕೆಮುನಿ" ಎಂಬ ಮುಂದಿನ ಪಾಶುರದಿಂದ ಕೊಂಡಾಡುತ್ತಾರೆ.

ಇಲ್ಲಿ ಹತ್ತು ಆಳ್ವಾರುಗಳನ್ನೂ ಸ್ತೋತ್ರರೂಪವಾಗಿ ಧ್ಯಾನಿಸುತ್ತಾರೆ :—

(1) ಪೊಯ್ಕೈಮುನಿ - ಸರೋಮುನಿಗಳು, (೨) ಪೂದತ್ತಾರ್ - ಭೂತಮುನಿಗಳು, (೩) ಪೇಯಾಳ್ವಾರ್ - ಮಹದಾಖ್ಯಮುನಿಗಳು, ಇವರಿಗೆ ಭಗವದ್ವಿಷಯವಾಗಿ ತುಂಬಾ ಹೆಚ್ಚಿ ಭಕ್ತಿ ಇದ್ದು ಉನ್ಮತ್ತಾವಸ್ಥೆಯಲ್ಲಿರುವವರ ಹಾಗೆ ನಟಿಸುತ್ತಿದ್ದುದರಿಂದ ಪೇಯಾಳ್ವಾರ್ - ಹುಚ್ಚು ಆಳ್ವಾರೆಂಬದಾಗಿ ಹೆಸರು. ಅಥವಾ ಪೆರಿಯ -

ತುಯ್ಯಕುಲಶೇಖರ್ಕ, ನವ್ಮಾಣನಾರ್ಕ,
ತೊಂಡರಡಿಪ್ಪೊಡಿ, ಮುಳಿಶೈವಂದ ಶೋತಿ

ದೊಡ್ಡವರಾದ, ಮಹನೀಯರಾದ ಆಳ್ವಾರೆಂಬದಾಗಿಯೂ ಅರ್ಥಹೇಳಬಹುದು. ಆದುದರಿಂದ ಇವರಿಗೆ ಮಹದಾಹ್ವಯರ್ ಎಂಬದಾಗಿ "ಭೂತಂ ಸರಶ್ಚ ಮಹದಾಹ್ವಯಭಟ್ಟನಾಥ" ಎಂಬ ಶ್ರೀಪರಾಶರಭಟ್ಟರ ಶ್ಲೋಕದಲ್ಲಿ ಹೇಳಲ್ಪಟ್ಟಿದೆ. (4) ತಣ್ ಪೊರುನಲ್ ವರುಂ ಕುರುಕೇಶ್ಕ ಅಂದರೆ,ತಣ್ - ಶೀತಲವಾದ, ಪೊರುನಲ್ - ತಾಮ್ರಪರ್ಣೀ ನದಿಯು, ವರುಂ - ಬರುವ ಅಂದರೆ ತೀರದಲ್ಲಿ ರಮಣೀಯವಾಗಿರುವ, ಕುರುಕೇಶ್ಕ - ಕುರುಕಾನಗರಿ ಎಂಬದಾಗಿ ಹೆಸರುಳ್ಳ ಆಳ್ವಾರ್‌ತಿರುನಗರಿಗೆ ಸ್ವಾಮಿಯಾದ ನಮ್ಮಾಳ್ವಾರವರು (ಇವರಿಗೆ ಶಠಗೋಪರೆಂಬದಾಗಿಯೂ ಹೆಸರುಂಟು). ತಾಮ್ರಪರ್ಣೀನದಿಯನ್ನು ಹೇಳಿದುದು ಆ ದಿವ್ಯದೇಶಕ್ಕೆ ಅದರಿಂದ ರಮಣೀಯತೆಯನ್ನು ಹೇಳುವದಕ್ಕೂ ಅಲ್ಲದೆ, ಭಾಗವತದಲ್ಲಿ " ಕಲೌಖಲು ಭವಿಷ್ಯಂತಿ ನಾರಾಯಣ ಪರಾಯಣಾಃ। ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಪಯಸ್ವಿನೀ॥" ಎಂಬದಾಗಿ ಕಲಿಯುಗದಲ್ಲೂ ಕೂಡ ಆ ತಾಮ್ರಪರ್ಣೀ ನದೀ ಹತ್ತಿರ ಶ್ರೀಮನ್ನಾರಾಯಣಪರಾಯಣರಾದ ಭಾಗವತೋತ್ತಮರು ವಸಿಸುವರೆಂದು ಇದನ್ನುದ್ದೇಶಿಸಿ ಹೇಳಿದ ಮಹರ್ಷಿಯ ವಾಕ್ಯವನ್ನು ಸ್ಮರಿಸಿ, ಕೊಂಡಾಡುವದಕ್ಕಾಗಿಯೂ, ಮತ್ತು ಅದಲ್ಲದೆ, ತಾಮ್ರಪರ್ಣೀ ನದಿಯು ಶೀತಲೋದಕ ಯುಕ್ತವಾಗಿರುವದರಿಂದ, ಶ್ರೀಮನ್ನಮ್ಮಾಳ್ವಾರವರು ಭಗವದ್ಭಾಗವತ ವಿಷಯದಲ್ಲಿ ಪರಮಾರ್ದ್ರ ಹೃದಯರೆಂಬದಾಗಿ ಸೂಚಿಸುವದಕ್ಕಾಗಿಯೂ " ತಣ್ ಪೊರುನಲ್ ವರುಂ " ಎಂಬ ವಿಶೇಷಣವನ್ನುಪಯೋಗಿಸಿರುತ್ತಾರೆ. ಇವರು ಚೇತನರುಗಳ ವಿಷಯದಲ್ಲಿ ತುಂಬಾ ದಯಾರ್ದ್ರ ಹೃದಯ ಉಳ್ಳವರೆಂಬ ವಿಷಯವನ್ನು, ಮಧುರಕವಿಯಾಳ್ವಾರವರು ತಾವು ನಮ್ಮಾಳ್ವಾರವರನ್ನು ಕೊಂಡಾಡಿ ಬರೆದ " ಕಣ್ಣಿನುಣ್ ಶಿರತ್ತಾಂಬೆಂ "ಬುವ ಗ್ರಂಥದಲ್ಲಿ " ಅರುಳ್ ಕಂಡೀರ್ ಇವ್ವುಲಗನಿಲ್ ಮಿಕ್ಕುದೇ " ಈ ನಮ್ಮಾಳ್ವಾರ್ರವರಿಗೆ

ಮೈಯ್ಯ ಮೆಲ್ಲ ಪುರ್ಕೆವಿಳಂಗವಾಳ್ವೀಲೆಂದು ಮುಂಗೈಯರ್ ಕೊನೆನ್ರಿವರಗಳ್ ಮುಗಿಳಿಂದು ಪಾಡುಂ ।

ಇರುವ ಪ್ರೀತಿಯು ಅಥವಾ ಸಾರ್ವತ್ರಿಕವಾಗಿರುವ ಪ್ರೇಮವೂ ಈ ಭೂಲೋಕದಲ್ಲಿ ಹೆಚ್ಚಾದ ವಿಷಯವಾಗಿರುತ್ತದೆಂಬುದಾಗಿ ಹೇಳಿರುತ್ತಾರೆ.

(೫) ವಿಷ್ಣುಚಿತ್ತರ್—ಶ್ರೀ ಭಟ್ಟನಾಥರೆಂದು ಹೆಸರು ಹೊಂದಿದ ಪೆರಿಯಾಳ್ವಾರವರು. ಇವರಿಗೆ "ವಿಲ್ಲಿಪುತ್ತೂರ್ಕೋನ್" ಅಂದರೆ ಶ್ರೀವಿಲ್ಲಿಪುತ್ತೂರ್ ಸ್ವಾಮಿಯು ಎಂಬದಾಗಿಯೂ "ದ್ವಿಜಕುಲತಿಲಕ" ಬ್ರಾಹ್ಮಣಕುಲಶ್ರೇಷ್ಠರೆಂಬದಾಗಿಯೂ ಹೆಸರುಗಳುಂಟು. ಇವರನ್ನು ಹೇಳಿದುದರಿಂದ ಇವರ ಮಗಳಾದ ಶ್ರೀ ಆಂಡಾಳ್ ಅಥವಾ ಗೋದಾದೇವಿಯನ್ನೂ ಹೇಳಿದಂತಾಯಿತು. ಹೇಗೆಂದರೆ 'ವಿಷ್ಣುಚಿತ್ತರ್' ಅಂದರೆ ವಿಷ್ಣುವಿನ ಹೃದಯವು. ಇವರ ಮಗಳು ಭೂದೇವಿಯ ಅವತಾರವಾದುದರಿಂದ, ಆ ಆಂಡಾಳನ್ನು ಸ್ವಾಮಿಯು ಪತ್ನಿಯಾಗಿ ಪರಿಗ್ರಹಿಸಿ, ಸ್ವಾಮಿಗೆ ಇವರು "ಶ್ವಶುರಮುರವಂದ್ಯಂ ರಂಗನಾಥಸ್ಯ ಸಾಕ್ಷಾತ್" ಎಂಬದಾಗಿ ಹೇಳಿರುವ ಮೇರೆಗೆ ಮಾವಂದಿರಾಗಿ ತುಂಬಾ ಪ್ರಿಯರಾದ ಪ್ರಯುಕ್ತ ವಿಷ್ಣುಚಿತ್ತರು. ಈ ಅಭಿಪ್ರಾಯವನ್ನು ಶ್ರೀ ನಡಾದೂರ್ ನರಸಿಂಹಾಚಾರ್ಯರವರು ತಮ್ಮ ವ್ಯಾಖ್ಯಾನದಲ್ಲಿ ಸೂಚಿಸಿರುತ್ತಾರೆ. ಅಥವಾ ವಿಷ್ಣುಚಿತ್ತ ಎಂಬುದಕ್ಕೆ ವಿಷ್ಣುವನ್ನೇ ಮನಸ್ಸಿನಲ್ಲುಳ್ಳವರೆಂಬವಾಗಲೀ ಅಥವಾ ವಿಷ್ಣುವಿನಲ್ಲೇ ಮನಸ್ಸುಳ್ಳವರೆಂಬದಾಗಿಯೂ ಅರ್ಥವನ್ನು ಹೇಳಬಹುದು.

(6) ತುಯ್ಯೋಕುಲಶೇಖರ್—ಪರಿಶುದ್ಧರಾದ ಕುಲಶೇಖರಾಳ್ವಾರ್. ಹೇಗೆ ಪರಿಶುದ್ಧರೆಂದರೆ, ಇವರಿಗೆ ಭಾಗವತರಲ್ಲಿ ತುಂಬಾ ಭಕ್ತಿಯು. "ನಹ್ಯಮ್ಮಯಾನಿ ತೀರ್ಥಾನಿ ನದೇವಾಮೃಚ್ಛಿಲಾ ಮಯಾಃ । ತೇ ಪುನಂತ್ಯುರುಕಾಲೇನ ದರ್ಶನಾ ದೇವಸಾಧವಃ ॥" ಎಂಬ ಶುಕಮಹರ್ಷಿಯ ಉಕ್ತಿಗನುಸಾರವಾಗಿ, ಪುಣ್ಯಕ್ಷೇತ್ರಗಳಲ್ಲಿನ ಸ್ವಾಮಿಸೇವೆಗಿಂತಲೂ, ಪುಣ್ಯತೀರ್ಥಗಳಲ್ಲಿ ಅವಗಾಹನೆಮಾಡುವದ

ಶೆಯ್ಯ ಶಮಿಳ್ ಮಾಲೈಗಳ್ನಾಂ ತೆಳಿಯುವೋದಿ,
ತ್ತೆಳಿಯಾದನುಪ್ಪೈ ನಿಲಂಗಡೆಳಿಗಿ ನ್ರೋವೆ ॥೧॥

ಕ್ಕಿಂತಲೂ, ಶೀಘ್ರವಾಗಿ ಭಾಗವತರುಗಳು ಸಂದರ್ಶನಮಾತ್ರದಿಂದಲೇ ಪರಿಶುದ್ಧರನ್ನಾಗಿ ಮಾಡುತ್ತಾರೆಂದು ಹೇಳಿರುವ ಹಾಗೆ, ಭಾಗವತಭಕ್ತಿಯಿಂದ ಪರಿಶುದ್ಧರಾದವರು. ಆದುದರಿಂದಲೇ ಭಾಗವತರ ವಿಷಯದಲ್ಲಿ ಸ್ವಲ್ಪವೂ ದೋಷವನ್ನು ಸಹಿಸದಿರುವರು. ಈ ಆಳ್ವಾರವರು ತಿರುವಾಂಕೂರು ಸಂಸ್ಥಾನದ ರಾಜರಾಗಿದ್ದಾಗ ಭಾಗವತೋತ್ತಮರಾದ ಶ್ರೀವೈಷ್ಣವರಮೇಲೆ ಅವರ ಮಂತ್ರಿಯು ಹೊರಿಸಿದ ಕಳವನ್ನು ನಂಬದೆ ಘಟಸರ್ಪವಿದ್ದ ಕೊಡದಲ್ಲಿ ಬೆರಳನ್ನಿಟ್ಟು ಅವರುಗಳು ನಿರ್ದೋಷಿಗಳೆಂದು ಪ್ರಮಾಣಮಾಡಿದವರಾದುದುರಿಂದ "ತುಯ್ಯ ಕುಲಶೇಖರ" ಎಂಬದಾಗಿ ಪ್ರಯೋಗಿಸಿರುತ್ತಾರೆ.

(7) "ನಮ್ಪಾಣನಾರ್ತ" ಅಂದರೆ ನಮ್ಮ ತಿರುಪ್ಪಾಣಾಳ್ವಾರೆಂಬರ್ಥವು. "ನಮ್ಮ" ಎಂಬುವದರಿಂದ ಶ್ರೀನಿಗಮಾಂತದೇಶಿಕರವರಿಗೆ ಇವರಲ್ಲಿ ತುಂಬಾ ವಿಶ್ವಾಸವಿದೆಯೆಂಬುದು ತೋರುತ್ತದೆ. ಆಳ್ವಾರ್ರವರು ರಚಿಸಿದ ನಿತ್ಯಾನುಸಂಧಾನಕ್ಕೆ ಯೋಗ್ಯವಾಗಿರುವ ಅನೋಘವಾದ "ಅಮಲನಾದ ಪಿರಾ" ಎಂಬುವದರಿಂದ ಭಕ್ತಿಯು ಹೆಚ್ಚಾಗಿರಬಹುದು. ಆದುದರಿಂದಲೇ ಈ ಗ್ರಂಥಕ್ಕೆ ವ್ಯಾಖ್ಯಾನವಾಗಿ "ಮುನಿವಾಹನಭೋಗ" ವೆಂಬ ರಹಸ್ಯವನ್ನು ಅಪ್ಪಣೆಕೊಡಿಸಿರುತ್ತಾರೆ. ಅಥವಾ ಶ್ರೀರಂಗನಾಥನು ಅನುಗ್ರಹಮಾಡಿ ಈ ಆಳ್ವಾರವರು ಪಂಚಮರ ಮಧ್ಯದಲ್ಲಿ ಬೆಳೆದವರಾದರೂ ಲೋಕಸಾರಂಗಮುನಿಯನ್ನು, ಅವರ ಬೆನ್ನಿನ ಮೇಲೆ ಹೊತ್ತು ತರುವ ಹಾಗೆ ಆಜ್ಞಾಪಿಸಿ, ಆಳ್ವಾರರಿಗೆ ಸೇವೆಯನ್ನಿತ್ತು "ಮುನಿವಾಹನರ್, ನರವಾಹನರ್" ಮೊದಲಾದ ಹೆಸರುಗಳನ್ನು ಹೇಗೆ ಕೊಟ್ಟರೋ, ಹಾಗೆಯೇ ಶ್ರೀರಂಗನಾಥನು ತಮ್ಮನ್ನು ಸನ್ನಿಧಿಗೆ ಬರಮಾಡಿಕೊಂಡು, "ಶ್ರೀರಂಗರಾಜದಿವ್ಯಾಜ್ಞಾಲಬ್ಧವೇದಾಂತಾಚಾರ್ಯಪದಃ" ಎಂಬದಾಗಿಯೂ, "ತೇನ ದೇವೇನ ದತ್ತಾಂ ವೇದಾಂತಾಚಾರ್ಯಸಂಜ್ಞಾಂ" ಎಂಬದಾಗಿಯೂ,

ತಾವೇ ಹೇಳಿಕೊಂಡಿರುವ ರೀತ್ಯಾ, "ವೇದಾಂತಾಚಾರ್ಯ"ರೆಂಬ ಬಿರುದನ್ನೂ, ಹಾಗೆಯೇ ಲೋಕಮಾತೆಯಾದ ಶ್ರೀರಂಗನಾಯಕಿಯೂ ಇವರಿಗೆ "ಸರ್ವತಂತ್ರಸ್ವತಂತ್ರ"ರೆಂಬ ಬಿರುದನ್ನೂ ದಯಪಾಲಿಸಿರುವುದರಿಂದ, ತಮ್ಮಿಬ್ಬರವಿಷಯದಲ್ಲೂ ಲೋಕದಂಪತಿಗಳಿಗೆ ಪೂರ್ಣ ಅನುಗ್ರಹವೆಂಬುದನ್ನು ಸೂಚಿಸುವದಕ್ಕಾಗಿ "ನಂ" ಪಾಣಿನಾರ್ತ ಎಂಬದಾಗಿ ಪ್ರಯೋಗಿಸಿರುತ್ತಾರೆ. ಇಲ್ಲಿ "ಪಾಣ" ಶಬ್ದಕ್ಕೆ ದಿವ್ಯ ಗಾನವೆಂದು ಹೆಸರು. ಭಗವದ್ವಿಷಯಕ ಪಾಶುರಗಳಿಂದ ಅನೋಘವಾದ ಗಾನವನ್ನಾಡಿ ಗಾನವಿಶಾರದರಾಗಿದ್ದುದರಿಂದ "ಪಾಣಿನಾರ್ತ" ಎಂಬ ಪ್ರಯೋಗಕ್ಕೆ ಕಾರಣವಾಗಿರುತ್ತದೆ. ಹಾಗೆಯೇ ದಿವ್ಯಪ್ರಬಂಧವೆಲ್ಲಾ ದಿವ್ಯಗಾನರಸಪರಿಪೂರ್ಣವಾದುದೆಂಬಿಪ್ರಾಯವು.

(8) "ತೊಂಡರಡಿಪ್ಪೊಡಿ"—ತೊಂಡರ್-ಭಕ್ತರ, ಭಾಗವತರ, ಅಡಿ - ಕಾಲಿನ, ಪೊಡಿ - ಧೂಳು. ತಮ್ಮನ್ನು ಭಾಗವತರ ಕಾಲಿನ ಧೂಳಾಗಿ ಹೇಳಿಕೊಂಡವರು ; ಆದುದರಿಂದ ಇವರಿಗೆ "ಭಕ್ತಾಂಘ್ರಿರೇಣು" ಎಂಬದಾಗಿಯೂ ಹೆಸರು. ಇವರ ಸರಿಯಾದ ಹೆಸರು "ವಿಪ್ರನಾರಾಯಣ"ರೆಂಬದಾಗಿದ್ದರೂ, ಭಾಗವತರ ಶ್ರೀಪಾದತೀರ್ಥದಿಂದ ಇವರು ಪವಿತ್ರತೆಯನ್ನು ಹೊಂದಿ ಸ್ವಾಮಿ ಶ್ರೀರಂಗನಾಥನ ಕೃಪೆಯಿಂದುಂಟಾದ ಭಕ್ತಾಂಘ್ರಿರೇಣುವೆಂಬ ಹೆಸರಾದುದರಿಂದಲೂ, ಭಾಗವತ ಶ್ರೀಪಾದತೀರ್ಥದ ಮಹಿಮೆಯನ್ನು ಇವರು ಕೊಂಡಾಡಿದುದರಿಂದಲೂ, ಅವರು ರಚಿಸಿದ "ತಿರುಪ್ಪಳ್ಳಿಯೆಳುಚ್ಚಿ"ಯಲ್ಲಿ "ಉನ್ನಡಿಯಾರ್ಕ್ಕಾಳ್‌ಪಡಿತ್ತಾಯ್" ಎಂಬದಾಗಿ ಹೇಳಿಕೊಂಡಿರುವದರಿಂದಲೂ, ತೊಂಡರಡಿಪ್ಪೊಡಿ ಎಂಬ ನಾಮಧೇಯವನ್ನೇ ಮುಖ್ಯವಾಗಿ ಗ್ರಹಿಸಿರುತ್ತಾರೆ.

(9) ಮಳಿಶೈವಂದಶೋತಿ—ಮಳಿಶೈ ಅಂದರೆ ಮಹೀಸಾರ ಪುರಿಗೆ (ಇದಕ್ಕೆ ವ್ಯಾಘ್ರಪುರಿ, ಪೆರುಂಬುಲಿಯೂರ್ ಎಂಬ ಹೆಸರುಗಳುಂಟು). ವಂದ - ಬಂದಂಥಾ, ಶೋತಿ - ಜ್ಯೋತಿಸ್ಸು, ತೇಜಸ್ಸು. ಅಂದರೆ ತಿರುಮಳಿಶೈಯ್ಯಾಳ್ವಾರವರು. ಇವರಿಗೆ ಭಕ್ತಿಸಾರಮುನಿ ಎಂಬ ನಾಮಧೇಯವೂ ಉಂಟು. ಇವರು ಚಕ್ರಾಳ್ವಾರವತಾರ

ವಾಗಿ ಜನಿಸಿದವರು. ಬಂದು ಯಾಗ ಸಭೆಯಲ್ಲಿ ಋತ್ವಿಕ್ಕುಗಳಿಂ ದುಂಟಾದ ಅವಮಾನವನ್ನು ಸಹಿಸದೆ, ಶಿಶುಪಾಲನ ಅವಮರ್ಯಾದೆ ಯನ್ನು ಸಹಿಸದೆ ಶ್ರೀಕೃಷ್ಣನಿಂದುಂಟಾದ ತೇಜಸ್ಸಿನ ಹಾಗೆ, ಈ ಆಳ್ವಾರವರಿಂದ ಬಂದು ತೇಜಸ್ಸು ಹುಟ್ಟಿ ಅವಮರ್ಯಾದೆಮಾಡಿದ ವರನ್ನು ನಿಗ್ರಹಿಸಿತೆಂಬ ವೃತ್ತಾಂತಾನುಸಾರವಾಗಿ " ಶೋತಿ " ಎಂಬ ದಾಗಿ ಪ್ರಯೋಗಿಸಿರುತ್ತಾರೆ.

(10) ವೈಯಮೆಲ್ಲಾಂ - ಲೋಕವಲ್ಲೆಲ್ಲಾ, ಮರೈ - ವೇದವು, ವಿಳಂಗ - ಪ್ರಕಾಶಿಸುವ ಹಾಗೆ, ವಾಳ್ - ಖಡ್ಗವನ್ನೂ, ವೇಲ್ - ಕುಂತವೆಂಬ ಆಯುಧವಿಶೇಷವನ್ನೂ, ಏಂದುಂ - ಧರಿಸಿದಂಥಾ, ಮಂಗ ಯರ್‌ಕೋಕ್ - ತಿರುಮಂಗೈ ಎಂಬ ದಿವ್ಯಸ್ಥಳಕ್ಕೆ ನಿರ್ವಾಹಕರಾಗಿ ಸ್ವಾಮಿ ಎನಿಸಿದ ತಿರುಮಂಗೈಯಾಳ್ವಾರು (ಇವರು ವೇದಗಳಲ್ಲಿ ಅಭಿ ಮಾನವಿಲ್ಲದವರನ್ನು ನಿಗ್ರಹಿಸಿ ಎಲ್ಲರಿಗೂ ವೇದಗಳಲ್ಲಿ ಅಭಿಮಾನ ವುಂಟಾಗುವ ಹಾಗೆ ಮಾಡುವದಕ್ಕಾಗಿ ಖಡ್ಗ ಮೊದಲಾದ ಆಯುಧಗ ಳನ್ನು ಧರಿಸಿದರೆಂದು ಭಾವವು. ದೇವಭಾಗವತ ಕೈಂಕರ್ಯಕ್ಕಾಗಿ ಅವೈಷ್ಣವರಲ್ಲಿದ್ದ ಧನವನ್ನು ಸಂಗ್ರಹಿಸುವದಕ್ಕಾಗಿಯೂ ಆಯುಧ ಗಳನ್ನು ಧರಿಸಿದವರು. ಇವರ ಅಸದೃಶವಾದ ಭಕ್ತಿಗೆ ಸ್ವಾಮಿಯು ಮೆಚ್ಚಿ ಇವರಿಗೆ ಮೂಲಮಂತ್ರ ಮೊದಲಾದ ಉಪದೇಶವನ್ನು ಸ್ವತಃ ಮಾಡಿರುತ್ತಾರೆ. ಆದರೆ ಆಚಾರ್ಯೋಪದೇಶವನ್ನು ಸಂಗ್ರ ಹಿಸಲು ಸಮಿತ್ಪಾಣಿಯಾಗಿ ಹೋಗಿ, ದ್ರವ್ಯವನ್ನು ಕೊಟ್ಟು ಶಿಷ್ಯನು, ಬ್ರಹ್ಮಜ್ಞಾನವನ್ನು ಪಡಿಯತಕ್ಕದ್ದು ; ಆದರೆ ಇವರು ಆಯುಧಗಳನ್ನು ಧರಿಸಿ ಲಕ್ಷ್ಮಿಯಮ್ಮೆಮೇಲಿದ್ದ ಆಭರಣಗಳನ್ನು ತಾವೇ ಸಂಗ್ರಹಿಸಿದಾಗ ಉಪದೇಶಹೊಂದಿದುದು ಪರಮಾಶ್ಚರ್ಯವೆಂ ದು ಸೂಚಿಸುವುದಕ್ಕಾಗಿಯೂ "ವಾಳ್‌ವೇಲೇಂದುಂ" ಎಂಬದಾಗಿ ಪ್ರ ಯೋಗಿಸಿರುತ್ತಾರೆಂಬದಾಗಿಯೂ ಭಾವಿಸಬಹುದು. ಹೀಗೆ ಆಯುಧ ಗಳನ್ನು ಧರಿಸಿ ಶತ್ರುಗಳಿಗೆ ಭಯಂಕರವಾಗಿದ್ದದರಿಂದ ಇವರಿಗೆ " ಪರ ಕಾಲ " ರೆಂದೂ ಹೆಸರು.

ಎನ್ರಿಪರ್‌ಗಳ್ - ಎಂಬುವ ಈ ಹತ್ತು ಆಳ್ವಾರುಗಳಿಂದ,

ಮುಕಳಿಂದು - ಭಗವದನುಗ್ರಹದಿಂದುಂಟಾದ ಪ್ರೀತ್ಯತಿಶಯದಿಂದ, ಪಾಡುಂ - ದಿವ್ಯಗಾನದಿಂದ ಹಾಡಲ್ಪಟ್ಟ, ಶೆಯ್ಯ - ಇತರ ಸಿದ್ಧಾಂತಗಳಲ್ಲಿರುವ ಹಾಗೆ, ಭ್ರಾಂತಿಭ್ರಮವಾದಗಳು, ಸ್ವಾಮಿಗೆ ಅವಿದ್ಯಾಕಲ್ಪನೆಯು, ಜಗನ್ಮಿಥ್ಯಾವಾದವು, ಮೊದಲಾದ ಅಜ್ಞಾನ, ಅನ್ಯಥಾ ಜ್ಞಾನ, ವಿಪರೀತಜ್ಞಾನಗಳೊಂದೂ ಇಲ್ಲದೆ ಋಜುಭಾವವನ್ನು ಹೊಂದಿರುವ, ತಮಿಳ್‌ಮಾಲೈಗಳ್ - ಸ್ವಾಮಿಗೆ ಬಹುಭೋಗ್ಯವಾಗಿರುವ, ಮೂಲಾರೂಪದಲ್ಲಿರುವ ನಾಲ್ಕುಸಾವಿರ ದ್ರಾವಿಡ ಪ್ರಬಂಧಗಳನ್ನು, ನಾಂ - ಅಗಸ್ತ್ಯಭಾಷೆಯಾದ ತಮಿಳಭಾಷೆಯನ್ನು ಕಲಿತು ವೈಷ್ಣವಯೋನಿಯಲ್ಲಿ ಜನಿಸಿ ಅಂತಹ ದ್ರಾವಿಡಪ್ರಬಂಧಗಳನ್ನು ಅಧಿಕರಿಸುವ ಸುಕೃತವಿಶೇಷವನ್ನು ಹೊಂದಿರುವ ನಾವುಗಳು, ತೆಳಿಯಟಿದಿ - ಆಚಾರ್ಯಮುಖೇನ ಉಚ್ಚಾರಣಾನೂಚ್ಚಾರಣಪೂರ್ವಕವಾಗಿ ಅಧ್ಯಯನಮಾಡಿ ಅನಂತರ ಅರ್ಥಸಾರಸ್ಯವನ್ನು ಗ್ರಹಿಸಿ, ತೆಳಿಯದ ಮರೈನಿಲಂಗಳ್- ಉಪನಿಷತ್ತಿನಲ್ಲಿ ಕೂಡ ಕ್ಲಿಷ್ಟವಾಗಿ ತಿಳಿಯದೇ ಇರುವ ಭಾಗಗಳನ್ನು, ತೆಳಿಗಿನ್ರೋಮೆ - ಈ ದ್ರಾವಿಡಪ್ರಬಂಧಗಳಲ್ಲಿ ಬಹುಸುಲಲಿತವಾಗಿ ಚನ್ನಾಗಿ ವಿಶದವಾಗಿ ಕರತಲಾಮಲಕವಾಗುವಹಾಗೆ ತಿಳಿದೆವಷ್ಟೆ. ಇಷ್ಟು ಉಪಕಾರವನ್ನು ಇವರುಗಳು ಮಾಡಿರುತ್ತಾರೆಂದು ತಾತ್ಪರ್ಯವು. ಉಪನಿಷತ್ತುಗಳಲ್ಲೂ ಅಷ್ಟು ಚನ್ನಾಗಿ ಅರ್ಥವಾಗದ ಭಾಗಗಳನ್ನು ಬಹುಸಾರಸ್ಯವಾಗಿ ಮಂದಟ್ಟಾಗುವಹಾಗೆ ಭಕ್ತಿರಸದಿಂದ ತುಂಬಿ ತುಳಕುವ ಹಾಗೆ ಈ ಆಳ್ವಾರುಗಳು ಅನುಗ್ರಹಿಸಿದ ಗ್ರಂಥಗಳ ಪರಿಶೀಲನದಿಂದ ತಮಗೆ ಉಭಯಕವಿತಾವಿಶಾರದರೆಂಬ ಖ್ಯಾತಿ ಉಂಟಾಯಿತಲ್ಲಾ ಎಂಬ ಕೃತಜ್ಞತಾಭಾವದಿಂದ ಈ ಆಳ್ವಾರುಗಳನ್ನು ಕೊಂಡಾಡಿದ್ದಪಾಶುರವಾಗಿರುತ್ತದೆ.

ಮೇಲೆ ಹೇಳಿದ ಹತ್ತು ಆಳ್ವಾರುಗಳ ಸಂಗ್ರಹಚರಿತ್ರೆಯು

1. ಪೊಯ್‌ಕೈಯಾಳ್ವಾರ್—ಇವರು ದ್ವಾಪರಯುಗದಲ್ಲಿ ಸಿದ್ಧಾರ್ಥಿಸಂವತ್ಸರದ ಅಲ್ಪಿಸಿ ಮಾಸದ ಶುಕ್ಲಪಕ್ಷದ ಅಷ್ಟಮಿ ಮಂಗಳವಾರ ಶ್ರವಣನಕ್ಷತ್ರದಲ್ಲಿ ಪಾಂಚಜನ್ಯವೆಂಬ ವಿಷ್ಣುವಿನ ಶಂಖಾಂಶ

ರಾಗಿ ಕಾಂಚೀಪುರದಲ್ಲಿ ಪೊಯ್ಕೈ ಪುಷ್ಕರಣಿಯ ಒಂದು ಕಮಲ ಪುಷ್ಪದಲ್ಲಿ ಅವತರಿಸಿದರೆಂಬ ಪ್ರತೀತಿಯುಂಟು. ಇವರನ್ನು ಪೊಯ್ಕೈಮುನಿ ಎಂದೂ ಹೇಳುತ್ತಾರೆ. ಮುನಿ ಎಂದರೆ ಉಪಾಸನಾರೂಪವಾದ ಮನನದಲ್ಲಿ ಆಸಕ್ತಿಯುಳ್ಳವರೆಂದು ಭಾವವು.

2. ಪೂದತ್ತಾಳ್ವಾರವರು—ಇವರು ಪೊಯ್ಕೈಮುನಿ ಹುಟ್ಟಿದವಾರನೇ ದಿನ ಹುಟ್ಟಿದವರು. ಆದ್ದರಿಂದ ಸಿದ್ಧಾರ್ಥಿಸಂವತ್ಸರದ ಅಲ್ಪಿಸಿಮಾಸ ಶುಕ್ಲಪಕ್ಷ ನವಮಿ ಬುಧವಾರ ಧನಿಷ್ಠಾನಕ್ಷತ್ರದಲ್ಲಿ ವಿಷ್ಣುವಿನ ಗದಾಂಶರಾಗಿ, ತಿರುಕ್ಕಡಲ್‌ಮಲ್ಲೈಯಲ್ಲಿ ಮಾದವಿಹೂವಿನಲ್ಲಿ ಅವತರಿಸಿದರು. ಇವರಿಗೆ ಭೂತಮುನಿ ಎಂಬ ಹೆಸರುಂಟು. ಭೂತ ಎಂದರೆ ನಿತ್ಯಸೂರಿ, ನಿತ್ಯಸೂರಿಗಳಹಾಗೆ ಇವರಿದ್ದುದರಿಂದ ಆ ಹೆಸರು ಬಂತು.

3. ಪೇಯಾಳ್ವಾರ್—ಇವರು ಪೂದತ್ತಾಳ್ವಾರ್ ಅವತರಿಸಿದ ಮಾರನೇ ದಿನ ಅವತರಿಸಿದವರು. ಆದುದರಿಂದ ಸಿದ್ಧಾರ್ಥಿಸಂವತ್ಸರದ ಅಲ್ಪಿಸಿ ಮಾಸ ಶುಕ್ಲಪಕ್ಷ ದಶಮಿ ಬೃಹಸ್ಪತಿವಾರ ಶತಭಿಷಾ ನಕ್ಷತ್ರದಲ್ಲಿ ವಿಷ್ಣುವಿನ ನಂದಕವೆಂಬ ಖಡ್ಗಾಂಶರಾಗಿ ಮಯೂರಪುರಿಯಲ್ಲಿ ಕನ್ನೈ ದಿಲೆ ಹೂವಿನಲ್ಲಿ ಅವತರಿಸಿದರು.

ಸಮಾನ ವಯಸ್ಕರಾದ ಈ ಮೂವರೂ ದಿವ್ಯದೇಶಯಾತ್ರೆಗಳನ್ನು ಮಾಡುತ್ತಾ ತಿರುವಕ್ಕೋವಲೂರೆಂಬ ಸ್ಥಳದಲ್ಲಿ ಮೂವರೂ ಒಟ್ಟಿಗೆ ಸೇರಿರುವಾಗ ತಮ್ಮ ಜ್ಞಾನಚಕ್ಷುಸ್ಸಿನ ಮೂಲಕ ಲೋಕವಾತೆಯುಂ ಪ್ರಾರ್ಥಿಸಿ, ಆ ಪುರುಷಕಾರಮೂಲಕವಾಗಿ ಶ್ರೀಯಃಪತಿಯ ದಿವ್ಯಸ್ವರೂಪವನ್ನು ಕಂಡವರಾಗಿ ತಮ್ಮ ಗಳನುಭವವನ್ನು ದ್ರಾವಿಡ ಪ್ರಬಂಧರೂಪದಲ್ಲಿ ರಚಿಸಿರುತ್ತಾರೆ.

ಪೊಯ್ಕೈಆಳ್ವಾರವರು ರಚಿಸಿದುದು. ವಹ್ಯಂತಹಳಿಯಾ
ಎಂಬುವ ಮೊದಿಲ್‌ತಿರುವಂದಾದಿ. ಪಾಶುರಗಳು ೧೦೦.

ಪೂದತ್ತಾಳ್ವಾರವರು ರಚಿಸಿದುದು. ಅನ್ಬೇತಹಳಿಯಾ ಎಂಬುವ
ಇರಂಡಾಂ ತಿರುವಂದಾದಿ. ಪಾಶುರಗಳು ೧೦೦.

ಪೇಯಾಳ್ವರವರು. ತಿರುಕ್ಕಂಡೇರ್ ಎಂಬುವ ಮೂನ್ರಾಂ ತಿರುವಂದಾದಿ. ಪಾಶುರಗಳು ೧೦೦.

4. ನಮ್ಮಾಳ್ವರ್—ಪೂರ್ವಾಚಾರ್ಯರುಗಳಲ್ಲಿ ಇವರಿಗೆ ಹೆಚ್ಚಾದ ಮರ್ಯಾದೆಯುಂಟು. ಇವರು "ವೇದಂತಮಿಳ್‌ಶೇಯ್ದ" ಎಂಬುವಹಾಗೆ ವೇದಗಳರ್ಥಗಳನ್ನೆಲ್ಲಾ ಉಪಪಾದಿಸಿಯೂ, ಭಕ್ತಿರಸವು ತುಂಬಿತುಳುಕುವಹಾಗೆಯೂ, ಶರಣಾಗತಿಧರ್ಮ ಸಾರಭೂತವಾಗಿಯೂ, ೧೦೦೨ ಪಾಶುರಗಳುಳ್ಳ ತಿರುವಾಯ್‌ಮೊಳಿಯನ್ನೂ ರಚಿಸಿ, ದ್ರಾವಿಡಪ್ರಬಂಧಗಳಲ್ಲಿ ಇದಕ್ಕೆ ತುಂಬಾ ಪ್ರಾಮುಖ್ಯತೆ ಬಂದಿರುವದರಿಂದ ಇವರಿಗೆ ಗೌರವಹೆಚ್ಚು. ಇವರು ಸೇನೇಶಾಂಶರಾಗಿ ಕಲಿ ೪೩ನೇವರ್ಷ ಪ್ರಮಾಧಿ ಸಂವತ್ಸರದ ವೈಯ್ಯಾಶಿಮಾಸಂ ಪೂರ್ಣಿಮಾ ಶುಕ್ರವಾರ ವಿಶಾಖಾನಕ್ಷತ್ರದಲ್ಲಿ ಹುಟ್ಟಿದರು. ಅವತಾರ ಸ್ಥಳ ಕುರುಕಾಪುರಿ. ಈಗ ಇದಕ್ಕೆ ಆಳ್ವಾರ್‌ತಿರುನಗರೀ ಎಂಬ ಹೆಸರಿರುತ್ತದೆ. ತಾಮ್ರಪರ್ಣೀನದೀತೀರದಲ್ಲಿ ದಿವ್ಯಯಾತ್ರಾಸ್ಥಳವಾಗಿರುತ್ತದೆ. ಇವರು ಶೂದ್ರಜಾತಿಯವರಾದ ಕಾರಿ, ಉಡೈಯನಂಗಿಯುವರಿಗೆ ಮಕ್ಕಳು. ಇವರುಗಳು ಈ ಬಾಲರಿಗೆ ಮಾರಣ ಎಂಬ ಹೆಸರನ್ನಿಟ್ಟು ಸಾಕಲಾಗಿ ೧೬ ವರುಷಗಳವರಿವಿಗೂ ಮಾತಿಲ್ಲದೆ ಕುರುಡರ ಹಾಗೆ, ಆದಿನಾಥನ ಸನ್ನಿಧಿಯಲ್ಲಿ ಆದಿಶೇಷಾಂಶವಾದ ತಿರುಪ್ಪುಳಿ (ಹುಣಿಸೇಮರ) ವೃಕ್ಷದ ನೆರಳಿನಲ್ಲಿ ಇರುತ್ತಿದ್ದರು. (ಈ ಹುಣಿಸೇಮರವು ಈಗಲೂ ಆಳ್ವಾರ್‌ತಿರುನಗರಿಯಲ್ಲಿ ಆದಿನಾಥನ ಸನ್ನಿಧಿಪಕ್ಕದಲ್ಲಿ ಇರುತ್ತದೆ. ಅದರ ಕೆಳಗೇನೆ ಮಧುರಕವಿಯಾಳ್ವಾರವರಿಂದ ಪ್ರತಿಷ್ಠಿತವಾದ ನಮ್ಮಾಳ್ವಾರ್ ಸನ್ನಿಧಿ ಇರುತ್ತದೆ.) ಆಗ ಲೋಕಜನನಿಯ ಕಟಾಕ್ಷಕ್ಕೆ ಇವರು ಪಾತ್ರರಾಗಿ! ಆಕೆಯು ತನ್ನ ಪತಿಯನ್ನು ಕುರಿತು ಲೋಕದ ಜನರುಜ್ಜೀವಿಸಲು ಏನಾದರೂ ಬಗೆ ಉಪಾಯವನ್ನು ಕಲ್ಪಿಸಕೂಡದೇ ಎಂಬದಾಗಿ ಪ್ರಾರ್ಥಿಸಲು, ಆಗ ಸ್ವಾಮಿಯು ಸೇನೇಶರನ್ನು ಕರೆದು, ನಿನ್ನಂಶಭೂತನಾದ ಮಾರನಿಗೆ ಸಕಲ ಶಾಸ್ತ್ರಾರ್ಥಗಳನ್ನುಪದೇಶಿಸಿ, ಅವರಿಂದ ಲೋಕೋಪಕಾರವಾಗುವ ಹಾಗೆ ಮಾಡಿ

ಬೇಕೆಂದು ಆಜ್ಞಾಪಿಸಲಾಗಿ ಆ ಸೇನೇಶರ ಕರುಣೆಯಿಂದ ಈ ಆಳ್ವಾರರು ಬಹುಜ್ಞಾತಾವಾಗಿ ಶಾಸ್ತ್ರರಹಸ್ಯಂಗಳನ್ನೆಲ್ಲಾ ತಿಳಿದು ಬ್ರಹ್ಮವಿತ್ತಾಗಿದ್ದರು.

5. ಮಧುರಕವಿಯಾಳ್ವಾರ್—ಕುಮುದಾಂಶಭೂತರಾಗಿ ದ್ವಾಪರಯುಗದಲ್ಲಿ ಈಶ್ವರಸಂವತ್ಸರದ ಚಿತ್ತಿರೈಮಾಸಂ ಶುಕ್ಲಪಕ್ಷ ಚತುರ್ದಶೀ ಶುಕ್ರವಾರ ಚಿತ್ತಾನಕ್ಷತ್ರದಲ್ಲಿ ತಿರುಕೊಕ್ಕೀಳೂರು ಕ್ಷೇತ್ರದಲ್ಲಿ ಅವತರಿಸಿದರು. ಇವರು ಬ್ರಾಹ್ಮಣ ಸಂತತಿಯವರು. ಇವರು ಸಕಲ ವೇದವೇದಾಂಗಗಳನ್ನೂ ಅಧ್ಯಯನಮಾಡಿದವರಾಗಿ, ದಿವ್ಯದೇಶಯಾತ್ರೆಮಾಡುವದಕ್ಕಾಗಿ ಶ್ರೀರಾಮಾವತಾರಸ್ಥಳವಾದ ತಿರುವಯೋಧ್ಯೆಗೆ ಬಂದು ಸೇರಿದರು. ಅಲ್ಲಿ ತಾವು ಜನಿಸಿದ ತಿರುಕೊಕ್ಕೀಳೂರ್‌ಸ್ವಾಮಿಯನ್ನು ಮನಸಾಧ್ಯಾನಿಸಿದವರಾಗಿ, ಆ ದಿಕ್ಕನ್ನು ನೋಡಲಾಗಿ, ಆಕಡೆ ಬಂದು ದಿವ್ಯತೇಜಃಪುಂಜವನ್ನು ಕಂಡರು. ಇದೇನಿರಬಹುದೆಂದು ತಿಳಿಯಬೇಕೆಂಬ ಕುತೋಹಲದಿಂದ, ಆತೇಜಸ್ಸನ್ನನುಸರಿಸಿಯೇ ದಕ್ಷಿಣಕ್ಕೆ ಸಂಚರಿಸಿ ಬರುವವರಾಗಿ, ಕೊನೆಗೆ ಆಳ್ವಾರು ತಿರುನಗರಿಯ ಹುಣಿಸೇಮರದವರಿವಿಗೂ ಬಂದರು. ಆಗ ಮರದ ಕೆಳಗಿದ್ದ ನಮ್ಮಾಳ್ವಾರವರ ಸಂದರ್ಶನವನ್ನು ಮಾಡಿ ಅನಂದಭರಿತರಾಗಿ ಪ್ರಣಾಮಗಳನ್ನೆಸಗಿ ಪ್ರಶ್ನೆಮಾಡಿದರೇನೆಂದರೆ—" ಶಿರಿಯದು ವಯತ್ತಿಲೆ ಪೆರಿಯದು ಪಿರಂದಾಲ್ ಎತ್ತೈ ತಿನ್ರು ಏಂಗೆ ಕಿಡಕ್ಕುಂ " ಸಣ್ಣದರ ಹೊಟ್ಟೆಯಲ್ಲಿ ದೊಡ್ಡದು ಆವಿರ್ಭವಿಸಿದರೆ ಯಾವದನ್ನು ತಿಂದುಕೊಂಡು ಎಲ್ಲಿ ಇರುತ್ತದೆ ಏಂಬುದು ಈ ಪ್ರಶ್ನೆಯರ್ಥವು. " ಚಿಕ್ಕದಾದ ಅಣುಸ್ವರೂಪನಾದ ಜೀವನಲ್ಲಿ ಧರ್ಮಭೂತಜ್ಞಾನವು ವಿಭುವಾಗಿ ವಿಕಾಸವನ್ನು ಸ್ವಾಮಿಕಟಾಕ್ಷದಿಂದ ಹೊಂದಿದರೆ, ಯಾವದನ್ನನುಭವಿಸುತ್ತಾ ಎಲ್ಲಿ ಅಂತಹ ಜೀವನು ವಸಿಸುವನು " ಏಂಬುದು ವಾಸ್ತವಿಕಾರ್ಥವು. ಈ ಪ್ರಶ್ನೆಗೆ ನಮ್ಮಾಳ್ವಾರವರು " ಅತ್ತೈ ತಿನ್ರು ಅಂಗೇ ಕಿಡಕ್ಕುಂ" ಅದನ್ನು ತಿಂದುಕೊಂಡು ಅಲ್ಲೇ ಬಿದ್ದಿರುತ್ತದೆ ಏಂಬಸಾಧಾರಣಾರ್ಥ ಬರುವ ಉತ್ತರವನ್ನು ಹೇಳಿದರು. "ಅತ್ತೈ-ಅಕಾರವಾಚ್ಯನಾದ ಶ್ರೀಮನ್ನಾರಾಯಣನನ್ನನುಭವಿಸುತ್ತಾ, ಆ ಶ್ರೀಮನ

ನಿರುವ ದಿವ್ಯ ವೈಕುಂಠದಲ್ಲೇ ಪುನರಾವರ್ತಿ ಭಯವಿಲ್ಲದೆ ಅಲ್ಲಿಯೇ ಸ್ಥಿರವಾಗಿರುವನು" ಎಂಬ ಅವೋಘಾರ್ಥಗರ್ಭಿತವಾದ ಉತ್ತರವನ್ನು ಪೇಳಿದರು. ಈ ಉತ್ತರಕ್ಕೆ ಮಧುರಕವಿಯಾಳ್ವಾರವರು ಪರಮಸಂತುಷ್ಟರಾಗಿ ಅವರಲ್ಲೇ ನಿಂತು ವೇದಸಾರವನ್ನೆಲ್ಲಾ ಉಪದೇಶಿಸಬೇಕೆಂದು ಪ್ರಾರ್ಥಿಸಲಾಗಿ, ನಮ್ಮಾಳ್ವಾರವರು ಕೃಪೆಮಾಡಿ, ಋಗ್ವೇದಸಾರವನ್ನೆಲ್ಲಾ ೧೦೦ ಪಾಶುರಗಳುಳ್ಳ ತಿರುವರುತ್ತಂ ಎಂಬದಾಗಿಯೂ ಯಜುರ್ವೇದಸಾರವನ್ನು ೭ ಪಾಶುರುಗಳುಳ್ಳ ತಿರುವಾಶರಿಯಂ ಎಂಬದಾಗಿಯೂ ಅಥರ್ವವೇದಾರ್ಥವನ್ನು ೮೭ ಪಾಶುರಗಳುಳ್ಳ ಪೆರಿಯತಿರುವಂದಾದಿ ಎಂಬದಾಗಿಯೂ ಸಾಮವೇದಾರ್ಥಸಾರವನ್ನೆಲ್ಲಾ ೧೦೦೨ ಪಾಶುರಗಳುಳ್ಳ ತಿರುವಾಯ್‌ಮೊಳಿ ಎಂಬದಾಗಿಯೂ ರಚಿಸಿ ಸ್ವಾರಸ್ಯವಾಗಿ ಅರ್ಥದೊಂದಿಗೆ ಅವರಿಗೆ ಅನುಗ್ರಹಿಸಿ ಲೋಕವಿಖ್ಯಾತಿಯನ್ನು ಪಡೆದರು.

ಇಷ್ಟು ಪರಮೋಪಕಾರಮಾಡಿದ ನಮ್ಮಾಳ್ವಾರವರಲ್ಲಿ ಇವರಿಗೆ ಭಕ್ತಿಯು ಅನಾದೃಶವಾದುದರಿಂದ, ಇದಕ್ಕಾಗಿ "ಕಣ್ಣಿನುಣ್‌ಶಿರತಾಂಬು" ಎಂಬುವ ೧೧ ಪಾಶುರಗಳಿಂದ ನಮ್ಮಾಳ್ವಾರವರನ್ನು ವಿಶೇಷ ಕೊಂಡಾಡಿ ಭಾಗವತಾಚಾರ್ಯಪ್ರತಿಪತ್ತಿ ಉಂಟಾಗುವಹಾಗೆ ಬಹು ಸ್ವಾರಸ್ಯವಾಗಿ ರಚಿಸಿರುವದರಿಂದ ಈ ಗ್ರಂಥವು ಪ್ರತಿನಿತ್ಯವೂ ಭಾಗವತಗೋಷ್ಠಿಯಿಂದ ನಿತ್ಯಾನುಸಂಧಾನಕ್ಕೆ ಯೋಗ್ಯವಾಗಿರುತ್ತದೆ ಅನಂತರ ಮಧುರಕವಿಯಾಳ್ವಾರವರು ತಮ್ಮ ಗುರುವಾದ ನಮ್ಮಾಳ್ವಾರವರನ್ನು ಆ ಹುಣಿಸೇಮರದಕೆಳಗೆಯೇ ಪ್ರತಿಷ್ಠೆಮಾಡಿ ಅವೋಘವಾಗಿ ಇವರಿಗೆ ಅರ್ಚೆಯು ನಡೆಯುವ ಹಾಗೆ ಮಾಡಿರುತ್ತಾರೆ. ಈಗಲೂ ಬಹು ಭಾಗವತಗೋಷ್ಠಿಯು ಆಳ್ವಾರ್‌ತಿರುನಗರಿಗೆ ಯಾತ್ರಾರ್ಥವಾಗಿ ಹೋಗಿ ಸ್ವಾಮಿ ಆದಿನಾಥನನ್ನೂ ನಮ್ಮಾಳ್ವಾರ್ರವರನ್ನೂ ಸೇವೆಮಾಡಿಬರುತ್ತಾರೆ.

6. ಪೆರಿಯಾಳ್ವಾರ್—ಇವರು ವೈನತೇಯಾಂಶರು. ಅವತಾರಸ್ಥಳ ಶ್ರೀವಿಲ್ಲಿಪುತ್ತೂರ್. ಇದು ಪ್ರಸಿದ್ಧ ಯಾತ್ರಾಸ್ಥಳವು. ಇವರು ಕಲಿಶಕ ೪೨೯ನೇದಾದ ಕ್ರೋಧನಸಂವತ್ಸರದ ಆನಿಮಾಸ ಶುಕ್ಲಪಕ್ಷ

ಏಕಾದಶೀಭಾನುವಾರ ಸ್ವಾತೀನಕ್ಷತ್ರದಲ್ಲಿ ಒಬ್ಬ ಶ್ರೀವೈಷ್ಣವರಿಗೆ ಕುಮಾರರಾಗಿ ಜನಿಸಿದರು. ಇವರು ವೇದಮೊದಲಾದ ಶಾಸ್ತ್ರಗಳಲ್ಲಿ ತುಂಬಾ ಜ್ಞಾನವನ್ನು " ಗುರುಮುಖಮನಧೀತ್ಯ " ಎಂದು ಹೇಳಿರುವ ಹಾಗೆ ಗುರುವಿನ ಸಹಾಯವಿಲ್ಲದೆ, ಪರಮಗುರುವಾದ ಶ್ರೀಮನ್ನಾರಾಯಣನ ಕಟಾಕ್ಷದಿಂದ ಪಡದವರಾಗಿ ಶ್ರೀವಿಲ್ಲಿಪುತ್ತೂರ್ ರಂಗಮನ್ನಾರ್ ಸ್ವಾಮಿಗೆ ತುಳಸೀಪುಷ್ಪಮೂಲಾಕೈಂಕರ್ಯವನ್ನು ಮಾಡುತ್ತಿದ್ದರು. ಹೀಗಿರುವಲ್ಲಿ ಪಾಂಡ್ಯದೇಶದ ಧೊರೆಯಾದ ಮಧುರೆಯಲ್ಲಿದ್ದ ವಲ್ಲಭದೇವರಾಯನು ತತ್ವಹಿತಪುರುಷಾರ್ಥವನ್ನು ಚನ್ನಾಗಿ ಅರಿಯಬೇಕೆಂಬಭಿಲಾಷೆಯಿಂದ, ಅದಕ್ಕಾಗಿ ವಿದ್ಯಾಶುಲ್ಕವನ್ನು ಏರ್ಪಡಿಸಿ, ಬಹಳ ಕಡೆಗಳಿಂದ ಘನಪಂಡಿತರನ್ನೆಲ್ಲಾ ಕರಿಸಿದ್ದನು. ಈ ಪೆರಿಯಾಳ್ವಾರಿಗೆ ಕನಸಿನಲ್ಲಿ ನೀನು ಹೋಗಿ ವಲ್ಲಭದೇವನಿಗೆ ತತ್ವಹಿತಪುರುಷಾರ್ಥಗಳನ್ನು ತಿಳಿಸಿ ವಿದ್ಯಾಶುಲ್ಕವಾದ ಹಣದ ಗಂಟನ್ನು ಪಡೆದುಬರತಕ್ಕದ್ದೆಂಬದಾಗಿ ಶ್ರೀರಂಗಮನ್ನಾರ್‌ಸ್ವಾಮಿಯು ನೇಮಿಸಿದಂತಾಗಲು, ಆ ಆಜ್ಞೆಯನ್ನು ಶಿರಸಾವಹಿಸಿ ಹೊರಟು ಮಧುರೆಯನ್ನು ಬಂದು ಸೇರಲು, ಆ ಕಾಲದಲ್ಲೇ ವಲ್ಲಭದೇವನಿಗೂ ತತ್ವಹಿತಪುರುಷಾರ್ಥಗಳನ್ನು ಈ ಪೆರಿಯಾಳ್ವಾರ್ರವರಿಂದ ಸಂಗ್ರಹಿಸತಕ್ಕದ್ದೆಂಬದಾಗಿ ಕನಸು ಉಂಟಾಗಲು, ಆಗ ರಾಜನು ಬಂದು ಇವರನ್ನು ಸನ್ಮಾನಿಸಿ ಅರಮನೆಗೆ ಕರದುಕೊಂಡು ಹೋಗಿ ಉಪದೇಶವನ್ನು ಪ್ರಾರ್ಥಿಸಲಾಗಿ, ಆಗ ಆಳ್ವಾರವರು ಪುರುಷಸೂಕ್ತಾನುವಾಕಗಳಿಗೆ ಅರ್ಥತಾತ್ಪರ್ಯಗಳನ್ನು ಚನ್ನಾಗಿ ಉಪಪಾದಿಸಿ ತಿಳಿಸಿ ಶಾಸ್ತ್ರಪ್ರಮಾಣಗಳ ಮೂಲಕ ಶ್ರೀಮನ್ನಾರಾಯಣನೇ ಪರತತ್ವವೆಂಬುವದನ್ನು ಸ್ಥಾಪಿಸಿದರು. ಅದಕ್ಕೆ ಹರ್ಷಿತನಾಗಿ ರಾಜನು ಇವರಿಗೆ " ಭಟ್ಟರ್‌ಪಿರಾನ್ " " ಶ್ರೀಭಟ್ಟನಾರ್ " ಎಂಬ ಹೆಸರನ್ನು ಕೊಟ್ಟು ಇವರನ್ನು ಒಂದು ಆನೆಯಮೇಲೆ ಕೂಡಿಸಿ ಬಹು ವಿಜೃಂಭಣೆಯಿಂದ ಮೆರವಣಿಗೆಯನ್ನು ಮಾಡಿಸಿದನು. ಇತರ ಸಿದ್ಧಾಂತಗಳನ್ನು ಸಭೆಯಲ್ಲಿ ನಿರಸನಮಾಡಿ ಪರತತ್ವದ ಯಾಥಾತ್ಮ್ಯವನ್ನು ಸ್ಥಾಪಿಸಿ, ಈ ಮಹೋತ್ಸವವನ್ನು ಕೈಗೊಂಡಿರುವದನ್ನು ನೋಡಬೇಕೆಂಬ ಲೀಲಾರಸದಲ್ಲಭಿನಿವೇಶವುಳ್ಳವನಾಗಿ ಸ್ವಾಮಿನಾರಾಯಣನು

ಲಕ್ಷ್ಮೀವಿಶಿಷ್ಟನಾಗಿ ವಿಹಗಾಭರೂಷನಾಗಿ ಬಂದು ನಿಲ್ಲಲು, ತಮ್ಮ ಜ್ಞಾನಚಕ್ಷುಸ್ಸಿನಿಂದ ಈ ದಿವ್ಯದಂಪತಿಗಳನ್ನು ನೋಡಿದವರಾಗಿ, ಒಡನೆ ಆನೆಯಿಂದ ಕೆಳಗೆ ಧುಮುಕಿ ಆನೆಗೆ ಕಟ್ಟಿದ್ದ ಗಂಟೆಯನ್ನೇ ತಾಳವಾಗಿ ಮಾಡಿಕೊಂಡು, " ಪಲ್ಲಾಂಡು ಪಲ್ಲಾಂಡು " ನಿನಗೆ ಮಂಗಳವಾಗಲಿ ಮಂಗಳವಾಗಲಿ ಎಂಬದಾಗಿ ಗಾನರೂಪದಿಂದ ಹಾಡಿದರು. ಇವರು ರಚಿಸಿರುವ ಗ್ರಂಥಗಳು—

(1) ಪಲ್ಲಾಂಡು ೧೨ ಪಾಶುರಗಳು.

(2) ತಿರುಮೊಳಿ ೪೭೧ ಪಾಶುರಗಳು.

ಭೂಮ್ಯಂಶಳಾದ ಗೋದಾ ಅಥವಾ ಆಂಡಾಳ್, ಇವರು ಸಲಹಿದ ಮಗಳು.

ಆಂಡಾಳ್—ಇವರು ಕಲಿಯುಗ ೫೧೯೯ನೇದಾದ ನಳಸಂವತ್ಸರದ ಆಡಿನೂಸ ಶುದ್ಧ ಚತುರ್ಥಿ ಮಂಗಳವಾರ ಪುಬ್ಬಾ (ಪೂರ್ವಫಲ್ಗುನಿ) ನಕ್ಷತ್ರದಲ್ಲಿ ಶ್ರೀವಿಲ್ಲಿಪುತ್ತೂರಲ್ಲಿ ಶ್ರೀಪೆರಿಯಾಳ್ವಾರವರು ವಡಪೆರುಂಕೋಯಿಲುಡೈಯಾರ್ ಕೈಂಕರ್ಯಕ್ಕಾಗಿ ರಚಿಸಿಕೊಂಡಿದ್ದ ತುಳಸೀವನದಲ್ಲಿ ಅವರು ಭೂಮಿಯನ್ನಗಿಯುತ್ತಿದ್ದಾಗ ಸಿಕ್ಕಿದರು. ಈಕೆಯು ಭೂಮ್ಯಂಶವಾದುದರಿಂದ ಸೀತೆಯಹಾಗೆ ಅಯೋನಿಜಳು. ಈ ಶಿಶುವಿಗೆ ಗೋದಾ ಎಂಬ ಹೆಸರನ್ನಿಟ್ಟು ತುಂಬಾ ಪ್ರೀತಿಯಿಂದ ಆಳ್ವಾರ್ರವರು ಸಲಹುತ್ತಿದ್ದರು. ಈಕೆಯು ಬೆಳೆದು ಪ್ರಾಪ್ತವಯಸ್ಕಳಾದಾಗ ಪ್ರತಿನಿತ್ಯವೂ ಈ ಆಳ್ವಾರವರು ಆ ಊರಿನ ವಡಪೆರುಂಕೋಯಿಲ್ಲಾಸ್ವಾಮಿಗಾಗಿ ಕಟ್ಟಿಯಿಟ್ಟ ಹೂವಿನ ಹಾರವನ್ನು ಈಕೆಯು ಬಿಚ್ಚಿ ಅಲಂಕಾರಮಾಡಿಕೊಂಡು, ಮುಡುಕೊಂಡು ತನ್ನಲಂಕಾರವು ಸ್ವಾಮಿಗೆ ಯೋಗ್ಯವೋ ಅಲ್ಲವೋ ಎಂದು ಬಂದು ಕನ್ನಡಿಯಲ್ಲಿ ನೋಡಿಕೊಂಡು, ಭೋಗ್ಯವಾಗಿದೆ ಎಂದು ಹೇಳುತ್ತಾ, ಹಾರವನ್ನು ಪುನಃ ಹಾಗೆಯೇ ಕಟ್ಟಿಡುತ್ತಿದ್ದಳು. ಇದನ್ನು ಬಂದು ದಿನ ಆಳ್ವಾರವರವರಲ್ಲೋಕಿಸಿದವರಾಗಿ, ಹಾರವು ಸ್ವಾಮಿಗೆ ಸಮರ್ಪಿಸಲನರ್ಹವೆಂದು ಭಾವಿಸಿ ಹಾಗೆಮಾಡಕೂಡದೆಂದು ತಮ್ಮ ಮಗಳಿಗೆ ಹೇಳಿ, ಹಾರವನ್ನು ಸ್ವಾಮಿಗೆ ಸಮರ್ಪಿಸಲಿಲ್ಲವು. ಯಾವಾಗ ಈಕೆಯು ತನ್ನ ಸ್ವಂತ

ಭೋಗಕ್ಕಾಗಿ ಉಪಯೋಗಿಸವೆ ಸ್ವಾಮಿಗೆ ತಾನು ಭೋಗ್ಯಳಹುದೋ ಅಲ್ಲವೋ ಎಂಬುವದನ್ನು ತಿಳಿಯಲು ಉಪಯೋಗಿಸಿದುದರಿಂದ, ಹಾರವು ಶಬರಿಯಿಂದರ್ಪಿತವಾದ ಫಲದೋಪಾದಿಯಲ್ಲಿ ಸ್ವಾಮಿಗೆ ಪರಮಭೋಗ್ಯವಾದುದರಿಂದ, ಆದಿನ ರಾತ್ರಿಯಲ್ಲಿ ಮಲಗಿರುವಾಗ ಈ ಆಳ್ವಾರಿಗೆ ಸ್ವಪ್ನದಲ್ಲಿ ಸ್ವಾಮಿಯು ಎದುರಿಗೆ ಬಂದುನಿಂತು, ನೀವೇ ತಕ್ಕೆ ಈದಿನ ಹಾರವನ್ನು ತರಲಿಲ್ಲವೆಂದು ಕೇಳಲು, ಆಗ ಆಳ್ವಾರವರು ಸ್ವಾಮಿಪಾದಕ್ಕೆರಗಿ ನಡದ ವೃತ್ತಾಂತವನ್ನು ಬಿನ್ನಹಮಾಡಲು, ಅದಕ್ಕೆ ಸ್ವಾಮಿಯು ನಕ್ಕು ಆದರೂ ಚಿಂತೆಯಿಲ್ಲವು, ನನಗದು ಭೋಗ್ಯವಾದುದೇ, ತಂದು ಸಮರ್ಪಿಸಬಹುದೆಂದು ಅಜ್ಞಾಪಿಸಲು, ಅವರು ಹಾಗೆಯೇ ಮಾಡುತ್ತಿದ್ದರು. ಇದರಿಂದ ಶ್ರೀಗೋದಾದೇವಿಗೆ "ಶೂಡಿಕೊಡುತ್ತ ನಾಯ್ಚ್ಚಿಯಾರ್" ಎಂಬ ನಾಮಧೇಯ ಉಂಟಾಯಿತು.

ಈಕೆಯು ಯಾವಾಗಲೂ ಸ್ವಾಮಿಯಲ್ಲೇ ಇಡಲ್ಪಟ್ಟ ಮನಸ್ಸುಳ್ಳವಳಾಗಿ ವಿವಾಹಕ್ಕೆ ಯೋಗ್ಯವಾದ ವಯಸ್ಸು ಪ್ರಾಪ್ತವಾಗಲು, ತಾನು ಯಾವ ಮನುಷ್ಯನನ್ನೂ ಮದುವೆಮಾಡಿಕೊಳ್ಳುವದಿಲ್ಲವೆಂತಲೂ, ಸ್ವಾಮಿ ಶ್ರೀಮನ್ನಾರಾಯಣನನ್ನೇ ವರಿಸುವದಾಗಿ ಹೇಳುತ್ತಿದ್ದಳು. ಈ ತನ್ನ ಮನೋರಥವು ಈಡೇರುವದಕ್ಕಾಗಿ ಭಾಗವತದಲ್ಲಿ ಉಪಪಾದಿತವಾಗಿರುವಹಾಗೆ ಗೋಪಿಯರು ಶ್ರೀಕೃಷ್ಣನನ್ನು ಹೊಂದಲು ಮಾಡಿದ ಉಪಾಯದ ರೀತಿಯಲ್ಲಿ ತಾನೂ ತನ್ನ ಸಖಿಯರನ್ನು ಕರೆದುಕೊಂಡು ಹೋಗಿ ಪ್ರಾತಃಕಾಲದಲ್ಲಿ ಅವಗಾಹನಸ್ನಾನಮಾಡಿ ಬಂದು ವಟಪತ್ರಶಾಯಿಯನ್ನು ಸೇವಿಸುತ್ತಿದ್ದಳು. ತಾನು ಅಮೋಘಜ್ಞಾನ ವಿಕಾಸಯುಕ್ತಳಾದುದರಿಂದ ಈ ವ್ರತವನ್ನೇ ವರ್ಣಿಸಿ, ಶ್ರುತಿಸ್ಮೃತಿ ತೇತಿಹಾಸಗಳಲ್ಲಿ ಪ್ರತಿಪಾದಿತವಾದರ್ಥಗಳನ್ನೆಲ್ಲಾ ಗರ್ಭೀಕರಿಸಿ "ಉಪನಿಷತ್ಸಾರ" ರೂಪವಾಗಿರುವ "ತಿರುಪ್ಪಾವೈ" ಅಂದರೆ "ಶ್ರೇಷ್ಠವಾದ ವ್ರತ" ವೆಂಬ ಹೆಸರಿನಿಂದ ರಹಸ್ಯವೇದಾಂತಾರ್ಥಗಳನ್ನೂ ಒಳಗೊಂಡ ೩೦ ಪಾಶುರಗಳುಳ್ಳ ಗ್ರಂಥವನ್ನು ರಚಿಸಿ ಹಾಡಿದರು. ಇಂತಹ ವೇದಾಂತಾರ್ಥಗಳಿಂದ ಪರಿಪೂರ್ಣವಾಗಿರುವದರಿಂದ ಇದು ಭಾಗವತೋತ್ತಮರುಗಳಿಗೆ ಪರಮಗ್ರಾಹ್ಯವಾಗಿ ಮಾರ್ಗಳಿವಾಸದಲ್ಲಿ ಸ್ನಾನ

ಮಾಡಿ, ಸೂರ್ಯೋದಯಸಂಧ್ಯಾವಂದನಾದಿಗಳಿಗೆ ಪೂರ್ವವೇ, ಸ್ವಾಮಿಯನ್ನು ಅರ್ಚಿಸಿ, ಪೊಂಗಲ್‌ನಿವೇದನಮಾಡಿ ಪ್ರತಿದಿನದಲ್ಲೂ ಕ್ರಮವಾಗಿ ಬಂದೊಂದು ಪಾಶುರವನ್ನು ಶಾತ್ತುಮುರೈ ಕಾಲದಲ್ಲಿ ಹೇಳಿ ಅದರ ವೇದಾಂತಾರ್ಥವನ್ನನುಸಂಧಾನಮಾಡುವ ಸಂಪ್ರದಾಯ ಉಂಟು. ಗೋದಾದೇವಿಯು ಸ್ವಾಮಿಶ್ರೀರಂಗನಾಥನ ಪಾದವನ್ನು ಹೇಗೆ ಹೊಂದಿದರೋ ಹಾಗೆ ಈ ವ್ರತಾನುಷ್ಠಾನಮಾಡುವವರೂ ಸಹ ಸ್ವಾಮಿಯನ್ನು ಹೊಂದಿ ನಿರತಿಶಯಸುಖಭಾಗಿಗಳಾಗುವರು. ಇಂತಹ ಪರಮಶ್ರೇಯಸ್ಕರವಾದ ಸಂಪ್ರದಾಯಗಳೆಲ್ಲಾ ಶಿಥಿಲವಾಗುತ್ತಾ ಬಂದಿರುವದು ತುಂಬಾ ಶೋಚನೀಯವಾದ ವಿಷಯವಾಗಿರುತ್ತದೆ. ಈ ತಿರುಪ್ಪಾವೆಯ ಕೊನೆಯ ಎರಡು ಶ್ಲೋಕಗಳು ಸಾಧಾರಣವಾಗಿ ಎಲ್ಲಾ ಶಾತ್ತುಮುರೈ ಕಾಲಗಳಲ್ಲೂ ಪತನೀಯಗಳಾಗಿವೆ.

ಸ್ವಾಮಿಯನ್ನೇ ಪಾಣಿಗ್ರಹಣಮಾಡಿಕೊಳ್ಳುತ್ತೇನೆಂಬದಾಗಿ ಹಟ ಹಿಡಿದುದರಿಂದ ಯಾವ ಸ್ವಾಮಿಯನ್ನು ವರಿಸುವಿ ಎಂಬದಾಗಿ ಕೇಳಲ್ಪಡಲು, ೧೦೮ ದಿವ್ಯದೇಶಗಳಲ್ಲಿರುವ ಸ್ವಾಮಿಯ ದಿವ್ಯ ಚರ್ಯೆಗಳನ್ನು ಕೇಳುತ್ತಾ, ಶ್ರೀರಂಗನಾಥನ ಅತ್ಯದ್ಭುತ ಮಹಾತ್ಮ್ಯಕ್ಕೆ ಬೆರಗಾಗಿ, ಆತನನ್ನೇ ತಾನು ವರಿಸತಕ್ಕವಳೆಂದು ಹೇಳಿ ಆತನಿಂದ ತನ್ನ ಮನೋರಥಗಳನ್ನು ಪಡೆದಹಾಗೆ "ನಾಯ್‌ಚ್ಚಾರ್ ತಿರುಮೊಳಿ" ಎಂಬ ೧೪೩ ಪಾಶುರುಗಳುಳ್ಳ ದಿವ್ಯ ಗ್ರಂಥವನ್ನು ರಚಿಸಿ ಹಾಡುತ್ತಿದ್ದರು.

ಹೀಗಿರುವಲ್ಲಿ ಒಂದು ದಿನ ಶ್ರೀರಂಗನಾಥನ ಸನ್ನಿಧಿಯಲ್ಲಿರುವವರಿಗೂ ಪೆರಿಯಾಳ್ವಾರವರಿಗೂ ಸಹ ಶ್ರೀಗೋದಾವನ್ನು ಸರ್ವವಿಜೃಂಭಣೆಯಿಂದಲೂ ಕರಕೊಂಡು ಬರತಕ್ಕದ್ದು, ಅವರನ್ನೂ ಶ್ರೀರಂಗನಾಥನಾದ ತಾನು ಪಾಣಿಗ್ರಹಣ ಮಾಡಿಕೊಳ್ಳುವೆನು ಎಂಬದಾಗಿ ಸ್ವಪ್ನ ಉಂಟಾಗಲು, ಈ ಆಳ್ವಾರವರು ಸ್ವಾಮಿನೇಮನವನ್ನು ಶಿರಸಾವಹಿಸಿ ತಮ್ಮ ಮಗಳನ್ನು ಅಲಂಕರಿಸಿಕೊಳ್ಳುವ ಹಾಗೆ ಹೇಳಿ, ಪಲ್ಲಕ್ಕಿಯಲ್ಲಿ ಕೂಡಿಸಿ, ಶ್ರೀರಂಗದಿಂದ ಬಂದ ಪರಿಜನದೊಂದಿಗೆ ತಾವೂ ಹೋಗಿ ಶ್ರೀರಂಗನಾಥನ ಮುಂದೆ ನಿಲ್ಲಿಸಲು ಆಕೆಯು ಸ್ವಾಮಿಯ ದಿವ್ಯ ಮಂಗಳವಿಗ್ರಹವನ್ನು ಕಂಡು ದೇಹಪರವಶ

ಳಾಗಿ ತದೇಕಧ್ಯಾನಳಾಗಿ ಇರುತ್ತಿದ್ದ ಹಾಗೆಯೇ ಸ್ವಾಮಿಯಲ್ಲೀ ಅಂತರ್ಧಾನವನ್ನು ಹೊಂದಿದಳು. ಪೆರಿಯಾಳ್ವಾರ್ರವರಿಗೆ ಹಿಂತಿರಿಗಿ ಶ್ರೀವಿಲ್ಲಿಪುತ್ತೂರಿಗೆ ಹೋಗಿ ವಟಪತ್ರಶಾಯಿಯ ಕೈಂಕರ್ಯದಲ್ಲೀ ನಿರತರಾಗಿರುವ ಹಾಗೆ ಸ್ವಾಮಿ ಶ್ರೀರಂಗನಾಥನ ಆಜ್ಞೆಯಾದುದರಿಂದ ಹಿಂತಿರುಗಿ ಬಂದು ದಿವ್ಯ ತುಳಸೀಮೂಲಾಕೈಂಕರ್ಯವನ್ನು ಕೈಕೊಂಡಿರುತ್ತಿದ್ದರೆಂಬ ವೃತ್ತಾಂತವುಂಟು.

7. ಶ್ರೀಕುಲಶೇಖರಾಳ್ವಾರ್—ಇವರು ಕೌಸ್ತುಭಾಂಶರು. ಕಲಿಯುಗದ ೨೮ನೇ ಪರಾಭವ ಸಂವತ್ಸರದ ಮಾಶಿಮಾಸ ಶುಕ್ಲಪಕ್ಷ ದ್ವಾದಶಿ ಶುಕ್ರವಾರ ಪುನರ್ವಸು ನಕ್ಷತ್ರದಲ್ಲಿ ಕೇರಳದೇಶದ ಕೊಲ್ಲಂವೆಂಬ ಪಟ್ಟಣದಲ್ಲಿ ದೃಢವ್ರತನೆಂಬ ರಾಜನಿಗೆ ಕುಮಾರರಾಗಿ ಹುಟ್ಟಿದರು. ಈ ಸಂಸ್ಥಾನಕ್ಕೆ ಈಗ ತಿರುವಾಂಕೂರ್ ಸಂಸ್ಥಾನವೆಂದು ಹೆಸರು. ಇವರು ಶೀಘ್ರದಲ್ಲೀ ಶಾಸ್ತ್ರಜ್ಞಾನವನ್ನು ಹೊಂದಿದವರಾಗಿ ರಾಜಭೋಗದಲ್ಲಿದ್ದರೂ ಅವುಗಳನ್ನೆಲ್ಲಾ ತುಚ್ಛವಾಗಿ ಎಣಿಸಿ ತುಂಬಾ ವೈರಾಗ್ಯವುಳ್ಳವರಾಗಿ ಭಗವದ್ಭಾಗವತಕೈಂಕರ್ಯದಲ್ಲಿ ತುಂಬಾ ಆದರ ಉಳ್ಳವರಾಗಿದ್ದರು. ಇವರಿಗೆ ಶ್ರೀಮದ್ಭಾಗವತ, ಶ್ರೀಮದ್ರಾಮಾಯಣ ಮುಂತಾದ ಕಾಲಕ್ಷೇಪಗಳಲ್ಲಿ ತುಂಬಾ ಆಸಕ್ತಿ ಇತ್ತು. ಒಂದು ದಿನ ರಾಮಾಯಣಕಾಲಕ್ಷೇಪದಲ್ಲಿ ಅರಣ್ಯಕಾಂಡದ ೧೦ನೇ ಸರ್ಗದಲ್ಲಿನೇ ಶ್ಲೋಕವಾದ

ಅಪ್ಯಹಂಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸ ಲಕ್ಷ್ಮಣಾಂ।
ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥

ಎಂಬುವುದರ ಉಪನ್ಯಾಸವು ಜರುಗುತ್ತಿತ್ತು. ಇದು ಯಾವ ಸಂದರ್ಭವೆಂದರೆ,ದಂಡಕಾರಣ್ಯದಲ್ಲಿರುವಾಗ ಸೀತೆಯು ರಾವಣನನ್ನು ಕುರಿತು,ಪರಪ್ರಾಣಾಭಿಹಿಂಸನರೂಪವಾದ, ನಿನ್ನ ವಿಷಯದಲ್ಲಿ ನಿರಪರಾಧಿಗಳಾದ, ರಾಕ್ಷಸರನ್ನು ಕೊಲ್ಲುವದು ಯಾವನ್ಯಾಯವು ಎಂಬುದಾಗಿ ತುಂಬಾ ಭಕ್ತಿಯಿಂದ ಅರಿಕೆಮಾಡಲು, ಅದಕ್ಕೆ ಶ್ರೀರಾಮನು ಕ್ಷತ್ರಿಯ ಧನಸ್ಸು, ಎಲ್ಲಿಯೂ ಕೂಡ ಆರ್ತಧ್ವನಿ ಇಲ್ಲದೇ ಇರುವ ಹಾಗೆ ಮಾಡುವದಕ್ಕಾಗಿಯೇ ಹುಟ್ಟಿದುದು, ನಿರಪರಾಧಿಗಳಾದ ದಂಡಕಾರಣ್ಯ ಋಷಿಗಳನ್ನು ರಾಕ್ಷ

ಸರು ಹಿಂಸಿಸುವದು ನ್ಯಾಯವಲ್ಲವಷ್ಟೆ, ಇದೂ ಅಲ್ಲದೆ ಮಹರ್ಷಿಗಳೆಲ್ಲರೂ ನನ್ನಲ್ಲಿ ಶರಣಾಗತಿಯನ್ನು ಮಾಡಿದ್ದಾರೆ. ಅಂತಹ ಶರಣಾಗತರ ಕೋರಿಕೆಯಾದ ಈ ದುಷ್ಟರಾಕ್ಷಸರನ್ನು ನಿಗ್ರಹಿಸುವದು ನನ್ನ ಮುಖ್ಯಕರ್ತವ್ಯವು. ಋಷಿಗಳಿಗೆ ಅಭಯವನ್ನು ಕೊಟ್ಟಿರುತ್ತೇನೆ. ಅಂತಹ ಶರಣಾಗತಿ ಧರ್ಮಪರಿಪಾಲನಕ್ಕಾಗಿ ಜೀವವನ್ನಾದರೂ ತೊರೆಯುವೆನು, ಲಕ್ಷ್ಮಣನೊಂದಿಗೆ ನಿನ್ನನ್ನಾದರೂ ಬಿಡುವೆನು. ಸತ್ಯ ಪ್ರತಿಜ್ಞೆಯನ್ನು ಎಂದಿಗೂ ಬಿಡೆನು. ಅದರಲ್ಲೂ ಭಾಗವತೋತ್ತಮರಾದ ಬ್ರಾಹ್ಮಣರ ವಿಷಯದಲ್ಲಿ ಮಾಡಿದ ವಾಗ್ದಾನದ ವಿಷಯದಲ್ಲಿ ಹೇಳತಕ್ಕದ್ದೇನಿದೆ ಎಂಬದಾಗಿ ಶ್ರೀರಾಮನು ತನ್ನ ಪ್ರಿಯಪತ್ನಿಯನ್ನು ಕುರಿತು ಹೇಳುವ ಸಂದರ್ಭವು. ಈ ಶ್ಲೋಕಸ್ವಾರಸ್ಯವನ್ನು ಗ್ರಹಿಸಿದ ಒತನೆಯೇ ಇವರಿಗೆ ಪ್ರಪತ್ತಿಮಾರ್ಗದಲ್ಲೂ ಬ್ರಾಹ್ಮಣಭಾಗವತರಲ್ಲೂ ಆದರವು ನಿರತಿಶಯವಾದುದಾಯಿತು.

ಇನ್ನೊಂದು ದಿನ,

ಚತುರ್ದಶಸಹಸ್ರಾಣಾ ರಕ್ಷಸಾಂಭೀಮಕರ್ಮಣಾಂ ।
ಏಕಶ್ಚ ರಾಮೋ ಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ॥
(ರಾ. ಅರ. ೨೩-೨೪.)

ಎಂಬ ಶ್ಲೋಕಾರ್ಥವು ನಡೆಯುತ್ತಿತ್ತು. ಕ್ರೂರಕರ್ಮಿಗಳಾದ ರಾಕ್ಷಸರಾದರೋ ಹದಿನಾಲ್ಕುಸಾವಿರವುಂದು, ಧರ್ಮಿಷ್ಠನಾದ ಶ್ರೀರಾಮನಾವರೋ ಒಬ್ಬನು. ಇವರುಗಳಿಗೆ ಕಾಳಗವು ಹೇಗೆ ಕೂಡೀತು ಎಂದು ರಾಜರ್ಷಿಗಳು ಹೇಳುತ್ತಿದ್ದರೆಂಬದಾಗಿ ಹೇಳಿದ ಒಡನೆಯೇ, ರಾಜನು ಮಂತ್ರಿಗಳನ್ನು ಕರದು ತನ್ನ ಸೇನೆಯೆಲ್ಲಾ ಶ್ರೀರಾಮಸಹಾಯಕ್ಕಾಗಿ ಸಿದ್ಧವಾಗಲೆಂದಾಜ್ಞಾಪಿಸಲು, ಆಗ ಉಪನ್ಯಾಸಕರು ಈ ಆಳ್ವಾರಿಗೆ ಸಾತ್ವಿಕಭಕ್ತಿಯಲ್ಲೇ ಇವರು ಮಗ್ನರಾಗಿ ದೇಹಪರವಶರಾಗಿರುವದನ್ನರಿತು,

ತಂ ದೃಷ್ಟ್ವಾ ಶತ್ರುಹಂತಾರಂ ಮಹರ್ಷೀಣಾಂ ಸುಖಾವಹಂ ।
ಬಭೂವಹೃಷ್ಟಸೈದೇಹೋ ಭರ್ತಾರಂ ಪರಿಷಸ್ವಜೇ ॥
(ರಾ. ಅರ. ೫೦-೨೯.)

ಆ ಹದಿನಾಲ್ಕು ಸಹಸ್ರ ರಾಕ್ಷಸರನ್ನೂ ಮೂರೂ ಮುಕ್ಕಾಲು ಘಳಿಗೆಗಳಲ್ಲಿ ತನ್ನ ಪತಿಯು ಕೊಂದಿದ್ದನ್ನು ಅವಲೋಕಿಸಿದವಳಾಗಿ ಪರಮಸಂತೋಷಯುಕ್ತಳಾಗಿ, ತಾನು ಮೊದಲು ಅರಣ್ಯಪ್ರವೇಶಕಾಲದಲ್ಲಿ ಪರುಷೋಕ್ತಿಯಿಂದ "ಸ್ತ್ರಿಯಂ ಪುರುಷವಿಗ್ರಹಂ" ಅಂದರೆ ಸ್ತ್ರೀವೇಷಧಾರೀ ಪುರುಷನು ಎಂದು ಮೂದಲಿಸಿದ ಹಾಗಲ್ಲದೆ, ತನ್ನ ಪತಿಯು ಮಹಾಧೀರನು, ವೀರಾಗ್ರೇಸರನು ಎಂದು ಭಾವಿಸಿ, ಅಂತಹ ಶತ್ರುನಾಶಕನಾಗಿ ಮಹರ್ಷಿಗಳಿಗೆಲ್ಲಾ ಪರಮಾನಂದವನ್ನಿತ್ತ ತನ್ನ ಪತಿಯನ್ನು ಸೀತೆಯು ಆಲಿಂಗನವನ್ನು ಮಾಡಿದಳು ಎಂಬ ಶ್ಲೋಕಾರ್ಥವನ್ನು ಹೇಳಿದ ಬಳಿಕವೇ, ಆಳ್ವಾರವರು ಉಪಶಾಂತತೆಯನ್ನು ಹೊಂದಿ ಸೇನೆಯನ್ನು ಹಿಂದಕ್ಕೆ ಕಳುಹಿಸಿಬಿಡುವಹಾಗೆ ಆಜ್ಞಾಪಿಸಿದರೆಂಬ ವೃತ್ತಾಂತವುಂಟು. ಈ ಇತಿಹಾಸಗಳು ಇವರಿಗೆ ಸ್ವಾಮಿಯಲ್ಲಿರುವ ನಿರತಿಶಯಭಕ್ತಿಸೂಚಿಸುವವಲ್ಲದೆ ಇವರಿಗೆ ಶ್ರೀವೈಷ್ಣವರಾದ ಭಾಗವತೋತ್ತಮರಲ್ಲೂ ತುಂಬಾ ಭಕ್ತಿ ಎಂಬುವದನ್ನು ವ್ಯಕ್ತಪಡಿಸುತ್ತವೆ.

ಇದನ್ನು ನೋಡಿ, ಈ ಕುಲಶೇಖರರ ಮಂತ್ರಿಗಳು ಅಸೂಯೆಯಿಂದ ಅರಮನೆಯಲ್ಲಿ ದೇವರ ಆಭರಣಗಳನ್ನೆಲ್ಲಾ ಬಚ್ಚಿಟ್ಟು ಶ್ರೀವೈಷ್ಣವರು ಕದ್ದರು ಎಂಬದಾಗಿ ಅವರುಗಳಮೇಲೆ ಕಳವನ್ನು ಹೊರಸಲು, ಅದಕ್ಕೇ ಆಳ್ವಾರವರು ಬಂದು ಸಭೆಮಾಡಿ ಬಂದು ಘಟದಲ್ಲೊಂದು ಘಟಸರ್ಪವನ್ನಿಡಿಸಿ ಶ್ರೀವೈಷ್ಣವರು ಈ ಕೆಲಸವನ್ನು ಮಾಡಲಿಲ್ಲವೆಂಬದಾಗಿ ಪ್ರಮಾಣಮಾಡಿ ಕೊಡದಲ್ಲಿ ಕೈಬೆರಳನ್ನಿಡಲು ಸರ್ಪವು ಕಚ್ಚದಿರಲು, ರಾಜನು ಅನಂತರ ಮಂತ್ರಿಗಳನ್ನು ಕರೆದು ಶ್ರೀವೈಷ್ಣವರು ಕಳ್ಳರು ಎಂಬದಾಗಿ ಪ್ರಮಾಣಮಾಡಿ, ಘಟದಲ್ಲಿ ಕೈಯನ್ನಿಡಿ ಎಂದಾಜ್ಞಾಪಿಸಲು, ಆಗ ಅವರು ಭಯವಿಹ್ವಲರಾಗಿ, ತಮ್ಮ ಅಪರಾಧವನ್ನು ತಿಳಿಸಿ ಶ್ರೀವೈಷ್ಣವರ ಕಾಲನ್ನು ತೊಳೆದು ಕ್ಷಮಾಪಣೆಯನ್ನು ಪ್ರಾರ್ಥಿಸಿಕೊಂಡರು. ಇವರು ಸಂಸ್ಕೃತದಲ್ಲಿ "ಮುಕುಂದಮಾಲಾಸ್ತೋತ್ರ" ಮುಕ್ತಿಯನ್ನು ಕೊಡುವ ಶ್ರೀರಂಗನಾಥನಿಗೆ

ಮೂಲಾರೂಪವಾದುದು ಎಂಬ ರತ್ನಸದೃಶವಾದ ಅಮೋಘಸ್ತೋತ್ರವನ್ನೂ, ತಮಿಳ್‌ಭಾಷೆಯಲ್ಲಿ "ಪೆರುಮಾಳ್‌ತಿರುಮೊಳಿ" (ಪಾಶುರಗಳು ೧೦೫) ಎಂಬುವದನ್ನೂ ರಚಿಸಿರುತ್ತಾರೆ. ಇವರು ಮುಖ್ಯವಾಗಿ ಭಗವತ್ಪ್ರಪತ್ತಿಕೈಂಕರ್ಯಗಳಿಗೆ ಭಾಗವತಪ್ರಪತ್ತಿ ಕೈಂಕರ್ಯಗಳ ವರಿವಿಗೂ ಸಂಬಂಧ ಉಂಟೆಂಬ ವಿಷಯವನ್ನು ವಿಶದವಾಗಿ ತೋರ್ಪಡಿಸಿರುತ್ತಾರೆ.

೪. ತಿರುಪ್ಪಾಣಾಳ್ವಾರ್—ಇವರು ಶ್ರೀವತ್ಸಾಂಶರು. ಶ್ರೀರಂಗದಹತ್ತಿರವಿರುವ ಉರಯೂರಿನ ಸಮೀಪದಲ್ಲಿರುವ ಸತ್ಯಭಾಮೆಂಬ ಸ್ಥಳದ ಒಂದು ಭತ್ತದ ಗದ್ದೆಯ ಮಧ್ಯವು ಇವರಿಗೆ ಅವತಾರ ಸ್ಥಳ. ಇವರು ಕಲಿಯುಗ ೪೪೩೨ನೇ ದುರ್ಮತಿ ಸಂವತ್ಸರದ ವೃಶ್ಚಿಕಮಾಸ ಕೃಷ್ಣದ್ವಿತೀಯೆ ಬುಧವಾರ ರೋಹಿಣೀ ನಕ್ಷತ್ರದಲ್ಲಿ ಅವತರಿಸಿದರು. ಮಕ್ಕಳಿಲ್ಲದ ಪಂಚಮದಂಪತಿಗಳಿಂದ ಸ್ತನ್ಯವಿಲ್ಲದೆ ಗೋವಿನಹಾಲಿನ ಮೂಲಕವಾಗಿಯೇ ಬೆಳೆದು, ವಿದುರಾದಿಗಳ ಹಾಗೆ ಅಸಂಕುಚಿತ ಜ್ಞಾನವುಳ್ಳವರಾದ ಪ್ರಯುಕ್ತ ದಿವ್ಯ ತೇಜಸ್ವಿಯಾಗಿ, ಗಾನವಿದ್ಯಾವಿಶಾರದರಾಗಿ ಶ್ರೀರಂಗನಾಥನನ್ನು ಪರಮಭಕ್ತಿಯಿಂದ ಧ್ಯಾನಮಾಡುತ್ತಲಿದ್ದುದರಿಂದ ಶ್ರೀರಂಗನಾಥನು ಕರುಣಿಸಿ, ಇವರಿಗೆ ತನ್ನ ಸಂದರ್ಶನವನ್ನು ಕೊಡಬೇಕೆಂಬ ಪರಮೋದಾರಭಾವದಿಂದ ಲೋಕಸಾರಂಗಮುನಿಯೆಂಬ ತನ್ನ ಭಕ್ತನಿಗೆ ಸ್ವಪ್ನದಲ್ಲಿ ತಮ್ಮ ಪರಮಭಕ್ತನಾದ ತಿರುಪ್ಪಾಣನನ್ನು ನೀನು ಬೆನ್ನಮೇಲೆ ಕೂರಿಸಿಕೊಂಡು ಬರಬೇಕೆಂದಾಜ್ಞಾಪಿಸಲು, ತಿರುಪ್ಪಾಣಾಳ್ವರವರು ತಮಗೆ ಪಂಚಮಸಂಸರ್ಗವಿದ್ದುದರಿಂದ ಕೂಡದೆಂಬದಾಗಿ ಎಷ್ಟು ನಿರೋಧಿಸಿದರೂ ಕೇಳದೆ ಲೋಕಸಾರಂಗಮುನಿಯು ಅವರನ್ನು ಬೆನ್ನಮೇಲೆ ಕೂರಿಸಿಕೊಂಡು ಹೋಗಿ ಶ್ರೀರಂಗನಾಥನ ಮುಂದೆ ನಿಲ್ಲಿಸಲು, ಅವರು ಆ ದಿವ್ಯಮಂಗಳ ವಿಗ್ರಹವನ್ನು ಕಂಡು ಧನ್ಯರಾಗಿ ಸ್ವಾಮಿಯ ಪಾದಕಮಲವನ್ನು ಹಿಡಿದು ಶಿರಸ್ಸಿನಪರಿವಿಗೂ ಸರ್ವಾವಯವವನ್ನೂ ವರ್ಣಿಸಿ, "ಅಮಲನಾದಿಪಿರಾನ್" ಎಂಬ ದಿವ್ಯ ಪ್ರಬಂಧದಿಂದ ಸ್ತೋತ್ರಮಾಡಿರುತ್ತಾರೆ. ಪಾಶುರಗಳು ೧೦. ಇದು ನಿತ್ಯಾನುಸಂಧಾನಗ್ರಂಥಕ್ಕೆ ಸೇರಿದುದಾ

ಗಿದೆ. ಈ ಪ್ರಬಂಧದ ಕೊನೆಯ ಎರಡು ಶ್ಲೋಕಗಳಿಂದ "ಆಲವಾ ಮರತ್ತಿ" "ಕೊಂಡಲವ್ಣ್ಣನೈ" ಎಂಬುವಗಳನ್ನು ಶಾತ್ತುಮರೈಕಾಲಗಳಲ್ಲಿ ದೇವಸ್ಥಾನದಲ್ಲಿ ಹೇಳುವ ಪದ್ಧತಿಯುಂಟು.

೪. ತೊಂಡರಡಿಪ್ಪೊಡಿಯಾಳ್ವಾರ್—ತೊಂಡರ್ ಅಂದರೆ ಭಕ್ತರ, ಅಡಿ - ಕಾಲಿನ, ಪೊಡಿ - ಧೂಳು ಎಂಬರ್ಥವು. ಇವರಿಗೆ ಭಾಗವತರ ವಿಷಯದಲ್ಲಿದ್ದ ಪರಾಕಾಷ್ಠೆಯಿಂದ ಭಕ್ತಾಂಘ್ರಿರೇಣು, ತೊಂಡರಡಿಪ್ಪೊಡಿ ಎಂಬ ನಾಮಧೇಯಗಳನ್ನು ಇವರು ವಹಿಸಿದರು. ಇವರು ವನಮಾಲಾಂಶರಾಗಿ ಕಲಿ ೪೮೯೯ನೇ ಪ್ರಭವ ಸಂವತ್ಸರದ ವೃಶ್ಚಿಕ ಮಾಸ ಕೃಷ್ಣ ಚತುರ್ದಶಿ, ಮಂಗಳವಾರ ಜ್ಯೇಷ್ಠಾನಕ್ಷತ್ರದಲ್ಲಿ ತಿರುಮಂಡಂಗುಡಿಯಲ್ಲಿ ಶ್ರೀವೈಷ್ಣವ ಕುಲದಲ್ಲಿ ಜನಿಸಿದರು. ಇವರ ತಂದೆಗಳು ಇವರಿಗೆ ವಿಪ್ರನಾರಾಯಣರೆಂಬ ಹೆಸರನಿಟ್ಟು ಉಪನಯನವನ್ನು ನಡಿಸಿ ವೇದವೇದಾಂಗ ಮೊದಲಾದ ಸರ್ವಶಾಸ್ತ್ರಗಳಲ್ಲೂ ಪಾರಂಗತೆಯನ್ನುಂಟುಮಾಡಿಸಿದರು. ಅನಂತರ ಇವರು ಗೃಹಸ್ಥಾಶ್ರಮವನ್ನು ಕೈಕೊಂಡು ನಿತ್ಯಕರ್ಮಾನುಷ್ಠಾನದಲ್ಲಿ ನಿರತರಾಗಿ ಭಾಗವತಾಗ್ರೇಸರರೆಂಬ ಯಶಸ್ಸನ್ನು ಹೊಂದಿದರು. ಶ್ರೀರಂಗಕ್ಕೆ ಬಂದು ನಿತ್ಯವೂ ಶ್ರೀರಂಗನಾಥನನ್ನು ಸೇವಿಸುತ್ತಿದ್ದುದರಿಂದ ಇವರಿಗೆ ತುಂಬಾ ವೈರಾಗ್ಯವುಂಟಾಗಿ "ಪರಮಾತ್ಮನಿಯೋರಕ್ತಃ ವಿರಕ್ತೋsಪರಮಾತ್ಮನಿ" ಎಂಬ ಉಕ್ತಿಗನುಸಾರವಾಗಿ, ಐಹಿಕದಲ್ಲಿ ಸ್ವಲ್ಪವೂ ಆಸಕ್ತಿಯಿಲ್ಲದೆ, ಅಲ್ಲೇ ಬಂದು ತೋಟವನ್ನು ಮಾಡಿಕೊಂಡು ಶ್ರೀರಂಗನಾಥನ ಆಜ್ಞೆಮೇರಿಗೆ ತುಲಸೀಪುಷ್ಪಮಾಲಾಕೈಂಕರ್ಯಗಳಮೂಲಕ ಕಾಲಯಾಪನೆಯನ್ನು ಮಾಡುತ್ತಿದ್ದರು. ಇವರನ್ನು ನೋಡಿ ಲಕ್ಷ್ಮಿಯು ತನ್ನ ಪತಿಯನ್ನು ಕುರಿತು ಇಂತಹ ಪರಮವಿರಕ್ತರ ವಿಷಯದಲ್ಲಿ ಐಹಿಕವು ಏನು ಮಾಡೀತೆಂಬದಾಗಿ ಹೇಳಲು, ಅದಕ್ಕೆ ಜಗಲ್ಲೀಲಾಸಕ್ತನಾದ ಸ್ವಾಮಿಯು ಅವರಿಗೆ ವಿಷಯಾಸಕ್ತಿಯುಂಟಾದರೆ ಏನು ಹೇಳುತ್ತೀಯೆ ಎಂದು ಪ್ರಣಯೋಕ್ತಿಗಳು ನಡೆಯಲು, ಕೆಲವು ದಿನಗಳಾದನಂತರ ಒಬ್ಬ ದೇವಕನ್ನಿಕೆಯು ಹತ್ತಿರದಲ್ಲಿರುವ ಗ್ರಾಮವಾದ ತಿರುಕ್ಕರಂಬನೂರಲ್ಲಿ ವಾಸವಾಡುತ್ತಾ, ಶ್ರೀರಂಗಕ್ಕೆ ಬಂದು

ಬಹುಸುಂದರವಾದ ವೇಶ್ಯಾರೂಪದಲ್ಲಿ ಇವರೆದುರಿಗೆ ನಲಿದಾಡಿದರೂ ಇವರು ಕಣ್ಣೆತ್ತಿ ನೋಡದಿರಲು, ಬಳಿಕವಳು ತೋಟದಲ್ಲಿ ಕೆಲಸವಾಡುವ ದಾಸಿಯುವೇಷವನ್ನು ತಾಳಿ, ತನಗೂ ಶ್ರೀರಂಗನಾಥನ ಕೈಂಕರ್ಯವನ್ನು ಮಾಡಬೇಕೆಂಬ ಕುತೂಹಲವುಂಟು, ಅಪ್ಪಣೆಯನ್ನಿತ್ತರೆ ತೋಟದ ಕೆಲಸದಲ್ಲಿ ತಾನೂ ಸಹಾಯವಾಹುವೆನೆಂಬದಾಗಿ ಬಹುವಾಗಿ ಪ್ರಾರ್ಥಿಸಲಾಗಿ, ಅವಕ್ಕೀ ಆಳ್ವಾರವರು ಸಮ್ಮತಿಸಿ ಆಕೆಯಿಂದ ತೋಟದ ಕೆಲಸವನ್ನು ಮಾಡಿಸುತ್ತಿದ್ದರು. ಹೀಗಿರಲಾಗಿ ಬಂದು ದಿನ ಸಂತತಧಾರೆಯಾಗಿ ಮಳೆಸುರಿಯಲು ಈ ವಿಪ್ರನಾರಾಯಣರು ತಾವು ತೋಟದಲ್ಲೇ ರಚಿಸಿದ್ದ ಬಂದು ಪರ್ಣಶಾಲೆಯಲ್ಲಿ ಮಳೆಗೆ ಮರೆಯಾಗಿ ನಿಂತರು. ಈ ದಾಸಿಯು ಮಳೆಯಲ್ಲಿ ತೊಯ್ಯುತ್ತಿದ್ದುದರಿಂದ ಕನಿಕರದಿಂದ ಈ ವಿಪ್ರನಾರಾಯಣರು ಆಕೆಯನ್ನು ಪರ್ಣಶಾಲೆಯೊಳಗೆ ಬರಹೇಳಿ ಆಜ್ಞಾಪಿಸಿದರು. ಆಗ ಅವರು ಆಕೆಯ ವಿಭ್ರಮವಿಲಾಸಗಳಿಂದ ವಂಚಿತರಾಗಿ ಆಕೆಯನ್ನು ಪರಿಗ್ರಹಿಸಿದರು. ಅವಳು ಅನಂತರ ತೋಟವನ್ನು ಬಿಟ್ಟು ಅಲ್ಲಿಗೆ ಹತ್ತಿರದಲ್ಲೇ ಇರುವ ತಿರುಕ್ಕರುಂಬನೂರಲ್ಲಿ ತನ್ನ ಗೃಹಕ್ಕೆ ಹೋಗಿ ಸೇರಿದಳು. ಇವರೂ ಅನಂತರ ಆಕೆಯಿರುವಲ್ಲಿಗೆ ಹೋಗಿ ಬಾಗಿಲನಲ್ಲಿ ನಿಂತು ಅವಳಿಗೆ ಕೊಡಲು ದ್ರವ್ಯ ಮೊದಲಾದವು ಏನೂ ಇಲ್ಲದೆ ಪರಿತಾಪದಿಂದ ತೋಟಕ್ಕೆ ಹಿಂತಿರುಗಿ ಬರಲಾಗಿ ಶ್ರೀರಂಗನಾಥನು ಒಬ್ಬ ದೂತನ ವೇಷವನ್ನು ತಾಳಿ ಆ ದಾಸಿಯಮನೆಗೆ ಹೋಗಿ ವಿಪ್ರನಾರಾಯಣರು ಈ ಚಿನ್ನದ ಬಟ್ಟಲನ್ನು ನಿನಗೆ ಕೊಟ್ಟುಬಿಟ್ಟು ಬಾ ಎಂಬದಾಗಿ ಹೇಳಿ ಆಕೆಯ ಕೈಗೆ ಕೊಟ್ಟು ಹಿಂತಿರುಗಿ ಬಂದು ಅಂತರ್ಧಾನವಾದನು. ಅನಂತರ ಬಂದು ಚಿನ್ನದ ಬಟ್ಟಲು ದೇವಸ್ಥಾನದಲ್ಲಿಲ್ಲದೇ ಇರಲು ವಿಚಾರಣೆಯಲ್ಲಿ ಕೊನೆಗೆ ವೇಶ್ಯಾಸ್ತ್ರೀಯ ಮನೆಯಲ್ಲಿ ಸಿಕ್ಕಿ, ಆಕೆಯು ವಿಪ್ರನಾರಾಯಣರು ಕಳುಹಿಸಿಕೊಟ್ಟರೆಂದು ಹೇಳಿದುದರಿಂದ ವಿಪ್ರನಾರಾಯಣರನ್ನು ಹಿಡಿದು ದಂಡಿಸುವ ಸಮಯದಲ್ಲಿ ಶ್ರೀರಂಗನಾಥನು ತನ್ನ ಲೀಲಾರ್ಥವಾಗಿ ಈ ಕೌತುಕವನೆಲ್ಲಾ ನಡಿಸಿದನೆಂದು ಸ್ವಪ್ನದಲ್ಲಿ ತಿಳಿಸಿದುದರಿಂದ ಆಳ್ವಾರನ್ನು ಮನ್ನಿಸಿಬಿಟ್ಟರು.

ಈ ಇತಿಹಾಸವು " ಚಂಚಲಂ ಹಿ ಮನಃ ಕೃಷ್ಣ [1] " ಎಂಬುವ ಸೂಕ್ತಿಗೂ " ಇಂದ್ರಿಯಾಣಿ ಪ್ರಮಾಥೀನಿ ಹರನ್ತಿ ಪ್ರಸಭಂ ಮನಃ [2] " ಎಂಬ ಸೂಕ್ತಿಗೂ ಅನುಸಾರವಾಗಿ, ಮನಸ್ಸು ಚಂಚಲವೆಂಬುದಾಗಿಯೂ ಆ ಮನಸ್ಸನ್ನು ಬಲಿಷ್ಠವಾದ ಇಂದ್ರಿಯಗಳು ಅಪಹರಿಸುತ್ತವೆಂಬುದಾಗಿಯೂ ಪ್ರಕಟಿಸುತ್ತದೆ. ಇಂತಹ ವಿರಕ್ತರಾದ ಭಾಗವತೋತ್ತಮರು ತಮಗುಂಟಾದ ಈ ದುರ್ದೆಶೆಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂಬ ಆಶೆಯಿಂದ ಭಾಗವತೋತ್ತಮರ ಶ್ರೀ ಪಾದತೀರ್ಥವನ್ನು ಸ್ವೀಕರಿಸಿ ಪಾವನತೆಯನ್ನು ಹೊಂದಿದವರಾಗಿ ಶ್ರೀರಂಗನಾಥನನ್ನು ಸೇವಿಸಿ ಆತನ ಕರುಣೆಯಿಂದ " ತಿರುಪ್ಪಳ್ಳಿಯೆಳುಚ್ಚಿ " (ಪಾಶುರಗಳು ೧೧) ಎಂಬುವ ಸ್ವಾಮಿಗೆ ಸುಪ್ರಭಾತಕೈಂಕರ್ಯರೂಪವಾದ ಗ್ರಂಥವನ್ನೂ ಮತ್ತು " ತಿರುಮಾಲೈ " (ಪಾಶುರಗಳು ೪೫) ಎಂಬ ಗ್ರಂಥವನ್ನೂ ರಚಿಸಿರುತ್ತಾರೆ. ಇವರು ಭಾಗವತಪಾದತೀರ್ಥದ ಮಾಹಾತ್ಮ್ಯವನ್ನು ಚೆನ್ನಾಗಿ ತೋರ್ಪಡಿಸಿರುತ್ತಾರೆ. " ತಿರುಪ್ಪಳ್ಳಿ ಎಳುಚ್ಚಿ "ಯು ನಿತ್ಯಾನುಸಂಧಾನಸೇವೆಯಲ್ಲಿ ಪಠನಮಾಡಲ್ಪಡುವದಾಗಿರುತ್ತದೆ.

9. ತಿರುನುಳಿಶೈಯಾಳ್ವಾರ್— ಇವರು ಚಕ್ರಾಂಶರು. ದಾಸಪತಯುಗಾಂತ್ಯದಲ್ಲಿ ಮೊದಲು ಮೂರು ಆಳ್ವಾರುಗಳಾದ ಪೊಯ್ಗೈಮುನಿ, ಭೂತಮುನಿ, ಮಹದಾಹ್ವಯಮುನಿಗಳು ಹುಟ್ಟಿದ ಸಿದ್ಧಾರ್ಥಿಸಂವತ್ಸರದ ಮಕರಮಾಸ, ಕೃಷ್ಣಪಕ್ಷ ಪ್ರಥಮೆ ಭಾನುವಾರ ಮಖಾನಕ್ಷತ್ರದಲ್ಲಿ ಅವತರಿಸಿದರು. ಇವರ ತಂದೆಯು ಭೃಗುಮಹರ್ಷಿಯು. ಇವರ ತಪಸ್ಸನ್ನು ಕೆಡಿಸುವದಕ್ಕಾಗಿ ಇಂದ್ರನಿಂದ ಕಳುಹಲ್ಪಟ್ಟ ಒಬ್ಬ ಅಪ್ಸರಸ್ತ್ರೀಯು ಇವರ ತಾಯಿಯು. ತಾಯಿಯು ದೇವಲೋಕವನ್ನು ಸೇರಿದುದರಿಂದಲೂ, ತಂದೆಯು ಪುನಃ ತಪಸ್ಸಿನಲ್ಲೇ ಮಗ್ನರಾದುದರಿಂದಲೂ, ಮಗುವನ್ನು ನೋಡಿಕೊಳ್ಳುವರು ಯಾರೂ ಇಲ್ಲದೆ ಅಳುತ್ತಿರಲು, ತಿರುವಾಳ್ಗೆ ಎಂಬ ಒಬ್ಬ ಬೇಡನು ಆ ಮಗು

1 ಭ. ಗೀ. ೬, ೪೪. 2 ಭ. ಗೀ. ೨, ೬೦.

ವನ್ನು ಕಂತ ತನಗೆ ಮಕ್ಕಳಿಲ್ಲವಾದುದರಿಂದ ಬಹು ಆದರದಿಂದ ತಂದು ತನ್ನ ಹೆಂಡತಿಯಾದ ಪಂಗೆಯಚ್ಚಿಲಿ ವ್ಯಾರ್ ಎಂಬುವಳ ವಶಕ್ಕೆ ಕೊಟ್ಟು ಸಲಹುತ್ತಿದ್ದನು. ಈ ಮಗುವು ಸ್ತನ್ಯವನ್ನು ಬಿಲ್ಲದ್ದರಿಂದ ಮಕ್ಕಳಿಲ್ಲದ ಒಬ್ಬ ಶೂದ್ರನೂ ಆತನ ಭಾರ್ಯೆಯೂ ಆ ಮಗುವಿಗೆ ಶುದ್ಧವಾದ ಗೋವಿನ ಹಾಲನ್ನು ತೆಗೆದುಕೊಂಡುಹೋಗಿ ಕೊಟ್ಟು ಆ ಮಗುವು ಕುಡಿದ ಶೇಷವನ್ನು ದಂಪತಿಗಳಿಬ್ಬರೂ ಪರಿಗ್ರಹಿಸುತ್ತಾ ಬಂದುದರಿಂದ ಆ ಶೂದ್ರದಂಪತಿಗಳಿಗೆ ಕಣಿಕೃಷ್ಣರೆಂಬ ಕುಮಾರರು ಜನಿಸಿದರು. ಕೆಲವುಕಾಲ ಕಳೆದನಂತರ ಈ ಆಳ್ವಾರು ಬೇಡರ ಗುಂಪನ್ನು ತ್ಯಜಿಸಿ ಬಂದು ವಿದ್ಯಾಪಾರಂಗತೆಯನ್ನು ಹೊಂದಿ ವಿಪುಲಶಾಸ್ತ್ರಜ್ಞಾನವನ್ನು ಪಡೆದು, ಶ್ರೀಮನ್ನಾರಾಯಣನೇ ಪರತತ್ವವೆಂಬುದನ್ನು ಸ್ಥಾಪಿಸಿ, ಯೋಗಾಭ್ಯಾಸನಿರತರಾಗಿದ್ದರು. ಈ ಯೋಗಾಭ್ಯಾಸ ಮಹಿಮೆಯಿಂದ ಬಹುಕಾಲ ಜೀವಿಸಿದ್ದರೆಂಬುದಾಗಿ ಚರಿತ್ರೆಯುಂಟು. ಇವರ ಮಹಿಮೆಯ ವಿಷಯದಲ್ಲಿ ಅನೇಕ ಇತಿಹಾಸಗಳುಂಟು.

1. ಒಂದು ದಿನ ಪಾರ್ವತೀಪರಮೇಶ್ವರರು ಆಕಾಶದಲ್ಲಿ ಹೋಗುತ್ತಿರುವಾಗ, ಪರಮೇಶ್ವರನು ತಮೋಗುಣಭೂಯಿಷ್ಠನಾದುದರಿಂದ ಅವರುಗಳ ನೆರಳು ತಮ್ಮ ಮೇಲೆ ಬೀಳದ ಹಾಗೆ ಸ್ವಲ್ಪ ಓರೆಯಾಗಿ ನಿಂತರು. ಇದನ್ನು ಅವರು ಕಂಡು ಈ ಆಳ್ವಾರನ್ನು ಕುರಿತು ನಿನಗೆ ಬೇಕಾದ ವರವನ್ನು ಕೇಳು ಕೊಡುವೆನು ಎಂಬುದಾಗಿ ಹೇಳಲು, ಪರಮಪುರುಷಾರ್ಥವಾದ ಮೋಕ್ಷವನ್ನು ಕೊಡುವ ಶಕ್ತಿಯು ಸ್ವಾಮಿ ಶ್ರೀಮನ್ನಾರಾಯಣನಿಗೊಬ್ಬನಿಗೇ ವಿನಾ ಇತರರಿಗಿಲ್ಲವೆಂಬುದಂ ಚೆನ್ನಾಗಿ ಅರಿತವರಾದುದರಿಂದಲೂ ಮೋಕ್ಷೇತರಗಳೆಲ್ಲಾ ತುಚ್ಛವಾಗಿ ಆಳ್ವಾರವರಿಗೆ ಬೇಡವಾದುದರಿಂದಲೂ ಆಳ್ವಾರವರು ಆ ದಂಪತಿಗಳ ಮಾತಿಗೆ ನಕ್ಕು, ಸೂಜಿಯ ಹಿಂದೆ ದಾರವು ಬರುವಹಾಗೆ ಮಾತತಕ್ಕದ್ದೇ ವರವೆಂಬುದಾಗಿ ಅಪಹಾಸ್ಯಮಾಡಲು, ಅದಕ್ಕಾ ರುದ್ರನು ಕುಪಿತನಾಗಿ ತನ್ನ ಫಾಲನೇತ್ರದಿಂದ ಸುಟ್ಟುಬಿಡಬೇಕೆಂಬುದಾಗಿ ಕ್ರೂರವಾಗಿ ನೋಡಿದರೂ, ಆಳ್ವಾರವರಿಗೆ ಎಸೂ ತೊಂದರೆಯಾಗದೆ, ಆಳ್ವಾರವರು ವಿಷ್ಣುವಿನ ಚಕ್ರಾಂಶರಾದುದರಿಂದ ಅವರ ಕೋಪದೃಷ್ಟಿಯು ಉಪಪತ್ತಿ

ಗೆ ತೊಂದರೆಯುಂಟುಮಾಡಿದುದರಿಂದ ಆಳ್ವಾರವರ ಅನುಗ್ರಹವನ್ನು ಪ್ರಾರ್ಥಿಸಿ, ಅವರಿಗೆ ಭಕ್ತಿಸಾರರೆಂಬ ಹೆಸರನ್ನು ಕೊಟ್ಟು ಪರಮೇಶ್ವರನು ಪಾರ್ವತೀ ಸಮೇತನಾಗಿ ಹೊರಟುಹೋದನು.

೩. ಅನಂತರ ಈ ಆಳ್ವಾರವರು ಪೊಯಿಕ್ಕೈಮುನಿಯವತಾರ ಸ್ಥಳವಾದ ಕಾಂಚೀಪುರದಲ್ಲಿ ಯೋಗಾಭ್ಯಾಸನಿರತರಾಗಿರುವಾಗ, ಅಲ್ಲಿಗೆ ಈ ಕಣಿಕೃಷ್ಣರು ಬಂದು ಆಳ್ವಾರ್ರವರ ಶುಶ್ರೂಷೆಯಲ್ಲಿ ನಿರತರಾಗಿರಲು, ಆಗ ಒಬ್ಬ ವೃದ್ಧ ಹೆಂಗಸು ಅಲ್ಲಿ ದೇವಸ್ಥಾನದಲ್ಲಿ ರಂಗೋಲಿ ಹಾಕುವದು ಮುಂತಾದ ಸ್ವಾಮಿ ಕೈಂಕರ್ಯಗಳಲ್ಲಿ ನಿರತಳಾಗಿರುವದನ್ನು ಕಂಡು, ಆಕೆಯು ಬಹುಕಾಲ ಹೀಗೆಯೇ ಕೈಂಕರ್ಯವನ್ನು ಮಾಡುತ್ತಿರಬೇಕೆಂದೆಣಿಸಿ, ಆಕೆಗೆ ದೇಹದಾರ್ಢ್ಯವುಂಟಾಗಿ ಯುವ್ವನಾವಸ್ಥೆಯು ಪ್ರಾಪ್ತವಾಗುವ ಹಾಗೆ ಕಣಿಕೃಷ್ಣರ ಮೂಲಕ ಅನುಗ್ರಹಿಸಿ ತಿಳಿಸಿದರು. ಆಕೆಗೆ ಯುವ್ವನಪ್ರಾಪ್ತಿಯಾದುದನ್ನು ಆ ದೇಶದ ಧೊರೆಯಾದ ಪಲ್ಲವರಾಯನೆಂಬುವನು ತಿಳಿದು, ತನಗೂ ಯುವ್ವನವು ಪ್ರಾಪ್ತವಾಗುವಹಾಗೆ ಆಕೆಯ ಮೂಲಕ ಕಣಿಕೃಷ್ಣರಿಗೆ ಹೇಳಿಕಳುಹಿಸಿದನು. ಅದಕ್ಕೆ ಕಣಿಕೃಷ್ಣನು ತನ್ನ ನಾಲಿಗೆಯು ಐಹಿಕದಲ್ಲಿ ಮಗ್ನನಾದ ಮನುಷ್ಯನ ವಿಷಯದಲ್ಲಿ ಪ್ರವರ್ತಿಸಲಾರದೆಂದು ಹೇಳಿ ಆ ರಾಜನ ಕೋರಿಕೆಯನ್ನು ಸಲ್ಲಿಸದಿರಲು, ಅದಕ್ಕೆ ರಾಜನು ಕುಪಿತನಾಗಿ ಕಣಿಕೃಷ್ಣನನ್ನು ತನ್ನ ರಾಜ್ಯವನ್ನು ಬಿಟ್ಟು ಹೊರಗೆ ಹೋಗುವಹಾಗೆ ಆಜ್ಞಾಪಿಸಲಾಗಿ, ಕಣಿಕೃಷ್ಣರು ಮಳಿಶೈಯಾಳ್ವಾರವರ ಅಪ್ಪಣೆಯನ್ನು ಪ್ರಾರ್ಥಿಸಲಾಗಿ, ಆಳ್ವಾರವರು ತಮ್ಮ ಪ್ರಿಯಶಿಷ್ಯನನ್ನಗಲಿರಲು ಸಮ್ಮತಿಸದೆ, ತಾನೂ ಜೊತೆಯಲ್ಲಿ ಹೋಗಲು ಅಲ್ಲಿ ದೇವಸ್ಥಾನದಲ್ಲಿದ್ದ ಸ್ವಾಮಿಯನುಜ್ಞೆಯನ್ನು ಬೇಡಲಾಗಿ, ಸ್ವಾಮಿಯೂ ತನ್ನ ಪರಮ ಭಕ್ತರಾದ ಆಳ್ವಾರು ಕಣಿಕೃಷ್ಣರೊಂದಿಗೆ ಹೋಗಬೇಕೆಂಬ ಸಂಕಲ್ಪವನ್ನು ಅರ್ಚಕಮುಖೇನ ತಿಳಿಸಿ, ಎಲ್ಲರೂ ಆ ರಾಜನ ದೇಶವನ್ನು ಬಿಟ್ಟು ಹೋಗಲು ಹೊರಡಲು, ಆಗ ವೃಕ್ಷ ಮೊದಲಾದವುಗಳೂ ಕೂಡ ಇವರುಗಳಿಗೆ ಬೆರೆಯಾಗಿ ಸ್ಥಳವನ್ನು ಕೊಟ್ಟವೆಂಬ ಪರಮಾಶ್ಚರ್ಯಕರವಾದ ವಾರ್ತೆಯನ್ನು ಕೇಳಿ, ರಾಜನು ಪದುರುಗೊಂಡು

ಬಂದು, ಕಣಿಕೃಷ್ಣ ಆಳ್ವಾರುಗಳ ಕ್ಷಮಾಪಣೆಯನ್ನು ಪ್ರಾರ್ಥಿಸಿ, ಪೂಜಿಸಿ, ಅವರುಗಳನ್ನೆಲ್ಲಾ ಹಿಂತಿರುಗಿಸಿ, ಅವರುಗಳ ಸೇವೆಯು ನಡೆಯುವ ಹಾಗೆ ಮಾಡಿದನು.

3. ಇನ್ನೊಂದು ಸಂದರ್ಭದಲ್ಲಿ ಆಳ್ವಾರವರು ಕುಂಭಕೋಣಕ್ಕೆ ಯಾತ್ರಾರ್ಥವಾಗಿ ಹೊರಟು ಮಾರ್ಗದಲ್ಲಿ ಪೆರೆಂಬುಲಿಯೂರ್ ಎಂಬ ಸ್ಥಳಕ್ಕೆ ಬಂದಾಗ, ಅಲ್ಲಿ ಬಂದು ಬೀದಿಯಲ್ಲಿ ಬ್ರಾಹ್ಮಣರು ವೇದಾಧ್ಯಯನ ಮಾಡುತ್ತಿದ್ದರು. ಶೂದ್ರರ ಮಧ್ಯದಲ್ಲಿ ಬೆಳೆದವರಾದುದರಿಂದ ಇವರನ್ನು ತಮ್ಮ ಬೀದಿಗೆ ಬಾರದ ಹಾಗೆ ಬ್ರಾಹ್ಮಣರು ಗದರಿಸಿದರು. ಆಗ ಆಳ್ವಾರವರು ಆ ಬೀದಿಯನ್ನು ಬಿಟ್ಟು ಬೇರೆ ಕಡೆಗೆ ಹೋಗಲು, ಇವರು ಸ್ವಾಮಿಗೆ ತುಂಬಾ ಭಕ್ತರಾಗಿ ಭಾಗವತೋತ್ತಮರಾದುದರಿಂದ ಇವರಿಗೆ ಮಾಡಿದ ಅಪಚಾರದಿಂದ ವೇದಾಧ್ಯಯನವು ಮಾಯುತ್ತಿದ್ದ ಭಾಗವು ಮರೆತುಹೋಯಿತು. ಅಲ್ಲಿ ದೇವಸ್ಥಾನದಲ್ಲಿ ಬಿಜವಾಡಿಸಿದ್ದ ಸ್ವಾಮಿಯು ಇವರ ಕಡೆಗೆ ತಿರುಗಿ ನಿಂತಿದ್ದರಿಂದ, ಪರವಾಶ್ಚರ್ಯ ಪಟ್ಟವರಾಗಿ ಆ ಅಪಚಾರವಾಗಿದ ಬ್ರಾಹ್ಮಣರು ಇವರಲ್ಲಿಗೆ ಬಂದು ಭಾಗವತಾಪಚಾರಕ್ಕೆ ಭಾಗವತಕ್ಷಮಾಪಣೆಯೇ ಪ್ರಾಯಶ್ಚಿತ್ತವಾದುದರಿಂದ, ಆಳ್ವಾರಲ್ಲಿ ಕ್ಷಮಾಪಣೆಯನ್ನು ಪ್ರಾರ್ಥಿಸಿದರು. ಆಗ ಆಳ್ವಾರವರು ತಾವು ವೇದೋಚ್ಚಾರಣೆ ಮಾಡುವದು ಸರಿಯಲ್ಲವೆಂದು ಭಾವಿಸಿ ಬಾವು ಕಪ್ಪಾದ ಭತ್ತವನ್ನು ತೆಗೆದು ಉಗುರಿನಿಂದ ಸುಲಿದು ಅವರಿಗೆ ತೋರಿಸಲಾಗಿ, ಅವರಿಗೆ ಅಧ್ಯಯನದಲ್ಲಿ ಬಿಟ್ಟು ಮರತುಹೋದ ಭಾಗವು " ಕೃಷ್ಣಾನಾಂ ವ್ರೀಹೀನಾಂ ನಖ ನಿರ್ಭಿನ್ನಂ " ಎಂಬುವದು ಜ್ಞಾಪಕಕ್ಕೆ ಬಂತೆಂದು ಪ್ರತೀತಿಯುಂಟು.

4. ಇನ್ನೊಂದು ಸಂದರ್ಭದಲ್ಲಿ ಇವರಲ್ಲಿ ಇಂತಹ ಮಾಹಾತ್ಮ್ಯಗಳನ್ನರಿತ ಬಬ್ಬ ಬ್ರಾಹ್ಮಣನು ಯಾಗನಾಮಾಡುತ್ತಿದ್ದುದರಿಂದ, ಇಂತಹ ಭಾಗವತೋತ್ತಮರನ್ನು ತಾನು ಬರವಾಡಿಕೊಂಡರೆ ಯಾಗ ನಿರ್ವಿಘ್ನವಾಗಿ ಪೂರ್ತಿಯಾದೀತೆಂಬ ಭಾವನೆಯಿಂದ ಇವರನ್ನು ಯಾಗಸಭೆಗೆ ಕರೆದುಕೊಂಡು ಮರ್ಯಾದೆಮಾಡಿ ಕುಳ್ಳಿರಸಲು, ಅದಕ್ಕೆ ಕೆಲವು ಬ್ರಾಹ್ಮಣರು ಶೂದ್ರನನ್ನು ಕರಿಸಿದುತ್ತಾರೆಂದು, ಶಿಶುಪಾಲನು ಶ್ರೀ

ಕೃಷ್ಣನನ್ನು ಧರ್ಮರಾಯನ ರಾಜಸೂಯ ಯಜ್ಞಸಭೆಯಲ್ಲಿ ನಿಂದಿಸಿದ ಹಾಗೆ ಇವರನ್ನು ದೂಷಿಸಲಾಗಿ, ಆಗ ಇವರು ಚಕ್ರಾಂಶರಾದುದರಿಂದ ಅವರುಗಳಿಗೆ ಬಂದು ಜ್ವಾಲಾರೂಪದಲ್ಲಿ ಚಕ್ರವು ಕಾಣಬಂದುದರಿಂದ, ಅವರುಗಳು ಈ ಆಳ್ವಾರ್ರವರ ಕ್ಷಮಾಪಣೆಯನ್ನು ಪ್ರಾರ್ಥಿಸಿದರು. ಆಗ ಅವರು ಬ್ರಾಹ್ಮಣರಿಗೆ ಚಕ್ರದಿಂದುಂಟಾದ ಭಯವನ್ನು ತಪ್ಪಿಸಿ, ಶ್ರೀಮನ್ನಾರಾಯಣನೇ ಪರತತ್ವವೆಂಬದಾಗಿಯೂ ಆತನ ಭಕ್ತರೆಲ್ಲಾ ಭಾಗವತೋತ್ತಮರಾದುದರಿಂದ ಪೂಜ್ಯರೆಂಬದಾಗಿಯೂ ಅವರಿಗೆ ಉಪದೇಶಿಸಿದರು.

ಇವರು ಬರೆದಿರುವ ಗ್ರಂಥಗಳು—

ನಾಲ್ಮುಹ್ತಿರುವಂದಾದಿ—ಪಾಶುರಗಳು ೯೬.

ತಿರುಚ್ಚಂದವಿರುತ್ತಂ—ಪಾಶುರಗಳು ೧೨೦.

10. ತಿರುಮಂಗೈ ಆಳ್ವಾರ್—ಇವರು ಶಾರ್ಙ್ಗಾಂಶರು. ಕಲಿಯುಗಾರ್ಭವೇ ನಳಸಂವತ್ಸರದ ವೃಶ್ಚಿಕಮಾಸ ಪೌರ್ಣಮಿ ಗುರುವಾರ ಕೃತ್ತಿಕಾನಕ್ಷತ್ರದಲ್ಲಿ ತಿರುವಾಲಿಯೆಂಬ ಊರಿನಲ್ಲಿ ನೀಲನೆಂಬ ಒಬ್ಬ ಶೂದ್ರನಿಗೆ ಕುಮಾರರಾಗಿ ಹುಟ್ಟಿದರು. ಚೋಳರಾಜನ ಹತ್ತಿರ ಸೇನಾಪತಿಯಾಗಿದ್ದು ಅಸ್ತ್ರವಿದ್ಯೆಯಲ್ಲಿ ತುಂಬಾ ಪಾರಂಗತತೆಯನ್ನು ಹೊಂದಿದುದರಿಂದ ಪರಕಾಲರೆಂಬ (ಶತ್ರುಗಳಿಗೆ ಯಮನು) ಹೆಸರನ್ನು ಪಡೆದರು. ಕುಮುದವನದಲ್ಲಿ ಸಿಕ್ಕಿದುದರಿಂದ ಕುಮುದವಲ್ಲಿ ಎಂಬ ಹೆಸರುಳ್ಳ ಒಬ್ಬ ಸುಂದರಳಾದ ಕನ್ಯೆಯನ್ನು ಒಬ್ಬ ವೈಶ್ಯನು ಸಾಕಿಕೊಂಡಿರುವದನ್ನರಿತವರಾಗಿ, ಆ ಕನ್ಯೆಯನ್ನು ಮದುವೆಮಾಡಿಕೊಳ್ಳಬೇಕೆಂಬ ಕುತೂಹಲಯುಕ್ತರಾಗಿ ಆ ವೈಶ್ಯನನ್ನು ಪ್ರಾರ್ಥಿಸಲಾಗಿ, ಚಕ್ರಾಂಕಿತನಾಗಿ ದೇವಭಾಗವತ ಕೈಂಕರ್ಯವನ್ನು ಸದಾಮಾಡುತ್ತಿರುವೆನೆಂದು ಒಪ್ಪಿಕೊಂಡರೆ ತನ್ನ ಮಗಳಾದ ಕುಮುದವಲ್ಲಿಯು ನಿನ್ನನ್ನು ವರಿಸುವಳೆಂದು ಹೇಳಲು, ಈ ಪರಕಾಲರು ಅದಕ್ಕೆ ಸಮ್ಮತಿಸಿ ತಿರುನರೈಯೂರಿನ ಅರ್ಚ್ಯಾವತಾರಸ್ವಾಮಿಯನುಗ್ರಹದಿಂದ ಊರ್ಧ್ವಪುಂಡ್ರಚಕ್ರಾಂಕಿತ ಮೊದಲಾದವುಗಳನ್ನು ಪರಿಗ್ರಹಿಸಿ, ಕುಮು

ದವಲ್ಲಿಯನ್ನು ವಿವಾಹವಮಾಡಿಕೊಂಡು, ಆಕೆಯೊಂದಿಗೆ ಸುಖವಾಗಿದ್ದು ಕೊಂಡು, ಹೆಚ್ಚು ದ್ರವ್ಯ ವೆಚ್ಚ ಮಾಡಿ ಭಗವದ್ಭಾಗವತಾರಾಧನೆಗಳನ್ನು ನಡಿಸುತ್ತಿದ್ದರು. ಈ ತದೀಯಾರಾಧನೆಗಳಿಗೆ ಹೆಚ್ಚು ದ್ರವ್ಯ ವ್ಯಯ ಮಾಡುತ್ತಿದ್ದಾರೆಂಬ ವರ್ತಮಾನವನ್ನು ಚೋಳರಾಜನು ಕೇಳಿದವ ನಾಗಿ, ಅವರನ್ನು ಹಿಡತರಲು ಸೇನೆಯನ್ನು ಕಳುಹಿದನು. ಆಳ್ವಾರ ವರು ಆ ಸೇನೆಯಮೇಲೆ ಬಿದ್ದು ಅದನ್ನೆಲ್ಲಾ ಧ್ವಂಸಮಾಡಿದ್ದರಿಂದ ರಾಜನು ತಾನೇ ಸೇನೆಯೊಂದಿಗೆ ಬರಲು, ಅದನ್ನೂ ಕೂಡ ಮುರಿದುದ ರಿಂದ, ರಾಜನು ಭೇದೋಪಾಯವನ್ನವಲಂಬಿಸಿ, ಅವರ ಪರಾಕ್ರಮ ಕ್ಕೆ ಮೆಚ್ಚಿದವನ ಹಾಗೆ ನಟಿಸಿ ಅವರನ್ನು ಹಿಡಿದು ದೇವಾಲಯದಲ್ಲಿ ಸೆರೆ ಇಟ್ಟನು. ಇದರಿಂದ ತದೀಯಾರಾಧನೆಗೆ ಬಂದ ಭಂಗಕ್ಕಾಗಿ ಆಹಾರವನ್ನು ತೊರೆದು ತುಂಬಾ ದೈನ್ಯದಿಂದಲೂ ಭಕ್ತಿಯಿಂದಲೂ ಪ್ರಾರ್ಥಿಸಲಾಗಿ ಸ್ವಾಮಿಯು ಕರುಣಿಸಿ ಬಂದುಪಾಯಮೂಲಕ ಬಹು ದ್ರವ್ಯವನ್ನು ದಯಪಾಲಿಸಲಾಗಿ, ಆಗ ಆಳ್ವಾರವನು ರಾಜನಿಗೆ ಕೊಡತಕ್ಕ ಹಣವನ್ನು ಕೊಟ್ಟು ಕಳುಹಿಸಿ, ಮಿಕ್ಕ ಹಣವನ್ನು ತದೀಯಾ ರಾಧನೆ ಖರ್ಚಿಗಾಗಿ ಇಟ್ಟುಕೊಳ್ಳಲು, ರಾಜನು ಈ ವೃತ್ತಾಂತವನ್ನ ರಿತು ಇವರ ಮಾಹಾತ್ಮ್ಯವನ್ನು ಕೊಂಡಾಡಿ ಆ ಹಣವನ್ನೆಲ್ಲಾ ಅವ ರಿಗೇನೆ ಸಮರ್ಪಿಸಿ ನಮಸ್ಕಾರಮಾಡಿ ತಾನು ಮಾಡಿದ ಅಪರಾ ಧವನ್ನು ಕ್ಷಮಿಸಬೇಕಾಗಿ ಪ್ರಾರ್ಥಿಸಿದನು. ಆಮೇಲೆ ಪುನಃ ತದೀಯಾರಾಧನೆಗೆ ಹಣ ಸಾಲದೇ ಇರಲು ಅವೈಷ್ಣವರಾದ ಅಸಾ ಧುಗಳಿಂದ ಧನವನ್ನು ಕಿತ್ತು, ತದೀಯಾರಾಧನಾರೂಪದಲ್ಲಿ ಸಾಧು ಸಂತರ್ಪಣೆಮಾಡುವದು ಸಾಧುವಾದುದೆಂದು ಭಾವಿಸಿದವರಾಗಿ, ಹಾಗೆ ಯೇ ಹೆಚ್ಚಾದ ದ್ರವ್ಯದಿಂದ ಅವೈಷ್ಣವರಿಂದ ಕದ್ದು ತದೀಯಾ ರಾಧಾನೆಯನ್ನು ಜರುಗಿಸುತ್ತಿದ್ದರು. ಹೀಗೆಯೇ ಬಂದು ದಿನ ಈ ಆಳ್ವಾರವರು ಬಬ್ಬ ಹೆಂಗಸಿನ ಮೈಮೇಲಿದ್ದ ಒಡವೆಗಳನ್ನು ಅಪಹರಿಸಿದರು. ಆಗ ಆಕೆಯು ಹೋಗಿ ತನ್ನ ಪತಿಯೊಂದಿಗೆ ಸ್ವಾಮಿ ಶ್ರೀಮನ್ನಾರಾಯಣನು ತನ್ನ ಒಡವೆಯನ್ನೆಲ್ಲಾ ತೆಗೆದುಕೊಂಡನೆಂದು ಹೇಳಲು ಇದನ್ನು ಆಳ್ವಾರವರು ತಿಳಿದು ಆಕೆಯು ವೈಷ್ಣವಳೆಂದು

ತೋರಿಬಂದುದರಿಂದ, ಆ ಆಭರಣಗಳನ್ನೆಲ್ಲಾ ಆಕೆಗೆ ಹಿಂದಕ್ಕೆ ಕೊಟ್ಟು ಬಿಟ್ಟರು.

ಇನ್ನೊಂದು ಸಂದರ್ಭದಲ್ಲಿ ಲೋಕದಂಪತಿಗಳಾದ ಲಕ್ಷ್ಮೀನಾರಾಯಣರು ಅವೈಷ್ಣವರಹಾಗೆ ವೇಷವನ್ನು ಧರಿಸಿ, ಇಬ್ಬರೂ ಸರ್ವಾಭರಣಭೂಷಿತರಾಗಿ ವಿವಾಹವಾದನಂತರ ಬರುವ ನಿಬ್ಬಣದ ಜನಗಳ ಮಧ್ಯೆ ಇರುವ ಹಾಗೆ ಕಾಣಿಸಿಕೊಳ್ಳಲು, ಆಳ್ವಾರವರೂ ಅವರ ಕಳ್ಳ ಕಾಕರತ ಸೈನ್ಯವೂ ನುಗ್ಗಿ ಅವರುಗಳ ಆಭರಣಗಳನ್ನೆಲ್ಲಾ ತೆಗೆದುಕೊಂಡು ಒಂದು ಪೆಟ್ಟಿಗೆಯಲ್ಲಿಟ್ಟು ಮದುವೆಗಂಡಿನ ವೇಷದಲ್ಲಿದ್ದ ಲೋಕನಾಯಕನನ್ನು ಗದರಿಸಿ ಪೆಟ್ಟಿಗೆಯನ್ನು ಹಿಡಿದು ತಲೆಯಮೇಲೆ ಹೊರಿಸು ಎಂದು ಕೇಳಲು; ಪೆಟ್ಟಿಗೆಯು ಅತ್ಯಂತ ಭಾರವಾಗಿ ಪರಿಣಮಿಸಿದುದರಿಂದ. ಸ್ವಾಮಿಯನ್ನು ಕುರಿತು ಯಾವ ಮಂತ್ರದಿಂದ ಈ ಪೆಟ್ಟಿಗೆಯನ್ನು ಇಷ್ಟು ಭಾರವಾಗಿ ಮಾಡಿರುತ್ತೀಯೋ ಆ ಮಂತ್ರವನ್ನುಪದೇಶಿಸುವೆಯೋ ಇಲ್ಲವೋ ಎಂಬುದಾಗಿ ಕತ್ತಿಯನ್ನು ಝಳಪಿಸಲು, ಅದಕ್ಕೆ ಶ್ರೀವನ್ನಾರಾಯಣನು ತನಗೆ ತಿಳಿಯದು ಎಂದು ಹೇಳಿ, ಇತರರು ಕಾಣದಹಾಗೆ, ತನ್ನ ಸೇವೆಯನ್ನಿತ್ತು ಅಷ್ಟಾಕ್ಷರ ಮಂತ್ರವನ್ನು ಆಳ್ವಾರವರ ಕರ್ಣದಲ್ಲುಪದೇಶಿಸಿ, ಅಂತರ್ಧಾನವನ್ನೈದಿದನು. ಸ್ವಾಮಿಯ ದಿವ್ಯ ಕಟಾಕ್ಷಬಲದಿಂದ ತಮಗೆ ಪ್ರಾಪ್ತವಾದ ಭಗವದನುಭವ ಮಾಹಾತ್ಮ್ಯಯನ್ನೆಲ್ಲಾ.

ಪೆರಿಯತಿರುವೊಳಿ—ಪಾಶುರಗಳು ೧೦೪೭.
ತಿರುಕ್ಕುರುಂದಾಂಡಹಂ—ಪಾಶುರಗಳು ೨೦.
ತಿರುವೆಳು ಕೂತ್ತಿರುಕ್ಕೆ—ಪಾಶುರಗಳು ೭.
ಪೆರಿಯತಿರುಮಡಲ್—ಪಾಶುರಗಳು ೧೪೪.
ಶಿರಿಯತಿರುಮಡಲ್—ಪಾಶುರಗಳು ೩೩.
ತಿರುನೆಡಂದಾಂಡಕಂ—ಪಾಶುರಗಳು ೩೦,

ಎಂಬೀ ಗ್ರಂಥಗಳಿಂದ ವಿಸ್ತರಿಸಿ "ನಾಲಾಯಿರವಪೆರುಮಾಳ್" ಎಂಬ ಬಿರುದನ್ನು ಹೊಂದಿದರು. ಈ ಬಿರುದನ್ನು ಕುರಿತು ಸಂಕ್ಷಿಪ್ತ

ಇನ್ಬತ್ತಿಲಿ ರಂಜುತಲಿ ಲಿಶ್ಮೆಯುಮ್ಪೋತ್ತಿಲಿ
ಕಳಾದಪಲ್ಲುರವಿಲಿ ರಾಗವಾತ್ತಿಲ್ ।

ಮೂರ್ತಿ ಎಂಬ ತಮಿಳ್ ಕವಿಯು ಇವರೊಂದಿಗೆ ವಾದಕ್ಕೆ ಬರಲು ಆತನನ್ನು ಜಯಿಸಿ ತಮ್ಮ ಬಿರುದನ್ನು ಕಾಪಾಡಿಕೊಂಡರು. ಅನಂತರ ಇವರು ಶ್ರೀರಂಗದಲ್ಲಿ ನಿಂತು ಆತನ ಸೇವೆಯನ್ನೂ ಕೈಂಕರ್ಯವನ್ನೂ ಮಾಡುತ್ತಾ ಆ ದಿವ್ಯ ದೇಶದಲ್ಲಿ ಶ್ರೀರಂಗನಾಥನಿಗೆ ಮಂಟಪ ಗೋಪುರಗಳನ್ನೂ ಪ್ರಾಕಾರಗಳನ್ನೂ ಕಟ್ಟಬೇಕೆಂದು ಸಂಕಲ್ಪಿಸಿ ನಾಗಪಟ್ಟಣಕ್ಕೆ ಹೋಗಿ ಅಲ್ಲಿದ್ದ ಸುವರ್ಣಮಯವಾದ ಬಂದು ಬಾಹಿದ್ಧ ವಿಗ್ರಹವನ್ನು ತಂದು ಕರಗಿಸಿ ತನ್ಮೂಲಕ ಮಂಟಪಗೋಪುರ ಪ್ರಾಕಾರ ಮೊದಲಾದವುಗಳನ್ನು ರಚಿಸಿ, ಪರಮಪದನಾಥನ ಸನ್ನಿಧಿಯನ್ನು ಕಟ್ಟಿಸಿ ಪ್ರತಿಷ್ಠೆಮಾಡಿ, ಆಳ್ವಾರತಿರುನಗರಿಯಿಂದ ನಮ್ಮಾಳ್ವಾರ್ ಮೂರ್ತಿಯನ್ನು ಬಿಜಮಾಡಿಕೊಂಡು ಬಂದು ತಿರುವಧ್ಯಯನ ಮಹೋತ್ಸವವನ್ನು ಮಾರ್ಗಳಿ ಶುದ್ಧ ಏಕಾದಶಿಯಹಾಗೆ ನಡಿಯುವಂತೆ ಮಾಡಿ, ಪ್ರಪನ್ನನಾದವನು ಶರಣಾಗತಿಯನ್ನನುಷ್ಠಿಸಿ ಕೃತಕೃತ್ಯನಾಗಿ ದೇಹಾವಸಾನಾನಂತರ ಹೇಗೆ ಯಾವ ಮಾರ್ಗವಾಗಿ ಪರಮಪದವನ್ನು ಹೋಗಿ ಸೇರಿ ಮೋಕ್ಷವನ್ನನುಭವಿಸುವನೆಂಬುವದನ್ನು ಉತ್ಸವಗಳ ಮೂಲಕವಾಗಿಯೂ ದ್ರಾವಿಡಪ್ರಬಂಧೋಪನ್ಯಾಸಮೂಲಕವಾಗಿಯೂ ನಿದರ್ಶನವಾಗುವಂತೆ ತೋರ್ಪಡಿಸಿ ಜೀವರುಗಳ ಉಜ್ಜೀವನಾರ್ಥವಾಗಿ ಈ ಆಳ್ವಾರವರು ಮಹೋಪಕಾರವನ್ನು ಮಾಡಿರುತ್ತಾರೆ.

1. ಇನ್ಬತ್ತಿಲ್ ಎಂದರೆ ಆನಂದವನ್ನುಂಟುಮಾಡುವದರಲ್ಲೂ; ಮೊದಲಿನ ಪಾಶುರದಲ್ಲಿ "ಅಣ್ಣಿಕ್ಕುಮಮುತೂರು ಎನ್ನಾವುಕ್ಕೆ" ಯಾವಾಗಲೂ ನನ್ನ ನಾಲಿಗೆಗೆ ಅಮೃತವು ಊರುವಹಾಗೆ ನಮ್ಮಾಳ್ವಾರವರು ಅನುಗ್ರಹಮಾಡಿದರು ಎಂಬದಾಗಿ ಹೇಳುವದರಿಂದ, ನಮ್ಮಾಳ್ವಾರವರು ಮಾಡಿರುವ ಉಪದೇಶದಿಂದ ಅಮೃತಪ್ರಾಶನದಷ್ಟು ಆನಂದ ಉಂಟಾಯಿತೆಂಬ ಭಾವವು. "ನಾರಾಯಣಾಖ್ಯ ಪಿಯೂಷ

ತನ್ಪತ್ತಿಲ್ಪಿ ನೈವಿಲಕ್ಕಿಲ್ ತಕವೋಕ್ಕತ್ತಿಲ್ ತತ್ತು
ವತ್ತೈಯುಣರ್ತ್ತುದಲಿ ತ್ತ್ವವೈಯಾಕ್ಕಿಲ್ !

ಷಂಪಿಬ ಜಿಹ್ವೇ ನಿರಂತರಂ " ಅಂದರೆ ಓ ನಾಲಿಗೆಯೇ, ಶ್ರೀಮನ್ನಾ ರಾಯಣನೆಂಬ ಅಮೃತವನ್ನು ನಿರಂತರ ಪಾನಮಾಡು " ಎಂದು ಹೇಳ ರುವ ಹಾಗೆ ನಮ್ಮಾಳ್ವಾರ್ ಪ್ರಬಂಧವಾದ ತಿರುವಾಯ್‌ಮೊಳಿಯಿಂದ ಅಂತಹ ಅಮೃತವನ್ನು ತಮ್ಮ ನಾಲಿಗೆಯು ಪಾನಮಾಡಿತೆಂಬಭಿ ಪ್ರಾಯವು.

2. ಇರೈಂಜುತಲಿಲ್ ಎಂದರೆ ಅವನನ್ನು ಆಶ್ರಯಿಸುವದ ರಲ್ಲೂ; ಎರಡನೇ ಪಾಶುರದಲ್ಲಿ " ಮೇವಿನೇನ್ ಅವನಪ್ಪೊನ್ನಡಿಮೆಯ್ ಮ್ಮೈಯೆ " ಆತನ ಸ್ವರ್ಣಮಯವಾದ ದಿವ್ಯ ಪಾದಕಮಲಗಳನ್ನು ಆಶ್ರಯಿಸಿದೆನು ಎಂಬದಾಗಿ " ಮಾಂ ವ್ರಜ " ಎಂಬ ವಾಕ್ಯದ ಸ್ವಾರ ಸ್ಯವನ್ನು ತೋರಿಸಿದರೆಂಬ ಭಾವವು.

3. ಇಶೆಯುಂಪೆತ್ತಿಲ್—ಅಂದರೆ ಅಂಗೀಕಾರಮಾಡಲ್ಪಟ್ಟ ಪುರುಷಾರ್ಥವನ್ನು ಕೊಡುವದರಲ್ಲೂ; ಮೂರನೇ ಪಾಶುರದಲ್ಲಿ " ತಿರು ಉರುಕಾಣ್ಬ್ಕನಾಕ " ಅಂದರೆ ಶ್ರೀಮಹಾಲಕ್ಷ್ಮಿಯಿಂದ ಕೂಡಿ ಕೊಂಡಿರುವ ದಿವ್ಯಮಂಗಳವಿಗ್ರಹವನ್ನು ಸೇವಕನಾದ ನಾನು ನೋಡು ವೆನು ಎಂಬುವದರಿಂದ ಪುರುಷಕಾರತ್ವ, ಉಪಾಯತ್ವ, ಉಪೇಯ ತ್ವಗಳಿಂದ ತುಂಬಾ ಅನುಗ್ರಹಮಯಳಾದವಳನ್ನು ಮುಂದಿಟ್ಟು ಸ್ವಾಮಿ ಯನ್ನು ಸಾಕ್ಷಾತ್ಕರಿಸುವೆನು ಎಂದು ಹೇಳಿರುವದರಿಂದ " ಪೇರ " ಅಂದರೆ ಪುರುಷಾರ್ಥವು, ಸಿದ್ಧವೆಂಬ ಭಾವವು.

4. ಇಕಳಾದಪಲ್ಲುರವಿಲ್—ಇಕಳಾದ - ಒಂದು ಕಾಲದಲ್ಲೂ ಬಿಟ್ಟುಹೋಗದ, ಪಲ್ಲುರವಿಲ್ - ಅನೇಕವಿಧ ಬಾಂಧವ್ಯದಲ್ಲೂ, ನಾಲ್ಕ ನೇ ಪಾಶುರದಲ್ಲಿ " ಅನ್ನೈಯಾಯ್‌ಯುತ್ತನಾಯ್ ಎನ್ನೈ ಆಣ್ಡಿಡುಂ ತನ್ಮೈಯಾಕ " ಎಂದರೆ " ತಾಯಿಯ ಹಾಗೆ ದೋಷವೆಣಿಸದೆ ಇರುವ ತಂದೆಯ ಹಾಗೆ ಹಿತವಾದ ಕಾರ್ಯದಲ್ಲಿ ಪ್ರೇರಿಸುವ, ಸೇವಕನಾದ ನನ್ನನ್ನು ನಿಯಮಿಸುವ, ಸ್ವಭಾವವುಳ್ಳ ಎಂಬದಾಗಿ ಹೇಳಿರುತ್ತದೆ.

ಅನ್ಪರ್ಕೇಅವತರಿಕ್ಕು ಮಾಯನ್ನಿರ್ಕ ವರು
ಮರ್ಕೆಕಟಮಿಳ್ ಶೆಯ್ದಾರ್ ತಾಳಿಗೊಂಡು।

ಪರಮಾತ್ಮನಿಗೂ ನನಗೂ ಇರುವ ನವವಿಧ ಸಂಬಂಧದಲ್ಲಿ ಇಲ್ಲಿ ಪಿತೃ ಪುತ್ರಸಂಬಂಧವೂ ಶೇಷಶೇಷೀ ಸಂಬಂಧವೂ ಹೇಳಲ್ಪಟ್ಟಿತು. ಪಿತಾ ಚ ರಕ್ಷಕಶ್ಚೇಷೀಭರ್ತಾಜ್ಞೇಯೋ ರಮಾಪತಿಃ । ಸ್ವಾಮ್ಯಾಧಾರೋ ಮಮಾತ್ಮಾ ಚ ಭೋಕ್ತಾ ಚಾದ್ಯಮನೂದಿತಃ ॥ ಎಂಬ ಶ್ಲೋಕದಲ್ಲಿ ನವವಿಧ ಸಂಬಂಧವೂ ಹೇಳಲ್ಪಟ್ಟಿರುತ್ತದೆ. ಅವು ಯಾವವೆಂದರೆ— (೧) ಪಿತೃ ಪುತ್ರ, (೨) ರಕ್ಷಕ ರಕ್ಷ್ಯ, (೩) ಶೇಷೀಶೇಷ, (೪) ಭರ್ತೃ ಭಾರ್ಯಾ, (೫) ಜ್ಞೇಯ ಜ್ಞಾತೃ, (೬) ಸ್ವಾಮಿ, ಸ್ವತ್ತು. (೭) ಆಧಾರಾಧೇಯ, (೮) ಶರೀರಿ ಶರೀರ, (೯) ಭೋಕ್ತೃಭೋಗ್ಯ ಎಂಬದಾಗಿ ಬಂಭತ್ತು.

(೫) ಇರಾಕವಮಾತ್ತಿಲ್—ವಿಷಯಾಸಕ್ತತೆಯನ್ನು ಹೋಗಲಾಡಿಸುವದರಲ್ಲೂ, ಇದು ಐದನೇ ಪಾಶುರದರ್ಥವು. " ನಂಬಿನೇ್ಱಮಡಿವಾರೆಯುಂ ಮುನ್ನೆಲಾಂ " ಮೊದಲು ಸ್ತ್ರೀಯಲ್ಲಾಸಕ್ತಮನಸ್ಕನಾಗಿ ಅದೇ ಭೋಗ್ಯವಸ್ತುವೆಂದು ಕಾಲವನ್ನೆಲ್ಲಾ ಕಳೆದೆನು. ಈಗ ತಿರುಕ್ಕೂರುಗೂರ್ ನಂಬಿಯಾದ ನಮ್ಮಾಳ್ವಾರಿಗೆ " ಅಂಬನಾಯ್ ಅಡಿಯೇ್ಱ ಶತಿರ್ತ್ತ " ಅಂದರೆ ಪ್ರೀತಿಪಾತ್ರನಾದ ದಾಸನಾಗಿ ನಾನು ಅವರಿಗೆ ಶೇಷನಾಗಿ ಭಾಗ್ಯೋದಯವನ್ನು ಹೊಂದಿದೆನೆಂಬರ್ಥವು. ವಿಷಯಗಳಲ್ಲಿ ಜಿಹಾಸೆಯು ಸ್ವಾಮಿಕೃಪೆಯಿಂದುಂಟಾಗತಕ್ಕದ್ದು, ಅದು ಗುರು ಕಟಾಕ್ಷದಿಂದಲೂ ಉಂಟಾಗುತ್ತದೆಂದು ಆಳ್ವಾರವರಭಿಪ್ರಾಯವು.

೬. ತನ್ಬತ್ತಿಲ್—ತನ್ನನ್ನು ಹೊಂದಲು ಗುರುಗಳು ತಾವೇ ಕರುಣಿಸುವದರಲ್ಲೂ; ಆರನೇ ಪಾಶುರದಲ್ಲಿ " ಎಂಬಿರ್ತಾ ನಿನ್ರುತ್ತ ಪುಕುಳೇ್ತವರುಳಿನಾರ್ " ಸ್ವಾಮಿಯು ತಾನೇ ನಿಂತು ತನ್ನ ಕಲ್ಯಾಣಗುಣಗಳನ್ನು ಸ್ತೋತ್ರಮಾಡುವ ಹಾಗೆ ಕೃಪೆಗೈದನು ಎಂಬದಾಗಿ

ತುನ್ಪತ್ತುಮತುರಕವಿತೋನ್ರಕ್ಕಾಟ್ಟುಂ ತೊಲ್ವಳಿಯೇ
(ಶೊಲ್ವಳಿಯೆ) ನಲ್ವಿಳಿಗಳ್ ತುಣೆವಾರ್ಕಟ್ಕೇ ॥೨॥

ಹೇಳಿರುತ್ತದೆ. ಈಶ್ವರನು ಯಾವ ಯಾವ ಕೃಪೆಯನ್ನು ಗೈವನೋ ಅವೆಲ್ಲಾ ತಮ್ಮ ಗುರುಗಳೂ ಅನುಗ್ರಹಿಸುವರೆಂಬ ಭಾವವು.

7. ವಿನೈವಿಲಕ್ಕಿಲ್—ಪಾಪವನ್ನು ಹೋಗಲಾಡಿಸುವದರಲ್ಲೂ, ಪರಮ ಭಾಗವತಾಶ್ರಯವು ಸರ್ವಪಾಪ ನಿವಾರಣೆಯನ್ನುಂಟುಮಾಡುವದೆಂಬ ಭಾವವು. ಏಳನೇ ಪಾಶುರದಲ್ಲಿ " ಪಂಡೈವಲ್‌ವಿನೈಪಾತ್ತಿ ಅರುಳಿನಾಳ್ " ಅಂದರೆ ಬಹುಕಾಲದಿಂದ ಬಂದ ಪ್ರಬಲವಾದ ಪಾಪಗಳನ್ನೆಲ್ಲಾ ನಾಶಮಾಡಿ ನಮ್ಮಾಳ್ವಾರ್ರವರು ಕೃಪೆಗೈದರು ಎಂಬದಾಗಿ ಹೇಳಿರುತ್ತಾರೆ. " ನಹ್ಯನ್ಮಯಾನಿ ತೀರ್ಥಾನಿ ನ ದೇವಾಮೃಚ್ಛಿಲಾ ಮಯಾಃ । ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥" ಪುಣ್ಯತೀರ್ಥಗಳಿಂದಲೂ ದಿವ್ಯ ದೇಶಯಾತ್ರೆಮಾಡಿ ಸ್ವಾಮಿಸೇವೆಮಾಡುವದರಿಂದಲೂ ಬಹುಕಾಲಕ್ಕೆ ಪಾಪಗಳು ತೊಲಗಬಹುದು. ಭಾಗವತರಾದರೋ ಬರೀ ದರ್ಶನಮಾತ್ರದಿಂದಲೇ ಪಾಪಗಳನ್ನು ಹೋಗಲಾಡಿಸಿ ಪುನೀತರನ್ನಾಗಿ ಮಾಡುತ್ತಾರೆಂಬದಾಗಿ ಹೇಳಿರುವ ಮೇರಿಗೆ ತಮ್ಮ ಆಚಾರ್ಯರ ಮೂಲಕ ಸರ್ವಪಾಪನಿವಹವೂ ತೊಲಗಿತು ಎಂಬ ಭಾವವು.

ಸಿದ್ಧಿರ್ಭವತಿವಾನೇತಿ ಸಂಶಯೋಚ್ಯುತ ಸೇವಿನಾಂ ।
ನ ಸಂಶಯೋತ್ರ ತದ್ಭಕ್ತಪರಿಚರ್ಯಾರತಾತ್ಮನಾಂ ॥

ಸಿದ್ಧಿಯುಂಟಾದೀತೋ ಇಲ್ಲವೋ ಎಂಬ ಸಂಶಯವು ಬಂದು ಮೇಳೆ ಅಚ್ಯುತಸೇವೆ ಮಾಡುವವರ ವಿಷಯದಲ್ಲಿದ್ದರೂ ಇರಬಹುದು. ಭಾಗವತ ಕೈಂಕರ್ಯದಲ್ಲೇ ಸಕ್ತವಾದ ಮನಸ್ಸುಳ್ಳವರಿಗೆ ಅಂತಹ ಸಂಶಯವೆಂದಿಗೂ ಇರುವದಿಲ್ಲವೆಂಬ ಭಾವವು.

8. ತಕವೋಕ್ಕತ್ತಿಲ್—ತಕವು - ಕೃಪಾ, ಓಕ್ಕತ್ತಿಲ್ - ಆಧಿಕ್ಯದಲ್ಲಿ, ಅಂದರೆ ಕೃಪಾಮಹಾತ್ಮ್ಯವನ್ನು ತೋರಿಸುವದರಲ್ಲಿ. ಎಂಟನೆಯ ಪಾಶುರದಲ್ಲಿ ಅವೋಘವಾದ ವಾಕ್ಯವನ್ನುಪಯೋಗಿಸಿರು

ತ್ತಾರೆ. "ಅರುಳ್ಕಂಡೀರಿವ್ವುಲಗನಿಲ್ ವಿಕ್ಕದೇ" ಪ್ರತಿಫಲ ಬಂದ ನ್ನೂ ಅಪೇಕ್ಷಿಸದೇ ಮಾಡುವ ಅರುಳ್, ಪ್ರೀತಿಯಿಂದ, ಇವ್ವುಲಗ ನಿಲ್ - ಈ ಲೋಕದಲ್ಲಿ, ವಿಕ್ಕದೇ - ತುಂಬಾ ಪ್ರಶಸ್ತವಾದುದು. ನಮ್ಮಾಳ್ವಾರ್ರವರು ತಮಗೊಂದು ಯಶಸ್ಸು ಮೊದಲಾದ ಯಾವ ವಿಧವಾದ ಪ್ರತಿಫಲವನ್ನೂ ಕೋರದೆ ಈ ಪೃಥ್ವಿಯ ಜೀವರುಗಳು ಉಜ್ಜೀವಿಸಲಿ, ಎಂಬ ಕೃಪೆಯಿಂದ ತಿರುವಾಯ್ಮೊಳಿಯನ್ನು ದಯಪಾಲಿಸಿದವರಲ್ಲವೇ ? ಆದುದರಿಂದ ನಿರ್ವ್ಯಾಜಕೃಪೆಯಿಂದ ಈ ಲೋಕದಲ್ಲಿ ಅವತೀರ್ಣವಾದುದೆಂಬುದಾಗಿ ಹೇಳುತ್ತಾರೆ. ಸರ್ವೇಶ್ವರನಲ್ಲಿ ತೋರುವ ನಿರ್ವ್ಯಾಜಕೃಪೆಯು ನಮ್ಮ ಆಚಾರ್ಯರಲ್ಲೂ ವಿಶದವಾಗಿ ತೋರಿ, ಅದೀಗ ತಮ್ಮನ್ನುದ್ಧಾರಮಾಡಿತೆಂಬ ಭಾವವು.

9. ತತ್ತ್ವರತ್ನೈಉಣರುತ್ತದಿಲ್—ವೇದಾರ್ಥತತ್ವಗಳು ಮನಸ್ಸು ಹಿಡಿಯುವಹಾಗೆ ಬೋಧಿಸುವದರಲ್ಲೂ; ಬಂಭತ್ತನೇ ಪಾಶುರದಲ್ಲಿ "ವೇದತ್ತಿನುಳ್ಪೊರುಳೆಂಗಪ್ಪಾಡಿ ಎನೆಂಜುಳ್ನಿರುತ್ತಿನಾರ್" ವೇದದ ಗೂಢಾಭಿಪ್ರಾಯಗಳನ್ನೆಲ್ಲಾ ನನ್ನ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವ ಹಾಗೆ ಮಾಡಿದರು ಎಂಬುದಾಗಿ ಹೇಳಿರುತ್ತದೆ. ಹೀಗೆ ಜ್ಞಾನವನ್ನುಂಟುಮಾಡುವದು ಸರ್ವೇಶ್ವರನಿಗೆ ಸೇರಿದುದು. ಅದು ಈ ಆಚಾರ್ಯಾನುಗ್ರಹದಿಂದ ತಮಗುಂಟಾಯಿತೆಂಬ ಭಾವವು.

10. ತಕ್ಕವೈಯಾಕ್ಕಿಲ್—ಅಂತಹ ತನ್ನ ಸ್ವಭಾವವನ್ನೇ ಉಂಟುಮಾಡುವದರಲ್ಲೂ, ಹತ್ತನೇ ಪಾಶುರದಲ್ಲಿ "ಶೆಯಲ್ನನ್ರಾಹಕತಿರುತ್ತಿಪಣಿಕೊಳ್ವ್ವಾಕ್" ಎಷ್ಟು ಮೂಢನಾಗಿದ್ದರೂ ಭಾಗವತಾತಿಶಯವನ್ನು ತಿಳಿಯುವ ತನ್ನ ಸ್ವಭಾವವನ್ನುಂಟುಮಾಡಿಕೊಡುವನು. ತನ್ನ ಸ್ವಭಾವವನ್ನುಂಟುಮಾಡುವ ಶಕ್ತಿಯು ಸರ್ವೇಶ್ವರನಿಗುಂಟು. ಅಂತಹ ಶಕ್ತಿಯು ತನ್ನ ಆಚಾರ್ಯರಿಗೂ ಉಂಟೆಂಬ ಭಾವವು, ಹೀಗೆ ನಮ್ಮಾಳ್ವಾರ್ ತಿರುವಡಿಗಳನ್ನು ಆಶ್ರಯಿಸಿದ್ದರಿಂದ ಮೇಲೆ ಹೇಳಿದ ಹತ್ತು ವಿಧವಾದ ಪ್ರಯೋಜನಗಳುಂಟಾದನೆಂಬುದಾಗಿ ಮಧುರ ಕವಿಯಾಳ್ವಾರವರು ಆಚಾರ್ಯನಿಷ್ಠೆಯೇ ಪರಮಶ್ರೇಯಸ್ಕರವೆಂಬುದಾಗಿ ಭಾವಿಸಿದರು; "ಅನ್ಬಕ್ಕೇಯುವತರಕ್ಕುಮಾಯನ್ಕಳ್ಕಂ" ಅನ್ಬಕ್ಕೆ-

ಭಕ್ತರಾದ ಭಾಗವತೋತ್ತಮರಿಗೋಸ್ಕರವಾಗಿಯೇ, ಅವತರಿಕ್ಕುಂ - ಅವತರಿಸುವ, ಆರ್ಯ - ಆಶ್ಚರ್ಯಗುಣಚೇಷ್ಟಿತನಾದ, ಶ್ರೀಕೃಷ್ಣನು, ಇರುಕ್ಕುಂ - ಇದ್ದರೂನೂ, ಅಂದರೆ ಈ ಮೇಲೆ ಹೇಳಿದ ಹತ್ತು ಪ್ರಯೋಜನಗಳೂ ಸ್ವಾಮಿಯಾದ ಆಶ್ಚರ್ಯಗುಣಚೇಷ್ಟಿತನಾದ ಶ್ರೀಕೃಷ್ಣನಿಂದ ಹೊಂದಬಹುದಾಗಿದ್ದರೂ, ಅದನ್ನು ಬಿಟ್ಟು, ಅರುವರೈಗಳೇ - ಸಾಧಾರಣವಾಗಿ ಗ್ರಹಿಸಲಸಾಧ್ಯವಾದ ವೇದಗಳನ್ನೂ, ತಮಿಳ್‌ಶೆಯ್ದ - ದ್ರಾವಿಡಭಾಷೆಯಲ್ಲಿ ತಿರುವಾಯ್‌ಮೊಳಿರೂಪದಲ್ಲಿ ಅನುಗ್ರಹಿಸಿದ ನಮ್ಮಾಳ್ವಾರರ, ತಾಳೇಗೊಂಡು - ತಿರುವಡಿಗಳನ್ನಾಶ್ರಯಿಸಿ, ತುನ್ಬತ್ತ - ದುಃಖವನ್ನು ಹೋಗಲಾಡಿಸುವ (ದುಃಖವೇನು ಎಂದರೆ "ಸಿದ್ಧಿರ್ಭವತಿವಾನೇತಿ ಸಂಶಯೋಽಚ್ಯುತಸೇವಿನಾಂ । ನಶಂಸಯೋತ್ರತದ್ಭಕ್ತಪರಿಚರ್ಯಾರತಾತ್ಮನಾಂ ॥" ಎಂಬ ಹಾಗೆ ಸ್ವಾಮಿ ಪಾದವನ್ನು ಆಶ್ರಯಿಸಿದರೆ ಫಲಸಿದ್ಧಿಯುಂಟಾಗುತ್ತದೋ ಇಲ್ಲವೋ ಎಂಬ ಸಂಶಯರೂಪವಾದ ದುಃಖವಿರಬಹುದು. ಆತನ ಪರಮಭಕ್ತರ ಪಾದವನ್ನಾಶ್ರಯಿಸಿದವರಿಗೆ ಅಂತಹ ದುಃಖವಿರುವದಿಲ್ಲವೆಂಬ ಭಾವವು.) ಮಧುರಕವಿತೋನ್ರಕಾಟ್ಟುಂ - ಮಧುರಕವಿಯಾಳ್ವಾರವರು ಬಹು ವಿಶದವಾಗಿ ಕಣ್ಣಿನುಣ್‌ಶಿರುತಾಂಬು ಎಂಬುವ ಹತ್ತು ಪಾಶುರಗಳಿಂದ ತೋರಿಸಿರುವ, ತೊಲ್ವಳಿಯೇ - ಅನಾದಿಯಾಗಿ ಬಂದಿರುವ ಆಚಾರ್ಯಪರಾಕಾಷ್ಠೆಪ್ರದರ್ಶಕವಾದ ಮಾರ್ಗವೇ, ತುಣಿವಾರ್‌ಕಳೈಕ್ಕ - ವಿಶ್ವಾಸವುಳ್ಳವರುಗಳಿಗೆ, ನಲ್ವಳಿಗಳ್ - ಸಮೀಚೀನವಾದ ಮಾರ್ಗಗಳು. ಅಂದರೆ ಮುಮುಕ್ಷುವಾದವನು ಮುಖ್ಯವಾಗಿ ಸ್ವಾಮಿಯನ್ನು ಪಡೆದು ಸಿದ್ಧಿ ಹೊಂದಬೇಕೆಂಬ ಅಪೇಕ್ಷೆ ಇರುವನಾದುದರಿಂದ ಅದನ್ನು ಆಚಾರ್ಯೋಪಸದನದ್ವಾರಾ ಹೊಂದತಕ್ಕದ್ದು. ಅನಾದಿಯಾಗಿ ಬಂದಿರುತ್ತದೆಯಾದುದರಿಂದ ಅತ್ಯಾವಶ್ಯಕವೆಂತಲೂ ಇಂತಹ ಆಚಾರ್ಯಪರಾಕಾಷ್ಠೆ ಮಧುರಕವಿಗಳು ಕಣ್ಣಿನುಣ್ ಶಿರತಾಂಬಿನಲ್ಲಿ ಬಹುನಿಪುಣತರವಾಗಿ ತೋರಿಸಿರುತ್ತಾರೆಂತಲೂ, ಅಂತಹ ಮಹನೀಯರು ತೋರಿದ ಮಾರ್ಗವೇ ನಮಗೂ ಅನುಷ್ಠೇಯವಾದುದೆಂಬದಾಗಿಯೂ ಅಪ್ಪಣೆಕೊಡಿಸುತ್ತಾರೆ.

ಮೇಲೆ ಹೇಳಿದ ಕತು ್ರ ಪ್ರಯೋಜನಗಳು ಸಾ ್ವಮಿಯ ಮೂಲಕ ಹೊಂದಬಹುದಾಗಿದ್ದರೂ ಅದನ್ನು ಬಿಟ್ಟು ಶತ್ರುಘ್ನರು, ಭರತನ ತಿರುವಡಿಗಳನಾಶ್ರಯಿಸಿದಂತೆ ಮಧುರಕವಿಯಾಳಾ ್ವರ್ರವರು ನಮ್ಮಾಳಾ ್ವತವರ ತಿರುವಡಿಗಳನ್ನು ಆಶ್ರಯಿಸಿದರಾದುದರಿಂದ ಅದೇ ಉತ್ಕೃಷ್ಟವಾದ ಮಾರ್ಗವು. ಅದನೆ ್ನೀ ಸರ್ವಮುಮುಕ್ಷುಕ್ಕಳೂ ಅನುಷ್ಠಿಂಸತಕ್ಕದ್ದೆಂಬ ಭಾವವು.

ಹೀಗೆ ಸರ್ವೇಶ್ವರನಿಂದ ಹೊಂದಬಹುದಾದ ಪ್ರಯೋಜನಗಳನ್ನೆಲ್ಲಾ ಆಚಾರ್ಯರ ಮೂಲಕ ಹೊಂದುವದರಿಂದಲೇ " ಯಸ್ಯದೇವೆಪರಾಭಕ್ತಿಃ ಯಥಾದೇವೆ ತಥಾಗುರೌ " ಎಂದು ಹೇಳಿರುವ ಮೇರೆಗೆ ವೈಕುಂಠಪತಿಯಲ್ಲಿ ತೋರಿಸುವ ಭಕ್ತಿಯು ಆಚಾರ್ಯರಲ್ಲೂ ಇರಬೇಕೆಂಬುವದನ್ನು ಈ ಗ್ರಂಥಕರ್ತರೇ ನ್ಯಾಸವಿಂಶತಿಯಲ್ಲಿ ಹೇಳಿರುತಾ ್ತರೆ.

ಅಜ್ಞಾನಧಾ ್ವಂತರೋಧಾದ ಘಪರಿಹರಣಾದಾ ತ್ಮಸಾಮೂ ್ಯ
ಪಹತ್ಯಾ!

ಜ್ಜನ್ಮಪ್ರಧ ್ವಂಸಿ ಜನ್ಮಪ್ರದಗರಿಮತಯಾ ದಿವ್ಯದಿಷ್ಟಪ್ರ
ಭಾವಾತ್ ।

ನಿಷ್ಪ್ರತ್ಯೂಹಾನೃಶಂಸ್ಯಾನ್ನಿಯತರಸತಯಾನಿತ್ಯಶೇಷಿತ ್ವ
ಯೋಗಾ ।

ದಾಚಾರ್ಯಸ್ಯದ್ಧಿರಪ್ರತ್ಯುಪಕರಣಧಿಯಾದೇವವತಾ ನ್ಯ
ದುಪಾಸ್ಯಃ ॥

ಆಚಾರ್ಯನು ಈತನು ಮಾಡಿದ ಉಪಕಾರಕ್ಕೆ ಸರಿಯಾಗಿ ಪ್ರತ್ಯುಪಕಾರವನ್ನೆಸಗುವದು ಸಾಧ್ಯವಲ್ಲವಾದುದರಿಂದ ಅದಕ್ಕೆ ಪ್ರತಿಯಾಗಿ ಮಾಡುತ್ತೇನೆಂಬ ಬುದ್ಧಿ ಇಲ್ಲದೆ ಪರವಾದರದಿಂದ ದೇವರನ್ನು ಹೇಗೆ ಉಪಾಸಿಸುತ್ತೇವೋ ಹಾಗೆ ಉಪಾಸಿಸಲು ಯೋಗ್ಯನು ಎಂದು ಹೇಳುತ್ತಾರೆ. ಏತಕ್ಕೆಂದರೆ ಕಾರಣಗಳನ್ನು ಹೇಳುತ್ತಾರೆ. ಆ ಕಾರಣಗಳು ಆಚಾರ್ಯನಲ್ಲೂ ದೇವರಲ್ಲೂ ಸಮವೆಂದು ತೋರಿಸುತ್ತಾರೆ.

ಅಜ್ಞಾನಧ್ವಾಂತರೋಧಾತ್ - ಅಜ್ಞಾನವೆಂಬ ಕತ್ತಲೆಯನ್ನು ಇಬ್ಬರೂ ಹೋಗಲಾಡಿಸುತ್ತಾರೆ, ಅಘಪರಿಹರಣಾತ್ - ಪಾಪಗಳನ್ನು ಇಬ್ಬರೂ ಪರಿಹರಿಸುತ್ತಾರೆ, ಆತ್ಮಸಾಮ್ಯಾಪಹತ್ವಾತ್ - ಸ್ವಾಮಿಯು ಮುಕ್ತಿಯನ್ನಿತ್ತು ತನಗೆ ಸಮಾನನನ್ನಾಗಿ ಮಾಡಿಕೊಳ್ಳುತ್ತಾನೆ. ಆಚಾರ್ಯನೂ ಶಿಷ್ಯನನ್ನು ತನಗೆ ಸಮಾನವಾಗಿ ಭಾವಿಸಿ ತನ್ನ ಸ್ವಭಾವವನ್ನೇ ಉಂಟುಮಾಡುವನು, ಜನ್ಮಪ್ರಧ್ವಂಸ ಜನ್ಮಪ್ರದ ಗರಿಮತಯಾ ದಿವ್ಯದಿಷ್ಟಪ್ರಭಾವಾತ್ - ಇಬ್ಬರೂ ಈ ಜೀವನಿಗೆ ಪುನಃಪುನಃ ಜನ್ಮವೆತ್ತುವ ಜನ್ಮಹೋಗಲಾಡಿಸಿ ಪುನರಾವರ್ತಿಯಿಲ್ಲದ ಅಪ್ರಾಕೃತಜನ್ಮವುಂಟುಮಾಡುವದರಿಂದ ದಿವ್ಯವಾದ ಐಶ್ವರ್ಯವನ್ನು ಹೊಂದಿಸುವ ಪ್ರಭಾವವುಳ್ಳವರು, ನಿಷ್ಪ್ರತ್ಯೂಹಾನ್ಯಶಂಸ್ಯಾತ್ - ತಡೆಯಿಲ್ಲದಿರುವ ಯಾರನ್ನೂ ಹಿಂಸಿಸದೆ ಇರುವ ಋಜುಭಾವವನ್ನು ಹೊಂದಿರುವವರು, ನಿಯತರಸತಯಾ ನಿತ್ಯಶೇಷಿತ್ವಯೋಗಾತ್ - ನಿಯತವಾದ ಆನಂದಭಾವವುಳ್ಳೊಕ್ಕಣದರಿಂದ ಸದಾಶೇಷಿಯಾಗಿ ಇಬ್ಬರೂ ಜೀವನ ವಿಷಯದಲ್ಲೂ ಏರ್ಪಟ್ಟಿರುತ್ತಾರೆ. ಈ ಕಾರಣಗಳಿಂದ ಆಚಾರ್ಯನು ದೇವರೋಪಾದಿಯಲ್ಲಿ ನಮಗೆ ಉಪಾಸ್ಯನೆಂದು ಹೇಳಿರುತ್ತಾರೆ. ಇನ್ನೊಂದು ಸ್ಥಳದಲ್ಲಿ " ಆಚಾರ್ಯಾದಿಹ ದೇವತಾಂ ಸಮಧಿಕಾ ಮನ್ಯಾಂ ನಮನ್ಯಾಮಹೆ " ಅಂದರೆ ಆಚಾರ್ಯರುಗಿಂತ ಅಧಿಕರಾದ ಅಥವಾ ಸಮನಾದ ಬೇರೆ ದೇವತೆಯನ್ನು ತಾನು ಕಾಣಲಿಲ್ಲವೆಂಬದಾಗಿಯೂ ಹೇಳಿರುತ್ತಾರೆ. ಅಂದರೆ ಸ್ವಾಮಿಯು ಆಚಾರ್ಯರಿಗಿಂತ ಸಮನು ಅಧಿಕನೂ ಅಲ್ಲವೇ ಎಂದರೆ ಅಲ್ಲವೆಂಬದಾಗಿ ಉಪಪಾದಿಸುತ್ತಾರೆ. " ಯಸ್ಯಾಸೌ ಭಜತೇ ಕದಾಚಿದಜಹದೂ ಭಿಮಾಸ್ವಯಂ ಭೂಮಿಕಾಂ ಮಗ್ನಾನಾಂ ಭವಿನಾಂ ಭವಾರ್ಣವ ಸಮುತ್ತಾರಾಯ ನಾರಾಯಣಃ " ಅಂದರೆ ಈ ಮಹಾನುಭಾವನು ಯಾವಾಗಲಾದರೂ ಒಂದು ಕಾಲದಲ್ಲಿ ಅವತಾರಗಳನ್ನೆತ್ತಿ ಸಂಸಾರಿಗಳನ್ನು ಸಂಸಾರಸಮುದ್ರದಿಂದ ದಾಟಿಸುವನು. ನಮ್ಮ ಆಚಾರ್ಯರಾದರೂ ಯಾವಜ್ಜೀವವೂ ಆ ಕೆಲಸಕ್ಕಾಗಿಯೇ ಕಂಕಣಬದ್ಧರಾಗಿ ಕೂತಿರುವರು. ಆದುದರಿಂದ ನಮ್ಮ ಆಚಾರ್ಯರು ಸ್ವಾಮಿಗಿಂತಲೂ ಮೇಲೆಂಬದಾಗಿ ಭಾವವು.

ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್ ।
ಆಚಾರ್ಯವತ್ತಯಾ ಮುಕ್ತೌ ತಸ್ಮಾದಾಚಾರ್ಯವಾನ್ ಭವೇತ್ ॥೨॥

ಅವತಾರದ ಉದ್ದೇಶ್ಯವು—

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ !
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂಬ ಶ್ಲೋಕದಲ್ಲಿ ಹೇಳಿರುವ ಹಾಗ ಮೂರು—ಸಾಧುಜನಗಳ ಪರಿತ್ರಾಣವು, ದುಷ್ಟರ ನಿಗ್ರಹವು, ಧರ್ಮೋಪದೇಶವು. ಹೀಗೆ ಮೂರೂ ರಾಮಕೃಷ್ಣಾದ್ಯವತಾರಗಳಲ್ಲಿ ನಡದಿದ್ದರೂ ಸಾ ವಿಮಿಗೆ ಈ ಮೂರರಲ್ಲೂ ತುಂಬಾ ಮುಖ್ಯವಾಗಿ ಅಭಿಮತವಾದುದು ಸಾಧುಪರಿತ್ರಾಣವೆಂದೂ ಮಿಕ್ಕ ಎರಡೂ ಯಾದೃಚ್ಛಿಕವಾಗಿ ಉಂಟುಮಾಡಿದ ಪ್ರಯೋಜನಗಳೆಂದೂ ಹೇಳುವದಕ್ಕಾಗಿಯೇ ಈ ಶ್ಲೋಕದಲ್ಲೂ " ಪರಿತ್ರಾಣಾಯ ಸಾಧೂನಾಂ " ಎಂಬುದು ಪ್ರಥಮತಃ ನಿರ್ದೇಶಿಸಲ್ಪಟ್ಟರುತ್ತದೆಂದು ಭಾವಿಸಿ ಸಾ ವಿ ದೇಶಿಕರವರೂ ಸಹ " ಅರ್ಜಬರ್ಕ್ಕೇ ಅವತರಿಕ್ಕವಾಯುಣ್ ನಿರ್ಕ " ಎಂಬಲ್ಲಿ ಅರ್ಜಬರ್ಕ್ಕೇ ಎಂಬುವದರ "ಏವ"ಕಾರದಿಂದ ಅಪ್ಪಣೆ ಕೊಡಿಸಿರುತ್ತಾರೆ.

ಅರ್ಥ—ಈ ಮಧುರಕವಿಗಳು ಅವಲಂಬಿಸಿದುದೇ ಸರಿಯಾದ ಮಾರ್ಗವೆಂದು ಸಪ್ರಮಾಣವಾಗಿ ತಿಳಿಸುತ್ತಾರೆ. ಪಾಪಿಷ್ಠಃ - ಪಾಪಿಯಾದ, ಕ್ಷತ್ರಬಂಧುಶ್ಚ - ಕ್ಷತ್ರಬಂಧುವೂ (ಕ್ಷತ್ರಬಂಧುವೆಂದರೆ ತುಂಬ ಪಾಪಿಯಾದುದರಿಂದ ಕ್ಷತ್ರಿಯ ರಾಜರಲ್ಲಿ ಅಧಮನೆಂಬರ್ಥವು), ಪುಣ್ಯಕೃತ್ - ಪುಣ್ಯವಾಡಿದ, ಪುಂಡರೀಕಶ್ಚ - ಪುಂಡರೀಕನೂ ಕೂಡ, ಆಚಾರ್ಯವತ್ತಯಾ - ಆಚಾರ್ಯರನ್ನು ಹೊಂದಿದುದರಿಂದಲೇ, ಮುಕ್ತೌ - ಮುಕ್ತಿಯನ್ನು ಹೊಂದಿದರು ; ತಸ್ಮಾತ್ - ಆಕಾರಣದಿಂದ, ಆಚಾರ್ಯವಾನ್ - ಗುರುವನ್ನು ಹೊಂದಿದವನು ಅಂದರೆ ಆಶ್ರಯಿಸಿದವನು, ಭವೇತ್ - ಆಗತಕ್ಕದ್ದು. ಅಂದರೆ ಪಾಪಕರ್ಮಗಳೂ ಪುಣ್ಯಕರ್ಮಗಳಿರಡೂ ಮೋಕ್ಷಪ್ರತಿಬಂಧಕಗಳು. ಹಾಗೆ ಮೋಕ್ಷಪ್ರಾಪ್ತಿಗೆ ವಿಘ್ನಗಳು ಬಾರದೇ ಇರುವದಕ್ಕಾಗಿ ಆಚಾರ್ಯನನ್ನು ಆಶ್ರಯಿಸಿ, ಪ್ರಪದ

ಎನ್ನು ಆಚಾರವತ್ತಯೇ ಸರ್ವರುಕ್ಕುಂ ಮೋಕ್ಷಕಾರಣ ಮೆನ್ನ ರುದಿಯಿಟ್ಟಾರ್ಗಳ್. ಮುಮುಕ್ಷುವುಕ್ಕಾಚಾರ್ಯವಂಶಂ ಭಗವಾನಳವುಂ[1] ಶೆಲ್ಲನನು ಸಂಧಿಕ್ಕವೇಣು ಮೆನ್ನೋದಪ್ಪಟ್ಟದು[2].

ನಾನುಷ್ಠಾನದ್ವಾರಾ ಕರ್ಮಗಳ ಬಂಧನವನ್ನು ನೀಗಿಕೊಂಡು ಮೋಕ್ಷವನ್ನು ಪಡೆಯುತಕ್ಕದ್ದೆಂಬ ಭಾವವು. ಪಾಪವೇನೋ ಮೋಕ್ಷಪ್ರಾಪ್ತಿಗೆ ಪ್ರತಿಬಂಧಕವಾಗಿರಬಹುದು, ಪುಣ್ಯವು ಹೇಗೆ ಪ್ರತಿಬಂಧಕವೆಂದರೆ, ಪುಣ್ಯವುಸ್ವರ್ಗಲೋಕಾದಿಗಳ ಪ್ರಾಪ್ತಿಯನ್ನು ಕೊಟ್ಟೀತೇ ವಿನಾ ಪರಮಪದವನ್ನು ಕೊಡಲಾರದು. ಆ ಸ್ವರ್ಗಭೋಗವು ಕಳೆದ ನಂತರ "ಕ್ಷೀಣೇಪುಣ್ಯೇಮರ್ತ್ಯಲೋಕಂವಿಶಂತಿ" (ಭ. ಗೀ. ೯-೨೧) ಎಂಬ ಗೀತಾವಾಕ್ಯಪ್ರಕಾರ ಪುನಃ ಈ ಭೂಲೋಕಕ್ಕೆ ಬರಬೇಕಾಗುತ್ತದೆ. ಆದುದರಿಂದ "ತದಾವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ" (ಮುಂಡಕ, ೩, ೧-೩) ಪುಣ್ಯಪಾಪಗಳೆರಡನ್ನೂ ಕಳೆದುಕೊಂಡು ನಿರ್ದುಷ್ಟನಾಗಿ ಜೀವಾತ್ಮನು ಸಾಯುಜ್ಯವನ್ನು ಹೊಂದುವನು ಎಂಬದಾಗಿ ಶ್ರುತಿಯು ಹೇಳುತ್ತದೆ. "ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋರ್ಜುನ" ಎಂಬದಾಗಿಯೂ ಹೇಳಲ್ಪಟ್ಟಿರುತ್ತದೆ. ಆದುದರಿಂದ ಪಾಪಿಷ್ಠನೂ ಪುಣ್ಯವಂತನೂ ಇಬ್ಬರಿಗೂ ಕೂಡ ಆಚಾರ್ಯನು ಆವಶ್ಯಕವೆಂಬರ್ಥವು. "ಆಚಾರ್ಯವಾನ್ ಪುರುಷೋವೇದ" ಆಚಾರ್ಯನನ್ನು ಹೊಂದಿರುವ ಪುರುಷನು ಪರಬ್ರಹ್ಮವನ್ನು ತಿಳಿಯುತ್ತಾನೆ ಎಂಬದಾಗಿಯೂ "ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್, ಆಚಾರ್ಯಾದ್ಧ್ಯವವಿದ್ಯಾವಿದಿತಾ ಸಾಧಿಷ್ಠಂ ಪ್ರಾಪತ್" ಆ ಪರಬ್ರಹ್ಮವನ್ನು ತಿಳಿಯುವದಕ್ಕಾಗಿ ಆತನು ಗುರು

1 ಶೆಲ್ಲ - ಪರಿಯಂತರವೂ ಹೊಂದಿ.

2 ಓದಪ್ಪಟ್ಟದು - ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಆದರೆ ಶ್ರುತಿಪ್ರಮಾಣವನ್ನು ಏಕೆ ಉದಹರಿಸಲಿಲ್ಲವೆಂದರೆ ಸ್ತ್ರೀಶೂದ್ರಾದಿಗಳಿಗೂ ಉಪಯೋಗವಾಗಿರುವದಕ್ಕಾಗಿ ಉದಹರಿಸಲಿಲ್ಲವು. ರಹಸ್ಯಮ್ನಾಯ ಬ್ರಾಹ್ಮಣ.

ವನ್ನೇ ಆಶ್ರಯಿಸತಕ್ಕದ್ದು.ಅಂತಹ ಆಚಾರ್ಯನಿಂದ ತಾನೇ ವಿದ್ಯೆಯು ತಿಳಿದಂತಾದ್ದಾಗಿ ಪ್ರತಿಷ್ಠೆಯನ್ನು ಹೊಂದುತ್ತದೆ ಎಂಬುದಾಗಿಶ್ರುತಿಯು ಹೇಳುತ್ತದೆ. " ಧ್ಯಾಯೇಜ್ಜಪೇನ್ನಮೇದ್ಭಕ್ತ್ಯಾಭಜೇದಭ್ಯರ್ಚಯೇನ್ಮುದಾ " ಗುರುವನ್ನು ಭಕ್ತಿಯಿಂದ ಧ್ಯಾನಿಸತಕ್ಕದ್ದು, ಅವರ ನಾಮವನ್ನು ಜಪಿಸತಕ್ಕದ್ದು, ಅವರಿಗೆ ನಮಿಸತಕ್ಕದ್ದು ಅವರನ್ನು ಜಪಿಸತಕ್ಕದ್ದು (ತನಿಯುವನ್ನು ಹೇಳತಕ್ಕದ್ದು) ಅವರ ಪಾದುಕೆಯನ್ನರ್ಚಿಸತಕ್ಕದ್ದು ಎಂಬುದಾಗಿಯೂ ಹೇಳಿರುತ್ತದೆ. ಕ್ಷತ್ರಬಂಧುವಿನ ವೃತ್ತಾಂತವು ಪಾದ್ಮೋತ್ತರ ಪುರಾಣದಲ್ಲಿ ಸೂಚಿಸಲ್ಪಟ್ಟಿರುತ್ತದೆ. ಈತನು ಒಬ್ಬ ರಾಜನಾಗಿದ್ದರೂ ಕಾಡಿನಲ್ಲಿದ್ದುಕೊಂಡು ಬಂದು ದುಷ್ಕರ್ಮಪರಿಪಾಕದಿಂದ ಅಲ್ಲಿಗೆ ಬರುವ ಜನಗಳನ್ನೂ ತಪಸ್ಸಿನಲ್ಲಿರುವ ಋಷಿಗಳನ್ನೂ ಹೊಡೆದು ಬಡಿದು ಹಿಂಸಿಸಿ ಬಹುಪಾಪಗಳನ್ನು ಮಾಡುತ್ತಿದ್ದನು. ಹೀಗಿರುವಲ್ಲಿ ಬಂದುದಿನ ಈತನ ಹಿಂದಿನ ಸುಕೃತವಿಶೇಷದಿಂದ ಈತನ ವೃಷ್ಟಿಪಥಕ್ಕೆ ಮಹಾಭಾಗವತೋತ್ತಮರಾದ ನಾರದಮಹರ್ಷಿಗಳು ಬೀಳಲು, ಅವರನ್ನೂ ಈತನು ಎಂದಿನಂತೆ ಹೊಡೆಯಲು ಹೋಗಲು, "ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ " ಎಂಬ ಶುಕಮಹರ್ಷಿಯ ಉಕ್ತ್ಯನುಸಾರ ಆ ಭಾಗವತೋತ್ತಮರ ಕಟಾಕ್ಷವೀಕ್ಷಣದಿಂದ ಸತ್ವವು ತಲೆದೋರಿ ಸ್ವಲ್ಪ ಸುಮ್ಮನಿರಲು, ಆಗ ನಾರದಮಹರ್ಷಿಯು, ಆತನನ್ನು ಪ್ರಶ್ನಿಸುವರೇನೆಂದರೆ, " ಓ ಕ್ಷತ್ರಿಯನೇ ಈಗ ನೀನು ಮಾಡುತ್ತಿರುವ ಕರ್ಮವೇನು ಪಾಪವೆಂದು ತಿಳಿದಿರುವಿಯೋ ಇಲ್ಲವೇ ಪುಣ್ಯವೆಂದು ತಿಳಿದಿರುವಿಯೋ, ಹೀಗೆ ಮಾಡುವದು ನೀನು ನಿನ್ನ ಹೆಂಡತಿ ಮಕ್ಕಳು ಬಂಧುಗಳ ಸಂರಕ್ಷಣಾರ್ಥವಾಗಿ ಎಂಬುದಾಗಿ ತೋರುತ್ತದೆ,ಅವರುಗಳು ನಿನ್ನೊಡನೆ ಧನಕ್ಕೂ ಅದರೊಂದಿಗೆ ಉಂಟಾಗುವ ಸುಖಕ್ಕೂ ಸಹ ಭಾಗಿಗಳಾಗಿರುತ್ತಾರೆ. ಹಾಗೆಯೇ ಈ ನೀನು ಮಾಡುವ ಇಂತಹ ದುಷ್ಕೃತ್ಯದಿಂದುಂಟಾಗುವ ಪಾಪಗಳಿಗೂ ಭಾಗಿಗಳಾಗುತ್ತಾರೆಯೇ ಎಂಬುದನ್ನು ಅವರೊಂದಿಗಾಲೋಚಿಸಿ ಬಾ. ಅದುವರಿವಿಗೂ ನಾನು ಈ ಸ್ಥಳ ಬಿಟ್ಟು ಹೋಗುವದಿಲ್ಲ. ಅನಂತರ ನಿನ್ನ ಇಷ್ಟಾನುಸಾರ ನಡಿಯಬಹುದೆಂಬುದಾಗಿ ಹೇಳಲು, ಈತನು ಬೇಗನೆ

ತನ್ನ ಸ್ಥಳಕ್ಕೆ ಹೋಗಿ, ತನ್ನ ಬಂಧುವರ್ಗವನ್ನೆಲ್ಲಾ ಪಾಪಕೃತ್ಯಗಳಿಗೂ ಭಾಗಿಗಳಾಗಬೇಕೆಂದು ಎಷ್ಟು ಹೇಳಿದರೂ ಒಪ್ಪಲಿಲ್ಲವಾದುದರಿಂದ, ಈತನಿಗೆ ಜ್ಞಾನೋದಯವುಂಟಾಗಿ ಈ ವೃತ್ತಾಂತವನ್ನು ಮಹರ್ಷಿಗೆ ತಿಳಿಸಿದುದಲ್ಲದೆ ತನ್ನ ಅಕೃತ್ಯದ ವಿಷಯದಲ್ಲಿ ಮಹತ್ತಾದ ಶೋಕವು ಹುಟ್ಟಿ ಇದಕ್ಕೇನು ಭೇಷಜವೆಂಬುದಾಗಿ ಪ್ರಾರ್ಥಿಸಲು, ಮಹರ್ಷಿಯು ತುಂಬಾ ಕೃಪಾಳುವಾದುದರಿಂದ ಆತನಿಗೆ ಮೂಲಮಂತ್ರವನ್ನುಪದೇಶಿಸಿ, ಶರಣಾಗತಿಯನ್ನನುಷ್ಠಿಸಿ, ಪಾಪಗಳನ್ನೆಲ್ಲಾ ನೀಗಿಕೊಂಡು ಪರಿಶುದ್ಧನಾಗಿ ಕೃತಾರ್ಥನಾಗಿಕಡೆಗೆ ಈ ನಾರದರ ಕೃಪಾಪ್ರಭಾವವದಿಂದ ಮೋಕ್ಷವನ್ನು ಹೊಂದಿದನು. ಇದೀಗ ಕ್ಷತ್ರಬಂಧುವಿನ ವೃತ್ತಾಂತವು.

ಪುಂಡರೀಕವೃತ್ತಾಂತವೂ ಪಾದ್ಮೋತ್ತರ ಪುರಾಣದಲ್ಲಿ ಬರುತ್ತದೆ. ಇವರು ಬ್ರಾಹ್ಮಣಕುಲದಲ್ಲಿ ಹುಟ್ಟಿ ತುಂಬಾ ಸದ್ವೃತ್ತಿಯಲ್ಲಿದ್ದುಕೊಂಡು, ವಿಪುಳ ಧನವನ್ನು ಸಂಪಾದಿಸಿ, ತುಂಬಾ ಧರ್ಮ ಕೆಲಸವನ್ನು ಮಾಡುತ್ತಿದ್ದರು. ಇದೂ ಅಲ್ಲದೆ ವೇದಾಧ್ಯಯನ, ಶಾಸ್ತ್ರಜ್ಞಾನ ಮೊದಲಾದವುಗಳನ್ನು ಪಡೆದು ಮಾತಾಪಿತೃಶಿಶ್ರೂಷೆಯಲ್ಲೂ ನಿರತರಾಗಿದ್ದರು. ಇನ್ನೂ ಅನೇಕ ದಿವ್ಯದೇಶಯಾತ್ರೆಗಳನ್ನೂ ಮಾಡಿದ್ದಲ್ಲದೆ ಭಕ್ತಿಮಾರ್ಗದಲ್ಲೂ ತುಂಬಾ ನಿರತರಾಗಿದ್ದರೂ ಸರ್ವೇಶ್ವರನನ್ನು ಸಾಕ್ಷಾತ್ಕಾರಮಾಡಲು ಇವರಿಗೆ ಸಾಧ್ಯವಾಗಲಿಲ್ಲವು. ಹೀಗಿರುವಾಗ ನಾರದ ಮಹರ್ಷಿಯ ಸಂದರ್ಶನವು ಇವರಿಗೆ ದೊರೆಯಲು, ಅವರು ಪರಮಕೃಪೆಯಿಂದ ಈ ಪುಂಡರೀಕರಿಗೆ ಅಷ್ಟಾಕ್ಷರ ಮಂತ್ರೋಪದೇಶ ಮಾಡಿ ಅದರ ಉಪಾಸನಮೂಲಕ ಪರಬ್ರಹ್ಮಸಾಕ್ಷಾತ್ಕಾರ ಉಂಟಾಗುವದೆಂದು ಹೇಳಿ ಹೋದುದರಿಂದ ಬ್ರಹ್ಮಸಾಕ್ಷಾತ್ಕಾರವೂ ಮೋಕ್ಷಪ್ರಾಪ್ತಿಯೂ ಉಂಟಾಯಿತೆಂಬುದಾಗಿ ಹೇಳಿರುತ್ತದೆ.

ಆದರೆ ಪಾಪವೇನೋ ಮೋಕ್ಷಪ್ರತಿಬಂಧಕವಾಗಿ ಆಚಾರ್ಯ ಮುಖೇನ ಮಾಡುವ ಪ್ರಪತ್ತಿಯಿಂದ ನಿವರ್ತಕವಾಗಬಹುದು. ಪುಣ್ಯವೂ ಕೂಡ ಹಿಂದೆ ಹೇಳಿದಹಾಗೆ ಮೋಕ್ಷಪ್ರತಿಬಂಧಕವಾದುದರಿಂದ ಪಾಪಿಷ್ಠನಿಗೂ ಪುಣ್ಯಶಾಲಿಗೂ ಕೂಡ ಆಚಾರ್ಯನು ತುಂಬಾ

ಅವಶ್ಯಕವೆಂದು ಹೇಳುವದಕ್ಕಾಗಿಯೇ " ಆಚಾರ್ಯವತ್ತ್ಯೇ " ಎಂಬಲ್ಲಿ ' ಏವ ' ಕಾರವನ್ನುಪಯೋಗಿಸಿರುತ್ತಾರೆ.

ಹೀಗೆ ಪ್ರತಿಯೊಬ್ಬರಿಗೂ ಒಳ್ಳೇ ಶ್ರೇಷ್ಠನಾದ ಗುರುವನ್ನು ಹೊಂದಿರೋಣವೇ ಮೋಕ್ಷಕ್ಕೆ ಸಾಧನವೆಂಬದಾಗಿ ಜ್ಞಾನಿಗಳು ಸಿದ್ಧಾಂತವಮಾಡಿರುತ್ತಾರೆ. ಮೋಕ್ಷಾರ್ಥಿಯಾದವನು ಆಚಾರ್ಯವಂಶ ಮೊದಲುಗೊಂಡು ಭಗವಂತನ ಪರಿಯಂತರವೂ (ಪ್ರತಿನಿತ್ಯದಲ್ಲೂ) ಅನುಸಂಧಾನ ಮಾಡಬೇಕೆಂಬುವದು ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ (ಶ್ರುತಿಯಲ್ಲಿ 'ಎಲ್ಲಿ ಹೇಳಲ್ಪಟ್ಟಿರುತ್ತದೆಂದರೆ—" ಸಚ್ಚಾಚಾರ್ಯವಂಶೋಜ್ಜ್ವೀಯಃ । ಆಚಾರ್ಯಾನ್ನಾಮಸಾವಸಾವಿತ್ಯಾಭಗವತ್ತಃ " ಅಂದರೆ ಆಚಾರ್ಯವಂಶವನ್ನು ತಿಳಿಯತಕ್ಕದ್ದು, ಆಚಾರ್ಯರ್ಯಗಳು ಇವರಿವರು ಎಂಬದಾಗಿ ಭಗವಂತನವರಿವಿಗೂ ಅನುಸಂಧಾನ ಮಾಡತಕ್ಕದ್ದು. ಆಚಾರ್ಯಶಬ್ದದಿಂದ ಪುರುಷನಿಗೆ ಅಧ್ಯಾತ್ಮವಿದೆ. ಯ ಉಪದೇಶ, ಪ್ರಪದನ ಮುಂತಾದವುಗಳ ವಿಷಯಗಳಲ್ಲಿ ಯಾರು ಉಪಕಾರಕರೋ ಅವರು ಎಂಬದಾಗಿ ತಿಳಿಯತಕ್ಕದ್ದು. ಆದುದರಿಂದ ಅಧ್ಯಾತ್ಮವಿದ್ಯೆಯ ಉಪದೇಷ್ಟ್ರುಗಳು ಆಚಾರ್ಯವಂಶ ಶಬ್ದದಿಂದ ಹೇಳಲ್ಪಟ್ಟರು. ಪ್ರಹ್ಲಾದನಿಗೆ ಉಂಟಾದ ಹಾಗೆ ಆತನ ಪಿತೃವಾದ ಹಿರಣ್ಯಕಶಿಪುವು ಮೊದಲಾದವರನ್ನು ಕುರಿತು ಹೇಳಿದುದಲ್ಲವು. ಮೇಲೆ ಹೇಳಿದ ರೀತಿಯಲ್ಲಿ ಉಪಕಾರಕಾಚಾರ್ಯರೂ ಪ್ರಾಚಾರ್ಯರೂ ಮೊದಲಾದವರೂ ಮತ್ತೂ ಅಧ್ಯಾತ್ಮವಿದ್ಯಾಪ್ರಚುರ್ಯನಿಷ್ಠರಾದ ಮಹಾನುಭಾವರಾದ ನಮ್ಮಾಳ್ವಾರ್ ಮೊದಲಾದ ಆಳ್ವಾರುಗಳೂ ನಾಥಮುನಿ, ಯಾಮುನಮುನಿ, ಶ್ರೀಭಾಷ್ಯಕಾರ ಪ್ರಭೃತಿಗಳು ಮುಖ್ಯವಾಗಿ ಇಲ್ಲಿ ಹೇಳಲ್ಪಟ್ಟರೆಂಬದಾಗಿ ಭಾವಿಸತಕ್ಕದ್ದು.)

(ಹಿಂದಿನ ವಾಕ್ಯದಲ್ಲಿ " ಭಗವಾನಳವುಂ ಶೆಲ್ಲವನುಸಂಧೇಯಂ" ಎಂದು ಹೇಳಿರುವ ರೀತಿಯಲ್ಲಿ ಆಚಾರ್ಯಪರಂಪರೆಯನ್ನು ಸರ್ವೇಶ್ವರನ ವರಿವಿಗೂ ಅನುಸಂಧಾನವಾಗತಕ್ಕದ್ದೆಂದು ಹೇಳಲ್ಪಟ್ಟಿರುವದರಿಂದ ಸರ್ವೇಶ್ವರನೂ ಹೇಗೆ ಆಚಾರ್ಯಗೋಷ್ಠಿಯಲ್ಲಿ ಸೇರಿ ಪರಮಾಚಾರ್ಯನೆಂಬದಾಗಿ ಹೇಳಿಸಿಕೊಳ್ಳುತ್ತಾನೆಂಬುವದನ್ನು ತಿಳಿಸುತ್ತಾರೆ.

"ತಮಿಮಂಸರ್ವಸಂಪನ್ನಮಾಚಾರ್ಯಂ ಪಿತರಂಗುರುಂ[1]" ಎನ್ನುಂ
"ಮಮಾಪ್ಯಖಿಲಲೋಕಾನಾಂ ಗುರುರ್ನಾರಾಯಣೋ[2] ಗುರುಃ"

ಆಚಾರ್ಯರೇನೋ ಅಧ್ಯಾತ್ಮವಿದ್ಯಾ ಉಪದೇಷ್ಟ್ರಗಳಾದ ಪ್ರಯುಕ್ತ ಅನುಸಂಧೇಯರು. ಸರ್ವೇಶ್ವರನು ಹೇಗೆ ಎಂಬ ಶಂಕೆಯನ್ನು ನಿವಾರಣಮಾಡುತ್ತಾರೆ.)

ತಮಿಮಂ - ಅಂತಹ ಈ, ಸರ್ವಸಂಪನ್ನಂ - ಧರ್ಮರಾಯ ಸಭೆಯಲ್ಲಿ ಅಗ್ರಪೂಜೆಗೆ ಅರ್ಹತೆಯಿರುವ ಹಾಗೆ ಸಕಲ ವಿಧವಿಭವೈಶ್ವರ್ಯಾದಿಗಳಿಂದ ಯುಕ್ತನಾದ, ಆಚಾರ್ಯಂ - ಅಧ್ಯಾತ್ಮವಿದ್ಯಾಪ್ರದಾತೃವಾದ, ಪಿತರಂ - ಲೋಕಪಿತಾವಾದ, ಗುರುಂ - ವೇದಾಧ್ಯಾಪಕನಾದ ಶ್ರೀಕೃಷ್ಣನನ್ನೂ, ಭಾರತದಲ್ಲಿ ಈಶ್ವರನನ್ನು ಪರಮಾಚಾರ್ಯನೆಂಬದಾಗಿಯೂ ಪರಮಗುರುವಾಗಿಯೂ ಭೀಷ್ಮಾಚಾರ್ಯರು ಹೇಳಿರುವದರಿಂದಲೂ,ನಾರಾಯಣಃ - ಶ್ರೀಮನ್ನಾರಾಯಣನು, ಮಮಾಪಿ - ಭೂಮಿಯಾದ ನನಗೂ ಕೂಡ, ಗುರುಃ - ಗುರುವು, ಹಾಗೆಯೇ, ಅಖಿಲಲೋಕಾನಾಂ - ಸಮಸ್ತಲೋಕದ ಜನರಿಗೂ ಗುರುವು, ಅಗುರುಃ - ಆ ಶ್ರೀಮನ್ನಾರಾಯಣನಿಗೆ ಯಾರೂ ಗುರುವಿಲ್ಲವು (ಆದುದರಿಂದಲೇ ನಮ್ಮ ಸ್ವಂತ ಆಚಾರ್ಯರನ್ನು ಹಿಡಿದು ಲೋಕಗುರುವಾದ ಪರಮಾಚಾರ್ಯನ ವರಿವಿಗೂ ಅನುಸಂಧಾನಮಾಡತಕ್ಕದ್ದೆಂದು ಹೇಳಲ್ಪಟ್ಟಿತು. ಇದು ಕಂಸ, ಶಿಶುಪಾಲ ಮುಂತಾದವರುಗಳಿಂದುಂಟಾದ ಭೂಭಾರಾವತರಣಕ್ಕಾಗಿ ಭೂಮಿಯು ಸ್ವಾಮಿಯನ್ನು ಪ್ರಾರ್ಥಿಸುವ ಸಂದರ್ಭವು ಪರಾ

---

1 ಭಾರತ ಸಭಾ. ೪೧-೨೧, ಭಾರತದಲ್ಲಿ "ತಮಿಮಂ ಲೋಕಸಂಪನ್ನಂ ಆಚಾರ್ಯಂ ಪಿತರಂ ಗುರುಂ । ಅಘ್ಯೇಮರ್ಚಿತಮರ್ಚಾಮಃ ಸರ್ವೇಸಂಕ್ಷ್ಮಂತುಮರ್ಹಥ" ಎಂಬದಾಗಿ ಪಾಠವಿರುತ್ತದೆ. ಆಚಾರ್ಯ, ಗುರು ಎಂಬದಾಗಿ ಉಪಯೋಗಿಸಿರುವದರಲ್ಲಿ ಪೌನರುಕ್ತ್ಯದೋಷವಿಲ್ಲವೆಂಬದಾಗಿ ಮೇಲೆ ತೋರಿಸಿರುತ್ತದೆ.

2 ವಿ. ಪು. ೫-೧ ೦೫.

ಎನ್ರುಂ "ತ್ವಮೇವಬಂಧುಶ್ಚ ಗುರುಸ್ತ್ವಮೇವ[1]" ಮೆನ್ರುಂ " ಗುರುರಸಿಗತಿಶ್ಚಾಸಿ ಜಗತಾಂ[2] " ಎನ್ರುಂ ಶೊಲ್ಲುಗಿರಪಡಿಯೆ ಸರ್ವಲೋಕತ್ತುಕ್ಕುಂ ಪರವಾಚಾರ್ಯನಾನ ಸರ್ವೇಶ್ವರ[3] ಬ್ರಹ್ಮಾವುಕ್ಕು[4] ಅಡಿಯಿಲೆ ವೇದಂಗಳೈ ಕೊಡುತ್ತುಂ ಅವತ್ತಿಲ್ ಅಪಹಾರಂ ಪಿರಂದಪೋದು[5] ಮಾಟ್ಟುಕೊಡುತ್ತುಂ ಇವ್ವ

ಶರರು ವಿಷ್ಣುಪುರಾಣದಲ್ಲಿ ಸರ್ವೇಶ್ವರನು ಲೋಕಕ್ಕೆಲ್ಲಾ ಗುರುವಾಗಿ ಆತನಿಗೆ ಯಾರೂ ಗುರುವಿಲ್ಲವೆಂಬುದಾಗಿ ಹೇಳಿರುವದರಿಂದಲೂ,"ನೀನೇ ಸರ್ವಬಂಧುವು ನೀನೇ ಗುರುವು " ಎಂಬುದಾಗಿ ಶರಣಾಗತಿಗದ್ಯದಲ್ಲಿ ಹೇಳಿರುವದರಿಂದಲೂ, "ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ತತ್ವಹಿತಪುರುಷಾರ್ಥಗಳನ್ನುಪದೇಶಿಸುವವನು ಮತ್ತು ಜಗತ್ತಿನ ಸರ್ವಜೀವರುಗಳಿಗೂ ಉಪಾಯೋಪೇಯನಾಗಿರುವ ಗತಿಯೂ ನೀನೆ" ಎಂಬುದಾಗಿ ಶ್ರೀಯಾಮುನಾಚಾರ್ಯರವರು ಹೇಳಿರುವದರಿಂದಲೂ ಸರ್ವಲೋಕದ ಜೀವರುಗಳಿಗೂ ಸರ್ವೇಶ್ವರನು ಪರವಾಚಾರ್ಯನು. (ಪರವಾಚಾರ್ಯನೆಂಬುವದಕ್ಕೆ ಶ್ರುತಿ, ಸ್ಮೃತಿ, ಮಹರ್ಷಿ, ಮುನಿವಾಕ್ಯ ಪುರಾಣಗಳನ್ನುದಾಹರಿಸಿ, ಸರ್ವೇಶ್ವರನು ಹೇಗೆ ಪರವಾಚಾರ್ಯನೆಂಬುವ

1 ಶರಣಾಗತಿಗದ್ಯಂ—" ತ್ವಮೇವ ಮಾತಾಚ ಪಿತಾತ್ವಮೇವ ತ್ವಮೇವ ಬಂಧುಶ್ಚ ಗುರುಸ್ತ್ವಮೇವ । ತ್ವಮೇವವಿದ್ಯಾದ್ರವಿಣಂ ತ್ವಮೇವ ತ್ವಮೇವ ಸರ್ವಂ ಮಮ ದೇವದೇವ ॥" ಎಂಬುದು ಪೂರಾ ಶ್ಲೋಕವು.

2 ಆಳವಂದಾರ್ ಸ್ತೋತ್ರಂ ೬೦. " ಪಿತಾತ್ವಂ ಮಾತಾತ್ವಂ ದಯಿತ ತನಯಸ್ತ್ವಂ ಪ್ರಿಯಸುಹೃತ್ತ್ವಮೇವತ್ವಂ ಮಿತ್ರಂ ಗುರುರಸಿಗತಿಶ್ಚಾಸಿಜಗತಾಂ" ಎಂಬುದು ಪೂರ್ವಾರ್ಧವು.

3 ಬ್ರಹ್ಮಾ-ಎಂದು ದೀರ್ಘವಿದ್ದರೆ ಚತುರ್ಮುಖಬ್ರಹ್ಮನು, ಹ್ರಸ್ವವಿದ್ದರೆ ಪರಬ್ರಹ್ಮವು. 4 ಅಡಿಯಿಲೆ - ಆದಿಯಲ್ಲಿ

5 ಮಾಟ್ಟು - ಪುನಃ

ಮುಖವಾಕ ಶಾಸ್ತ್ರಂಗಳೈ ಪ್ರವರ್ತಿಪ್ಪಿತ್ತುಂ, ಇವ್ವಪುತ್ರರ್‌ಗ
ಳಾನಸನತ್ಕುಮಾರಾದಿಗಳೈ "ಸ್ವಯಮಾಗತ ವಿಜ್ಞಾನಾ ನಿವೃತ್ತಿಂ
ಧರ್ಮಮಾಸ್ಥಿತಾಃ[1] " ಎನ್ರುಂ ಪಡಿಪಣ್ಣಿ, ಅವರ್ಗಳ್ ಮುಖಂ
ಗಳಾಲೇ ಹಿತಪ್ರವರ್ತನಂ ಪಣ್ಣಿವಿತ್ತುಂ, ಇಪ್ಪಡಿಯೇ ಮತ್ತುಂ
ನಾರದ ಪರಾಶರ ಶುಕ ಶೌನಕಾದಿಗಳಾನ ಪಲಮುಹರ್ಷಿಗಳೆ
ಯಿಟ್ಟು ಅಧ್ಯಾತ್ಮ ಸಂಪ್ರದಾಯಂ ಕುಲೈಯಾದಪಡಿನಡತ್ತಿಯುಂ,

ದನ್ನು ಮುಂದಕ್ಕೆ ಸಮರ್ಥನೆ ಮಾಡಿರುತಾ್ತರೆ. ಸರ್ವೇಶ್ವರನು ಹೇಗೆ ಆಚಾರ್ಯನೆಂಬುವದನ್ನು ಎಂಟು ಕಾರಣಗಳಿಂದ ಸಮರ್ಥನ ಮಾಡುತಾ್ತರೆ.

1. ಈ ಸರ್ವೇಶ್ವರನು ತನ್ನ ಪುತ್ರನಾದ ಚತುರ್ಮುಖಬ್ರ ಹ್ಮನಿಗೆ ಆದಿಯಲ್ಲಿ ವೇದಗಳನ್ನು ಕೊಟ್ಟು ಅಂದರೆ ತಾನೇ ಸ್ವತಃ ಉಪ ದೇಶಮಾಡಿ, ಆ ವೇದಗಳು ಮಧುಕೈಟಭಾದಿ ರಾಕ್ಷಸರುಗಳಿಂದ ಅಪ ಹರಿಸಲ್ಪಟ್ಟಾಗ ಪುನಃ ಅವುಗಳನ್ನು ತಂದುಕೊಟ್ಟನು.

2 ಈ ಚತುರ್ಮುಖನ ಮೂಲಕವಾಗಿ ಶಾಸ್ತ್ರಗಳನ್ನು ಪ್ರಚುರ ಗೊಳಿಸಿ, ಈ ಚತುರ್ಮುಖನು ತನ್ನ ಏಳು ಮಕ್ಕಳಾದ ಸನತ್ಕುಮಾರ ಮೊದಲಾದವರುಗಳನ್ನು ಮಹಾವಿಕಾಸವಾದ ಧರ್ಮಭೂತಜ್ಞಾನ ಹೊಂ

---

1 ಭಾರತ ಶಾಂತಿ. ೪೪೯, ೭೧. 2 "ಸನತ್ಕುಮಾರಾದಿಗಳೈ" ಎಂಬಲ್ಲಿ ರುವ ಆದಿ ಪದದಿಂದ ಚತುರ್ಮುಖಬ್ರಹ್ಮನ ಏಳು ಮಕ್ಕಳು ಹೇಳಲ್ಪಟ್ಟರು ಅವರು ಯಾರೆಂದರೆ—" ಸನಃ ಸನತ್ಸುಜಾತಶ್ಚ ಸನಕಃ ಸಸನಂದನಃ | ಸನತ್ಕುಮಾರಃ ಕಪಿಲಃ ಸಪ್ತಮಶ್ಚ ಸನಾತನಃ | ಸಪ್ತೈತೇ ಮಾನಸಾಃಪ್ರೋಕ್ತಾ ಋಷಯೋಬ್ರಹ್ಮಣಸ್ಸುತಾಃ | ಸ್ವಯಮಾಗತವಿಜ್ಞಾನಾ ನಿವೃತ್ತಿಂ ಧರ್ಮಮಾಸ್ಥಿತಾಃ" ಎಂಬ ಶ್ಲೋಕಗಳಲ್ಲಿ ಚತುರ್ಮುಖನ ಮಾನಸಪುತ್ರರು—(1) ಸನ, (2) ಸನತ್ಸುಜಾತ, (3) ಸನಕ, (4) ಸಸನಂದನ, (5) ಸನತ್ಕುಮಾರ, (6) ಕಪಿಲ, (7) ಸನಾತನ ಎಂಬದಾಗಿ ಏಳು ಮಂದಿಗಳು.

"ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ।
ಕೋಹ್ಯನೋ ಭುವಿಮೈತ್ರೇಯ ಮಹಾಭಾರತಕೃದ್ಭವೇತ್[1]"

ದಿದವರಾದ ಪ್ರಯುಕ್ತ ಮಹಾಜ್ಞಾನಿಗಳೆಂದೆನಿಸಿದವರನ್ನೂ ನಿವೃತ್ತಿಮಾರ್ಗವೆಂದರೆ ವಿರಕ್ತಿಮಾರ್ಗದಲ್ಲಿರುವವರ ಹಾಗೆ ಮಾಡಿ, ಆ ವಿಳು ಪುತ್ರರಮೂಲಕ ತತ್ಪ್ರಹಿತಪುರುಷಾರ್ಥಗಳ ಪ್ರವರ್ತನೆಯನ್ನುಂಟುಮಾಡಿಸಿದನು.

3. ಹೀಗೆಯೇ ಇನ್ನೂ ನಾರದ, ಪರಾಶರ, ಶುಕ, ಶೌನಕ ಮೊದಲಾದ ಮಹರ್ಷಿಗಳ ಮೂಲಕ ಅಧ್ಯಾತ್ಮಸಿದ್ಧಾಂತದ ಕ್ರಮವು ನಾಶವಾಗದ ಹಾಗೆ ನಡಿಸಿಕೊಟ್ಟು ಹೀಗೆ ಕೃಪೆಗೈದಿರುತ್ತಾನೆ (ಮುಂದಕ್ಕೆ "ಅರುಳಿನಾರ್" ಎಂಬದಾಗಿದೆ. ಅದೇ ಕ್ರಿಯಾಪದವು) (ವಾಕ್ಯವು ತುಂಬಾ ದೊಡ್ಡದಾಗುವದರಿಂದ ಅಭಿಪ್ರಾಯ ಗ್ರಹಣವು ಕಷ್ಟವಾದೀತೆಂದು ಭಾವಿಸಿ ಭಾಷಾಂತರದಲ್ಲಿ ಚಿಕ್ಕವಾಕ್ಯಗಳಾಗಿ ವಿಭಾಗಿಸಲ್ಪಟ್ಟಿರುತ್ತದೆ.)

4. ಕೃಷ್ಣದ್ವೈಪಾಯನಂ ವ್ಯಾಸಂ - ಕೃಷ್ಣದ್ವೈಪಾಯನನೆಂಬ ಇನ್ನೊಂದು ಹೆಸರುಳ್ಳ ವ್ಯಾಸಮಹರ್ಷಿಯನ್ನು, ನಾರಾಯಣಂ ಪ್ರಭುಂ - ಸ್ವಾಮಿಯಾದ ಶ್ರೀಮನ್ನಾರಾಯಣಾಂಶವನ್ನಾಗಿ, ವಿದ್ಧಿ - ತಿಳಿ. ವಿತಕ್ಕೆಂದರೆ—ಮೈತ್ರೇಯ - ಓ ಮೈತ್ರೇಯನೇ, ಭುವಿ - ಈ ಲೋಕದಲ್ಲಿ, ಕೋಹ್ಯನ್ಯಃ - ಇನ್ನು ಬೇರೆ ಯಾರುತಾನೆ, ಮಹಾಭಾರತಕೃತ್ - ಪಂಚಮವೇದವೆನಿಸುವ ಸರ್ವಶ್ರೇಷ್ಠರಾದ, ಸರ್ವಧರ್ಮಗಳನ್ನು ಬೋಧಿಸುವ ಮಹಾಭಾರತಗ್ರಂಥಕರ್ತರು, ಭವೇತ್ - ಆದಾರು ? ಎಂಬದಾಗಿ ಅವರ ತಂದೆಯಾದ ಪರಾಶರರೇ ಹೇಳಿರುವದರಿಂದಲೂ, ತಸ್ಯಾಮಹರ್ಷೇಃ ಕೀರ್ತನಾತ್ - ಆ ಮಹರ್ಷಿಗಳಾದ

1 ವಿ. ಪು. ೪, ೪, ೫. ಇಲ್ಲಿ "ಕೋಹ್ಯನ್ಯೋ" ಎಂಬುವದಕ್ಕೆ ಬದಲಾಗಿ "ಕೋನ್ಯೋಹಿ" ಎಂಬದಾಗಿ ಇರುತ್ತದೆ. "ಹಿ, ಅನ್ಯಃ" ಎಂಬ ಪದಗಳು ಹಿಂದುಮುಂದಾಗಿವೆ. ಅರ್ಥಭೇದವಿಲ್ಲವು.

ಎನ್ರಂ " ಮಹರ್ಷೇಃ ಕೀರ್ತನಾತ್ತಸ್ಯ ಭೀಷ್ಮಃ ಪ್ರಾಂಜಲಿರ ಬ್ರವೀತ್[1] " ಎನ್ರಂ ಶೊಲ್ಲುಕಿರಪಡಿ ನಿರ್ಕರ ವ್ಯಾಸಾದಿಗಳೈ ಯನುಪ್ರವೇಶಿತ್ತು ಮಹಾಭಾರತ ಶಾರೀರಕಾದಿಗಳೈ ಪ್ರವರ್ತಿ ಪ್ಪಿತ್ತುಂ[2], ಹಂಸಮತ್ಸ್ಯಹಯಗ್ರೀವ ನರನಾರಾಯಣ ಗೀತಾ

ವ್ಯಾಸರನ್ನು ಹೊಗಳುವದರಿಂದ, ಭೀಷ್ಮಃ - ಭೀಷ್ಮಾಚಾರ್ಯರು, ಪ್ರಾಂಜಲಿಃ - ಅಂಜಲಿಬದ್ಧರಾಗಿ, ಅಬ್ರವೀತ್ - ಹೇಳಿದರು ಎಂಬ ದಾಗಿ ಹೇಳಿರುವ ಮೇರಿಗೆ ಮಹಾಖ್ಯಾತಿಯನ್ನು ಹೊಂದಿರುವ ವ್ಯಾಸ ಮಹರ್ಷಿ ಮೊದಲಾದವರುಗಳನ್ನನುಪ್ರವೇಶಮಾಡಿ ಮಹಾಭಾರತವೆಂಬ ಇತಿಹಾಸ, ಉತ್ತರಮೀಮಾಂಸೆ ಎಂಬ ಬ್ರಹ್ಮಸೂತ್ರಗಳು ಮೊದಲಾದ ವುಗಳನ್ನು ಪ್ರಚುರಗೊಳಿಸಿ ದಯಪಾಲಿಸಿರುತ್ತಾನೆ.

5. ಇದೂ ಅಲ್ಲದೆ ಸರ್ವೇಶ್ವರನು ತಾನೇ ಹಂಸ, ಮತ್ಸ್ಯ, ಹಯಗ್ರೀವ, ನರನಾರಾಯಣ, ಗೀತಾಚಾರ್ಯನಾದ ಶ್ರೀಕೃಷ್ಣ ಮೊದಲಾದ ಅವತಾರಗಳ ಮೂಲಕವಾಗಿ ತಾನೇ ಪ್ರಚುರಗೊಳಿಸಬೇಕೆಂದು ಮುಂದೆ ನಿಂತು ಯಾವುದು ತತ್ವವು, ಯಾವುದು ಹಿತವಾದುದು,

---

1 ಭಾರತ ಆದಿ. ೧೧೪; ೧೧. ಇಲ್ಲಿ " ಪ್ರಾಂಜಲಿಃ " ಅಂಜಲಿಬದ್ಧರಾಗಿ ಎಂಬದಾಗಿ ಹೇಳಿರುವದರಿಂದ ಮಹಾಬ್ರಹ್ಮವಿತ್ತಾಗಿ ಭಾಗವತೋತ್ತಮರೆನಿಸಿರುವ ವ್ಯಾಸಮಹರ್ಷಿಯ ಸಂಕೀರ್ತನವು ನಡೆದುದರಿಂದ ಮಹಾಜ್ಞಾನಿಯಾದ ಭೀಷ್ಮರು ಅಂಜಲಿಯನ್ನು ಮಾಡಿದರು ಎಂದು ಭಾವಿಸತಕ್ಕದ್ದು. ಹೀಗೆ ಮಹಾ ಭಾಗವತೋತ್ತಮರ ವಿಷಯಿಕವಾದ ಸಂಭಾಷಣೆಯು ನಡೆಯುವಾಗ ನಾವುಗಳು ಸಹ ಹಾಗೆಯೇ ಅಂಜಲಿಬದ್ಧರಾಗಿರಬೇಕೆಂಬುವದು ಇದರಿಂದ ವ್ಯಕ್ತಪಡುತ್ತದೆ. ಆಚಾರ್ಯನಾಮಸಂಕೀರ್ತನವು ನಡೆಯುವಾಗಲೂ ಅಂಜಲಿಯನ್ನು ಮಾಡತಕ್ಕದ್ದು ವಿಧಾಯಿಕವೆಂಬುದೂ ಇದರಿಂದ ಸೂಚಿಸಲ್ಪಟ್ಟಿತು.

2 ಶಾರೀರಕಶಾಸ್ತ್ರವೆಂದರೆ ಉತ್ತರಮೀಮಾಂಸೆ, ವೇದಾಂತಶಾಸ್ತ್ರವು, ವೇದಾಂತಗಳಲ್ಲಿ ಸರ್ವವೂ ಸ್ವಾಮಿಗೆ ಶರೀರವೆಂಬದಾಗಿ ಹೇಳುವದರಿಂದ ವೇದಾಂತಶಾಸ್ತ್ರಕ್ಕೆ ಶಾರೀರಕಶಾಸ್ತ್ರವೆಂದು ಹೆಸರು.

ಚಾರ್ಯಾದ್ಯವತಾರಂಗಳಾಲೇ ತಾನೇವೆಳಿನಿನ್ರು[1] ತತ್ವ ಹಿತಪುರು ಷಾರ್ಥಂಗಳೈ ಪ್ರಕಾಶಿಪ್ಪಿತ್ತುಂ, ತಾನರುಳಿಚ್ಚೆಯ್ದ ವರ್ಣಂಗಳೈ ಯೆಲ್ಲಾಂ ಶ್ರೀಭೀಷ್ಮರ್ ಮುದಲಾನ ಜ್ಞಾನಾಧಿಕರೈಯಿಟ್ಟು ಮುದಲಿಪ್ಪಿತ್ತುಂ[2],

---

ಯಾವುದು ಪರಮಪುರುಷಾರ್ಥವು ಎಂಬುವುಗಳನ್ನು ಪ್ರಕಾಶಗೊಳಿಸಿದುದೂ ಅಲ್ಲದೆ, ತಾನುಪದೇಶಿಸಿದ ಸದಭಿಪ್ರಾಯಗಳೆಲ್ಲಾ ಪರಮಾರ್ಥವಾಗಿ ಶಿಷ್ಟಗ್ರಾಹ್ಯವೆಂಬುವುದನ್ನು ಪ್ರಕಟನೆಮಾಡುವದಕ್ಕಾಗಿ ಗಂಗಾಪುತ್ರರಾದ ಶ್ರೀಭೀಷ್ಮರೇ ಮೊದಲಾದ ಮಹಾಜ್ಞಾನಿಗಳ ಮೂಲಕವಾಗಿ ಜಿಜ್ಞಾಸಮಾಡಿಸಿ ನಿರ್ಧರೀಕರಿಸಿ ಶರತಲ್ಪದಲ್ಲಿರುವಾಗ ಅವುಗಳನ್ನೇ ಯುಧಿಷ್ಠಿರಪ್ರಭೃತಿಗಳಿಗೆ ಉಪದೇಶಿಸುವ ಹಾಗೆ ಕೃಪೆಗೈದಿರುತ್ತಾನೆ.

(ಹಂಸಾವತಾರ ಕಥೆ—ಸನಕಾದಿಗಳಾದ ಚತುರ್ಮುಖನ ಪುತ್ರರುಗಳು ತಮ್ಮ ಪಿತಾವನ್ನು ಕುರಿತು ಶಬ್ದಾದಿ ಗುಣಗಳು ಜೀವನ ಮನಸ್ಸಿನಲ್ಲೂ, ಮನಸ್ಸು ಶಬ್ದಾದಿಗಳಲ್ಲೂ ಹೀಗೆ ಪರಸ್ಪರ ಆಶ್ರಯವಿರುವಲ್ಲಿ ಮೋಕ್ಷಾರ್ಥಿಯಾದ ಚೇತನನಿಗೆ ಅವುಗಳ ಪರಸ್ಪರ ವಿಯೋಗ ಉಂಟಾಗಬೇಕಲ್ಲಾ, ಅದು ಹೇಗೆ ಎಂಬದಾಗಿ ಪ್ರಶ್ನಿಸಲು, ಅದಕ್ಕೆ ಚತುರ್ಮುಖನಿಗೆ ಉತ್ತರ ಹೇಳಲು ತೋಚದಿರಲು, ಆಗ ಸ್ವಾಮಿಯು ಹಂಸಾವತಾರಿಯಾಗಿ ಎದುರಿಗೆ ಬಂದು ನಿಲ್ಲಲು ಆಗ ಚತುರ್ಮುಖ ಸನಕಾದಿಗಳು ಸ್ವಾಮಿಯನ್ನು ಕುರಿತು ನೀನು ಯಾರೆಂಬದಾಗಿ ಪ್ರಶ್ನಿಸಲು ಅದಕ್ಕೆ ಹಂಸರೂಪಿಯಾದ ಭಗವಂತನು ಧರ್ಮವನ್ನು ಬೋಧಿಸಿ ಅವರು ಕೇಳಿದ ಪ್ರಶ್ನೆಯು ಹೇಗೆ ನಿರರ್ಥಕವಾದುದೆಂಬದಾಗಿ ತಿಳಿಸಿ ಸನಕಾದಿಗಳಿಗಿದ್ದ ಸಂಶಯವನ್ನು ಹೋಗಲಾಡಿಸಿ ಜ್ಞಾನವನ್ನೀಯುವನು. ಈ ಕಥೆಯು ಭಾಗವತ ಏಕಾದಶಸ್ಕಂಧದಲ್ಲಿ ತಾವು ಹೀಗೆ

---

1 ತಾನೇ ವೆಳಿನಿನ್ರು—ತಾನೇ ಮುಂದಾಗಿ ನಿಂತು.

2 ಮುದಲಿಪ್ಪಿತ್ತುಂ—ಜಿಜ್ಞಾಸಮಾಡಿ ಸಾಧುವೆಂದು ಹೇಳಿಸಿ.

ಉಪದೇಶವಾಡಿದುದಾಗಿ ಶ್ರೀಕೃಷ್ಣನು ಉದ್ಧವರಿಗೆ ತಿಳಿಸುತ್ತಾನೆ. ಸೂಕ್ಷ್ಮವಾಗಿ ಅವತಾರ ಪ್ರಯೋಜನಗಳನ್ನು ಶ್ರೀ ಶುಕಮಹರ್ಷಿಯು ಹೇಳುವಾಗ " ಹಂಸಸ್ವರೂಪ್ಯವದದಚ್ಯುತ ಆತ್ಮಯೋಗಂ " ಎಂಬುದಾಗಿರುತ್ತದೆ.

ಮತ್ಸ್ಯಾವತಾರ ಕಥೆ—ಚತುರ್ಮುಖಬ್ರಹ್ಮನು ಕಲ್ಪಾಂತದಲ್ಲಿ ನಿದ್ರೆಯಲ್ಲಿರುವಾಗ ಹಯಗ್ರೀವಾಖ್ಯ ಅಸುರನು ವೇದಗಳನ್ನು ಅಪಹರಿಸಲು, ಆಗ ಸರ್ವೇಶ್ವರನು ಮತ್ಸ್ಯರೂಪವನ್ನು ಧರಿಸಿ ರಾಜರ್ಷಿಯಾದ ಸತ್ಯವ್ರತನೆಂಬ ಮನುವು ಕೊಡುತ್ತಿದ್ದ ಜಲತರ್ಪಣಕಾಲದಲ್ಲಿ ಸಣ್ಣ ಮೀನಾಗಿ ಆತನ ಕೈಗೆ ಸಿಕ್ಕಿ ಯಾವ ಯಾವ ಜಲಾಶಯಗಳಲ್ಲಿ ಬಿಟ್ಟರೂ ಬೆಳೆದು, ಕಡೆಗೆ ಸಮುದ್ರದಲ್ಲಿ ಬಿಡಲೆತ್ನಿಸಲು, ಆಗ ಮತ್ಸ್ಯವು ಆ ಮನುವನ್ನು ಸಮುದ್ರದಲ್ಲಿ ಜಲಚರಗಳ ಹಾವಳಿಯಾದುದರಿಂದ ಬಿಡಬೇಡವೆಂದು ಪ್ರಾರ್ಥಿಸಲು, ಆಗ ಸತ್ಯವ್ರತನು ಇಂತಹ ಹೀಗೆ ಅದ್ಭುತಾಕಾರದಿಂದ ವೃದ್ಧಿಯಾಗುವ ಮಹಾತ್ಮೈಯುಳ್ಳವನು ವೇದಾಂತವೇದ್ಯನಾಗಿ, ನಿಖಿಲಜಗದುದಯವಿಭವಲಯಲೀಲನಾಗಿ ಸಾಧುಪರಿತ್ರಾಣಾರ್ಥವಾಗಿಯೂ ದುಷ್ಟನಿಗ್ರಹಾರ್ಥವಾಗಿಯೂ ಶಾಸ್ತ್ರೋಪದೇಶಾರ್ಥವಾಗಿಯೂ ಪದೇಪದೇ ಅವತರಿಸುವ ಸಿದ್ಧೋಪಾಯನಾದ ಪರಮ ಪುರುಷನೆಂದು ಭಾವಿಸಿ ಆತನನ್ನು ಸ್ತೋತ್ರಮಾಡಿ ನಮಸ್ಕರಿಸುವಾಗ, ಮತ್ಸ್ಯರೂಪಿಯಾದ ಭಗವಂತನು ಹೇಳುತ್ತಾನೆ. ಓ ಸತ್ಯವ್ರತನೇ " ಇಂದಿಗೆ ಏಳನೇ ದಿನದಲ್ಲಿ ಪ್ರಳಯವುಂಟಾಗುವದು, ನನ್ನ ಸಂಕಲ್ಪದಿಂದುಂಟಾದ ಬಂದು ನಾವೆಯು ಉತ್ಪನ್ನವಾಗುವದು, ನೀನು ಅವುಗಳಲ್ಲಿ ಸರ್ವಭೂತಗಳನ್ನೂ ಸರ್ವ ವನಸ್ಪತಿ, ಬೀಜಗಳೆಲ್ಲವನ್ನೂ ಇಟ್ಟುಕೊಂಡು ಸಪ್ತರ್ಷಿಗಳೊಂದಿಗೆ ಆ ನಾವೆಯನ್ನಾರೋಹಣ ಮಾಡು. ಆ ಮಹಾಪ್ರಳಯದ ಕತ್ತಲು ಮತ್ತು ಬಿರುಗಾಳಿಯ ಹೊಡತದಲ್ಲೂ ಆ ನಾವೆಗೆ ಏನೂ ತೊಂದರೆಯಾಗದೆ ಚತುರ್ಮುಖಬ್ರಹ್ಮನು ಮಲಗಿರುವತನಕ ಅದು ರಕ್ಷಿಸಲ್ಪಡುತ್ತದೆ. ಅನಂತರ ನಾನು ಆ ಸಮುದ್ರದಲ್ಲಿ ಮತ್ಸ್ಯರೂಪದಲ್ಲಿರುವೆನು. ನನ್ನ ಶೃಂಗಕ್ಕೆ ವಾಸುಕಿಯನ್ನೇ ಹಗ್ಗವಾಗಿ ಮಾಡಿ ಆ ನಾವೆಯನ್ನು ಬಂಧಿಸು" ಎಂದು ಆಜ್ಞಾಪಿಸಿ ಶ್ರೀಮಹಾವಿಷ್ಣುವು

" ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾನಾರಾಯಣಸ್ಸ್ವಯಂ।"
ಎಂಗಿರಪಡಿಯೇ ಅಡಿಯಿಲೆ ತಾನರುಳಿಚ್ಚೆಯ್ದೆ ಭಗವಚ್ಛಾಸ್ತ್ರತ್ತೈ ।

ಅಂತರ್ಧಾನವನ್ನೈದಲು, ಅನಂತರ ಸತ್ಯವ್ರತನು ಪರಮೇಶ್ವರನ ಚರಣಾರವಿಂದವನ್ನು ಧ್ಯಾನಿಸುತ್ತಾ ತ್ತ ಆಕಾಲ ನಿರೀಕ್ಷಣೆಯಲ್ಲಿರಲು, ಆಗ ಮಹಾಬಿರುಗಾಳಿಯಿಂದಲೂ ಪ್ರಳಯಕಾಲದ ಮೇಘಗಳ ವರ್ಷದಿಂದಲೂ ಗಾಢಾಂಧಕಾರದಿಂದಲೂ ಕೂಡಿ ಸಮುದ್ರವು ಉಕ್ಕಿ ಭೂಮಿಯನ್ನೆಲ್ಲಾ ಆವರಿಸಲು, ಅದರಲ್ಲಿ ಮಹಾವಿಷ್ಣುವು ಅಗಾಧವಾದ ಮತ್ಸ್ಯರೂಪವನ್ನು ಧರಿಸಿ ತೇಲಾಡುತ್ತಿರಲು, ಆ ಮತ್ಸ್ಯಶೃಂಗಕ್ಕೆ ಈ ನಾವೆಯನ್ನು ವಾಸುಕಿಯನ್ನೇ ಹಗ್ಗವಾಗಿ ಮಾಡಿ ಸತ್ಯವ್ರತನು ಭಗವಂತನ ಆಜ್ಞಾಪ್ರಕಾರ ಬಂಧಿಸಿ, ಆ ಮಹಾನುಭಾವನನ್ನು ಬಹುವಿಧವಾಗಿ ಸ್ತೋತ್ರಮಾಡಿ, ಮೂರು ವಿಧವಾದ ಅಜ್ಞಾನಗಳು ತೊಲಗಿ ಬ್ರಹ್ಮಯಾಥಾತ್ಮ್ಯಜ್ಞಾನ ಉಂಟಾಗುವ ಹಾಗೂ, ಕರ್ಮಗಳು ತನ್ನನ್ನು ಪುನಃ ಬಿಗಿದು, ಸಂಸೃತಿಯಲ್ಲೇ ಬಿದ್ದು ನರಳದಹಾಗೆ ಉಪದೇಶಿಸುವಹಾಗೂ ತುಂಬಾ ದೈನ್ಯದಿಂದ ಪ್ರಾರ್ಥಿಸಲಾಗಿ, ಆಗ ಕೃಪಾಪರಿಪೂರ್ಣನಾದ ಭಗವಂತನು ಸಪ್ತರ್ಷಿಗಳಿಗೂ ಸತ್ಯವ್ರತನಿಗೂ ಆಗಮಿಕ ಸರ್ವಶಾಸ್ತ್ರಾರ್ಥಗಳ ಉಪದೇಶವನ್ನು ಮಾಡಿ, ಆಮೇಲೆ ಪ್ರಳಯವು ಕಳೆದನಂತರ ಹುಟ್ಟಿದ ಚತುರ್ಮುಖಬ್ರಹ್ಮನಿಗೆ ಹಯಗ್ರೀವನೆಂಬ ಅಸುರನಂ ಸಂಹರಿಸಿ ತಂದು ವೇದಗಳನ್ನು ಕೊಟ್ಟು ಉಪದೇಶಿಸಿದನು. ಸ್ವಾಮಿ ಉಪದೇಶದಿಂದ ಹೊಂದಿದ ಜ್ಞಾನವಿಜ್ಞಾನಗಳುಳ್ಳ ಸತ್ಯವ್ರತನೇ, ಈ ಕಲ್ಪದಲ್ಲಿ ಸ್ವಾಮಿಯ ಅನುಗ್ರಹದಿಂದ ವೈವಸ್ವತಮನುವಾದನು. ಇದೀಗ ಮಾಯಾವಿಯಾದ ಮಹಾವಿಷ್ಣುವಿನ ಮತ್ಸ್ಯಾವತಾರ ವಿಚಿತ್ರಚೇಷ್ಟಾಕಥನವು.

---

1 ಭಾರತ ಶಾಂ. ೩೩೯, ೬೪. ಅಲ್ಲಿ " ಪಾಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾತು ಭಗವಾನ್ಸ್ವಯಂ ।ಸರ್ವೇಷುಚ ನೃಪಶ್ರೇಷ್ಠ ಜ್ಞಾನೇಷ್ವೇತೇಷು ದೃಶ್ಯತೆ " ಎಂಬದಾಗಿರುತ್ತದೆ.

" ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚ ಕೃತಲಕ್ಷಣೈಃ । ಅರ್ಚನೀಯಶ್ಚ ಸೇವ್ಯಶ್ಚ ನಿತ್ಯಯುಕ್ತೈಃ ಸ್ವಕರ್ಮಸು । ಸಾತ್ವತಂ ವಿಧಿಮಾಸ್ಥಾಯ ಗೀತಸ್ಸಂಕರ್ಷಣೇನ ಯಃ । ದ್ವಾಪರಸ್ಯ ಯುಗ ಸ್ಯಾಂತೇ ಆದೌ ಕಲಿಯುಗಸ್ಯಚ " ಎಂಗಿರಪಡಿಯೇ ಅವಸರಂಗ ಳಿಲೆ ಆವಿಷ್ಕರಿತ್ತುಂ,

---

6. ಕೃತ್ಸ್ನಸ್ಯ - ಸಮಸ್ತವಾದ, ಪಂಚರಾತ್ರಸ್ಯ - ಪಾಂಚರಾತ್ರಶಾಸ್ತ್ರಕ್ಕೆ ನಾರಾಯಣಃ - ಶ್ರೀಮನ್ನಾರಾಯಣನು, ಸ್ವಯಂ - ತಾನೇ, ವಕ್ತಾ - ಹೇಳುವವನು, ಅಂದರೆ " ಪಾಂಚರಾತ್ರಶಾಸ್ತ್ರವೆಲ್ಲಾ ಸಾಕ್ಷಾನ್ನಾರಾಯಣನ ಸೊಕ್ತಿಯು " ಎಂಬದಾಗಿ ಹೇಳಿರುವ ಮೇರಿಗೆ ಹೀಗೆ ತಾನು ಪ್ರಥಮತಃ ಹೇಳಿದ ಭಗವಚ್ಛಾಸ್ತ್ರವನ್ನು " ಸ್ವಾಚಾರ್ಯರುಗಳಿಂದ ಶಂಖಚಕ್ರಾಂಕಿತವಾದ ಲಕ್ಷಣಗಳನ್ನು ಹೊಂದಿ ಸ್ವಾಮಿಗೆ ದಾಸಭೂತರೆಂಬುವದನ್ನು ತೋರಿಸುತ್ತಿರುವ ಮತ್ತು ತಮ್ಮ

---

1 ಭಾರತ ಭೀಷ್ಮ. ೬೬, ೪೯, ೬೦. ಅಲ್ಲಿ " ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚ ಕೃತಲಕ್ಷಣೈಃ | ಸೇವ್ಯತೇಭ್ಯರ್ಚತೇಚೈವ ನಿತ್ಯಯುಕ್ತೈಃ ಸ್ವಕರ್ಮಭಿಃ | ದ್ವಾಪರಸ್ಯಯುಗಸ್ಯಾಂತೇ ಆದೌ ಕಲಿಯುಗಸ್ಯಚ | ಸಾತ್ವತಂ ವಿಧಿಮಾಸ್ಥಾಯ ಗೀತಸ್ಸಂಕರ್ಷಣೇನವೈ " ಎಂಬದಾಗಿರುತ್ತದೆ. ಕೃತಲಕ್ಷಣೈಃ - ಶಂಖಚಕ್ರಾಂಕಿತರಾದ, ಸ್ವಕರ್ಮಸು - ತಮ್ಮ ತಮ್ಮ ವರ್ಣಾಶ್ರಮಧರ್ಮಗಳಲ್ಲಿ, ನಿತ್ಯಯುಕ್ತೈಃ - ಸದಾನಿರತರಾದ, ಬ್ರಾಹ್ಮಣೈಃಕ್ಷತ್ರಿಯೈರ್ವೈಶ್ಯೈಃಶೂದ್ರೈಶ್ಚ - ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಂದಲೂ ಕೂಡ, ಯಃ - ಯಾವಸರ್ವೇಶ್ವರನು, ಅರ್ಚನೀಯಶ್ಚ . ಪೂಜಿಸಲು ಯೋಗ್ಯನಾಗಿಯೂ, ಸೇವ್ಯಶ್ಚ - ಸೇವಿಸಲು ಯೋಗ್ಯನಾಗಿಯೂ, ದ್ವಾಪರಸ್ಯಯುಗಸ್ಯಾಂತೇ - ದ್ವಾಪರಯುಗಾಂತ್ಯದಲ್ಲೂ, ಆದೌ ಕಲಿಯುಗಸ್ಯಚ - ಕಲಿಯುಗದ ಆದಿಯಲ್ಲಿಯೂ, ಸಂಕರ್ಷಣೇನ - ಸಂಕರ್ಷಣನಿಂದ, ಸಾತ್ವತಂವಿಧಿಂ - ತಿರುನಾರಣೀಯದಲ್ಲಿ ಉಪರಿಚರೋಪಾಖ್ಯಾನದಲ್ಲಿ ಹೇಳಿರುವ ಸಾತ್ವತಶಾಸ್ತ್ರವನ್ನು, ಆಸ್ಥಾಯ - ಅಂಗೀಕರಿಸಿ, ಗೀತಃ - ಹೇಳಲ್ಪಟ್ಟನೋ.

" ಪೂರ್ವೋತ್ಪನ್ನೇಷು ಭೂತೇಷು ತೇಷುತೇಷು ಕಲೌ ಪ್ರಭುಃ ।
ಅನುಪ್ರವಿಶ್ಯಕುರುತೇ ಯುತ್ಪನ್ನಮಾಹತ ಮಚ್ಯುತಃ[1]" ।
ಎಂಗಿರಸಡಿಯೆ ಪರಾಂಕುಶ[2] ಪರಕಾಲಾದಿರೂಪತ್ತಾಲೇ ಅಭಿನವ
ಮಾಕ ಒರುದಶಾವತಾರಂ ಪಣ್ಣಿಮೇಘಂಗಳ್ ಸಮುದ್ರಜಲತ್ತೈ
ವಾಂಗಿ ಸರ್ವೋಪಜೀವ್ಯಮಾನ ತಣ್ಣೀರಾಕ ಉಮಿಳುಮಾಪ್ಪೋಲೆ
ವೇದಾರ್ಥಂಗಳಿಲ್ ವೇಂಡುಂ ಸಾರತಮಾಂಶತ್ತೈ ಸರ್ವರುಕ್ಕುಂ[3]
ಪುರಿಕ್ಕರಿಕ್ಕಲಾನ ಭಾಷೆಯಾಲೆ ಸಂಗ್ರಹಿತ್ತು ಕಾಟ್ಟಿಯುಂ,

ತಮ್ಮ ವರ್ಣಾಶ್ರಮಧರ್ಮಗಳಲ್ಲನುರುಕ್ತರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯಶೂದ್ರರುಗಳಿಂದಲೂ, ಕೃತಯುಗದಲ್ಲಿ ಸಂಕರ್ಷಣನಿಂದ ಸಾತ್ವತ ಅಂದರೆ ಪಾಂಚರಾತ್ರಪ್ರಕ್ರಿಯೆಯನ್ನು ಹೊಂದಿದ ಶಾಸ್ತ್ರವ್ಯಾವುದೋ ಅದನ್ನು ಅಂಗೀಕರಿಸಿ, ಆ ಶಾಸ್ತ್ರಪ್ರಕ್ರಿಯೆಯೇ ಏನಾದರೂ ವಿಚ್ಯುತಿಯಿಂದ ಎಲ್ಲಾದರೂ ಸ್ಖಲಿತ್ಯವನ್ನು ಹೊಂದೀತೋ ಎಂಬುದಾಗಿ ದ್ವಾಪರಯುಗದ ಕೊನೆಯಲ್ಲೂ, ಕಲಿಯುಗದ ಆದಿಯಲ್ಲೂ ಪುನಃ ಪ್ರಕಾಶಗೊಳಿಸಲ್ಪಟ್ಟಿತೋ ಅಂತಹ ಪಾಂಚರಾತ್ರಶಾಸ್ತ್ರಾನುಸಾರ ಸ್ವಾಮಿಯು ಪೂಜಿಸಲ್ಪಡಲೂ, ಸೇವಿಸಲ್ಪಡಲೂ ಅರ್ಹನು " ಎಂಬುದಾಗಿ ಹೇಳಿರುವ ಮೇರಿಗೆ ಅಂತಹ ಸಮಯಗಳಲ್ಲಿ ತಾನು ಮೊದಲು ಪಾಂಚರಾತ್ರಶಾಸ್ತ್ರದಲ್ಲಿ ಹೇಳಿದುದನ್ನೇ ಪುನಃ ತಾನೇ ಪ್ರಕಾಶಪಡಿಸಿದುದರಿಂದಲೂ ಸ್ವಾಮಿಯು ಪ್ರಥಮಾಚಾರ್ಯನೆಂಬ ತಾತ್ಪರ್ಯವು. (ಸ್ವಾಮಿಯು ಹೇಗೆ ಪ್ರಥಮಾಚಾರ್ಯನೆಂಬುವದಕ್ಕೆ ವಿಳನೇದಾದ ಇನ್ನೊಂದು ಕಾರಣವನ್ನು ಹೇಳುತ್ತಾರೆ.)

---

1 ವಿ. ತ. ೧೦೮, ೫೧೦.

2 ಪರಾಂಕುಶರ್ - ಶಠಗೋಪರೆನಿಸುವ ನಮ್ಮಾಳ್ವಾರವರು, ಪರಕಾಲರು - ತಿರುಮಂಗೈ ಆಳ್ವಾರು ಶತ್ರುಗಳಿಗೆ ಯಮಸ್ವರೂಪರು.

3 ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ವೇದದಲ್ಲಿ ಅಧಿಕಾರವು. ಸ್ತ್ರೀಶೂದ್ರಾದಿಗಳಿಗಿಲ್ಲವು.

ಇಪ್ಪಡಿತ್ತಾ ಪ್ರವರ್ತಿಪ್ಪಿತ್ತ ಸತ್ಪಥಮ್ತುಕ್ಕು ಪ್ರಕಟರಾಯುಂ ಪ್ರಚ್ಛನ್ನರಾಯುಂ ವಿರುಂದುಳ್ಳ[1] ಪಾಷಂಡಿಕಳಾಲುಂ ಪರಿಹೋಧಂ ವಾರಾವ್ಮೈಕ್ಕಾಕ[2] " ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನುಂ । ಮಗ್ನಾನುದ್ಧರತೇ ಲೋಕಾನ್ಮಾರು

7. ಕಲೌ - ಕಲಿಯುಗದಲ್ಲಿ, ಪೂರೊ ವೋತ್ಪನ್ನೇಷುಭೂತೇಷು - ಮೊದಲು ಹುಟ್ಟಿದ ಚೇತನರುಗಳಲ್ಲಿ, ಪ್ರಭುಃ, ಅಚ್ಯುತಃ - ಸ್ವಾಮಿಯಾದ ನಿತ್ಯನಾದ ಸರ್ವೇಶ್ವರನು, ತೇಷುತೇಷು - ಅವರವರುಗಳಲ್ಲಿ ಅನುಪ್ರವಿಶ್ಯ - ಅನುಪ್ರವೇಶವಾಡಿದವನಾಗಿ, ಯತ್ಸಮಾಹಿತಂ - ಯಾವುದು ಇಷ್ಟವೋ ಅದನ್ನು, ಕುರುತೇ - ಮಾಡುತ್ತಾನೆ. ಅಂದರೆ ಸ್ವಾಮಿ ಅಚ್ಯುತನು ಮೊದಲು ಕರ್ಮಬದ್ಧರಾಗಿ ಹುಟ್ಟಿದ ಚೇತನರ ಮೂಲಕ ಅವರನ್ನನುಪ್ರವೇಶವಾಡಿದವನಾಗಿ ಯಾವಯಾವ ಧರ್ಮ ಸಂಸ್ಥಾಪನೆಗಳಾಗಬೇಕೊ ಅವುಗಳನ್ನೆಲ್ಲಾ ಆ ಚೇತನರಮೂಲಕವಾಗಿ ನಡಿಸುತ್ತಾನೆ ಎಂದು ಹೇಳಿರುವ ಮೇರಿಗೆ ಸರ್ವೇಶ್ವರನು, ಶಬರಗೋಪ, ತಿರುಮುಂಗೈಯಾಳ್ವಾರ್ ಮೊದಲಾದ ಹತ್ತು ಆಳ್ವಾರುಗಳ ರೂಪದಲ್ಲಿ ಹೊಸಬಾದ ಬಂದು ಅನುಪ್ರವೇಶರೂಪವಾದ ದಶಾವತಾರವನ್ನು ಮಾಡಿ, ಮೇಘಗಳು ಹೇಗೆ ಸಮುದ್ರದ ನೀರನ್ನು ಹೀರಿ ಸರ್ವರಿಗೂ ಪ್ರಾಣಧಾರಣೆಗೆ ಅನುಕೂಲವಾಗುವಹಾಗೆ ಒಳ್ಳೇ ತಣ್ಣಗಿರುವ ನೀರ

1 ಪಾಷಂಡಿಗಳೆಂದರೆ—ಅಸಚ್ಛಾಸ್ತ್ರಗಳನ್ನು ಹೇಳುವವರು ವೇದಬಾಹ್ಯರು, ಬೌದ್ಧ, ಕಾಪಾಲಿಕ, ಕ್ಷಪಣಕ, ಚಾರ್ವಾಕಾದಿಗಳು. " ಕಿಂ ದೇವೈಃ ಕಿದ್ವಿಜೈರ್ವೇದೈಃ ಕಿಂ ಶಾಜೇನಾಂಬು ಜನ್ಮನಾ । ಇತ್ಯೇವಂ ವಿಪ್ರವಕ್ಷ್ಯಂತಿ ಪಾಷಂಡೋಪಹತಾಜನಾಃ ॥" ವಿ. ಪು. ೬, ೧, ೫೧. ದೇವತೆಗಳಿಂದಲೇನು, ಬ್ರಾಹ್ಮಣರಿಂದೇನು, ವೇದಗಳಿಂದೇನು, ಶುದ್ಧೋದಕದಲ್ಲಿ ಅವಗಾಹನ ಸ್ನಾನದಿಂದೇನು, ಹೀಗೆಲ್ಲಾ ಪಾಷಂಡಿಗಳು ಕುವಾದಗಳನ್ನು ಮಾಡುವವರೆಂಬದಾಗಿ ಹೇಳಿದೆ.

2 ಜಯಾಖ್ಯಸಂಹಿತೆ.

ಹ್ಯಾಚಾಸ್ತ್ರಪಾಣಿನಾ" ಎನ್ನುಂ, "ಪೀತಕವಾಡೈ ಪ್ಪಿರಾನಾರ್ ಪಿರವುಗುರುವಾಕಿ ವಂದು[1]" ಎನ್ನುಂ ಶೊಲ್ಲುಕಿರಪಡಿಯೇ,

---

ನ್ನು ಭೂಮಿಯದೇಲೆ ಸುರಿಯುವುವೋ ಹಾಗೆ, ವೇದಾರ್ಥಗಳೆಲ್ಲಿ ತುಂಬಾ ಸಾರತಮವಾದ ಭಾಗವನ್ನು ಎಲ್ಲರೂ ಅಧಿಕರಿಸಿ ಸಂಗ್ರಹಿಸುವದಕ್ಕಾಗುವಹಾಗೆ, ಎಲ್ಲರಿಗೂ ಅಂದರೆ ಸ್ತ್ರೀಶೂದ್ರಾದಿಗಳಿಗೂ ತಿಳಿಯುವ ತಮಿಳ್‌ಭಾಷೆಯಲ್ಲಿ ದ್ರಾವಿಡಪ್ರಬಂಧರೂಪದಲ್ಲಿ ವೇದಾರ್ಥಗಳನ್ನೆಲ್ಲಾ ಸಂಗ್ರಹಿಸಿ ತೋರುವಹಾಗೆ ಅನುಗ್ರಹಿಸಿರುತ್ತಾನೆ.

೪. ಹೀಗೆ ತಾನೇ ನಿಂತು ಪ್ರಚುರಗೊಳಿಸಿದ ಸನ್ಮಾರ್ಗವಾದ ಸಚ್ಛಾಸ್ತ್ರಕ್ಕೆ ಬಹಿರಂಗವಾಗಿಯೂ, ಗೋಪ್ಯವಾಗಿಯೂ ವಿರೋಧಿಗಳಾಗಿ ಏರ್ಪಟ್ಟ ಪಾಷಂಡಿಗಳಿಂದ ತೊಂದರೆ ಬಾರದೆ ಇರುವದಕ್ಕಾಗಿ "ದೇವಃ - ಲೀಲಾಸಕ್ತನಾದ, ಸಾಕ್ಷಾನ್ನಾರಾಯಣಃ - ಸಾಕ್ಷಾತ್ ಶ್ರೀಮನ್ನಾರಾಯಣನು, ಮರ್ತ್ಯಮಯೀಂ ತನುಂ - ಮಾನುಷಶರೀರವನ್ನು ಕೃತಾ ವ - ಮಾಡಿ, ಕಾರುಣ್ಯಾತ್ - ತುಂಬಾ ಕರುಣೆಯಿಂದ, ಮತಪ್ಸ್ಥ - ಸಂಸಾರಸಾಗರದಲ್ಲಿ ಮುಳುಗಿಹೋದ, ಲೋಕಾ - ಜನರನ್ನು: ಶಾಸ್ತ್ರಪಾಣಿನಾ - ಶಾಸ್ತ್ರವೆಂಬುವ ಕೈಯನ್ನು ಕೊಟ್ಟು, ಉದ್ಧರತೆ - ಮೇಲಕ್ಕೆ ಎತ್ತಿ ಸಂರಕ್ಷಿಸುತ್ತಾನೆ" ಎಂಬದಾಗಿಯೂ ಮತ್ತು ಪೀತಕವಾಡೈ - ಪೀತಾಂಬರಧಾರಿಯಾದ, ಪಿರಾನಾರ್ - ಪರಮೋಪಕಾರನಾಗಿರುವ ಶ್ರೀಮನ್ನಾರಾಯಣನು ಪರಮಗುರುವಾಗಿ, ವಂದು - ಸರ್ವರಿಗೂ ಪರಮಾಚಾರ್ಯನಾಗಿ ಅವತರಿಸಿ, ಎಂಬದಾಗಿಯೂ ಹೇಳಿರುವ ಹಾಗೆ, ಅಗಸ್ತ್ಯಋಷಿಯು ವಾಸವಮಾಡುತ್ತಿದ್ದ ದಕ್ಷಿಣದೇಶದಲ್ಲಿ ಅನೇಕ ಆಚಾರ್ಯರುಗಳಾದ ಶತಕೋಪ, ನಾಥ ಯಾಮುನ ಶ್ರೀಯತಿವರ್ಯರೆಂಬುವ ವ್ಯಾಜದಿಂದ ಅವತರಿಸಿ ಆ ಕೃಪಾಸಾಗರನು ಕೃಪೆಗೈದಿರುತ್ತಾನೆ. ಇದನ್ನೇ ಮನದಲ್ಲಿಟ್ಟು "ಕಲಿಯುಗದಲ್ಲಿ ಎಲ್ಲಿಯೋ-ಅಲ್ಪಸ್ವಲ್ಪ ಜನರು ಶ್ರೀಮನ್ನಾರಾಯಣನನ್ನೇ ಶ್ರೇಷ್ಠವಾದ ಅಯ

---

1 ನಿ. ತಿ. ೫೫, ೨, ೪.

ಅಗಸ್ತ್ಯಸೇವಿತವಾನ ದೇಶತ್ತಿಲೆ ಅನೇಕ ದೇಶಿಕಾಪದೇಶ[1] ತ್ತಾತಲೆಯುವತರಿತ್ತರುಳಿನಾರ್. ಇತ್ತೈಕ್ಕಣಿತ್ತು[2]

ನಂ - ಎಂದರೆ ಪ್ರಾಪ್ಯಪ್ರಾಪಕ ಆಧಾರವೆಂದು ತಿಳಿದವರಾಗಿರುತ್ತಾರೆ. ಅಂದರೆ ಮೂಲವುಂತ್ರೋಪಾಸಕರಾಗಿರುತ್ತಾರೆ. ಇಂತಹ ಪುಣ್ಯ ಪುರಾಣಪುರುಷರು ದ್ರಾವಿಡದೇಶದಲ್ಲಿ (ದಕ್ಷಿಣದೇಶದಲ್ಲಿ) ಹೆಚ್ಚಾಗಿರುವರು. (ಅದು ಎಲ್ಲಿ ಎಂದರೆ ವ್ಯಕ್ತಪಡಿಸಿ ಹೇಳುತ್ತಾರೆ.) ಎಲ್ಲಿ ತಾಮ್ರಪರ್ಣೀ, ಕಾವೇರೀ ಮೊದಲಾದ ನದಿಗಳು ಸುತ್ತಿರುತ್ತವೆಯೋ ಅಲ್ಲಿರುವ ಜನಗಳು ಆ ನೀರಿನಲ್ಲಿ ಅವಗಾಹನೆಮಾಡಿ ಆ ಪುಣ್ಯತೀರ್ಥಗಳ ನಿರ್ಮಲೋದಕವನ್ನು ಪಾನಮಾಡುವದರಿಂದ ಸಾಧಾರಣವಾಗಿ ಪರಿಶುದ್ಧಾಂತಃಕರಣರಾಗಿ ವಾಸುದೇವನಲ್ಲಿ ತುಂಬಾ ಭಕ್ತಿಯುಳ್ಳವರಾಗುತ್ತಾರೆ." (ಇದು ವಸುದೇವನಿಗೆ ನಾರದರಿಂದ ಉಪದೇಶಿಸಲ್ಪಟ್ಟ ವಿದೇಹರಾಜ ಋಷಭಕುಮಾರ ಸಂವಾದದಲ್ಲಿ ಬರುತ್ತದೆ. ಕಲಿಯುಗದಲ್ಲಿ ಹೀಗೆಯೇ ನಡಿಯುತ್ತೆಂಬದಾಗಿ ಋಷಿಪ್ರೋಕ್ತವಾಗಿರುತ್ತದೆ. ಇವೆಲ್ಲಾ ನಮಗೆ ಯಥಾರ್ಥವಾಗಿ ಈಗ ತೋರುವದರಿಂದ ಅವರುಗಳಿಂದ ಹೇಳಲ್ಪಟ್ಟಿರುವದು ಸಚ್ಛಾಸ್ತ್ರವೆಂದು ನಂಬಲು ತುಂಬಾ ಸಹಕಾರಿಯಾಗಿರುತ್ತದೆ.) ಎಂದು ಶುಕಮಹರ್ಷಿಗಳು ಶ್ರೀಮದ್ಭಾಗವತದಲ್ಲಿ ಹೇಳಿರುತ್ತಾರೆ. (ಇದು ಶ್ರೀವಮನ್ನಾಥಮುನಿ, ಯಾಮುನಮುನಿ, ಶ್ರೀರಾಮಾನುಜಮುನಿ ಇವರುಗಳು ಮಾಡಿದ ಮಹೋಪಕಾರಸ್ಮರಣೆಯಿಂದ ಹೇಳಿದ ವಾಕ್ಯವಾಗಿರುತ್ತದೆ.) ("ತಮಿಮಂ ಸರ್ವಸಂಪನ್ನಂ" ಎಂಬುವದನ್ನು ಮೊದಲುಮಾಡಿಕೊಂಡು, " ಮಹರ್ಷಿ ಅರುಳಕ್ಕೆಯ್ದಾರ್ " ಎನ್ನುವ ವರಿವಿಗೂ ಸ್ವಾಮಿಯು ಹೇಗೆ ಸರ್ವರಿಗೂ ಪರಮಾಚಾರ್ಯನೆಂಬುವದನ್ನು ಎಂಟು ಕಾರಣಗಳಿಂದ ಉಪಪಾದಿಸಿದರು. ಅವುಗಳು ಸಂಕ್ಷೇಪವಾಗಿ ಯಾವುವಂದರೆ—

1 ಉಪದೇಶವೆಂದರೆ ವ್ಯಾಖ್ಯಾ, ನೆಪ.

2 ಕಣಿತಿತ್ತು - ಅಭಿಪ್ರಾಯವಿಟ್ಟುಗೊಂಡು.

" ಕಲೌಖಲುಭವಿಷ್ಯಂತಿನಾರಾಯಣ ಪರಾಯಣಾಃ ।
ಕ್ವಚಿತ್ಕ್ವಚಿನ್ಮಹಾಭಾಗಾ ದ್ರವಿಡೇಷು ಚ ಭೂರಿಶಃ ।
ತಾಮ್ರಪರ್ಣೀನದೀಯತ್ರ ಕೃತಮಾಲಾಪಯಸ್ವಿನೀ ।
ಕಾವೇರೀಚಮಹಾಭಾಗಾ ಪ್ರತೀಚೀಚ ಮಹಾನದೀ[1] "॥
ಎನ್ನು ಮಹರ್ಷಿ[2] ಅರುಳಚ್ಚಿಯ್ದರ್ಶ.

---

1. ಸರ್ವೇಶ್ವರನು ತನ್ನ ಮಗನಾದ ಚತುರ್ಮುಖಬ್ರಹ್ಮನಿಗೆ ಮೊದಲು ವೇದಗಳ ರೂಪದಲ್ಲಿ ಶಾಸ್ತ್ರಾರ್ಥಗಳನ್ನುಪದೇಶಿಸಿ, ಅವುಗಳನ್ನು ಕೊಟ್ಟು, ರಾಕ್ಷಸರು ಅವುಗಳನ್ನಪಹರಿಸಲು, ಪುನಃ ಅವುಗಳನ್ನು ತಂದುಕೊಟ್ಟನು.

2. ಆ ಚತುರ್ಮುಖನಿಂದ ಸನತ್ಕುಮಾರನಿಗೆ ಹಾಗೆಯೇ ಗುರು ಶಿಷ್ಯಕ್ರಮದಿಂದ ಉಪದೇಶವು ಪರಂಪರೆಯಾಗಿ ಬರುವಹಾಗೆ ಮಾಡಿ, ನಾರದ, ಪರಾಶರ, ಶುಕಮಹರ್ಷಿಗಳ ಮೂಲಕ ಈ ಬ್ರಹ್ಮವಿದ್ಯೆಯು ಶಿಥಿಲವಾಗದ ಹಾಗೆ ಕಾಪಾಡಿದನು.

3. ವ್ಯಾಸಾದಿಗಳನ್ನು ಅನುಪ್ರವೇಶಮಾಡಿ ಭಾರತ, ಬ್ರಹ್ಮಸೂತ್ರ ಮೊದಲಾದವುಗಳನ್ನು ರಚಿಸುವಹಾಗೆ ಮಾಡಿದನು. ಮಹರ್ಷಿಗಳು ಸ್ಮೃತಿ, ಇತಿಹಾಸ, ಪುರಾಣಗಳನ್ನು ರಚಿಸಿ, ಶಾಸ್ತ್ರಪ್ರಚಾರ ನಡೆಯುವಹಾಗೆ ಮಾಡಿದನು.

4. ತಾನೇ ಹಂಸ, ಮತ್ಸ್ಯ, ಹಯಗ್ರೀವ, ಗೀತಾಚಾರ್ಯ ಮೊದಲಾದ ಅವತಾರಗಳನ್ನೆತ್ತಿ ತತ್ತ್ವಹಿತಪುರುಷಾರ್ಥಗಳನ್ನು ಬೋಧಿಸಿದನು.

---

1 ಶ್ರೀಮದ್ಭಾಗವತ ೧೧, ೫, ೩೮-೪೦. ಅಲ್ಲಿ " ಕಾವೇರೀಚ ಮಹಾಪುಣ್ಯಾ ಪ್ರತೀಚೀಸುರವರ್ತ್ಮಗಾ " ಎಂಬದಾಗಿರುತ್ತದೆ. " ಯೇ ಪಿಬಂತಿ " ಎಂದು ಇರುವದರಿಂದ ನೀರನ್ನು ಕುಡಿಯುವದೂ ಅಲ್ಲದೆ ಆ ತೀರ್ಥದಲ್ಲಿ ಅವಗಾಹನವೂ ಹೇಳಲ್ಪಟ್ಟಿತು.

2 ಶುಕಮಹರ್ಷಿಯು.

ಇವ್ವಾಚಾರ್ಯರ್ಕಳಿಲ್ ಈಶ್ವರವುನಿಕಳ್‌ಪಿಳ್ಳೈ, ನಾಥವುನಿಕಳ್.

6. ಇಂತಹ ಉಪದೇಶವು ಭಾಗವತಾಂಗೀಕಾರವಿಲ್ಲದಿದ್ದರೆ ಸರಿಯಲ್ಲವೆಂದು ತಿಳಿದು ಮಹಾಭಾಗವತಾಗ್ರೇಸರರಾದ ಭೀಷ್ಮಾದಿಗಳು ಅದನ್ನೇ ಸಮರ್ಥನವಾಗುವಹಾಗೆ ಮಾಡಿದನು.

6. ಭಗವಚ್ಛಾಸ್ತ್ರವಾದ ಪಾಂಚರಾತ್ರಾಗಮಮೂಲಕವಾಗಿ ಶಾಸ್ತ್ರಾರ್ಥಗಳನ್ನು ಪ್ರಚುರಗೊಳಿಸಿದನು.

7. ಹತ್ತು ಆಳ್ವಾರುಗಳಲ್ಲಿ ಅನುಪ್ರವೇಶವಾಡಿ ಬಂದು ನವೀನ ದಶಾವತಾರವಾಡಿಯೋ ಎಂಬುವಹಾಗೆ ಎಲ್ಲರಿಗೂ ವೇದಾರ್ಥಗಳು ಅನುಕೂಲಿಸುವಹಾಗೆ ತಮಿಳ್‌ಭಾಷೆಯಲ್ಲಿ ದ್ರಾವಿಡಪ್ರಬಂಧರೂಪದಲ್ಲಿ ರಚಿಸುವಹಾಗೆ ಮಾಡಿದನು.

8. ವೇದಬಾಹ್ಯರಾದ ಪಾಷಂಡಿಗಳ ಮೂಲಕ ಈ ಅಮೋಘ ಶಾಸ್ತ್ರಕ್ಕೆ ತೊಂದರೆಬಾರದಹಾಗೆ ಆಚಾರ್ಯರೂಪದಲ್ಲಿ ನಾಥಮುನಿ, ಆಳವಂದಾರ್, ಭಾಷ್ಯಕಾರರು ಮೊದಲಾದವರಾಗಿ ಅವತರಿಸಿ ಅಧ್ಯಾತ್ಮವಿದ್ಯೆಯನ್ನು ಸ್ಥಿರವಾಗಿ ಸ್ಥಾಪಿಸುವ ಹಾಗೆ ಕರುಣಿಸಿದನು. (ಶ್ರೀನಿಗಮಾಂತದೇಶಿಕರೂ ಕೂಡ ಈ ಗೋಷ್ಠಿಯಲ್ಲಿ ಸೇರಿದವರಾಗಿ ನಾವು ಭಾವಿಸತಕ್ಕದ್ದು.)

ಈ ಕಾರಣಗಳಿಂದ ಸ್ವಾಮಿಯು ಎಲ್ಲರಿಗೂ ಆದಿಗುರುವು.

ಮುಂದಕ್ಕೆ "ಆಚಾರ್ಯಾಣಾಮಸಾವಸಾವಿತ್ಯಾಭಗವತ್ತಃ" ಎಂದು ಹೇಳಿರುವುದೇರಿಗೆ ಆಚಾರ್ಯರುಗಳಲ್ಲಿ ಇವರಿವರು ಮುಖ್ಯವಾದವರೆಂದು ಹೇಳುವದು ಆವಶ್ಯಕವೆಂದು ಹಿಂದೆ ಸ್ಥಾಪಿಸಿದುದರಿಂದ ಅಂತಹ ಆಚಾರ್ಯರುಗಳು ಯಾರೆಂಬುವದನ್ನು ತಿಳಿಸುತ್ತಾರೆ. ಶ್ರೀಮದ್ವಿಶಿಷ್ಟಾದ್ವೈತಸಿದ್ಧಾಂತವು ಅನಾದಿಯಾದುದಾದರೂ ಅದೇ ಯಥಾರ್ಥವಾದ ಸಿದ್ಧಾಂತವೆಂಬುವದಾಗಿ ಆದಿಯಲ್ಲಿ ಸ್ಥಾಪಿಸಿದವರು ನಾಥಮುನಿಗಳು. ಈ ಅಭಿಪ್ರಾಯವನ್ನು ಶ್ರೀನಿಗಮಾಂತದೇಶಿಕರವರು ತಾವು ಅನುಗ್ರಹಿಸಿದ ಸಂಕಲ್ಪಸೂರ್ಯೋದಯದಲ್ಲಿ ಸೂಚಿಸಿರುತ್ತಾರೆ.

ಇವರ್ ನ್ಯಾಯತತ್ವವೆಂಬಿರ ಶಾಸ್ತ್ರಮುಂ ಯೋಗರಹಸ್ಯಮು ಮರುಳಿಚ್ಚಿಯ್‌ದಾರ್. ಇವರುಕ್ಕು ಶ್ರೀಮಧುರಕವಿಗಳ್ ಮುದಲಾಕಲುಂಡಾನ ಸಂಪ್ರದಾಯಪರಂಪರೈಯಾಲುಂ, ತಿರುವಾಯ್‌ಮೊಳಿಮುಖತ್ತಾಲುಂ, ಯೋಗದಶೈಯಿಲೆ ಸಾಕ್ಷಾತ್ಕೃತರಾಯುಂ ನಮ್ಮಾಳ್ವಾರಾಚಾರ್ಯರಾನಾಂ. ನಾಥಮುನಿಗಳ್[1] ಪಿಳ್ಳೈ

"ನಾಥೋಪಜ್ಞಂ ಪ್ರವೃತ್ತಂ ಬಹುಭಿರುಪಚಿತಂ ಯಾಮುನೇಯ ಪ್ರಬಂಧೈಃ!
ತ್ರಾತಂ ಸಮ್ಯಗ್ಯತೀಂದ್ರೈರಿದ ಮಖಿಲತಮಃ ಕರ್ಷನಂ ದರ್ಶನಂ ನಃ ॥

(ಸಂಕಲ್ಪಸೂರ್ಯೋದಯ, ದ್ವಿತೀಯಾಂಕಃ ೪೯.)

"ನಮ್ಮ ಸಿದ್ಧಾಂತವಾದರೋ ಪ್ರಥಮದಲ್ಲಿ ನಾಥಮುನಿಗಳ ಆದ್ಯವಾದ ಜ್ಞಾನದಿಂದುಂಟಾದುದು, ಯಾಮುನಾಚಾರ್ಯಗ್ರಂಥಗಳಿಂದ ತುಂಬಾ ವೃದ್ಧಿಯನ್ನು ಹೊಂದಿದುದು, ಶ್ರೀಭಾಷ್ಯಕಾರರಿಂದ ಚನ್ನಾಗಿ ರಕ್ಷಿಸಲ್ಪಟ್ಟದುದು, ಈ ನಮ್ಮಗಳ ಸಿದ್ಧಾಂತವು ಸಮಸ್ತವಾದ ಇತರ ಸಿದ್ಧಾಂತಗಳಲ್ಲಿನ ಅಜ್ಞಾನಾಂಧಕಾರವನ್ನು ಹೋಗಲಾಡಿಸುವಂಥಾದ್ದೆಂದು ಹೇಳಿರುತ್ತಾರೆ. ಆದುದರಿಂದ ಗುರುಪರಂಪರೆಯಲ್ಲಿ ಮೊದಲು ನಾಥಮುನಿಗಳ ಹೆಸರನ್ನು ಹೇಳಿ ಅನಂತರ ಅವರಿಗೆ ನಮ್ಮಾಳ್ವಾರ್ರವರು ಗುರು ಎಂದು ಹೇಳುತ್ತಾರೆ.

ಈ ಗುರುಪರಂಪರೆಯಲ್ಲಿ ಮುಖ್ಯರಾದವರು ಶ್ರೀಮನ್ನಾಥಮುನಿಗಳು. ಇವರು ಈಶ್ವರಮುನಿಗಳ ಮಕ್ಕಳು. ಈ ನಾಥಮುನಿಗಳು ನ್ಯಾಯತತ್ವವೆಂಬ ಶಾಸ್ತ್ರವನ್ನೂ ಯೋಗರಹಸ್ಯವನ್ನೂ ರಚಿಸಿರುತ್ತಾರೆ. (ಇಂತಹ ಅಮೋಘಗ್ರಂಥಗಳನ್ನು ರಚಿಸಿದ್ದರಿಂದ ಶ್ರೀನಿಗಮಾಂತದೇಶಿಕರವರಿಗೆ ಅವರಲ್ಲಿ ತುಂಬಾ ಗೌರವವು. ಈ ನಾಥಮುನಿ

---

1 ನಾಥಮುನಿಗಳ ಚರಿತ್ರೆಯು ಮುಂದೆ ಸಂಗ್ರಹವಾಗಿ ಸೂಚಿಸಿರುತ್ತದೆ.

ಈಶ್ವರಭಟ್ಟಾಳವಾರ್. ಈಶ್ವರಭಟ್ಟಾಳವಾರಪಿಳ್ಳೈ ಆಳವಂದಾರ್[1]; ಇವರರುಳಚ್ಚೆಯ್ದ ಪ್ರಬಂಧಂಗಳ್—(1) ಆಗಮಪ್ರಾಮಾಣ್ಯಮುಂ, (2) ಪುರುಷನಿರ್ಣಯಮುಂ, (3) ಆತ್ಮಸಿದ್ಧಿ, (4) ಈಶ್ವರಸಿದ್ಧಿ, (5) ಸಂವಿತ್ಸಿದ್ಧಿ, ಎಂಗಿರಸಿದ್ಧಿತ್ರಯಮುಂ, (6) ಶ್ರೀಗೀತಾರ್ಥಸಂಗ್ರಹಮುಂ, (7) ಸ್ತೋತ್ರಮುಂ, (8) ಚತುಶ್ಲೋ

ಗಳ ಅವತಾರಸ್ಥಳವಾದ ವೀರನಾರಾಯಣಪುರಕ್ಕೆ ಹೋಗಿ ಅಲ್ಲಿ ಪ್ರತಿಷ್ಠಿತರಾಗಿರುವ ನಾಥಮುನಿಗಳ ಸೇವೆಮಾಡಿ,

ನಾಥೇನ ಮುನಿನಾತೇನ ಭವೇಯಂ ನಾಥವಾನಹಂ ।
ಯಸ್ಯೈನೈಗಮಿಕಂ ತತ್ತ್ವಂ ಹಸ್ತಾಮಲಕತಾಂಗತಂ ॥

ಎಂಬ ಶ್ಲೋಕದಿಂದ ಕೊಂಡಾಡಿರುತ್ತಾರೆ. " ಯಾರಿಗೆ ವೇದಗಳಲ್ಲೆಲ್ಲಾ ತೋರುವ ಈವಿಶಿಷ್ಟಾದ್ವೈತತತ್ತ್ವವು ಕರತಲಾಮಲಕಭಾವವನ್ನು ಹೊಂದಿತೋ ಅಂದರೆ ಕೈಯಲ್ಲಿರುವ ನೆಲ್ಲಿಕಾಯಿಯು ಎಷ್ಟು ವಿಶದವಾಗಿ ತೋರುವದೋ ಅಷ್ಟು ಈ ವಿಶಿಷ್ಟಾದ್ವೈತವು ವಿಶದೀಕರಿಸಲ್ಪಟ್ಟಿತೋ ಅಂತಹ ನಾಥಮುನಿಗಳಿಂದ ನಾನು ಸ್ವಾಮಿಯನ್ನು ಹೊಂದಿದವನಾದೆನು " ಎಂಬುದು ಈ ಶ್ಲೋಕಾರ್ಥವು. (ಈ ನಾಥಮುನಿಗಳಿಗೆ ಆಚಾರ್ಯರು ನಮ್ಮಾಳ್ವಾರೆಂಬುದಾಗಿ ಹೇಳುತ್ತಾರೆ. ಆದರೆ ನಮ್ಮಾಳ್ವಾರು ಅವತರಿಸಿದ್ದು ಕಲಿಯುಗದ ೪೫೫೩ನೇ ವರುಷ, ನಾಥಮುನಿಗಳು ಅವತರಿಸಿದ್ದು ಕಲಿ ೪೬೮೫ನೇದಾದ ಶೋಭಕೃದ್ವರ್ಷದ ಆನಿ ಮಾಸ ಅನೂರಾಧಾನಕ್ಷತ್ರದಲ್ಲಿ ಹುಟ್ಟಿದವರು, ಹೀಗೆ ೪೬೮೫ ವರುಷ ವ್ಯತ್ಯಾಸವಿರುವ ನಮ್ಮಾಳ್ವಾರವರು ನಾಥಮುನಿಗಳಿಗೆ ಹೇಗೆ ಆಚಾರ್ಯರಾದಾರು ಎಂಬ ಸಂದೇಹನಿವೃತ್ತಿಗಾಗಿ ಅಪ್ಪಣೆಕೊಡಿಸುತ್ತಾರೆ. ಏನೆಂದರೆ, ಯೋಗದೆಶೆಯಲ್ಲಿ ಸಾಕ್ಷಾತ್ಕೃತರಾಗಿ ಆಚಾರ್ಯರೆಂದು ಹೇಳುತ್ತಾರೆ.) ಶ್ರೀಮಧುರಕವಿಯಾಳ್ವಾರವರು ನಮ್ಮಾಳ್ವಾರನ್ನು ಆಚಾರ್ಯರಾಗಿ ಭಾವಿಸಿ ಆಚಾರ್ಯನಿಷ್ಠೆಯನ್ನು ಪ್ರಚುರಗೊಳಿಸಿ

---

1 ಇವರ ಸಂಗ್ರಹಚರಿತ್ರೆಯು ಮುಂದೆ ಕಾಣಿಸಿರುತ್ತದೆ.

ಕಿಯುವುಂ, ಅಕ ಎಟ್ಟು. ಆಳವಂದಾರ್ ಪಿಳ್ಳೈ ಶೊಟ್ಟನಂಬಿ, ಶೊಟ್ಟನಂಬಿಪಿಳ್ಳೈಯೆನ್ನಾಚ್ಚ್ಚಾರ್ಕ್ಕ. ಎನ್ನಾಚ್ಚ್ಚಾರ್ಕ್ಕಪಿಳ್ಳೈಗಳ್ ನಾಲ್ವರ್--ಇವರ್ಕಳಿಲ್ ಓರುವರ್ ಪಿಳ್ಳೈಯಪ್ಪರ್. ಇವರುಡೈಯ ಪಿಳ್ಳೈ ತೋಳಪ್ಪರ್. ತೋಳಪ್ಪರುಕ್ಕು ಪೆಣ್ಪಿಳ್ಳೈಗಳಿರವರ್.

ನಾಥಮುನಿಗಳ್ ಶ್ರೀಪಾದತ್ತೈ ಆಶ್ರಯಿತ್ತವುದಲಿಗಳ್—(1) ಉಯ್ಯಕೊಂಡಾರ್, (2) ಕುರುಕೈಕ್ಕಾವಲಪ್ಪನ್, (3) ನಂಬಿಕರುಣಾಕರದಾಸರ್, (4) ಏರುತಿರುವುಡೈಯಾರ್, (5) ತಿರುಕ್ಕಣ್ಣಮಂಗೈಯಾಂಡಾನ್, (6) ವಾನಮಾದೇವಿಯಾಂಡಾನ್,

---

ಅದು ಸಂಪ್ರದಾಯವಾಗಿ ಬಂದುದರಿಂದಲೂ ನಮ್ಮಾಳ್ವಾರು ಅನುಗ್ರಹಿಸಿದ ತಿರುವಾಯಿಮೊಳಿಯ ಹತ್ತು ಪಾಶುರಗಳನ್ನು ಮಾತ್ರ ಕೇಳಿದುದರಿಂದ ಅದರಲ್ಲಿ ವಿಶೇಷ ಅಭಿರುಚಿಯುಂಟಾದುದರಿಂದಲೂ ಯೋಗದೆಶೆಯಲ್ಲಿ ನಮ್ಮಾಳ್ವಾರನ್ನು ಸಾಕ್ಷಾತ್ಕರಿಸಿ ಅವರಿಂದ ತಿರುಮಂತ್ರ ಅದರ ಅರ್ಥ ವ್ಯಾಸಸೂತ್ರ, ತಿರುವಾಯ್‌ಮೊಳಿ ಮೊದಲಾದವುಗಳ ಉಪದೇಶವನ್ನು ಪಡೆದವಾದುದರಿಂದ ನಮ್ಮಾಳ್ವಾರ್ರವರು ಶ್ರೀನಾಥಮುನಿಗಳಿಗೆ ಆಚಾರ್ಯರೆಂದು ಭಾವಿಸತಕ್ಕದ್ದು. ಶ್ರೀಮನ್ನಾಥಮುನಿಗಳ ಮಕ್ಕಳು ಈಶ್ವರಭಟ್ಟಾಳ್ವಾರ್ ಎಂಬುವರು ಈ ಈಶ್ವರಭಟ್ಟಾಳ್ವಾನರ ಮಕ್ಕಳು. ಆಳವಂದಾರ್ (ಇವರಿಗೆ ಯಾಮುನಾಚಾರ್ಯರು ಅಥವಾ ಯಾಮುನೇಯರುಎಂಬುದಾಗಿಯೂ ಹೆಸರುಂಟು.) ಇವರು ದಯಪಾಲಿಸಿದ ಗ್ರಂಥಗಳೆಂಟು—(1) ಆಗಮಪ್ರಾಮಾಣ್ಯ, (2) ಪುರುಷನಿರ್ಣಯಂ, (3) ಆತ್ಮಸಿದ್ಧಿ, (4) ಈಶ್ವರಸಿದ್ಧಿ, (5) ಸಂವಿತ್ಸಿದ್ಧಿ ಎಂಬ ಸಿದ್ಧಿತ್ರಯವೂ, (6) ಗೀತಾರ್ಥಸಂಗ್ರಹ, (7) ಸ್ತೋತ್ರರತ್ನ, (8) ಚತುಶ್ಲೋಕಿ.

ಆಳವಂದಾರರ ಮಕ್ಕಳು ಶೊಟ್ಟನಂಬಿಯು. ಈ ಶೊಟ್ಟನಂಬಿಯು ಕುಮಾರರು ಎನ್ನಾಚ್ಚ್ಚಾರ್ಕ್ಕ. ಈ ಎನ್ನಾಚ್ಚ್ಚಾರ್ಕ್ಕರವರ ಪುತ್ರರುಗಳು ನಾಲ್ಕು ಜನರು. ಅವರಲ್ಲೊಬ್ಬರು ಪಿಳ್ಳೈಯಪ್ಪರ್. ಅವರ

(7) ಉರುಪಟ್ಟೂರಾಚ್ಚಾನಪಿಳ್ಳೈ, (8) ಶೋಕಮೂತ್ತರಾಳ್ವಾನ್ ಆಕಎಣ್ಬರ್.

ಉಯ್ಯಕೊಂಡಾರ್ ಶ್ರೀಪಾದತ್ತೈ ಆಶ್ರಯಿತ್ತವರ್‌ಗಳ್ ಐವರ್. ಅವರ್‌ಗಳಾಕಿರಾರ್—(1) ಮಣಕ್ಕಾಲ್ ನಂಬಿ, (2) ತಿರುವಲ್ಲಿಕ್ಕೇಣಿಪಾಣ್ಪೆರುಮಾಳರೈಯರ್, (3) ಶೇಟ್ಟಲೂರ್ ಶೆಂಡಲಂಕಾರರ್, (4) ಶ್ರೀಪುಂಡರೀಕದಾಸರ್, (5) ಉಲಕಪ್ಪೆರುಮಾಳ್ ನಂಗೈ.

ಮಣಕ್ಕಾಲ್ ನಂಬಿಶ್ರೀಪಾದತ್ತೈ ಆಶ್ರಯಿತ್ತ ಮುದಲಿಗಳ್ ಐವರ್. ಅವರ್‌ಗಳಾಗಿರಾರ್—(1) ಆಳವಂದಾರ್, (2) ತೆಯ್ವತ್ತುಕ್ಕರಶುನಂಬಿ, (3) ಗೋವಿಂದತ್ತುತಿರುವಣ್ಣಕರಪ್ಪನ್, (4) ತಿರುಪ್ಪುಳ್ಳೂರಾವುಡೈಯಪಿಳ್ಳೈ, (5) ಆಚ್ಚಿ.

ಆಳವಂದಾರ್ ಶ್ರೀಪಾದತ್ತೈ ಆಶ್ರಯಿತ್ತವರ್‌ಗಳ್ ಪದಿನೈವರ್. ಅವರ್‌ಗೆಳಾಕಿರಾರ್—(1) ಪೆರಿಯನಂಬಿ, (2) ತಿರುಕ್ಕೋಟ್ಟಿಯೂರ್ ನಂಬಿ, (3) ತಿರುಮಾಲೈಯಾಂಡಾನ್, (4) ಆಳವಂದಾರಾಳ್ವಾರ್, (5) ತಿರುಮಲೈನಂಬಿ, (6) ಈಶಾಂಡಾನ್, (7) ತೆಯ್ವವಾರಿಯಾಂಡಾನ್, (8) ಶಿರಿಯಾಂಡಾನ್, (9) ತಿರುವೊಕ್ಕೂರಪ್ಪನ್, (10) ತಿರುವೊಕ್ಕೂರ್‌ನಿನ್ರಾರ್, (11) ತೆಯ್ವಪ್ಪೆರುಮಾಳ್, (12) ತಿರುಮಂಕೈಯಾಳಿಯಾರ್, (13) ಪಿಳ್ಳೈ ತಿರುಮಾಲಿರುಂಶೋಲೈದಾಸರ್, (14) ಮಾರನೇರ್ ನಂಬಿ, (15) ಆಳ್‌ಕೊಂಡಿ.

ಮಕ್ಕಳು (1) ತೋಳಪ್ಪರು. ಈ ತೋಳಪ್ಪರಿಗೆ ಇಬ್ಬರು ಹೆಣ್ಣು ಮಕ್ಕಳು.

ನಾಥಮುನಿಗಳ ತಿರುವಡಿಯನ್ನಾಶ್ರಯಿಸಿದ ಜ್ಞಾನಿಗಳೆಂಟು ಮಂದಿಯು. ಅವರು ಯಾರೆಂಬುದನ್ನು ತಿಳಿಸಿರುತ್ತಾರೆ.

---

1 ಇವರಿಗೆ ಶ್ರೀಪುಂಡರೀಕಾಕ್ಷರೆಂಬದಾಗಿಯೂ ಹೆಸರುಂಟು.

ಪೆರಿಯನಂಬಿಶ್ರೀಪಾದತ್ತೈ ಆಶ್ರಯಿತ್ತವರ್ಕಳ್ ಆರುವರ್ ; ಅವರ್ಕಳಾಕಿರಾರ್—(1) **ಎಂಬೆರುಮಾನಾರ್. (ಶ್ರೀಭಗವದ್ಭಾಷ್ಯಕಾರರ್)**, (2) **ಮುಲೈಕುನಿಯನಿನ್ರಾರ್**, (3) **ಆರ್ಯ ಶ್ರೀಶಠಗೋಪದಾಸರ್**, (4) **ಅಣಿಯರಂಗತ್ತಮುದನಾರ್**, (5) **ತಿರುವಾಯ್ಕ.ಲಮುಡೈಯಾನ್ಪಟ್ಟರ್**, (6) **ತಿರುಕ್ಕಚ್ಚಿನಂಬಿ.**

ಉಯ್ಯಕೊಂಡಾರರ ಪಾದವನ್ನಾಶ್ರಯಿಸಿದ ಶಿಷ್ಯರುಗಳು ಐದು ಮಂದಿಯು. ಅವರು ಯಾರೆಂಬುವದನ್ನು ತಿಳಿಸುತ್ತಾರೆ.

ಉಯ್ಯಕೊಂಡಾರರ ಶಿಷ್ಯರಾದ ಮಣಕ್ಕಾಲನಂಬಿ ಪಾದವನ್ನು ಆಶ್ರಯಿಸಿದ ಜ್ಞಾನಿಗಳು ಐದು ಜನರು. ಇವರ್ಯಾರೆಂಬುವದನ್ನು ತಿಳಿಸುತ್ತಾರೆ. ಅವರಲ್ಲಿ ಆಳವಂದಾರರು ಒಬ್ಬರು.

ಈ ಆಳವಂದಾರ ಚರಣಕಮಲವನ್ನು ಆಶ್ರಯಿಸಿದ ಶಿಷ್ಯರು ೧೫ ಮಂದಿಯು. ಅವರ್ಯಾರೆಂಬುವದನ್ನು ತಿಳಿಸಿ, ಇವರುಗಳಲ್ಲಿ ಶ್ರೀಭಾಷ್ಯಕಾರರ ಗುರುಗಳಾದ ಪೆರಿಯನಂಬಿ, ತಿರುಕ್ಕೋಟ್ಟಿಯೂರ್ನಂಬಿ, ತಿರುಮಾಲ್ಯೆಯಾಂಡಾರ್. ಆಳವಂದಾರ್ ಆಳವಾರ್ಗಳು ಈ ಆಳವಂದಾರರ ಶಿಷ್ಯರುಗಳೆಂದು ಸೂಚಿಸುತ್ತಾರೆ.)

ಪೆರಿಯನಂಬಿಯ ಪಾದಕಮಲವನ್ನಾಶ್ರಯಿಸಿದವರು ಆರುಜನ ಮಹಾನುಭಾವರು. (ಅವರಲ್ಲಿ ಮುಖ್ಯರಾದವರು ಎಂಬೆರುಮಾನಾರ್ನನ್ನ ಮತೋದ್ಧಾರಕರಾದ ಆದಿಶೇಷಾವತಾರಿಯಾದ ಶ್ರೀರಾಮಾನುಜಾಚಾರ್ಯರವರು) ಈ ಆರುಜನ ಶಿಷ್ಯರ ಹೆಸರುಗಳನ್ನು ತಿಳಿಸುತ್ತಾರೆ.

(ಶ್ರೀಭಾಷ್ಯಕಾರರು ಪೆರಿಯನಂಬಿ ಅಲ್ಲದೆ ಇನ್ನೂ ನಾಲ್ಕು ಜನ ಗುರುಗಳಿಂದ ಉಪದೇಶವನ್ನು ಹೊಂದಿದರೆಂಬುವದನ್ನು ತಿಳಿಸುತ್ತಾರೆ.) ಎಂಬೆರುಮಾನಾರರು ತಿರುಕ್ಕೋಟಿಯೂರ್ನಂಬಿಯಿಂದ ಮಂತ್ರರಹಸ್ಯಗಳ ಅರ್ಥವನ್ನೆಲ್ಲ ಶಿಕ್ಷಿಸಲ್ಪಟ್ಟರು. ಶ್ರೀತಿರುಮಾಲ್ಯೆಯಾಂಡಾರವರಿಂದ ತಿರುವಾಯ್ಮೊಳಿಯ ಅರ್ಥಗಳನ್ನು ಕೇಳಿ ತಿಳಿದುಕೊಂಡರು. ಆಳವಂದಾರಾಳ್ವಾರರ ಪಾದದಲ್ಲಿ ತಿರು

ಎಂಬಿರುವಾನಾರ್, (1) ತಿರುಕ್ಕೊಟ್ಟಿಯೂರ್ನಂಬಿ ಶ್ರೀ ಪಾದತ್ತಿಲೆ ರಹಸ್ಯಾರ್ಥಂಗಳ್ ಶಿಕ್ಷಿತ್ತಾರ್; (2) ತಿರುವೊಲ್ಲೈಯಾಂಡಾರ್ ಶ್ರೀಪಾದತ್ತಿಲೆ ತಿರುವಾಯ್‌ಮೊಳಿ [ಕ್ಕು ಅರ್ಥಂ] ಕೇಟ್ಟರುಳಿನಾರ್ ; (3) ಆಳವಂದಾರ್ ಆಳವಾರ್ ಶ್ರೀಪಾದತ್ತಿಲೆ ತಿರುವಾಯ್‌ಮೊಳಿಯುಮೋದಿ ಸ್ತೋತ್ರಾದಿಗಳರುಳಿಚ್ಚೆಯುಂನಲ್ ವಾರ್ತ್ತೈಗಳುಂ ಕೇಟ್ಟರುಳಿನಾರ್ ; (4) ತಿರುಮಲೈನಂಬಿ ಶ್ರೀಪಾದತ್ತಿಲೆ ಶ್ರೀಮದ್ರಾಮಾಯಣಂ ಕೇಟ್ಟರುಳಿನಾರ್. ಇವರರುಳಿಚ್ಚೆಯ್ದ ಪ್ರಬಂಧಗಳ್—(1) ಶ್ರೀಭಾಷ್ಯಂ, (2) ದೀಪಂ, (3) ಸಾರಂ, (4) ವೇದಾರ್ಥ ಸಂಗ್ರಹಂ, (5) ಶ್ರೀಗೀತಾಭಾಷ್ಯಂ (6) ಶಿರಿಯಗದ್ಯಂ, (7) ಪೆರಿಯಗದ್ಯಂ, (8) ಶ್ರೀವೈಕುಂಠ

ವಾಯ್‌ಮೊಳಿಯನ್ನು ವ್ಯಾಸಂಗವಮಾಡಿ ಸ್ತೋತ್ರ ಮೊದಲಾದವುಗಳನ್ನು ದಯಪಾಲಿಸಲಾಗಿ ಅವುಗಳನ್ನು ಕೇಳಿದವರಾದರು. ತಿರುಮಲೈನಂಬಿಯ ಮೂಲಕ ಶ್ರೀಮದ್ರಾಮಾಯಣದ ಸ್ವಾರಸ್ಯಾರ್ಥಗಳನ್ನೆಲ್ಲಾ ಕೇಳಿ ತಿಳಿದವರಾದರು. ಶ್ರೀಭಾಷ್ಯಕಾರರು ದಯಪಾಲಿಸಿದ ಗ್ರಂಥಗಳು ಬಂಭತ್ತು. (ಬಂಭತ್ತೇಯಾದರೂ ತುಂಬಾ ಅಮೋಘವಾದವುಗಳು—1. ಶ್ರೀಭಾಷ್ಯ—ಇದು ವ್ಯಾಸಸೂತ್ರಗಳಿಗೆ ಭಾಷ್ಯವು.ಹೀಗೆ ಭಾಷ್ಯವನ್ನು ಬರೆದುದರಿಂದಲೇ ಇವರಿಗೆ ಶ್ರೀಭಾಷ್ಯಕಾರರೆಂಬ ನಾಮಧೇಯ ಉಂಟಾಯಿತು. 2. ವೇದಾಂತದೀಪ—ಇದು ವ್ಯಾಸಸೂತ್ರಗಳ ಸಿದ್ಧಾಂತಾರ್ಥವು. ಇದು ದೀಪದ ಹಾಗೆ ಸೂತ್ರಾರ್ಥವನ್ನು ಚೆನ್ನಾಗಿ ಪ್ರಕಾಶಗೊಳಿಸುತ್ತದೆ. 3. ವೇದಾಂತಸಾರ—ಸೂತ್ರಗಳಸಾರವಾದ ಅರ್ಥವನ್ನು ಸೂಚಿಸುತ್ತದೆ. 4. ವೇದಾರ್ಥಸಂಗ್ರಹ 5. ಗೀತಾಭಾಷ್ಯ—ಭಗವದ್ಗೀತೆಗೆ ವಿಶಿಷ್ಟಾದ್ವೈತ ಭಾಷ್ಯವು. 6. ಶಿರಿಯಗದ್ಯಂ—ಚಿಕ್ಕಗದ್ಯವು, ಶ್ರೀರಂಗಗದ್ಯವು. 7. ಪೆರಿಯಗದ್ಯಂ—ಶರಣಾಗತಿಗದ್ಯವು, ಇದು ಪ್ರತಿದಿನದಲ್ಲೂ ಪಠನಮಾಡತಕ್ಕ ಗ್ರಂಥವು. 8. ಶ್ರೀವೈಕುಂಠಗದ್ಯಂ (ಈ ಮೂರು ಗದ್ಯಗಳಿಗೂ ಗದ್ಯತ್ರಯವೆಂಬುದಾಗಿ ಹೆಸರು. ಇವುಗಳಿಗೆ ಶ್ರೀನಿಗಮಾಂತದೇಶಿಕ

ಗದ್ಯಂ, (೯) ನಿತ್ಯಂ ಆಕರ್ಣಪತು. ಇವರ್ ಶ್ರೀಪಾದತ್ತಿಲ್ ಆಶ್ರಯಿತ್ತವುದಲಿಗಳೈ ತಂತಾಂಸಂಪ್ರದಾಯುಪ್ಪಡಿಗಳಿಲೆಯುರಿಂದುಕೊಳ್ವದು.

ರವರು ಶ್ರೀಮದ್ರಹಸ್ಯರಕ್ಷೆ ಎಂಬ ವ್ಯಾಖ್ಯಾನ ಬರೆದಿರುತ್ತಾರೆ). ೯. ನಿತ್ಯಂ—ಇದು ನಿತ್ಯಕರ್ಮಾನುಷ್ಠಾನವಿಷಯವು ಎಂಬುದಾಗಿ ಒಂಭತ್ತು ಗ್ರಂಥಗಳು. ಈ ಯತೀಂದ್ರರ ಪಾದವನ್ನಾಶ್ರಯಿಸಿದ ಮಹಾಭಾಗವತರುಗಳು ಯಾರೆಂಬುವದನ್ನು ತಮ್ಮ ತಮ್ಮ ಸಂಪ್ರದಾಯ ರೀತ್ಯಾ ತಿಳಿದುಕೊಳ್ಳತಕ್ಕದ್ದು. (ಶ್ರೀಭಾಷ್ಯಕಾರರವರಿವಿಗೂ ಆಚಾರ್ಯಪರಂಪರೆಯನ್ನು ಹೇಳಿ ಸುಮ್ಮನಾಗುವದರಭಿಪ್ರಾಯವೇನೆಂದರೆ, ಶ್ರೀಭಾಷ್ಯಕಾರರ ತರುವಾಯ ಆಚಾರ್ಯಪರಂಪರೆಯು ಶಾಖೋಪಶಾಖೆಯಾಗಿಯೂ, ಶಿಷ್ಯರುಗಳು ಅನಂತವಾಗಿಯೂ ಆದುದರಿಂದ ಅವರುಗಳ ವಿಷಯವನ್ನೆಲ್ಲಾ ತಿಳಿಸುವದು ಅಸಾಧ್ಯವಾದುದರಿಂದ ತಮ್ಮ ಗುರುಗಳ ಮುಖೇನ ಯಾರು ಮುಖ್ಯವಾದವರು ಎಂಬುವದನ್ನು ತಿಳಿಯತಕ್ಕದ್ದೆಂದು ಭಾವವು. ಶ್ರೀಭಾಷ್ಯಕಾರರೊಬ್ಬರಿಗೇನೇ

ರಾಮಾನುಜಸ್ಸಪ್ತಶತೈರ್ಯತೀನಾಂ ಪೀಠೈಶ್ಚತುಸ್ಸಪ್ತತಿಭಿಸ್ಸಮೇತಃ।
ಏಕಾಂತಿಭಿರ್ದ್ವಾದಶಭಿಸ್ಸಹೈಸ್ರೈಶ್ರೀರಂಗ ಆಸ್ತೇ ಯತಿಸಾರ್ವಭೌಮಃ ॥

ಎಂಬ ಶ್ಲೋಕದಲ್ಲಿ ಹೇಳಿರುವ ಮೇರಿಗೆ ಶಿಷ್ಯರನೇಕರು; ಅದರಲ್ಲಿ ಸಿಂಹಾಸನಾಧಿಪತಿಗಳೆಂಬುದಾಗಿ ೭೪ ಮಂದಿ, ಜೀಯರೆನಿಸುವ ಯತಿಗಳು ೭೦೦, ಏಕಾಂತಿಗಳು ೧೨೦೦೦,ಮಂದಿ, ಶ್ರೀಭಾಷ್ಯ ಸಿಂಹಾಸನಾಧಿಪತಿಗಳು ೪. ಇಷ್ಟು ಮಂದಿ ಶಿಷ್ಯರು ಈ ಯತಿವರ್ಯರೊಬ್ಬರಿಗೇ ಇರುವಲ್ಲಿ, ಅವರವರುಗಳ ಶಿಷ್ಯರು, ಹೀಗೆ ಅವರೆಲ್ಲರ ವೃತ್ತಾಂತವನ್ನು ಹೇಳುವದಸಾಧ್ಯವೆಂಬಭಿಪ್ರಾಯವು.)

ಮುನಿತ್ರಯರಾದ ಶ್ರೀಮನ್ನಾಥಮುನಿ, ಆಳವಂದಾರ್, ಶ್ರೀಭಾಷ್ಯಕಾರರ ಮತ್ತು ಇತರ ಆಚಾರ್ಯರುಗಳ ಸಂಗ್ರಹವೃತ್ತಾಂತವು.

1. **ಶ್ರೀಮನ್ನಾಥಮುನಿಗಳು**—ಇವರು ಸೇನೇಶರ ಮಂತ್ರಿಯಾದ ಗಜವಕ್ತ್ರಾಂಶರೆಂದು ಹೇಳುತ್ತಾರೆ. ಕಲಿಯುಗ ೪೮೨೫ನೇ ಶೋಭಕೃದ್ವರ್ಷ, ಆನಿಮಾಸ, ಶುದ್ಧ ತ್ರಯೋದಶೀ ಬುಧವಾರ ಅನೂರಾಧಾ ನಕ್ಷತ್ರದಲ್ಲಿ ಆಳ್ವಾರ್‌ತಿರುನಗರಿ ಸಮೀಪದಲ್ಲಿರುವ ವೀರನಾರಾಯಣ ಪುರದಲ್ಲಿ ಹುಟ್ಟಿದರು. ಇವರ ತಂದೆಯು ಶಠಮರ್ಷಣಗೋತ್ರದಲ್ಲಿ ಹುಟ್ಟಿದ ಈಶ್ವರಮುನಿಗಳು. ಇವರು ಹುಟ್ಟಿದ ಮಗುವಿಗೆ ನಾಥನೆಂದು ನಾಮಕರಣವನ್ನು ಮಾಡಿ, ಮಗುವು ಪ್ರವೃದ್ಧವಾದ ಒಡನೆಯೇ ಸಾಂಗೋಪಾಂಗವಾಗಿ ವೇದಾಧ್ಯಯನ ಮುಂತಾದ ಸರ್ವಶಾಸ್ತ್ರ ಪ್ರವೀಣತೆಯನ್ನುಂಟುಮಾಡಿ, ಪ್ರಾಪ್ತವಯಸ್ಕರಾದ ಒಡನೆಯೇ ಅರವಿಂದಪ್ಪಾವಯಾಳ್ ಎಂಬುವ ಕನ್ಯೆಯನ್ನು ತಂದು ವಿವಾಹವಮಾಡಿದರು. ಈ ನಾಥಮುನಿಗಳಿಗೆ ಅಲ್ಲಿ ಪ್ರತಿಷ್ಠಿತವಾಗಿದ್ದ ಕಾಟ್ಟುಮನ್ನಾರ್ ಸ್ವಾಮಿಯವರಲ್ಲಿ ನಿಶ್ಚಲವಾದ ಭಕ್ತಿಯುಂಟಾಗಿ ಆತನ ಸೇವೆಯಲ್ಲೇ ನಿರತರಾಗಿ ಯೋಗಾಭ್ಯಾಸವನ್ನು ಮಾಡಿಕೊಂಡಿದ್ದರು. ಸ್ವಲ್ಪಕಾಲ ಕಳೆದನಂತರ ಇವರಿಗೆ ಈಶ್ವರಭಟ್ಟಾಳ್ವಾರ್ ಎಂಬುವ ಕುಮಾರರು ಜನಿಸಿದರು. ಈ ಕುಮಾರರಿಗೆ ತಾವು ಪಡೆದರೀತಿಯಲ್ಲೇ ಸರಿಯಾದ ವಯಸ್ಸು ಪ್ರಾಪ್ತವಾದ ಒಡನೆಯೇ ಸರ್ವಶಾಸ್ತ್ರಪಾರಂಗತೆಯನ್ನುಂಟುಮಾಡಿದುದಲ್ಲದೆ ತಮ್ಮ ಹಾಗೆಯೇ ಯೋಗಾಭ್ಯಾಸ ಉಪದೇಶವನ್ನೂ ಮಾಡಿದರು. ಅನಂತರ, ತೀರ್ಥಯಾತ್ರೆಮಾಡಬೇಕೆಂಬ ಕುತೂಹಲ ಉಂಟಾದುದರಿಂದ ಸಪತ್ನೀಕರಾಗಿ ಹೊರಟು ಅನೇಕ ದಿವ್ಯದೇಶಯಾತ್ರೆಗಳನ್ನು ಮಾಡುತ್ತಾ ಕಡೆಗೆ ಯಮುನಾತೀರದಲ್ಲಿರುವ ಗೋವರ್ಧನಪುರವನ್ನು ಸೇರಿ, ಅಲ್ಲಿ ನೆಲಸಿರುವ ಸ್ವಾಮಿಯನ್ನು ಸೇವಿಸುತ್ತಾ ಅಲ್ಲಿಯೇ ನಿಂತುಬಿಟ್ಟರು. ಆಗ ಒಂದು ದಿನ ಸ್ವಪ್ನದಲ್ಲಿ ಕಾಟ್ಟುಮನ್ನಾರ್‌ಸ್ವಾಮಿಯು ಎದುರಿಗೆ ಬಂದು ನಿಂತು, "ಏನು, ವೀರನಾರಾಯಣಪುರಿಗೆ ಬರುವಹಾಗಿಲ್ಲವೋ" ಎಂದು ನೇವುನವಾಗಲು, ಒಡನೆ ಗೋವರ್ಧನಪುರಿಸ್ವಾಮಿಯಾದ ಯಮುನೈತ್ತುರುವರೈಯವರ

ನಿಯಮನವನ್ನು ಹೊಂದಿದವರಾಗಿ ಹಿಂತುರುಗಿ ವಾರಾಣಸೀ, ಜಗನ್ನಾಥ, ಸಿಂಹಾದ್ರಿ, ತಿರುಪತ್ತಿ, ಘಟಿಕಾಚಲ, ಕಾಂಚೀ, ಶ್ರೀರಂಗಾದಿ ದಿವ್ಯದೇಶಯಾತ್ರೆಗಳನ್ನು ಮಾಡಿಕೊಂಡು ಪುನಃ ವೀರನಾರಾಯಣಪುರಕ್ಕೆ ಸೇರಿ ಮನ್ನನಾರನ್ನು ಸೇವಿಸುತ್ತ ಯೋಗನಿಷ್ಠರಾಗಿದ್ದರು.

ಹೀಗಿರುವಲ್ಲಿ ಬಂದುದಿನ ಕೆಲವು ಶ್ರೀವೈಷ್ಣವರುಗಳು ಆಳ್ವಾರುತಿರುನಗರಿಯಿಂದ ಬಂದು ಮನ್ನನಾರನ್ನು ಸೇವಿಸುವಾಗ, ನಮ್ಮಾಳ್ವಾರ್ರವರಿಂದ ಅನುಗ್ರಹಿಸಲ್ಪಟ್ಟ "ಆರಾವಮುದೇ" ಎಂಬ ತಿರುಕ್ಕೂಡಂದೆ (ಕುಂಭಘೋಣಿ) ಯ ಆರಾವಮುದ ಸ್ವಾಮಿಯ ವಿಷಯದಲ್ಲಿ ಹೇಳಿದ ತಿರುವಾಯ್ಮೊಳಿ ಕೇಳಿ, ಪರಮಭೋಗ್ಯವಾದ ಅದರ ಅಮೋಘಾರ್ಥಕ್ಕೆ ಪರವಶರಾಗಿ, ಆ ೧೧ ಪಾಶುರಗಳನ್ನೂ ತಾವು ಸಂಗ್ರಹಿಸಿದವರಾಗಿ, ನಮ್ಮಾಳ್ವಾರ್ರವರು ಅನುಗ್ರಹಿಸಿದುದು ಸಾವಿರ ಪಾಶುರಗಳೆಂದು ತಿಳಿದು ಅವುಗಳನ್ನೆಲ್ಲಾ ತಮಗೂ ಅನುಗ್ರಹಿಸಬೇಕೆಂದು ದೈನ್ಯದಿಂದ ಪ್ರಾರ್ಥಿಸಲು, ಅದಕ್ಕವರು ನಾವು ತಿರುನಗರಿಬಿಟ್ಟು ಬಹಳದಿನಗಳಾಗಿ, ತಿರುಕ್ಕೂಡಂದೆಯಲ್ಲೇ ನಿಂತುಬಿಟ್ಟವಾದುದರಿಂದ ನಮಗೆ ತಿಳಿಯದು ಎಂದು ಅರಿಕೆಮಾಡಲು, ಅಲ್ಲಿಂದ ಆ ಸಾವಿರ ಪಾಶುರಗಳನ್ನೂ ಸಂಗ್ರಹಿಸಬೇಕೆಂಬ ಆಶೆಯಿಂದ ಮನ್ನನಾರ್ (ಶ್ರೀರಾಜಗೋಪಾಲಸ್ವಾಮಿ)ನಿಯಮನವನ್ನು ಪಡೆದು, ತಿರುಕ್ಕೂಡಂದೆಯ "ಆರಾವಮುದನನ್ನ (ಶಾರ್ಙ್ಗಪಾಣಿ)"ಸೇವಿಸಿ ಯಾರನ್ನ ಅಲ್ಲಿ ಕೇಳಿದರೂ ಆ ಸಾವಿರ ಪಾಶುರಗಳು ನಮಗೆ ತಿಳಿಯದು ಎಂದು ಹೇಳಿದುದರಿಂದ ಅಲ್ಲಿಂದ ಆಳ್ವಾರುತಿರುನಗರಿಗೆ ಬಂದು ವಿಚಾರಮಾಡಿದರೂ ಯಾರೊಬ್ಬ ಭಾಗವತರೂ ತಿಳಿಸದೇ ಹೋದುದರಿಂದ,ಕಡೆಗೆ ಪರಾಂಕುಶದಾಸರೆಂಬುವರನ್ನು ಕಂಡು ಪ್ರಶ್ನಿಸಲು, ಅದಕ್ಕವರು ತಿರುವಾಯ್ಮೊಳಿಯ ಅಲ್ಪಸ್ವಲ್ಪ ಭಾಗಮಾತ್ರ ಜನರಿಗೆ ತಿಳಿಯುವುದೇ ವಿನಾ ತಿರುವಾಯ್ಮೊಳಿ ಮಿಕ್ಕಭಾಗವೆಲ್ಲಾ ಕ್ಷೀಣವಾಗಿ ಹೋಯಿತೆಂಬುದಾಗಿಯೂ, ಮಧುರಕವಿ ಆಳ್ವಾರವರು ಅನುಗ್ರಹಿಸಿದ "ಕಣ್ಣಿನುಣ್‌ಶಿರತ್ತಾಂ"ಬೆಂಬುವ ೧೧ ಪಾಶುರಗಳನ್ನು ೧೨,೦೦೦ ಸಲ ಭಕ್ತಿಯಿಂದ ಪಠನಮಾಡಿದ್ದಾದರೆ, ನಮ್ಮಾಳ್ವಾರವರು ಪ್ರತ್ಯಕ್ಷವಾಗುತ್ತಾರೆ. ಆಗ ತಿರುವಾ

ಯ್‌ಮೊಳಿ ಉಪದೇಶವನ್ನು ಹೊಂದಬಹುದೆಂಬದಾಗಿ ಹೇಳಲು; ಅದಕ್ಕೆ ತುಂಬಾ ಸಂತುಷ್ಟರಾಗಿ ಹಾಗೆಯೇ ನಡಿಸಲು, ಮಧುರಕವಿ ಆಳ್ವಾರ್ರವರು ಪ್ರತ್ಯಕ್ಷವಾಗಿ ತಿರುಮಂತ್ರಾರ್ಥ, ವ್ಯಾಸಸೂತ್ರ, ತಿರುವಾಯ್‌ಮೊಳಿ ಮೊದಲಾದ ದಿವ್ಯ ಪ್ರಬಂಧಗಳನ್ನೂ ಅವುಗಳರ್ಥಗಳನ್ನೂ ಸಹ ಉಪದೇಶಿಸಲು, ಅವುಗಳನ್ನು ಮನನಮಾಡಿ, ಸಂಗ್ರಹಿಸಿಕೊಂಡು ಈ ನಾಥಮುನಿಗಳು ಕೃತಾರ್ಥರಾಗಿದ್ದರು.

ಹೀಗಿರುವಲ್ಲಿ ಈ ವಿಷಯವನ್ನೆಲ್ಲಾ ತಿಳಿದು ಕೆಲವು ಶ್ರೀವೈಷ್ಣವರು ನಾಥಮುನಿಗಳನ್ನು ಕಂಡು ಧನ್ಯರಾಗಿ ತಮ್ಮ ವಿಜ್ಞಾಪನೆಯನ್ನು ಅರಿಕೆ ಮಾಡಿಕೊಂಡರೇನೆಂದರೆ—ಶ್ರೀರಂಗಕ್ಷೇತ್ರವನ್ನೆಲ್ಲಾ ಶ್ರೀತಿರುಮಂಗೈ ಆಳ್ವಾರವರು ಜೀರ್ಣೋದ್ಧಾರಮಾಡಿ ಗೋಪುರಾದಿಗಳನ್ನು ಕಟ್ಟಿ ಶ್ರೀಪರಮಪದವಾಸರನ್ನು ಪ್ರತಿಷ್ಠೆಮಾಡಿ ಉತ್ಸವಾದಿಗಳೆಲ್ಲಾ ಪರಮಸಂಭ್ರಮದಿಂದ ಜರುಗುವಹಾಗೆ ವಿಧಿಮಾಡುವದರಲ್ಲಿ, ಆಳ್ವಾರ್‌ತಿರುನಗರಿಯಿಂದ ನಮ್ಮಾಳ್ವಾರವರನ್ನು ಬಿಜಮಾಡಿಸಿಕೊಂಡುಬಂದು ಮಾರ್ಗಳಿ ಶುದ್ಧ ಏಕಾದಶೀ ಸಮಯದಲ್ಲಿ ವೇದಪಾರಾಯಣ ಮತ್ತು ನಾಲಾಯಿರ ದ್ರಾವಿಡಪ್ರಬಂಧಸೇವೆಯನ್ನು ವಿಧಿಸಿ, ಅದಕ್ಕೆ ತಿರುವಧ್ಯಯನೋತ್ಸವವೆಂಬ ಹೆಸರನ್ನು ಕೊಟ್ಟು ನಡಿಸುತ್ತಿದ್ದರೆಂದೂ, ಅದು ಈಚಿಗೆ ತಿರುವಾಯ್‌ಮೊಳಿಪ್ರವಚನವಿಲ್ಲದೆ ಎಲ್ಲಾ ಮರೆತುಹೋಗಿ ನಿಂತುಹೋಗಿದೆ ಎಂಬದಾಗಿಯೂ ಅಂತಹ ಸಂಪ್ರದಾಯವು ಪುನಃ ವಿಧಿಸಿದರೆ ಈ ದಿವ್ಯಪ್ರಬಂಧಕ್ಕೆ ತುಂಬಾ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆಂಬದಾಗಿಯೂ ಅವರು ವಿಜ್ಞಾಪಿಸಿದುದರಿಂದ ಇದು ತುಂಬಾ ಅಮೋಘಕೈಂಕರ್ಯವು, ಇಂತಹ ಸೇವೆಯನ್ನು ಪುನಃ ವಿಧಿಮಾಡುವಾತಬೇಕೆಂದು ಸಂಕಲ್ಪಿಸಿದವರಾಗಿ ಶ್ರೀಮನಾಥಮುನಿಗಳು ಆಳ್ವಾರ್ ತಿರುನಗರಿಯಿಂದ ನಮ್ಮಾಳ್ವಾರವರನ್ನು ಬಿಜಮಾಡಿಸಿಕೊಂಡು ಬಂದು ಶ್ರೀರಂಗಕ್ಷೇತ್ರದಲ್ಲಿ ಪ್ರಥಮೈಕಾದಶೀ ಮೊದಲು ಹತ್ತು ದಿನಗಳಲ್ಲಿ ೨೦೦೦ ದಿವ್ಯಪ್ರಬಂಧಗಳನ್ನೂ, ಏಕಾದಶೀ ಮೊದಲು ಹತ್ತು ದಿನಗಳಲ್ಲಿ ತಿರುವಾಯಿಮೊಳಿಯ ೧೦೦೦ ಪ್ರಬಂಧಗಳನ್ನೂ, ಇನ್ನೊಂದು ಸಾವಿರವನ್ನು ಇನ್ನೊಂದು ದಿನದಲ್ಲೂ ಸೇವೆನಡೆಯು

ವಹಾಗೆ ಮಾಡಿದರು. ಈ ಸೇವೆಯು ಈಗಲೂ ನಡೆಯುತ್ತಲಿದೆ. ಆದರೆ ಕೆಲವು ಮಹನೀಯರು ಈ ಅಧ್ಯಯನೋತ್ಸವದಲ್ಲಿ ಎಲ್ಲಾ ಆಳ್ವಾರುಗಳಿಗೂ ಉತ್ಸವನಡೆದರೂ, ನಾಥಮುನಿಗಳು ಈ ಉತ್ಸವ ನಡೆಯಲು ಮೂಲಕಾರಣವಾದರೂ ಅವರಿಗೆ ಮಾತ್ರ (ಹಾಗೆಯೇ ವೇದಾಂತದೇಶಿಕರಿಗೂ) ಉತ್ಸವವಿಲ್ಲದೆ ಮಾಡಿರುವದು ಶೋಚನೀಯವಾದ ವಿಷಯವಾಗಿದೆ.

ಅನಂತರ ನಾಥಮುನಿಗಳು ಪುನಃ ತಿರುಕ್ಕುಡಂದೆಗೆ ದಯಮಾಡಿಸಿದವರಾಗಿ ಅಲ್ಲಿ ನಮ್ಮಾಳ್ವಾರವರನ್ನು ಪ್ರತಿಷ್ಠೆಮಾಡಿ ಅಲ್ಲಿಯೂ ಇದೇ ಪ್ರಕಾರ ಅಧ್ಯಯನೋತ್ಸವ ಜರುಗುವಹಾಗೆ ಮಾಡಿದರು.

ಇಂತಹ ಅಮೋಘ ಕೆಲಸಗಳನ್ನೆಲ್ಲಾ ಶ್ರೀಮನ್ನಾಥ್ ಮುಹಾ ಕೃಪೆಯಿಂದ ಆತನೇ ತಮ್ಮ ಮೂಲಕ ನಡಿಸಿಕೊಂಡನಲ್ಲಾ ಎಂದು ಧನ್ಯರಾಗಿ ಪುನಃ ವೀರನಾರಾಯಣಪುರಿಗೆ ಹೋಗಿ ಸ್ವಾಮಿಯ ತುಳಸೀ ಮಾಲಾಕೈಕಂರ್ಯನಿರತರಾಗಿ, ಯೋಗಾಭ್ಯಾಸವನ್ನು ಮಾಡುತ್ತಾ ತಮ್ಮ ಸೋದರಳಿಯಂದಿರಾದ ಕೀಳೈಯಹತ್ತಾಳ್ವಾರ್, ಮೇಲೈಯಹತ್ತಾಳ್ವಾರ್ ಎಂಬ ಶಿಷ್ಯರಿಗೆ ದಿವ್ಯಪ್ರಬಂಧಗಳನ್ನು ದಿವ್ಯಗಾನರೂಪದಲ್ಲಿ ಉಪದೇಶಿಸುತ್ತಾ ಒಬ್ಬರನ್ನು ಶ್ರೀರಂಗಕ್ಕೂ ಇನ್ನೊಬ್ಬರನ್ನು ತಿರುಕ್ಕುಡಂದೆಗೂ ಹೋಗಿ ಅರೈಯರ್ ಎಂಬ ಹೆಸರಿನಿಂದ ಗಾನವಾಡುವ ಹಾಗೆ ಮಾಡಿ ದಿವ್ಯಪ್ರಬಂಧಗಳಿಗೆ ಪೂರ್ಣಉತ್ತೇಜನವನ್ನು ಈ ಆಚಾರ್ಯರು ಕೊಟ್ಟರು. ಆದುದರಿಂದ ಆಚಾರ್ಯರುಗಳಲ್ಲಿ ಇವರೇ ಪ್ರಥಮರೆಂದು ಭಾವಿಸತಕ್ಕದ್ದು.

ಈ ದೇವಗಾನದಲ್ಲಿ ಪ್ರಸಿದ್ಧಳಾದ ಒಬ್ಬದಾಸಿಯೂ, ಮನುಷ್ಯಗಾನದಲ್ಲಿ ಪ್ರವೀಣಳಾದ ಒಬ್ಬ ದಾಸಿಯೂ ಅಲ್ಲಿದ್ದ ಚೋಳರಾಜನ ಸಭೆಗೆ ಹೋಗಿ ಇಬ್ಬರೂ ಹಾಡಲು, ಆ ರಾಜನು ದೇವಗಾನವಾಹಾತ್ಪರ್ಯವನ್ನರಿಯದವನಾದ ಪ್ರಯುಕ್ತ, ಮನುಷ್ಯಗಾನವಿಶಾರದಳಿಗೇನೇ ಬಹುಮಾನವಾಡಲಾಗಿ, ದೇವಗಾನಶಿರೋಮಣಿಯು ಶ್ರೀಮನ್ನಾಥಮುನಿಗಳಲ್ಲಿಗೆ ಹೋಗಿ ಈ ವಿವರವನ್ನು ತಿಳಿಸಿ, ಕಡೆಗೆ ನಾಥಮುನಿಗಳು ಆ ರಾಜನಿಗೆ ದೇವಗಾನವಾಹಾತ್ಪರ್ಯವನ್ನು ಬಂದು

ಶಿಲಾಸ್ತಂಭದಲ್ಲಿ ಪ್ರತಿಷ್ಠಿತವಾದ ತಾಳದಮೂಲಕ ತೋರಿ, ತಾಳಗಳ ನಾದದಿಂದ ಈ ದೇವಗಾನಮೂಲಕ ತಾಳಗಳ ತೂಕವನ್ನು ಹೇಳಬಹುದೆಂದು ತಿಳಿಸಿ, ರಾಜನಿಂದ ತರಲ್ಪಟ್ಟ ೫೪೦ ತಾಳಗಳ ತೂಕವನ್ನು ಸರಿಯಾಗಿ ಹೇಳಿದವರಾಗಿ, ಆ ದೇವಗಾನದಾಸಿಗೆ ಮರ್ಯಾದೆ ಮಾಡುವಹಾಗೆ ಮಾಡಿ, ಆತನಿಂದ ತಾವೂ ಪೂಜಿತರಾಗಿ, ವೈಷ್ಣವ ಸಿದ್ಧಾಂತಸ್ಥಾಪನವಮಾಡಿ ಆ ರಾಜನು ಕೊಟ್ಟ ದ್ರವ್ಯಮುಂತಾದವುಗಳನ್ನು ಐಹಿಕಾಪೇಕ್ಷೆಯಿಲ್ಲದವರಾದ ಪ್ರಯುಕ್ತ ತೊರದು ಪುನಃ ವೀರನಾರಾಯಣಪುರಿಗೆ ಹೋಗಿ ಶ್ರೀಮನ್ನಾರ್ ಕೈಂಕರ್ಯದಲ್ಲೇ ನಿರತರಾಗಿದ್ದರು. ಇವರು ಮಾಡುತ್ತಿದ್ದ ಯೋಗಾಭ್ಯಾಸಮಹಿಮೆಯಿಂದ ೫೪೦ ವರುಷಗಳು ಜೀವಂತರಾಗಿದ್ದರೆಂದೂ, ತಮ್ಮ ಮಕ್ಕಳಾದ ಈಶ್ವರಭಟ್ಟಾಳ್ವರಿಗೆ ಕುಮಾರರಾದ ಆಳುವಂದಾರ್ವರು ೮೦ ವರುಷದವರಾಗಿ ಬೆಳೆಯುವವರಿವಿಗೂ ಬದುಕಿದ್ದು ಅನಂತರ ಪರಮಪದವನ್ನು ಹೊಂದಿದರೆಂದೂ ಹೇಳುತ್ತಾರೆ. ಇವರ ದೇಹಾವಸಾನಪೂರ್ವಭಾವಿಯಾಗಿ ಬಂದು ಇತಿಹಾಸವೂ ಉಂಟು. ಬಂದುದಿನ ಎಂದಿನಂತೆ ಕಾವೇರೀನದಿಗೆ ಸ್ನಾನಾಹ್ನಿಕಕ್ಕಾಗಿ ಶ್ರೀಮನ್ನಾಥಮುನಿಗಳು ದಯಮಾಡಿಸಿ ಮನೆಗೆ ಬರಲು, ಅವರ ಹೆಣ್ಣುಮಕ್ಕಳು ತಂದೆಯನ್ನು ಕುರಿತು "ನೀವು ಸ್ನಾನಕ್ಕೆ ಹೋಗಿರುವ ಕಾಲದಲ್ಲಿ ಇಬ್ಬರು ಸುಂದರರಾದ ಧನುರ್ಧಾರಿಗಳೂ ಒಬ್ಬ ಹೆಂಗಸೂ ಒಬ್ಬ ವಾನರನೂ ಸಹ ಬಂದು ತಮ್ಮನ್ನು ಕೇಳಿದರು, ಸ್ನಾನಕ್ಕೆ ಕಾವೇರೀನದಿಗೆ ಹೋಗಿರುವದಾಗಿ ತಿಳಿಸಿದೆವು. ಅನಂತರ ಅವರುಗಳು ಹೊರಟುಹೋದರು" ಎಂದು ತಿಳಿಸಲು, ಅದಕ್ಕೆ ನಾಥಮುನಿಗಳು ತುಂಬಾ ಪರಿತಾಪಗೊಂಡು, ನಿಮಗುಂಟಾದ ಸುಕೃತವು ನನಗಿಲ್ಲವಾಯಿತೇ ಎಂದು ಹೇಳಿ, ಯಾವ ಕಡೆಗೆ ಅವರು ತೆರಳಿದರು ಎಂದು ಪ್ರಶ್ನಿಸಲು, ಅದಕ್ಕಾಕುಮಾರ್ತಿಯರು ದಕ್ಷಿಣದಿಕ್ಕನ್ನನುಸರಿಸಿ ಪ್ರಯಾಣಮಾಡಿದರೆಂದು ಅರಿಕೆಮಾಡಲು, ಒಡನೇ ಮುನಿಗಳು ಆ ದಿಕ್ಕನ್ನು ಹಿಡಿದು ತೆರಳಿದವರಾಗಿ ಎಲ್ಲೂ ಅವರುಗಳು ಸಿಕ್ಕದೆ ಶೋಕಾರ್ತರಾಗಿರುವಾಗ, ಶ್ರೀರಾಮನು ಸೀತಾಲಕ್ಷ್ಮಣಾಂಜನೇಯರೊಡನೆ ಇವರಿಗೆ ಸೇವೆಯನಿತ್ತು, ಅದರಿಂದಿವರು ಧನ್ಯರಾಗಿ ಪರಮ

ಪದವನ್ನು ಸಾರಿದರು. ಇವರು ಅನುಗ್ರಹಿಸಿದ ಗ್ರಂಥಗಳು —1. ನ್ಯಾಯತತ್ವ, 2. ಯೋಗರಹಸ್ಯವೆಂದು ಮೂಲದಲ್ಲೇ ಹೇಳಲ್ಪಟ್ಟವೆ. ಹಾಗೆಯೇ ಇವರ ಎಂಟು ಮಂದಿ ಶಿಷ್ಯರುಗಳ ಹೆಸರೂ ಕೂಡ ಸೂಚಿಸಲ್ಪಟ್ಟವೆ. ಅವರುಗಳಲ್ಲಿ ಮುಖ್ಯರು:—

2. ಉಯ್ಯಕ್ಕೊಂಡಾರ್ ಅಥವಾ ಪುಂಡರೀಕಾಕ್ಷರು. ಇವರು ಕಲಿ ೪೯೨೮ನೇ ಪರಾಭವ ಸಂವತ್ಸರ, ಚಿತ್ತಿರೈಮಾಸ, ಶುಕ್ಲಪಕ್ಷ ಪ್ರಥಮೆ ಬುಧವಾರ, ಕೃತ್ತಿಕಾನಕ್ಷತ್ರ ಈ ಶುಭದಿನದಲ್ಲಿ ತಿರುನೆಳ್ಳರೆಯಲ್ಲಿ ಹುಟ್ಟಿದರು. ಇವರು ಶ್ರೀಮನಾಥಮುನಿಗಳಿಂದ ಮಂತ್ರೋಪದೇಶ, ರಹಸ್ಯಾರ್ಥಗಳು, ದ್ರಾವಿಡಪ್ರಬಂಧ ಮೊದಲಾದವುಗಳನ್ನೆಲ್ಲಾ ಸಂಗ್ರಹಿಸಿದರು. ಇವರಿಗೆ ಉಯ್ಯಕ್ಕೊಂಡಾರ್ ಎಂಬ ಹೆಸರು ಶ್ರೀಮನಾಥಮುನಿಗಳು ಅನುಗ್ರಹಿಸಿದ್ದು. ಸರಿಯಾದ ಹೆಸರು "ಉಯ್ಯಕೊಂಡೀರ್" ಅಂದರೆ ಉಜ್ಜೀವಿಸುವ ಹಾಗೆ ಮಾಡಿದಿರಿ. ಆಚಾರ್ಯನಾದ ನನ್ನನ್ನು ಉಜ್ಜೀವಿಸುವಹಾಗೆ ಮಾಡಿದಿರಿ ಅಂದರೆ ಆಚಾರ್ಯ ಮರ್ಯಾದೆ ಅಥವಾ ಮಹಿಮೆಯನ್ನು ಕಾಪಾಡಿದಿರಿ ಎಂದು ಭಾವ. ಹೇಗೆಂದರೆ—ಈ ನಾಥಮುನಿಗಳ ಅತ್ತೆಯಾದ ವಂಗಿಪುರದ ಆಚ್ಚಿ ಎಂಬುವರು ತಮ್ಮ ಮಗಳಾದ ಮತ್ತು ನಾಥಮುನಿಗಳ ಪತ್ನಿಯಾದ ಅರವಿಂದಪ್ಪಾವಯಳನ್ನು ಕರೆದುಕೊಂಡು ಬರಹೇಳಿ ಕಳುಹಿಸಲು, ಆಗ ನಾಥಮುನಿಗಳು ಈ ಪುಂಡರೀಕಾಕ್ಷರನನ್ನು ಜೊತೆಮಾಡಿ ಕಳುಹಿಸಿಕೊಡಲು, ಗುರುಪತ್ನಿಯನ್ನು ತವರುಮನೆಯಲ್ಲಿ ಬಿಟ್ಟು ಆಚ್ಚಿಯವರನುಜ್ಞೆಯನ್ನು ಈ ಪುಂಡರೀಕಾಕ್ಷರು ಪ್ರಾರ್ಥಿಸಲಾಗಿ ಊಟವನ್ನು ತೀರಿಸಿಕೊಂಡು ಹೋಗಬಹುದೆಂದು ಹೇಳಿದ್ದರಿಂದ ಒಪ್ಪಿನಿಂತರು. ಇವರು ಊರ್ಧ್ವಶಿಖೆಯುಳ್ಳವರಾದುದರಿಂದ ಇವರಿಗೆ ಆ ಆಚ್ಚಿಯವರು ಮುಂದಿನ ಪಡಸಾಲೆಯಲ್ಲಿ ಮೊದಲು ದಿನ ಮಿಕ್ಕ ನೀರಿನಲ್ಲಿ ಹಾಕಿದ್ದ ಅನ್ನವನ್ನು ಬಡಿಸಲು, ಅದಕ್ಕೆ ಸ್ವಲ್ಪವೂ ಅತೃಪ್ತಿ ತೋರಿಸದೆ ಸಂತೋಷದಿಂದ ಭುಂಜಿಸಿ ಹಿಂತಿರುಗಿ ಬಂದು ತಮ್ಮ ಗುರುಸಾನ್ನಿಧ್ಯವನ್ನು ಸೇರಿದರು. ಆಗ ಶ್ರೀಮನಾಥಮುನಿಗಳು ತಮ್ಮ ಶಿಷ್ಯರನ್ನು ಕುರಿತು ಏನು ಮರ್ಯಾದೆಯು ಅಲ್ಲಿ ನಡೆಯಿತು ಎಂದು ಪ್ರಶ್ನಿಸಲು

ಆಗ ಅವರು " ತದುಚ್ಛಿಷ್ಟಂಸು ಪಾವನಂ " ಎಂಬಂತೆ ತಮಗೆ ನೀರಿನಲ್ಲಿ ಹಾಕಿದ ಹಿಂದಿನ ದಿನದ ಅನ್ನವು ಗುರುಪತ್ನಿ ಅನುಗ್ರಹದಿಂದ ಸಿಕ್ಕಿದುದು ಪರಮಲಾಭವೆಂದು ಬಿನ್ನಹಿಸಲು, ಅದಕ್ಕೆ ಶ್ರೀನಾಥಮುನಿಗಳು ಪರಮಸಂತುಷ್ಟರಾಗಿ ತಮ್ಮ ತಿರುವಡಿಯನ್ನವರಿಗೆ ಅನುಗ್ರಹಿಸಿ ಗುರುಮಹಾತ್ಮ್ಯವನ್ನು " ಉಯ್ಯ್ಯಕೊಂಡೀ" ರಾದುದರಿಂದ "ಉಯ್ಯ್ಯಕೊಂಡಾರ್" ಎಂಬ ಹೆಸರನ್ನು ಕೊಟ್ಟರು. ಈ ವಿಷಯವೆಲ್ಲಾ ವಂಗಿಪುರ ಆಚ್ಚಿಯವರಿಗೆ ತಿಳಿದುದರಿಂದ, ಅವರು ತಮ್ಮ ಮಗಳನ್ನು ತಂದು ಶ್ರೀನುನ್ನಾಥಮುನಿಗಳಲ್ಲಿ ಸಮರ್ಪಿಸಿ, ಇಂತಹ ಬ್ರಹ್ಮವಿತ್ತಾದ ಶ್ರೀಮನಾಥಮುನಿಗಳಿಗೆ ತಾನು ಕನ್ಯಾದಾನಮಾಡಿಕೊಟ್ಟದ್ದರಿಂದ ತಮ್ಮಗಳ ವಂಶವೆಲ್ಲ ಪಾವನವಾಯಿತೆಂದು ಸಂತೋಷಯುಕ್ತರಾಗಿ, ಅಂತಹ ಭಾಗವತಶಿಖಾಮಣಿಯಾದ ಪುಂಡರೀಕಾಕ್ಷರಿಗೆ ತಾನು ಪತಸಾಲೆಯಲ್ಲಿ ಹಳಸಿದನ್ನವನ್ನು ಹಾಕಿದ್ದಕ್ಕಾಗಿ ಅವರ ಕ್ಷಮಾಪಣೆಯನ್ನು ಪ್ರಾರ್ಥಿಸಿ ತಮ್ಮ ಸ್ಥಳಕ್ಕೆ ತೆರಳಿದರು.

ಈ ನಾಥಮುನಿಗಳ ವಿಷಯದಲ್ಲಿ ಇನ್ನೊಂದು ಕಥೆಯನ್ನು ಹೇಳುತ್ತಾರೆ.ಇವರೂ ಕುರುಹೈಕಾವಲ್ಪಪ್ಪ ಮೊದಲಾದ ಶಿಷ್ಯರುಗಳು ಶ್ರೀಮನಾಥಮುನಿಗಳ ಸನ್ನಿಧಿಯಲ್ಲಿ ವೇದಾಂತಶಾಸ್ತ್ರಕಾಲಕ್ಷೇಪದಲ್ಲಿರುವಾಗ, ಅಲ್ಲಿಗೆ ಒಬ್ಬರಾಜನೂ ಆತನ ಹೆಂಡರೂ ಸಹ ಶ್ರೀಮನಾಥಮುನಿಗಳ ಮಹಾತ್ಮ್ಯವನ್ನು ಕೇಳಿದವರಾಗಿ ಬಂದು ಅವರ ಸೇವೆಯನ್ನು ಮಾಡಿ ಹೊರಟುಹೋದರು. ಅವರನ್ನೇ ಇವರು ಶ್ರೀಕೃಷ್ಣನೆಂದೇ ಭಾವಿಸಿ ಅವರನ್ನು ಹಿಂಬಾಲಿಸಿ ಹುಡುಕಿಕೊಂಡು ಹೋಗಲು, ಅವರುಗಳು ಸಿಕ್ಕದುದರಿಂದ ತಾವು ಮಾಡುತ್ತಿದ್ದ ಉಪಾಸನ, ಪ್ರವಚನಾದಿಗಳನ್ನೆಲ್ಲಾ ಬಿಟ್ಟುಬಿಟ್ಟದುದನ್ನು ಈ ಶಿಷ್ಯರು ಕಂಡು ಬ್ರಹ್ಮಜ್ಞಾನವೆಂಬಗ್ನಿಯಿಂದ ಸರ್ವವಿಧ ಕೈಂಕರ್ಯಗಳು ದಗ್ಧವಾಗಿರುವಹಾಗೆ ತೋರುತ್ತದೆ ಎಂಬುದಾಗಿ ತಮ್ಮ ಗುರುವಿನಲ್ಲರಿಕೆಯಾಡಲು, ತಾವು ನಡಿಸಿದುದು ಸರಿಯಲ್ಲವು, ಭಗವದ್ಭಾಗವತ ಕೈಂಕರ್ಯವೇ ತಮ್ಮ ಸಿದ್ಧಾಂತರೀತ್ಯಾ ಪರಮಪುರುಷಾರ್ಥವಾದುದರಿಂದ, ಇದೇ ಸರಿಯಾದ ಮಾರ್ಗವೆಂದೆನಿಸಿ ಶ್ರೀಮನ್ನಾಥಮುನಿಗಳು ಹಿಂತಿರುಗಿ

ಬಂದು ವೀರನಾರಾಯಣಪುರ ಸೇರಿ ಭಗವದ್ಭಾಗವತ ಕೈಂಕರ್ಯದಲ್ಲಿ ನಿರತರಾಗಿ ಶಿಷ್ಯರಿಗೆ ವೇದಾಂತಶಾಸ್ತ್ರ ಕಾಲಕ್ಷೇಪವನ್ನು ನಡಿಸುತ್ತಾ ಕಾಲಯಾಪನೆಮಾಡತೊಡಗಿದರು ಈ ಉಯ್ಯಕೊಂಡಾರರ ಐದು ಶಿಷ್ಯರುಗಳ ಹೆಸರೂ ಮೂಲದಲ್ಲಿ ಕಾಣಿಸಲ್ಪಟ್ಟವೆ. ಅವರುಗಳಲ್ಲಿ ಮುಖ್ಯರಾದವರು ಆಳವಂದಾರ್ರವರಿಗೆ ಗುರುಗಳಾದ

ಮಣಕ್ಕಾಲ್‌ನಂಬಿ (ಶ್ರೀರಾಮವಿಶ್ರರು). ಇವರು ಕಲಿ ೪೯೫೫ನೇ ವಿರೋಧಿಕೃದ್ವರ್ಷಮಾಶಿಮಾಸ ಶುಕ್ಲಪಕ್ಷ ಚತುರ್ದಶೀ ಸೋಮವಾರ ಮಖಾನಕ್ಷತ್ರದಲ್ಲಿ ಮಣಕ್ಕಾಲ್ ಎಂಬುವ ಅಗ್ರಹಾರದಲ್ಲಿ ಜನಿಸಿದರು. ಇವರು ಉಯ್ಯಕೊಂಡಾರ್ರವರ ಶಿಷ್ಯರಾಗಿ ಸರ್ವಶಾಸ್ತ್ರಾರ್ಥ ರಹಸ್ಯಾರ್ಥಗಳನ್ನು ಸಂಗ್ರಹಿಸಿಕೊಂಡು ಆಚಾರ್ಯ ಕೈಂಕರ್ಯದಲ್ಲೇ ಆಸಕ್ತಿಯುಳ್ಳವರಾಗಿದ್ದರು. ಉಯ್ಯಕೊಂಡಾರ್ರವರ ಪತ್ನಿಯದೇಹಾವಸಾನಾನಂತರ ತಮ್ಮ ಆಚಾರ್ಯರಿಗೆ ಮಹಾನಸ ಕೈಂಕರ್ಯವನ್ನೂ ಕೂಡಾ ಮಾಡಿದರೆಂಬ ವೃತ್ತಾಂತವಿರುತ್ತದೆ.

ಒಂದು ದಿನ ಆ ಊರಿನ ಹೆಣ್ಣುಮಕ್ಕಳೆಲ್ಲಾ ವಿನೋದವಾಗಿ ಮನೆಯಿಂದ ದಧ್ಯನ್ನ ಮೊದಲಾದವುಗಳನ್ನು ಕಟ್ಟಿಕೊಂಡು ಹೋಗಿ ಕಾವೇರೀನದಿಯಲ್ಲಿ ಎಲ್ಲರೂ ಸೇರಿ ಊಟಮಾಡಲು ತೊಡಗಿದರು. ಆ ಉಯ್ಯಕೊಂಡಾರವರ ಇಬ್ಬರೂಮಕ್ಕಳೂ ಸಹ ಅಲ್ಲಿಗೆ ಹೋಗಿದ್ದವರು ಹಿಂತಿರುಗಿ ಮನೆಗೆ ಬರುವಾಗ ಮಾರ್ಗತಪ್ಪಿ, ಕೆಸರಾಗಿರುವ ಒಂದು ಸಣ್ಣ ಕಾಲಿವೆಯು ಅಡ್ಡವಾಗಿದ್ದುದರಿಂದ ದಾಟಲು ಸಾಧ್ಯವಿಲ್ಲದೆ ಕಷ್ಟಪಡುತ್ತಿದ್ದುದನ್ನು ದೂರದಿಂದಲೇ ಮಣಕ್ಕಾಲುನಂಬಿಯವರು ಕಂಡು, ಬೇಗನೆ ಅಲ್ಲಿಗೆ ಹೋಗಿ ಅವರನ್ನೆತ್ತಿ ಆಕಡೆ ಬಿಡುವದು ಸರಿಯಾದುದಲ್ಲವೆಂದು ಭಾವಿಸಿ, ಆ ಕಾಲುವೆಯ ಕೆಸರಿನಲ್ಲಿಳಿದು ಬಗ್ಗಿನಿಂತು, ಆ ಹೆಣ್ಣುಮಕ್ಕಳು ತಮ್ಮ ಬೆನ್ನಿನಮೇಲೆ ನಡದುಹೋಗುವಹಾಗೆ ಮಾಡಿದರು. ಇವರಿಗಿದ್ದ ಮಹತ್ತಾದ ಗುರುಭಕ್ತಿಗಾಗಿ ಇವರು ಹೀಗೆ ಪ್ರವರ್ತಿಸಿದುದನ್ನು ನಂಬಿಯವರ ಗುರುಗಳಾದ ಉಯ್ಯಕೊಂಡಾರ್ರವರು ಕೇಳಿ ತುಂಬಾ ಹರ್ಷವನ್ನು ತಾಳಿ ನಂಬಿಯವರಿಗೆ ತುಂಬಾ ಅನುಗ್ರಹವನ್ನು ಮಾಡಿದರು. ಇವರು ತಮ್ಮ ಗುರುಗಳ

ಆಜ್ಞೆಯಪ್ರಕಾರ ಶ್ರೀಮನ್ನಾಥಮುನಿಗಳ ಪೌತ್ರರಾದ ಯಮುನೈತ್ತುರುವರೈ (ಆಳವಂದಾರ್) ಯವರಿಗೆ ರಹಸ್ಯಾರ್ಥ ಮೊದಲಾದ ಶಾಸ್ತ್ರೋಪದೇಶಗಳನ್ನು ಗೈದರು.

ಆಳವಂದಾರ್ (ಯಾಮುನಾಚಾರ್ಯರು, ಯಮುನೈತ್ತುರುವರೈ ಯಾಮುನೇಯರು) --ಇವರು ಕಲಿ ೪೦೧೮ನೇ ಧಾತುವರ್ಷ, ಆಡಿಮಾಸ, ಪೌರ್ಣಮಿ ಬುಧವಾರ, ಉತ್ತರಾಷಾಢ ನಕ್ಷತ್ರದಲ್ಲಿ ಶ್ರೀಮನ್ನಾಥಮುನಿಗಳು ಅವತಾರವಾಡಿದ ಶ್ರೀವೀರನಾರಾಯಣಪುರದಲ್ಲಿ ಜನಿಸಿದರು. ಶ್ರೀಮನ್ನಾಥಮುನಿಗಳು ತಾವು ಮೊದಲು ವಾಸವಾಗಿದ್ದ ಗೋವರ್ಧನಪುರಿಯ ಯಮುನೈತ್ತುರವರೈಯ ಅನುಗ್ರಹದಿಂದ ತಮಗೆ ಪೌತ್ರನು ಉಂಟಾದನೆಂದು ಭಾವಿಸಿ, ತಮ್ಮ ಮಕ್ಕಳಾದ ಈಶ್ವರಮುನಿಗಳನ್ನು ಕರೆದು ಶಿಶುವಿಗೆ ಯಮುನೈತ್ತುರುವರೈ ಎಂಬ ನಾಮಕರಣವನ್ನು ಮಾಡಬೇಕೆಂದು ಹೇಳಿ, ತಮ್ಮ ಶಿಷ್ಯರಾದ ಉಯ್ಯಕೊಂಡಾರವರಿಗೆ ಆ ಶಿಶುವು ಬೆಳೆದು ಪ್ರವರ್ಧಮಾನನಾದ ಬಳಿಕ ಮೂಲಮುಂತ್ರಾದಿ ಸಕಲ ರಹಸ್ಯಾರ್ಥಗಳನ್ನು ಉಪದೇಶಿಸತಕ್ಕದ್ದೆಂದೂ, ತಮ್ಮ ಇನ್ನೊಬ್ಬ ಶಿಷ್ಯರಾದ ಕುರುಹೈಕಾವಲಪ್ಪನಿಗೆ ಯೋಗರಹಸ್ಯವನ್ನು ಉಪದೇಶಿಸತಕ್ಕದ್ದೆಂದೂ ನೇಮಿಸಿದರು.

ಈಶ್ವರಮುನಿಗಳು ಪಿತೃವಾಕ್ಯಪ್ರಕಾರ ಜಾತಕರ್ಮನಾಮಕರಣಾದಿಗಳನ್ನೂ ಹಾಗೆಯೇ ಚೌಲೋಪನಯನಾದಿಗಳನ್ನೂ ನಡಿಸಿದರು. ಆ ಕಾಲದಲ್ಲಿ ಉಯ್ಯಕೊಂಡಾರ್ರವರಿಗೆ ತುಂಬಾ ಅಶಕ್ತಿಯಾದುದರಿಂದ, ಗುರುವಿನ ಆಜ್ಞೆಯನ್ನು ನಡಿಸಲು ಮಾರ್ಗವಿಲ್ಲದೆ, ತುಂಬಾ ಖೇದಗೊಂಡು, ತಮ್ಮ ಶಿಷ್ಯರಾದ ಮಣಕ್ಕಾಲ್‌ನಂಬಿಯವರನ್ನು ಕರೆದು, ತನಗಂತೂ ಗುರು ಆಜ್ಞೆಯನ್ನು ನಡಿಸುವ ಪುಣ್ಯವಿಲ್ಲದಿದುದರಿಂದ, ನೀವಾವರೂ ಯಮುನೈತ್ತುರವರಿಗೆ ಮುಂತ್ರೋಪದೇಶಮುಂತಾದವುಗಳನ್ನು ನಡಿಸುವದಲ್ಲವೆ, ಪ್ರಾಪ್ತವಯಸ್ಕರಾದಾಗ ರಹಸ್ಯಗಳ ಅವೋಷ್ಠಾರ್ಥಗಳನ್ನುಪದೇಶಮಾಡಬೇಕೆಂಬದಾಗಿ ವಿಧಿಸಿದ್ದರಿಂದ ಉಪನಯನವಾದನಂತರ ಚಕ್ರಾಂಕಿತಪುರಸ್ಸರವಾಗಿ ಮೂಲಮುಂತ್ರೋಪದೇಶವನ್ನು ಮಾಡಿದರು.

ಇವರಿಗೆ ವೇದಾಧ್ಯಯನವು ನಡೆಯುವ ಕಾಲದಲ್ಲಿ ಒಂದೇ ಸಲ ವೇದೋಚ್ಚಾರಣೆಯಿಂದಲೇ ಸರ್ವವೇದೋಪನಿಷತ್ತುಗಳನ್ನೆಲ್ಲಾ ಸಂಗ್ರಹಿಸಿದುದಂ ನೋಡಿ ಇವರ ಜ್ಞಾನವಿಕಾಸಕ್ಕೆ ಎಲ್ಲರೂ ಆಶ್ಚರ್ಯ ಪಡುತ್ತಿದ್ದರು.

ಅನಂತರ ಈಶ್ವರಮುನಿಗಳು ಇವರಿಗೆ ವಿವಾಹವನ್ನು ನಡಿಸಿದವರಾಗಿ ಸ್ವಲ್ಪ ದಿನಗಳಲ್ಲೇ ಸಾಮಿಪಾದವನ್ನು ಸೇರಿದರು. ಯಮುನೈತ್ತುರವರು ತಂದೆಗೆ ಸಕಲ ಚರಮಕೈಂಕರ್ಯಗಳನ್ನೆಲ್ಲಾ ನಡಿಸಿದವರಾಗಿ ಮಹಾಭಾಷ್ಯಭಟ್ಟರ ಸನ್ನಿಧಿಯಲ್ಲಿ ಕಾಲಕ್ಷೇಪವನ್ನು ಮಾಡುತ್ತಿರುವಾಗ, ಆ ದೇಶವೆಂದರೆ ಚೋಳದೇಶರಾಜನ ಆಸ್ಥಾನಪಂಡಿತನಾದ ಅಕ್ಕಿಯಾಳ್ವಾನ್ ಎಂಬ ಶೈವನು ತಾನು ಮಹಾಪಂಡಿತನೆಂದೂ, ತನ್ನನ್ನು ಯಾರುಬೇಕಾದರೂ ಬಂದು ವಾದದಲ್ಲಿ ಜಯಿಸಬಹುದೆಂದೂ, ಹಾಗೆ ಜಯಿಸದೇ ಇರುವ ಪಂಡಿತರೆಲ್ಲಾ ತನಗೆ ಕಪ್ಪವನ್ನು ಕೊಡತಕ್ಕೆದ್ದೆಂಬದಾಗಿ ರಾಜನಬಲವಿರುವದರಿಂದ ವಿಪರ್ಯಾಡುಮಾಡಿಕೊಂಡು ಈ ಮಹಾಭಾಷ್ಯಭಟ್ಟರಿಗೆ ಲಿಖಿತಮೂಲಕವಾಗಿ ಕಪ್ಪವನ್ನು ಕಳುಹಿಸೆಂದು ದೂತರಮೂಲಕ ಪತ್ರವನ್ನು ಬರೆದು ಈ ಅಕ್ಕಿಯಾಳ್ವಾನನು ಕಳುಹಿಸಲು, ಅದರಿಂದ ತಮ್ಮ ಗುರುಗಳು ಸ್ವಲ್ಪ ಖಿನ್ನರಾಗಿರುವದನ್ನು ಕಂಡು, ಪತ್ರದ ವಿಷಯವೇನೆಂಬದಾಗಿ ಕೇಳಲು, ಆಗ ಅವರು ಪತ್ರವನ್ನು ತನ್ನ ಶಿಷ್ಯನ ಕೈಯಲ್ಲಿ ಕೊಡಲಾಗಿ ಅದನ್ನು ಜೂರುಜೂರಾಗಿ ಹರಿದುಹಾಕಿ, ದೂತರನ್ನು ಕರೆದು ಅವರ ಶಿಷ್ಯರಾದ ಯಮುನೈತ್ತುರವರೈ ಹರಿದುಹಾಕಿದರೆಂದು ಅಕ್ಕಿಯಾಳ್ವಾನನಿಗೆ ಹೋಗಿ ಹೇಳು ಎಂದು ಕಳುಹಿಸಿದರು. ಅದಕ್ಕಾ ಅಕ್ಕಿಯಾಳ್ವಾನನು ಆ ಶಿಷ್ಯರೇನು ಕವಿಯೋ ವೇದಾಂತಿಯೋ ತಿಳಿದು ಬಾ ಎಂದು ದೂತನನ್ನು ಪತ್ರಕೊಟ್ಟು ಪುನಃ ಕಳುಹಲು, ಆ ಪತ್ರವನ್ನೂ ಹರಿದುಹಾಕಿ

ನವಯಂಕವಯಸ್ತು ಕೇವಲಂ ನವಯಂ ಕೇವಲ ತಂತ್ರಪಾರಗಾಃ।
ಅಪಿತುಪ್ರತಿವಾದಿವಾರಣಪ್ರಕಟಾಟೋಪ ವಿಪಾಟನಕ್ಷಮಾಃ ॥

"ನಾವು ಬರೀ ಕವಿಗಳೂ ಅಲ್ಲ, ನಾವು ಬರೀ ಶಾಸ್ತ್ರಗಳಲ್ಲಿ ಪ್ರವೀಣತೆಯನ್ನು ಹೊಂದಿದವರೂ ಅಲ್ಲ. ಮತ್ತೇನೆಂದರೆ, ಪ್ರತಿವಾದಿಗಳೆಂಬ ಆನೆಗಳ ಗರ್ವವನ್ನು ಮೂಲೋತ್ಪಾಟನಮಾಡುವ ಶಕ್ತಿಯುಳ್ಳವರು" ಎಂಬ ಶ್ಲೋಕವನ್ನು ಬರೆದು ಕಳುಹಿಸಿದರು. ಇದನ್ನು ಆ ಆಸ್ಥಾನ ಪಂಡಿತನು ರಾಜನಿಗೆ ತೋರಲು, ಆ ರಾಜನು ಕುಪಿತನಾಗಿ ಈ ಯಮುನೈತ್ತುರುವರೆಯನ್ನು ಕರದುಕೊಂಡು ಬರಹೇಳಿ ಶಾಸನವನ್ನು ಬರೆದು ಕಳುಹಲು, ಈ ಶಾಸನವನ್ನೂ ಆ ಮೊದಲಿನ ಪತ್ರಗಳ ಹಾಗೆಯೇ ದೂತರ ಎದುರಿಗೇ ಹರಿದು ಬಿಸಾಡಿ ಬರುವದಿಲ್ಲವೆಂದು ಹೇಳಿಕಳುಹಿಸಲು, ಈ ವರ್ತಮಾನವನ್ನು ರಾಜನಪತ್ನಿಯಾದ ತಿರುವರಂಗತ್ತಮ್ಮೆಯು ತಿಳಿದವಳಾಗಿ, ತನ್ನ ಪತಿಯನ್ನು ಕುರಿತು, ಪಂಡಿತರನ್ನು ಧಿಕ್ಕರಿಸುವದು ಸರಿಯಲ್ಲವು, ಅವರನ್ನು ಸನ್ಮಾನಿಸಿ ಕರಿಸಿಕೊಂಡರಲ್ಲವೆ ಅವರು ನಮ್ಮಲ್ಲಿ ಬರುವರು ಎಂದು ಹೇಳಿದುದನ್ನು ರಾಜನು ವಿವೇಕವೆಂದು ಗ್ರಹಿಸಿ, ಪಲ್ಲಕ್ಕಿ ಮೊದಲಾದ ಮರ್ಯಾದೆಗಳಿಂದ ರಾಜಸಭೆಗೆ ಯಮುನೈತ್ತುರವರೈಯನ್ನು ಬರಮಾಡಿಕೊಳ್ಳಲು, ರಾಜಸಭೆಗೆ ಬಂದು,

ಆಶೈಲಾದದ್ರಿ ಕನ್ಯಾಚರಣಕಿಸಲಯನ್ಯಾಸ ಧನ್ಯೋಪಕಂಠಾ।
ದಾರಕ್ಷೋನೀತ ಸೀತಾಮುಖಕಮಲಸಮುಲ್ಲಾಸಹೇತೋಶ್ಚ ಸೇತೋಃ
ಆಚಪ್ರಾಚ್ಯ ಪ್ರತೀಚ್ಯ ಕ್ಷಿತಿಧರಯುಗಳಾ ದರ್ಕಚಂದ್ರಾವತಂಸಾತ್।
ವಿಮಾಮಾಂಸಾಶಾಸ್ತ್ರಯುಗ್ಮ ಶ್ರಮಮೃದಿತಮನಾಮ್ಯಗ್ವ್ಯತಾಂಮಾದೃಶೋನ್ಯಃ ॥

ಎಂಬ ಶ್ಲೋಕದಿಂದ ತಮ್ಮ ಬಿರುದನ್ನು ಕೂಗಿ ಹೊಗಳುವ ಹಾಗೆ ಮಾಡಿದರು. ಇದರಭಿಪ್ರಾಯವೇನೆಂದರೆ, ಪರ್ವತಕನ್ಯೆಯಾದ ಪಾರ್ವತಿಯಪಾದಕಮಲವನ್ನಿಡುವದರಿಂದ ಧನ್ಯತೆಯನ್ನು ಹೊಂದಿದ ಹಿಮವತ್ಪರ್ವತದಿಂದ, ರಾಕ್ಷಸನಾದ ರಾವಣನಿಂದ ಬಯ್ಯಲ್ಪಟ್ಟ ಸೀತಾಮುಖೋಲ್ಲಾಸಕ್ಕೆ ಕಾರಣಭೂತವಾದ ಸೇತುವಿನ ವರಿವಿಗೂ ಮತ್ತು ಪೂರ್ವಪಶ್ಚಿಮಾದ್ರಿಗಳ ಮಧ್ಯದಲ್ಲೂ ಇರುವ ಪೃಥ್ವಿಯಲ್ಲಿ ಎಲ್ಲಾದರೂ ನಮ್ಮಹಾಗೆ ಎರಡುಮೀಮಾಂಸೆಗಳಾದ ಪೂರ್ವೋತ್ತರಮೀಮಾಂ

ಸೆಗಳಲ್ಲಿ ಪ್ರವೀಣತೆಯನ್ನು ಹೊಂದಿದ ನಮ್ಮಂಥಾ ಇನ್ನೊಬ್ಬರನ್ನು ಹುಡಕಿತರಕ್ಕದ್ದೆಂಬುದು ಈ ಶ್ಲೋಕಾರ್ಥವು. ಇದಕ್ಕೆ ಆಸ್ಥಾನ ಪಂಡಿತನು ಬಹುಕುಪಿತನಾಗಿ ವಾದಕ್ಕಿವರನ್ನು ಕರೆದಾಗ ಸಭೆಯಲ್ಲಿ ಪಂಡಿತರ ಮಧ್ಯಸ್ತಕ್ಕೆ ಒಳಪಟ್ಟು ವಾದವಾಡಲಿವರು ಒಪ್ಪಿಕೊಂಡರು. ರಾಜಪತ್ನಿಯು ವೈಷ್ಣವಳಾದುದರಿಂದ ಶೈವನಾದ ತನ್ನ ಗಂಡನನ್ನು ವೈಷ್ಣವನನ್ನಾಗಿ ಮಾಡಲು ಸುಸಮಯವೆಂದು ಭಾವಿಸಿ, ಈ ಯುವಮುನ್ಯತ್ತುರುವರೈ ವಾದದಲ್ಲಿ ಗೆದ್ದರೆ ಏನು ಹೇಳುತ್ತೀಯೆ ಎನ್ನಲು, ಅದಕ್ಕಾ ರಾಜನು ತನ್ನ ಅರ್ಧರಾಜ್ಯವನ್ನು ಅವರಿಗೆ ಕೊಡುವದಲ್ಲದೆ, ಆಸ್ಥಾನಪಂಡಿತನು ಅವರಿಗೆ ದಾಸ್ಯವನ್ನು ಮಾಡುವನೆಂದು ಶಪಥವನ್ನು ಮಾಡಲು, ಒಡನೆ ಅಕ್ಕಿಯಾಳ್ವಾನನು ತನಗೆ ಅವರು ಉಂಟು ಎಂದು ಹೇಳಿದುದನ್ನು ಇಲ್ಲವೆಂದೂ, ಇಲ್ಲವೆಂದು ಹೇಳಿದುದನ್ನು ಉಂಟೆಂದೂ, ಸಾಧಿಸಲು ತಮಗೆ ಸಾಮರ್ಥ್ಯ ಉಂಟೆಂದೂ ಅದಕ್ಕಾಗಿ ಬೇಕಾದರೆ ಪ್ರತಿಕಕ್ಷಿಯಾದ ಯಾಮುನೇಯರು ಮೂರು ವಾಕ್ಯವನ್ನು ಹೇಳಬಹುದೆನ್ನಲು; ಅದಕ್ಕಿವರು ಸಮ್ಮತಿಸಿ ಮೂರು ವಾಕ್ಯಗಳಾದ 1. "ರಾಜಾಯಂ ಸಾರ್ವಭೌಮಃ, 2. ರಾಜಪತ್ನೀಯಂ ಪತಿವ್ರತಾ, 3. ತ್ವನ್ಮಾತಾನವಂಧ್ಯಾ" ಎಂಬುವದನ್ನು ಹೇಳಿರಾಜನು ಸಾರ್ವಭೌಮನು, ರಾಜಪತ್ನಿಯು ಪತಿವ್ರತಳು, ನಿನ್ನ ತಾಯಿಯು ಬಂಜೆಯಲ್ಲವು ಎಂಬ ವಾಕ್ಯಗಳಲ್ಲಿ ಮೊದಲೆರಡರಲ್ಲಿ ಉಂಟೆಂಬುದನ್ನು ಇಲ್ಲವೆಂದೂ, ಮೂರನೇ ವಾಕ್ಯದಲ್ಲಿ ಅಲ್ಲವೆಂಬುವದನ್ನು ಉಂಟೆಂದೂ, ಸ್ಥಾಪಿಸು ಎನ್ನಲು, ಆಸ್ಥಾನ ಪಂಡಿತನು ಈ ಯುಕ್ತಿಗೆ ವಿರೋಧವಾಗಿ ಹೇಳಲು ಏನೂ ತೋಚದೆ ಸುಮ್ಮನಿರಲು. ಹೀಗೆ ಯುಕ್ತಿಯಲ್ಲೂ ವೇದಾಂತಶಾಸ್ತ್ರವಾದದಲ್ಲೂ ಸಹ ಆಸ್ಥಾನಪಂಡಿತನನ್ನು ಗೆದ್ದು, ರಾಜನನ್ನೂ ರಾಜಪತ್ನಿಯನ್ನೂ ಶಿಷ್ಯರನ್ನಾಗಿ ಮಾಡಿಕೊಂಡು, ಅರ್ಧರಾಜ್ಯವನ್ನು ಪಡೆದು ರಾಜ್ಯಾಡಳಿತವನ್ನು ಮಾಡುತ್ತಾ ಸುಖದಿಂದಿದ್ದರು. ಸಚ್ಛಾಸ್ತ್ರೋಪದೇಶಮೂಲಕ ಇವರುಗಳನ್ನು ಉಜ್ಜೀವಿಸುವಹಾಗೆ ರಕ್ಷಿಸಿದುದರಿಂದ, "ನಮ್ಮನ್ನು ಆಳವಂದೀರೋ ಅಂದರೆ ರಕ್ಷಿಸಲು ಬಂದಿರೋ" ಎಂದು ಇವರಿಗೆ ಆ ರಾಜದಂಪತಿಗಳು ಆಳವಂದಾರ್" ಎಂಬ ಹೆಸರು ಬರುವ

ಹಾಗೆ ಮಾಡಿದರು. ಆಸ್ಥಾನಪಂಡಿತನು ಇವರಿಗೆ ದಾಸ್ಯವಾಡಲೇಕೆಂದು ರಾಜನು ವಿಧಿಸಲು, ಅದಕ್ಕೆ ಆಳವಾಂದಾರರು ಆತನೂ ಘನಪಂಡಿತನಾದುದರಿಂದ, ಕೂಡದೆಂಬದಾಗಿ ನಿರಾಕರಿಸಿದರು.

ಇವರು ಅನಂತರ ಸತುಕುಲಪ್ರಸೂತೆಯಾದ ಕನ್ಯೆಯನ್ನು ವಿವಾಹವಾಡಿಕೊಂಡವರಾಗಿ ರಾಜಭೋಗದಲ್ಲಿ ಮಗ್ನರಾಗಿದ್ದುದರಿಂದ ಮಣಕ್ಕಾಲ್‌ನಂಬಿಯು ತಮ್ಮ ಗುರುವಿನ ಆಜ್ಞೆಯನ್ನು ನೆರವೇರಿಸಲು ಮಾರ್ಗವಿಲ್ಲದಿರಲು, ನಂಬಿಯವರು ಈ ಆಳವಂದಾರನ ಅಡಿಗೇ ಮಾಡುವವನೊಂದಿಗೆ ಸ್ನೇಹವನ್ನು ಬೆಳಿಸಿ, ರಾಜರಿಗೆ ಇಷ್ಟವಾದ ಕಾಯಿಪಲ್ಯವಾವುದೆಂದು ಕೇಳಲು, ಆತನು ರಾಜರಿಗೆ ಹೊನಗೊನ್ನೇ ಸೊಪ್ಪಿನಲ್ಲಿ ತುಂಬಾ ಪ್ರೇಮವೆಂದರಿಕೆಪಟ್ಟಿಮಾಡಲು, ಆ ಸೊಪ್ಪನ್ನು ನಿತ್ಯವೂ ತಂದುಕೊಟ್ಟು ಪಲ್ಯವಾಡಿ ಬಡಿಸುವ ಹಾಗೆ ಹೇಳಿದರು. ಹೀಗೆ ಕೆಲವು ಕಾಲ ಕಳೆದನಂತರ ಬಂದು ದಿನ ಸೊಪ್ಪನ್ನು ತರದಿರಲು ರಾಜನು ಅಡಿಗೆಯವನನ್ನು ಕುರಿತು ಏಕೆ ಈವತ್ತು ಆ ಸೊಪ್ಪಿನಪಲ್ಯವನ್ನು ಮಾಡಲಿಲ್ಲವೆಂದು ಕೇಳಲು, ಅದಕ್ಕಾತನು ನಡೆದ ವೃತ್ತಾಂತವನ್ನು ತಿಳಿಸಲು ; ರಾಜನು ಆ ನಂಬಿಯವರನ್ನು ಕರೆದುಕೊಂಡುಬಾ ಎಂದು ಹೇಳಿದುದಕ್ಕೆ, ರಾಜನ ಸಂದರ್ಶನವು ಕಡೆಗೆ ದೊರೆಯಿತಲ್ಲಾ ಎಂದು ಸಂತುಷ್ಠರಾಗಿ, ರಾಜನಂ ಕುರಿತು ನಿಮ್ಮ ಪಿತಾಮಹರಾದ ನಾಥಮುನಿಗಳಿಂದ ಬಂದ ದ್ರವ್ಯವನ್ನು ನಿಮಗೆ ಒಪ್ಪಿಸುವ ಹಾಗೆ ಹೇಳಿದ್ದಾರೆ, ಅದಕ್ಕಾಗಿ ತಾವು ದಯವಿಟ್ಟು ನನ್ನೊಂದಿಗೆ ಸ್ವಲ್ಪದೂರ ಬರಬೇಕೆಂಬದಾಗಿ ಕೇಳಿಕ್ಕೊಂಡು, ಅದಕ್ಕೆ ಮುಂಚಿತವಾಗಿ ತಮ್ಮಲ್ಲಿಗೆ ನಾನು ಪದೇಪದೇ ಬಂದುಹೋಗುವಹಾಗೆ ಅಪ್ಪಣೆಯಾಗಬೇಂದು ಪ್ರಾರ್ಥಿಸಿ, ೧೪ ದಿನಗಳಲ್ಲಿ ಶ್ರೀಮದ್ಭಗವದ್ಗೀತೆಯ ಅರ್ಥಸ್ವಾರಸ್ಯಗಳನ್ನೆಲ್ಲಾ ಬೋಧಿಸಿ, ಸ್ವಾಮಿಯಲ್ಲಿ ನಿರತಿಶಯಭಕ್ತಿಯುಂಟಾಗುವಹಾಗೆಮಾಡಿ, ಆ ಮಹಾನುಭಾವನನ್ನು ಹೊಂದಲು ಉಪಾಯವನ್ನು ಹೇಳಬೇಕೆಂದು ಆಳವಂದಾರರು ಪ್ರಾರ್ಥಿಸಲು; ಆಗ ನಂಬಿಯವರು ಚರಮಶ್ಲೋಕ ಮುಂತಾದ ಮೂರು ರಹಸ್ಯಗಳ ಅರ್ಥವನ್ನೆಲ್ಲಾ ಉಪದೇಶಿಸಿ, ಐಹಿಕದಲ್ಲಿ ಜಿಹಾಸೆಯುಂಟಾಗುವ ಹಾಗೆ ಮಾಡಿ, ಶರಣಾಗತಿಯವಾ

ಹಾತ್ಪರ್ಯವನ್ನು ಅದರ ಅಂಗಾಂಗಿಭಾವಗಳನ್ನೆಲ್ಲಾ ಸಮಗ್ರವಾಗಿ ತಿಳಿಸಿ ಅವರನ್ನು ಶ್ರೀರಂಗನಾಥನಮುಂದೆ ಕರದುಕೊಂಡು ಹೋಗಿ ನಿಲ್ಲಿಸಿ, ಇದೀಗ ತಮ್ಮ ಪಿತಾಮಹರೆಂಬುದಾಗಿ ಹೇಳಿ, ತಮ್ಮ ಮಕ್ಕಳೊಂದಿಗೆ ಆಳವಂದಾರು ಶ್ರೀರಂಗನಾಥ ಸನ್ನಿಧಿಯಲ್ಲಿ, ಶ್ರೀವಿಭೀಷಣನು ತನ್ನ ನಾಲ್ಕು ಮಂದಿ ಮಂತ್ರಿಗಳೊಂದಿಗೆ ಶ್ರೀರಾಮನಲ್ಲಿ ಶರಣಾಗತಿಮಾಡಿದಹಾಗೆ ಪ್ರಪತ್ತಿ ಧರ್ಮವನ್ನವಲಂಬಿಸಿದರು.

ಅನಂತರ ಸನ್ಯಾಸವೃತ್ತಿಯನ್ನವಲಂಬಿಸಿದವರಾಗಿ, ಈ ಶರಣಾಗತಿಧರ್ಮಮಾಹಾತ್ಮ್ಯವನ್ನು ಎಲ್ಲರೂ ಅರಿತು ಅವಲಂಬಿಸಲಿ ಎಂಬ ಔದಾರ್ಯಾತಿಶಯದಿಂದ ಶ್ರೀಮಹಾಲಕ್ಷ್ಮೀಪ್ರಪದನರೂಪವಾದ ಚತುಶ್ಲೋಕಿಯನ್ನೂ, ಶ್ರೀಮನ್ನಾರಾಯಣನಲ್ಲಿ ಮಾಡಿದ ಪ್ರಪತ್ತಿರೂಪವಾದ ಸ್ತೋತ್ರರತ್ನವನ್ನೂ (ಶ್ರೀಆಳವಂದಾರ್‌ಸ್ತೋತ್ರ), ಆಗಮ ಪ್ರಾಮಾಣ್ಯ, ಆತ್ಮಸಿದ್ಧಿ, ಸಂವಿತ್ಸಿದ್ಧಿ, ಈಶ್ವರಸಿದ್ಧಿ ಎಂಬ ಸಿದ್ಧಿತ್ರಯ ಗೀತಾರ್ಥಸಂಗ್ರಹವೆಂಬುವುಗಳನ್ನು ರಚಿಸಿದರು.

ಅನಂತರ ಮಣಕ್ಕಾಲ್‌ನಂಬಿಯು ಆಳವಂದಾರನ್ನು ಕುರಿತು ಯೋಗರಹಸ್ಯವನ್ನೆಲ್ಲಾ ನಿಮಗೆ ತಿಳಿಸುವಹಾಗೆ ಕುರುಹೈಕಾವಲಪ್ಪ ಎಂಬುವರಿಗೆ ನಿಮ್ಮ ಪಿತಾಮಹರು ನಿಯಮಿಸಿದ್ದಾರಾದುದರಿಂದ ನೀವು ಅವರನ್ನು ಆಶ್ರಯಿಸಿ, ಯೋಗಮಾಹಾತ್ಮ್ಯವನ್ನು ತಿಳಿದು ಅನುಷ್ಠಿಸತಕ್ಕದ್ದೆಂದು ಹೇಳಲು, ಆ ಗುರು ಆಜ್ಞೆಯನ್ನು ಆಳುವಂದಾರ್ರವರು ಶಿರಸಾವಹಿಸಿ, ಅಲ್ಲಿಂದ ಹೊರಟು ಕುರುಹೈಕಾವಲಪ್ಪರವರು ಯೋಗಾಭ್ಯಾಸದಲ್ಲಿ ಮಗ್ನರಾಗಿದ್ದ ವೀರನಾರಾಯಣಪುರಿಯನ್ನು ಸೇರಿ, ಅವರನ್ನು ಸೇವಿಸಿದವರಾಗಿ ಯೋಗರಹಸ್ಯೋಪದೇಶವನ್ನು ಪ್ರಾರ್ಥಿಸಲಾಗಿ, ಅದಕ್ಕೆ ಕಾವಲಪ್ಪನವರು, ಆಳವಂದಾರನ್ನು ಕುರಿತು, ತಮಗೆ ದೇಹಾವಸಾನಕಾಲವು ಬರುವ ಪುಷ್ಯಮಾಸ, ಪುಷ್ಯನಕ್ಷತ್ರದಲ್ಲಿ ಉಂಟಾಗುತ್ತದೆ, ಆವೇಳೆಗೆ ಬಂದರೆ ಉಪದೇಶ ದೊರೆಯುತ್ತದೆಂದು ಹೇಳಲು ಆದಿನವನ್ನು ಜ್ಞಾಪಕದಲ್ಲಿಟ್ಟವರಾಗಿ ಪುನಃ ಹಿಂತಿರುಗಿ ಶ್ರೀರಂಗಾದಿ ದಿವ್ಯದೇಶಗಳಲ್ಲಿ ಅಧ್ಯಯನೋತ್ಸವದ ತಿರುವಾಯ್‌ಮೊಳಿ ಸೇವೆ ಮೊದಲಾದವುಗಳಲ್ಲಿ ಮಗ್ನರಾಗಿ

ದೇಹಪರವಶರಾಗಿ, ಕುರುಹೈಕಾವಲಪ್ಪರವರು ಹೇಳಿದ್ದ ಕಾಲವು ಅತಿಕ್ರಾಂತವಾಗಿದ್ದುದರಿಂದ ತುಂಬಾ ವ್ಯಸನಪಟ್ಟವರಾಗಿರುವಾಗ ಪ್ರಪನ್ನನಿಗೆ ಆಚಾರ್ಯಕೈಂಕರ್ಯವೇ ಮುಖ್ಯವು, ಯೋಗಾದಿಗಳ ಅವಶ್ಯಕತೆ ಏನೂ ಇಲ್ಲವೆಂದು ಕೇಳಿ ತಿಳಿದುದರಿಂದ ಶೋಕವನ್ನು ನೀಗಿ ವೇದಾಂತಪ್ರವಚನವನ್ನು ಮಾಡಿಕೊಂಡು ಸುಖದಿಂದಿದ್ದರು. ಪ್ರತಿದಿನದಲ್ಲೂ ಶ್ರೀರಂಗನಾಥನನ್ನು ಸೇವಿಸುವಾಗ, ವಿಶಿಷ್ಟಾದ್ವೈತದರ್ಶನಸ್ಥಾಪಕರಾಗಿ ಒಬ್ಬರು ಅವತರಿಸುವಹಾಗೆ ಮಾಡಕೂಡದೇ ಎಂಬದಾಗಿ ಪ್ರಾರ್ಥಿಸುತ್ತಿದ್ದರು.

ಹೀಗಿರುವಲ್ಲಿ, ಬಂದುದಿನ ಇವರ ಶಿಷ್ಯರಾದ ತಿರುಮಲೈ ನಂಬಿಯವರು "ಒಳವಿಲ್ಕಾಲಮೆಲ್ಲಾಂ" (ತಿರು. ೪, ೪, ೧) ಎಂಬ ತಿರುವಾಯ್‌ಮೊಳಿ ಪಾಶುರದ ಅರ್ಥಸಾರಸ್ಯವನ್ನು ಗ್ರಹಿಸಿದವರಾಗಿ ಅದರಲ್ಲಿ ಉಪಪಾದಿತವಾಗಿರುವ ಹಾಗೆ ತಿರುಮಲೈಯ ತಿರುವೇಂಗಡಮುಡೈಯಾನನಕೈಂಕರ್ಯವೇ ತಮಗೆ ಸ್ವರೂಪವೆಂದು ಭಾವಿಸಿದವರಾಗಿ ತಿರುಮಲೆಗೆ ಹೋಗಬೇಕೆಂಬ ತಮ್ಮ ಅಭಿಪ್ರಾಯವನ್ನು ತಮ್ಮ ಗುರುಗಳಿಗೆ ತಿಳಿಸಿದವರಾಗಿ ಅನುಜ್ಞೆಯನ್ನು ಪ್ರಾರ್ಥಿಸಲು, ಇವರಿಗೆ ಸ್ವಾಮಿಯಲ್ಲಿ ಇಂತಹ ನಿರತಿಶಯಭಕ್ತಿಯುಂಟಾದುದನ್ನು ಕಂಡು, ಇವರ ಮೂಲಕವಾಗಿಯೇ ತಮ್ಮ ದರ್ಶನಸ್ಥಾಪನವಾಗಬೇಕೆಂಬ ಕೋರಿಕೆಯ ಅಂಕುರವು ವೃದ್ಧಿಹೊಂದಿ ಫಲವತ್ತಾಗಬೇಕೆಂದು ಭಾವಿಸಿ ಅವರಿಗೆ ಶ್ರೀಪಾದತೀರ್ಥವನ್ನನುಗ್ರಹಿಸಿ ನೇಮನವನ್ನು ಕೊಡಲು; ಅವರು ತಿರುಮಲೆಯನ್ನು ಸೇರಿ, ತಿರುವೇಂಗಡಮುಡೈಯಾನನ ಸೇವೆಯಲ್ಲೇ ನಿರತರಾಗಿದ್ದುಕೊಂಡಿದ್ದರು. ಈ ತಿರುಮಲೈನಂಬಿಗೆ ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು; ಅದೂ ಅಲ್ಲದೆ ಶ್ರೀಅಂಶಜೆಯಾದ ಕಾಂತಿಮತೀದೇವಿ, ಭೂಮ್ಯಂಶಜೆಯಾದ ದ್ಯುತಿಮತಿ ಎಂಬ ಇಬ್ಬರು ಸಹೋದರಿಯರಿದ್ದರು. ಹೀಗಿರುವಲ್ಲಿ ಅಲ್ಲಿಗೆ ಶ್ರೀಪೆರಂಬುದೂರಿನಿಂದ ನಾರಾಯಣಾಂಶಜರಾದ ಹಾರೀತಗೋತ್ರ ಶ್ರೀಕೇಶವಸೋಮಯಾಜಿಗಳೂ, ಮಧುರಮಂಗಲ

ದಿಂದ ಭಾರಧ್ವಾಜಗೋತ್ರೋದ್ಭವರಾದ ನಾರಾಯಣಾಂಶಜರಾದ ಕಮಲನಯನ ಭಟ್ಟರೂ ಬರಲು; ಇವರಿಬ್ಬರ ತೇಜಸ್ಸನ್ನು ಕಂಡು, ತುಂಬಾ ಸಂತೋಷದಿಂದ ಇವರಿಬ್ಬರಿಗೂ ಚಕ್ರಾಂಕಿತ ಮುಂತ್ರೋಪದೇಶಗಳನ್ನೂ ಮಾಡಿ, ಕೇಶವಸೋಮಯಾಜಿಗೆ ಕಾಂತಿಮತೀ ದೇವಿಯನ್ನೂ ಕಮಲನಯನಭಟ್ಟರಿಗೆ ದ್ಯುತಿಮತಿಯನ್ನೂ ಕೊಟ್ಟು ವಿವಾಹ ಮಹೋತ್ಸವನ್ನು ಬೆಳಿಸಿ, ದರ್ಶನಸ್ಥಾಪಕರಾದ ಪುತ್ರರನ್ನು ಈ ದಂಪತಿಗಳಿಗೆ ಕೊಡುವಹಾಗೆ ತಿರುವೇಂಗಡಮುಡೈಯಾನನನ್ನು ಪ್ರಾರ್ಥಿಸುತ್ತಿರಲು; ಶ್ರೀನಿವಾಸಕೃಪೆಯಿಂದ ಕೇಶವಸೋಮಯಾಜಿ ಕಾಂತಿಮತೀದೇವಿಗಳಿಗೆ ಪುತ್ರರಾಗಿ ಶೇಷಾಂಶರಾದ ಶ್ರೀರಾಮಾನುಜಾಚಾರ್ಯರವರೂ ಕಮಲನಯನಭಟ್ಟರೂ ದ್ಯುತಿಮತಿಗಳಿಗೆ ಪುತ್ರರಾಗಿ ಗರುಡಾಂಶರಾದ ಗೊವಿಂದಭಟ್ಟರೂ (ಯಂಬಾರರು) ಅವತರಿಸಿದರು.

ಶ್ರೀ ಅಳವಂದಾರವರಿಗೆ ಮೂರು ವಿಷಯಗಳನ್ನು ನಡಿಸಬೇಕೆಂಬ ಕುತೂಹಲವು ತುಂಬಾ ಬಾಧಿಸುತ್ತಿತ್ತು. ಅವುಗಳು ಯಾವುವೆಂದರೆ :—

1. ವ್ಯಾಸಸೂತ್ರಗಳಿಗೆ ಪೂರ್ವಾಪರವಿರೋಧಗಳಿಲ್ಲದೆ, ಸಮುಂಜಸವಾಗಿ ವೇದಾರ್ಥಗಳಿಗೇನೂ ಬಾಧೆಯಿಲ್ಲದಹಾಗೆ ವಿಶಿಷ್ಟಾದ್ವೈತ ಸಿದ್ಧಾಂತರೀತ್ಯಾ ಶ್ರೀಭಾಷ್ಯವನ್ನು ಯಾರಾದರೂ ತುಂಬಾ ಪಾಂಡಿತ್ಯ ವಿರುವವರು ರಚಿಸತಕ್ಕದ್ದು.

2. ಪುರಾಣರತ್ನವೆಂದೆನಿಸಿ ಶ್ರೀಮಹಾಲಕ್ಷ್ಮಿ ಮತ್ತು ವಿಷ್ಣುವೂ ಸಹ ಜಗತ್ಕಾರಣರಾಗಿ ಇವರುಗಳ ಪಾರಮ್ಯತೆಯನ್ನು ಬಹು ನಿಪುಣವಾಗಿ ಬೋಧಿಸುವ ಶ್ರೀವಿಷ್ಣುಪುರಾಣವನ್ನು ರಚಿಸಿದ ಮಹರ್ಷಿಯಾದ ಪರಾಶರರ ಹೆಸರನ್ನು ಒಬ್ಬ ಸರಿಯಾದ ಅರ್ಹರಾದವರಿಗೆ ಇಡುವದು ಮತ್ತು ಅವರಿಂದ ಸಹಸ್ರನಾಮಭಾಷ್ಯವು ರಚಿಸಲ್ಪಡತಕ್ಕದ್ದು.

3. ಈ ಮೇಲಿನ ಅರ್ಥಗಳನ್ನೆಲ್ಲಾ ಬಹು ಸಾರವರಸ್ಯವಾಗಿ ಭಕ್ತಿರಸ ತುಂಬಿತುಳುಕುವ ದ್ರಾವಿಡಪ್ರಬಂಧವಾದ ತಿರುವಾಯ್‌ಮೊಳಿಯನ್ನು ರಚಿಸಿ, ವಿಶಿಷ್ಟಾದ್ವೈತ ಸಿದ್ಧಾಂತವನ್ನೂ ಪ್ರಪದನ ಶಾಸ್ತ್ರವನ್ನೂ ಪ್ರಚುರಗೊಳಿಸಿದ ನಮ್ಮಾಳ್ವಾರವರ ಹೆಸರನ್ನು ಒಬ

ಯೋಗ್ಯರಿಗಿಡುವದು, ಅವರಿಂದ ಆ ತಿರುವಾಯ್‌ಮೊಳಿಗೆ ಭಾಷ್ಯವು ಬರಿಯಲ್ಪಡತಕ್ಕದ್ದು.

ಈ ತಮ್ಮ ಅಭಿಪ್ರಾಯಗಳು ನೆರವೇರುವ ಹಾಗೆ ಮಾಡೆಂಬ ದಾಗಿ ಅನವರತ ಶ್ರೀರಂಗನಾಥನನ್ನು ಪ್ರಾರ್ಥಿಸುತ್ತಿದ್ದರು. ಭಕ್ತಾಭೀಷ್ಟಗಳನ್ನು ನಡಿಸಿಕೊಡಲು ಕಂಕಣಬದ್ಧನಾದ ಶ್ರೀರಂಗನಾಥನು ತನಗೆ ನಿರಂತರ ಕೈಂಕರ್ಯದಲ್ಲೇ ಸಕ್ತನಾಗಿ ಶೇಷಶಬ್ದವನ್ನು ಸಾರ್ಥಕ್ಯ ಹೊಂದಿಸಿದ ಮಹಾಶೇಷನ ಅಂಶಾವತಾರವಾಗಿ ಸ್ವಾಮಿರಾಮಾನುಜಾಚಾರ್ಯರವರು ತುಂಬಾ ಜ್ಞಾನವಿಕಾಸದೊಡನೆ ಜನಿಸಿ ಅಭಿವೃದ್ಧಿಯನ್ನು ಹೊಂದಿರುತ್ತಾರೆಂದೂ, ಶ್ರೀತಿರುವೇಂಗಡಮೊಡೈಯಾನನೂ, ಶ್ರೀರಂಗನಾಥನೂ ಅವರಿಗೆ ತುಂಬಾ ಕೃಪೆಮಾಡಿರುತ್ತಾರೆಂದೂ ಕೇಳಿ ತುಂಬಾ ಹರ್ಷಯುಕ್ತರಾಗಿ ಅವರನ್ನು ನೋಡಬೇಕೆಂಬ ಕುತೂಹಲದಿಂದ ಕಾಂಚೀಪುರಕ್ಕೆ ಹೋಗಿ,

ಯಸ್ಯಾಪ್ರಸಾದಕಲಯಾ ಬಧಿರಶ್ಚ್ರಣೋತಿ ಪಂಗುಃ ಪ್ರಧಾವತಿ
ಜವೇನ ಚ ವಕ್ತಿಮೂಕಃ ।
ಅಂಧಃ ಪ್ರಪಶ್ಯತಿ ಸುತಂ ಲಭತೇಚ ವಂಧ್ಯಾ ತಂ ದೇವಮೇವ
ವರದಂ ಶರಣಾಗತೋಸ್ಮಿ ॥

"ಯಾವ ಮಹಾತ್ಮನ ಪ್ರಸಾದಲೇಶದಿಂದ ಕಿವುಡನಿಗೆ ಕಿವಿಕೇಳಿಸುತ್ತೆಯೋ, ಕುಂಟನು ಓಡುವನೋ, ಮೂಗನು ಮಾತಾಡುವನೋ, ಕುರುಡನಿಗೆ ಕಣ್ಣು ಕಾಣಿಸುತ್ತದೆಯೋ, ಬಂಜೆಯು ಪುತ್ರನನ್ನು ಪಡೆಯುವಳೋ, ಅಂತಹ ದೇವನಾದ ವರದರಾಜಸ್ವಾಮಿಯನ್ನು ಶರಣು ಹೊಂದುವನೆಂದು ಹೇಳಿ ಈ ರಾಮಾನುಜಾಚಾರ್ಯರಿಂದ ವಿಶಿಷ್ಟಾದ್ವೈತಸ್ಥಾಪನೆಯು ಆಗುವಹಾಗೆ ಕರುಣಿಸಬೇಕೆಂದು ಪ್ರಾರ್ಥಿಸಿದರು. ಆದರೆ ಭಗವಾರಾಮಾನುಜಾಚಾರ್ಯರು ಆಗ ಯಾದವ ಪ್ರಕಾಶನೆಂಬ ಅದ್ವೈತಿಯಿಂದ ಅವರು 'ಸತ್ಯಂ ಜ್ಞಾನಮನಂತಂಬ್ರಹ್ಮ' 'ಕಪ್ಯಾಸಂಪುಂಡರೀಕಂ' ಇತ್ಯಾದಿ ಶ್ರುತಿವಾಕ್ಯಗಳಿಗೆ ಅಪಾರ್ಥವನ್ನು ಹೇಳಿದರೂ ಶಾಂಕರಸಿದ್ಧಾಂತವು ತಮಗೆ ಪೂರ್ವಪಕ್ಷಕ್ಕೆ ಬೇಕಾದುದರಿಂದ ಅದನ್ನು ಅವರಿಂದ ಸಂಗ್ರಹಿಸುತ್ತಿದ್ದುದರಿಂದ ಯಾಮುನಾಚಾರ್ಯರು

ಶ್ರೀರಾಮಾನುಜರೊಂದಿಗೆ ಮಾತನಾಡದೇನೆ ತಮ್ಮ ಊರಾದ ವೀರ ನಾರಾಯಣಪುರಕ್ಕೆ ತೆರಳಿದರು.

ಇಷ್ಟರಲ್ಲೇ ಆಳವಂದಾರವರಿಗೆ ದೇಹದಲ್ಲಿ ಸ್ವಸ್ಥವಿಲ್ಲವೆಂಬ ವರ್ತಮಾನವನ್ನು ಕೇಳಿ ಅವರ ಶಿಷ್ಯರಾದ ಪೆರಿಯನಂಬಿ, ತಿರುಕ್ಕೋಟ್ಟಿಯೂರ್‌ನಂಬಿಗಳು, ಆಳವಂದಾರವರಿಗೆ ಪ್ರಣಾಮಮಾಡಿ ತಮಗೆ ತುಂಬಾ ಅಮೋಘವಾದ ಉಪದೇಶವನ್ನು ಹೇಳಬೇಕಾಗಿ ಪ್ರಾರ್ಥಿಸಲು, ಅದಕ್ಕೆ ಆಳವಂದಾರ್‌ರವರು ಅವರನ್ನು ಕುರಿತು ಹೇಳಿದ್ದೇನೆಂದರೆ :—

1. ಸದಾಚಾರ್ಯಕಟಾಕ್ಷವನ್ನು ಹೊಂದಿದ ನೀವು ಮೊದಲು ಜ್ಞಾಪಕದಲ್ಲಿಡತಕ್ಕದ್ದು ಆಚಾರ್ಯಪರಂಪರೆಯಲ್ಲಿ ಕೃತಜ್ಞತಾಭಾವವು.

2. ನೀವು ಮುಖ್ಯವಾಗಿ ಮಾಡತಕ್ಕದ್ದು ಆಜ್ಞಾನುಜ್ಞಾ ರೂಪವಾದ ಭಗವತ್ಕೈಂಕರ್ಯವು.

3. ಈ ಭಗವತ್ಕೈಂಕರ್ಯಕ್ಕೆ ಭಾಗವತಕೈಂಕರ್ಯಪರ್ಯಂತವಾಗಿ ಅನ್ವಯ ಉಂಟೆಂದು ಭಾವಿಸತಕ್ಕದ್ದು.

4. ನೀವು ಸತಾ ಪ್ತ್ರರಾದ ಇತರರಿಗೆ ಉಪದೇಶಿಸತಕ್ಕದ್ದು ಮೋಕ್ಷೋಪಾಯವಾದ ಪ್ರಪತ್ತಿಧರ್ಮವು ಇದನ್ನು ಇತರರು ಅನುಷ್ಠಿಸುವಹಾಗೆ ಮಾಡತಕ್ಕದ್ದು.

5. ಹೀಗೆ ಮಾಡಿಸಿದ ಕೃತಕೃತ್ಯನಿಗೆ ಮೇಲೆಹೇಳಿದಹಾಗೆ ಆಚಾರ್ಯರಲ್ಲಿ ಕೃತಜ್ಞತೆಯು ಇರುವಹಾಗೂ ದೇಹಾವಸಾನದವರಿವಿಗೂ ಮೇಲೆಹೇಳಿದಹಾಗೆ ಭಗವದ್ಭಾಗವತಕೈಂಕರ್ಯನಿರತರಾಗಿ ಅವರಿರುವ ಹಾಗೂ ಮಾಡತಕ್ಕದ್ದು.

ಕೆಲವು ಕಾಲ ಕಳೆದ ನಂತರ ಕೆಲವು ಶ್ರೀವೈಷ್ಣವರು ಕಾಂಚೀಪುರದಿಂದ ಯಾತ್ರಾರ್ಥವಾಗಿ ಬಂದು ಶ್ರೀಆಳವಂದಾರರವರಿಗೆ ಪ್ರಣಾಮಮಾಡಿ ನಿಂತಿರಲು ಅವರನ್ನು ಶ್ರೀಆಳವಂದಾರರು ಕಂಡು ಶ್ರೀರಾಮಾನುಜಾಚಾರ್ಯರವರ ಯೋಗಕ್ಷೇಮವನ್ನು ವಿಚಾರಿಸಲು, ಆಗ ಆ ಶ್ರೀವೈಷ್ಣವರುಗಳು, ಯಾದವಪ್ರಕಾಶರು “ ಸರ್ವಂ ಖಲ್ವಿದಂಬ್ರಹ್ಮ ” ಮುಂತಾದ ಕೆಲವು ಶ್ರುತಿಗಳಿಗೆ ಅಪಾರ್ಥವನ್ನು

ಹೇಳಿದುದರಿಂದ ಅವರನ್ನು ತ್ಯಜಿಸಿದರೆಂದೂ, ಈಗ ಶ್ರೀವರದರಾಜರಿಗೆ ತಿರುಮಂಜನಕೈಂಕರ್ಯಮಾಡಿಕೊಂಡಿದ್ದಾರೆಂದೂ ಹೇಳಿದರು. ಅದಕ್ಕೆ ತುಂಬಾ ಆನಂದಭರಿತರಾಗಿ ನಮ್ಮ ಪರ್ವನಸ್ಥಾಪಕರಾಗುವರೊಬ್ಬರು ಅವತರಿಸಬೇಕೆಂದು ತಾವು ಪ್ರಾರ್ಥಿಸಿ ಮಾಡಿದ ಶರಣಾಗತಿಯು ಫಲವೆಂದು ಭಾವಿಸಿ ಶ್ರೀರಾಮಾನುಜಾಚಾರ್ಯರವರನ್ನು ಕರೆದುಕೊಂಡು ಬರುವಹಾಗೆ ತಮ್ಮ ಶಿಷ್ಯರಾದ ಪೆರಿಯನಂಬಿಗೆ ಆಳವಂದಾರ್ರವರು ಆಜ್ಞಾಪಿಸಿದರು. ಪೆರಿಯನಂಬಿಗಳು ಕಾಂಚೀಪುರಕ್ಕೆ ಬಂದು ಆಳವಂದಾರ್‌ಸ್ತೋತ್ರದ ೦೩ನೇ ಶ್ಲೋಕವಾದ "ಸ್ವಾಭಾವಿಕಾನವಧಿಕಾ" ಎಂಬುವದನ್ನು ಯತಿರಾಜರು ಕೇಳುವಹಾಗೆ ಹೇಳಲು, ಅವರ ಸ್ವಾರಸ್ಯವನ್ನು ಗ್ರಹಿಸಿ ಯತಿವರ್ಯರು ಇದು ಯಾರು ಅನುಗ್ರಹಿಸಿದರೆಂದು ವಿಚಾರವಾಡಲು, ಅದಕ್ಕೆ ಪೆರಿಯನಂಬಿಗಳು ಯಾಮುನೇಯರೆಂದು ಹೇಳಲು, ಅದಕ್ಕೆ ಯತಿಗಳು ಅವರನ್ನು ನೋಡಬೇಕೆಂಬ ತಮ್ಮ ಸಂಕಲ್ಪವನ್ನು ಅರಿಕೇವಾಡಲು ಆಗ ಅವರೂ ಪೆರಿಯನಂಬಿಗಳೂ ಆಳವಂದಾರ್ರವರಲ್ಲಿಗೆ ಪ್ರಯಾಣವಾಡಿದರು. ಇಷ್ಟರಲ್ಲೇ ಯಾಮುನಮುನಿಗಳಿಗೆ ದೇಹಾವಸಾನಕಾಲ ಬದಗಲು, ಶ್ರೀನಾಥಮುನಿಗಳ ತಿರುವಡಿಯನ್ನು ಶಿರಸ್ಸಿನಲ್ಲಿ ಧರಿಸಿ, ಅವರ ಶ್ರೀಪಾದತೀರ್ಥವನ್ನು ಸ್ವೀಕರಿಸಿದವರಾಗಿ ದ್ವಯಮಂತ್ರೋಚ್ಚಾರಣೆಯನ್ನು ಮಾಡುತ್ತಾ ೦೫೫ ಸಂವತ್ಸರಗಳ ಕಾಲ ಪೃಥ್ವಿಯನ್ನು ಅಲಂಕರಿಸಿ, ಸ್ವಾಮಿಪಾದವನ್ನು ಹೊಂದಿದರು. ಆ ಕಾಲದಲ್ಲಿ ಅವರ ಕಣ್ಣಿನಲ್ಲಿ ಅಶ್ರುವೂ, ಮೂರು ಬೆರಳುಗಳು ಮಡಿಸಿದವುಗಳಾಗಿಯೂ ಇದ್ದವು. ಪೆರಿಯನಂಬಿಗಳೂ ಶ್ರೀಭಾಷ್ಯಕಾರರೂ ಇಬ್ಬರೂ ತುಂಬಾ ತ್ವರೆಯಿಂದ ಬಂದರೂ ಯಾಮುನಮುನಿಗಳು ಗತಿಸಿದುದನ್ನು ಕೇಳಿ ತುಂಬಾ ಪರಿತಾಪಪಟ್ಟವರಾಗಿ, ಅವರ ದಿವ್ಯಶರೀರವನ್ನು ಯತಿವರ್ಯರು ಕಂಡು ಪ್ರಣಾಮವಾಡಿ, ಕಣ್ಣಿನಲ್ಲಿ ನೀರೂ, ಮೂರು ಬೆರಳುಗಳು ಮಡಿಸಿರುವದಕ್ಕೆ ಕಾರಣವೇನೆಂದು ಪರಿಜನಂಗಳನ್ನು ಪ್ರಶ್ನಿಸಲು, ಅವಕ್ಕೆ ಸರಿಯಾದ ಕಾರಣವೇನೂ ತಮಗೂ ತಿಳಿಯದು, ಆದರೆ ಅವರಿಗೆ ವಿಶಿಷ್ಟಾದ್ವೈತಸಿದ್ಧಾಂತ ಸ್ಥಾಪನ ನಡಿಯಲಿಲ್ಲವೇ ಎಂಬ ಮನಸ್ಸಿನ ಕೊರತೆಯನ್ನೂ ಅವರಿಗೆ

ಗುರುಂಪ್ರಕಾಶಯೇದ್ಧೀರ್ಮಾ ಮಂತ್ರಂ ಯತ್ನೇನ ಗೋಪಯೇತ್ ।
ಅಪ್ರಕಾಶ ಪ್ರಕಾಶಾಭ್ಯಾಂ ಕ್ಷೀಯೆತೇಸಂಪದಾಯುಷೀ॥ ಎನ್ನಾರ್ಗಳ್.

ಇದ್ದ ಮೇಲೆಹೇಳಿದ ಮೂರು ಅಭಿಪ್ರಾಯಗಳನ್ನೂ ತಿಳಿಸಲು, ಆಗ ಯತಿರಾಜರು ಇವುಗಳೆಲ್ಲವನ್ನೂ ಸ್ವಾಮಿ ವರದನ ಕೃಪೆಯಿಂದ ತಾವು ನೆರವೇರಿಸುತ್ತೇವೆಂದು ಪ್ರತಿಜ್ಞೆಯನ್ನು ಮಾಡಲು, ಆ ಮಡಿಸಿದ ಮೂರು ಬೆರಳುಗಳೂ ಬಿಟ್ಟುಹೋದವು. ಯತಿರಾಜರು ತಮಗೆ ಆಳವಂದಾರೊಂದಿಗೆ ಸಮಾಗಮಸಂಭಾಷಣೆಗಳು ಪ್ರಾಪ್ತವಾಗಲಿಲ್ಲವೇ ಎಂಬ ಕೊರತೆಯಿಂದ ಸ್ವಾಮಿಶ್ರೀರಂಗನಾಥನನ್ನು ಸೇವಿಸದೇ ಹಿಂತಿರುಗಿ ಕಾಂಚಿಗೆ ಬಂದು ಕಾಲಕ್ರಮೇಣ ಆಳವಂದಾರರ ಮೂರು ಕೋರಿಕೆಗಳನ್ನು ಪೂರೈಸಿದರು. ಶ್ರೀಆಳವಂದಾರವರಿಗೆ ವರರಂಗರೆಂದೂ, ಪೊಟ್ಟನಂಬಿ ಎಂದೂ ಇಬ್ಬರು ಮಕ್ಕಳು.

ಶ್ರೀಭಾಷ್ಯಕಾರರ ಚರಿತ್ರೆಯು ಸಂಸ್ಕೃತದಲ್ಲಿ ಶ್ರೀರಾಮಾನುಜದಾಸರವರಿಂದ ಪ್ರಪನ್ನಾಮೃತವೆಂಬ ಹೆಸರಿನಿಂದ ಬರೆಯಲ್ಪಟ್ಟಿದೆ. ಇದನ್ನು ಮಹನೀಯರು ಭಾಷಾಂತರಮಾಡಿರುತ್ತಾರಾಗಿ ಪುನಃ ಬರೆಯುವದು ಅವಶ್ಯಕವಿರುವದಿಲ್ಲವು. ಇದು ಹಳಗನ್ನಡ ಮಿಶ್ರವಾಗಿರುತ್ತದೆ. ಸಾವಧಾನದಿಂದ ಅವಲೋಕಿಸಿದರೆ ಅರ್ಥವಾಗಬಹುದು. ಹಳೆಗನ್ನಡವು ಅನೇಕರಿಗೆ ಅರ್ಥವಾಗುವದಿಲ್ಲವೆಂಬ ಅಭಿಪ್ರಾಯವಿರುವ ಹಾಗೆ ತೋರುತ್ತದೆ. ಅನುಕೂಲಿಸಿದರೆ ದಾಸನೂ ಬಂದು ಸಂಗ್ರಹಚರಿತ್ರೆಯನ್ನು ಬರೆಯುವೆನು.

ಅರ್ಥ—ಧೀರ್ಮಾ-ಬುದ್ಧಿಶಾಲಿಯಾದವನು, ಗುರುಂ-ತನಗೆ ಬ್ರಹ್ಮವಿದ್ಯಾದಾತೃವಾದ ಆಚಾರ್ಯನನ್ನು, ಪ್ರಕಾಶಯೇತ್-ಪ್ರಕಾಶಗೊಳಿಸತಕ್ಕದ್ದು. ಅಂದರೆ ಅವರ ಮಹಿಮೆಯನ್ನು ಕೊಂಡಾಡತಕ್ಕದ್ದು, ಮಂತ್ರಂ - ಅವರು ಉಪದೇಶಿಸಿದ ಮೂಲಮಂತ್ರ, ದ್ವಯ, ಚರಮ ಶ್ಲೋಕಗಳನ್ನು, ಯತ್ನೇನ - ಪ್ರಯತ್ನಪೂರ್ವಕವಾಗಿ, ಗೋಪ

1 ಶೇಷಸಂಹಿತೆ, ೧೪, ೫೦.

ಗುರುನೈಯೊರುವ ಪ್ರಕಾಶಿಪ್ಪಿಕ್ಕರದುವುಂ, ಒರುವ ಪ್ರಕಾಶಿಪ್ಪಿಯೂದೊಳಿಗಿರುದುವುಂ ಗುರುಭಕ್ತಿಯಿ ತಾರತಮ್ಯತ್ತಾಲೆಯಿರೆ. ಭಗವದ್ವಿಷಯತ್ತಿರ್ಪೋಲೆ ಗುರುವಿಷಯತ್ತಿಲುಂ[1] ಪರೈ

ಯೇತ್ - ಸಂರಕ್ಷಿಸತಕ್ಕದ್ದು, ಅಂದರೆ ಅಪಾತ್ರನಲ್ಲಿ ವಿನಿಯೋಗಿಸಿ ಅಂಥಾವರಿಗೆ ಉಪದೇಶಿಸತಕ್ಕದ್ದಲ್ಲವ, ಸಚ್ಛಿಷ್ಯನಿಗೇ ಉಪದೇಶಿಸತಕ್ಕದ್ದೆಂಬ ಭಾವವು. ಅಪ್ರಕಾಶಪ್ರಕಾಶಾಭ್ಯಾಂ - ಇದು ಕ್ರಮಾಲಂಕಾರವು, ಹಾಗೆ ಮಾಡದೆ ಗುರುವಿನ ಮಹಿಮೆಯನ್ನು ಪ್ರಕಾಶಪಡಿಸದಿದ್ದರೂ ಮತ್ತೂ ಮಂತ್ರವನ್ನು ಗೋಪ್ಯವಾಗಿಡದೆ ಸಿಕ್ಕಿದವರಿಗೆಲ್ಲಾ ಉಪದೇಶಿಸಿದರೂ, ಸಂಪದಾಯುಷೀ - ಸಂಪತ್ತೂ ಆಯುಸ್ಸೂ ಎರಡೂ, ಕ್ಷೀಯೇತೇ - ನಾಶಹೊಂದುತ್ತವೆ. (ಇಲ್ಲಿ ಸಂಪದಾಯುಷೀ ಎಂಬುವದನ್ನು ಕ್ರಮಾಲಂಕಾರವಾಗಿಟ್ಟುಕೊಂಡು ಗುರುವಿನ ಅಪ್ರಕಾಶದಿಂದ ಸಂಪತ್ತೂ ಮಂತ್ರಪ್ರಕಾಶದಿಂದ ಆಯುಸ್ಸೂ ಕ್ಷೀಣವಾಗುತ್ತೆಂಬದಾಗಿಯಾಗಲಿ ಅಥವಾ ಪ್ರತಿಯೊಂದರಿಂದಲೂ ಈ ಎರಡು ಅನರ್ಥಗಳೂ ಪ್ರಾಪ್ತವಾಗುತ್ತವೆಂಬದಾಗಿಯಾಗಲಿ ಅರ್ಥಹೇಳಬಹುದು.ಹಿಂದೆ ಗುರು ಹೇಗೆ ಅವಶ್ಯಕವೆಂದೂ ಅತನಲ್ಲಿ ಏಕೆ ಕೃತಜ್ಞತಾವಿರಬೇಕೆಂದು ಹೇಳಿ, ಈಗ ಹಾಗೆ ಗುರುವಿನಲ್ಲಿ ಕೃತಜ್ಞತಾಭಾವವಿಲ್ಲದಿದ್ದರೆ ಪ್ರತ್ಯವಾಯ ಉಂಟೆಂದು ಈ ಶ್ಲೋಕದಿಂದ ತಿಳಿಸುತ್ತಾರೆ. " ಸಂಪದಾಯುಷೀ " ಎಂಬುವದಕ್ಕೆ ಜ್ಞಾನಸಂಪತ್ತೂ ಮತ್ತೂ ಮಂತ್ರನಿಷ್ಠೆ ಎಂಬದಾಗಿ ವ್ಯಾಖ್ಯಾನ ಮಾಡಲ್ಪಟ್ಟಿರುತ್ತದೆ. ಬ್ರಹ್ಮವಿತ್ತಾದ ಪ್ರಪನ್ನನಿಗೆ ಐಹಿಕಸಂಪತ್ತೂ ಆಯುಸ್ಸುಗಳೂ ಬೇಕಾಗಿಲ್ಲವಾದುದರಿಂದ ಜ್ಞಾನಸಂಪತ್ತೇ ಮೊದಲಾದವೇಸಂಪದಾಯುಸ್ಸುಗಳೆಂದು ಭಾವಿಸತಕ್ಕದ್ದು.)

ಗುರುವನ್ನು ಒಬ್ಬ ಶಿಷ್ಯನು ಪ್ರಕಾಶಿಸುವಹಾಗೆ ಮಾಡುವದೂ, ಮತ್ತೊಬ್ಬ ಶಿಷ್ಯನು ಹಾಗೆ ಮಾಡದಿರುವದೂ ಅವರವರುಗಳಿಗೆ ಗುರುವಿನಲ್ಲಿರುವ ಭಕ್ತಿತಾರತಮ್ಯದಿಂದಲೇ ವಿನಾ ಬೇರಿಲ್ಲವು. ದೇವಭಕ್ತಿ

---

1 ಪರೈಯಾನ - ಅಧಿಕವಾದ.

ಯಾವ ಭಕ್ತಿಯುಳ್ಳವನಿಗೆ ಹೇಗೋ ಹಾಗೆ ಶ್ರೇಷ್ಠವಾದ ಗುರುಭಕ್ತಿಯುಳ್ಳವನಿಗೂ ಕೂಡ, ಅಪೇಕ್ಷಿತಗಳಾದ ಸರ್ವಾಭೀಷ್ಟಗಳೂ ಪ್ರಕಾಶತೆಯನ್ನು ಹೊಂದುತ್ತವೆ, ಅಂದರೆ ಸಿದ್ಧಿಸುತ್ತವೆ ಎಂಬುವದು ಕಠಜಾಬಾಲಾದಿ ಶ್ರುತಿಪ್ರಮಾಣಗಳಿಂದಲೂ ಸಂಜಯ ಮೊದಲಾದ ವೃತ್ತಾಂತಗಳಿಂದಲೂ ಪ್ರಸಿದ್ಧವಾದ ವಿಷಯವು. ಹಾಗೆ ಗುರುವಿನ ವಿಷಯದಲ್ಲಿ ಅಂತಹ ಭಕ್ತಿ ಇಲ್ಲದೇ ಇರುವ ಶಿಷ್ಯರ ವಿಷಯದಲ್ಲಿ (ಭಕ್ತಿಯಿಂದಲೇ ಜ್ಞಾನವುಂಟಾಗುತ್ತದೆ, ಭಕ್ತಿಯಿಲ್ಲದಿದ್ದರೆ ಜ್ಞಾನವಿಲ್ಲವಾದುದರಿಂದ) ಜ್ಞಾನ ಸಂಪತ್ತುಂಟಾಗಲಾರದೆಂಬುವ ವಿಷಯವನ್ನು ಶಿಷ್ಯರುಗಳ ಜ್ಞಾನದಲ್ಲಿರುವ ತಾರತಮ್ಯಭಾವದಿಂದ ತಿಳಿದುಕೊಳ್ಳತಕ್ಕದ್ದು. (ಸಂಜಯವೃತ್ತಾಂತವು ಯಾವುದೆಂದರೆ—

ಶುದ್ಧಭಾವಂಗತೋ ಭಕ್ತ್ಯಾಶಾಸ್ತ್ರಾದೇವೇದ್ಮಿ ಜನಾರ್ದನಂ ।
ವ್ಯಾಸಪ್ರಸಾದಾಚ್ಛ್ರುತವಾನೇತದ್ಗಹ್ಯಮಹಂ ಪರಂ ।
ಯೋಗಂಯೋಗೇಶ್ವರಾತ್ಕೃಷ್ಣಾತ್ಸಾಕ್ಷಾತ್ಕಯಥತಸ್ಸ್ವಯಂ ॥

---

೭ ಕಠಶ್ರುತಿ—" ಯಸ್ಯದೇವೇ ಪರಾಭಕ್ತಿರ್ಯಥಾದೇವೇ ತಥಾಗುರೌ ।
ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥" ಯಾವ ಮಹಾತ್ಮನಿಗೆ ದೇವರಲ್ಲಿ ಪರಾಭಕ್ತಿ ಇರುತ್ತದೆಯೋ ಮತ್ತು ಯಾವನಿಗೆ ದೇವರಲ್ಲಿರುವ ಹಾಗೆಯೇ ಗುರುವಿನಲ್ಲೂ ಭಕ್ತಿಯಿರುತ್ತದೆಯೋ ಅಂತವನಿಗೆ ಯಾವ ಯಾವ ಪುರುಷಾರ್ಥಗಳು ಹೇಳಲ್ಪಟ್ಟಿರುವವೋ ಅವೆಲ್ಲವೂ ಪ್ರಕಾಶಿಸುತ್ತವೆ, ಅಂದರೆ ಸಿದ್ಧಿಸುತ್ತವೆ ಎಂದು ಹೇಳಿರುತ್ತದೆ. ಪರಭಕ್ತಿ ಎಂದರೆ ಶಾಸ್ತ್ರಮುಖದಿಂದ ತಿಳಿದ ವಿಷಯವನ್ನು ಈಗಲೇ ಕಾಣಬೇಕೆಂಬ ಇಚ್ಛೆಯುಳ್ಳ ಭಕ್ತಿಯು. ಜಾಬಾಲ ಶ್ರುತಿಯು ಹೇಳುತ್ತದೆ :—" ಆಚಾರ್ಯಾದ್ಧೈವವಿದ್ಯಾ ವಿದಿತಾಸಾಧಿಷ್ಠಂ ಪ್ರಾಪತ್ " ಅಂದರೆ ಆಚಾರ್ಯರಿಂದ ಉಪದೇಶಿಸಲ್ಪಟ್ಟ ವಿದ್ಯೆಯೇ ಪ್ರಾಶಸ್ತ್ಯವನ್ನು ಹೊಂದುತ್ತದೆ.

ಇಪ್ಪಡಿಜ್ಞಾನಸಂಪತ್ತುಂಡಾಗಾದೆನ್ನುಮಿಡಂಶಿಷ್ಯರ್‌ಗಳುಡೈಯ ಜ್ಞಾನತಾರತಮ್ಯತ್ತಾಲೆ ಕಂಡುಕೊಳ್ಳುವು. ಮಿಕವುಂ ಗುಣಾಧಿಕರಾನ ಶಿಷ್ಯರ್‌ಗಳುಕ್ಕುಂ ಕಡುಗ ಅಧ್ಯಾತ್ಮವಿಷಯಂಗಳೈ ಪ್ರಕಾಶಿಪ್ಪಿಯೊದಾರ್ಕ್ಕು ನಿಷ್ಕೃಷ್ಟಿಯಾದೆನ್ನುಮಿಡಂ[1] ರೈಕ್ವಾದಿವೃತ್ತಾಂತಗಳಿಲೆ ಪ್ರಸಿದ್ಧಂ. ಪೆತ್ತಡುವೆ[2] ಗುಣವಾಕ

ವ್ಯಾಸಮಹರ್ಷಿಯ ಪರಿಪ್ರಾಣಾರ್ಥಾನುಗ್ರಹದಿಂದ ಶ್ರೇಷ್ಠವಾದ ರಹಸ್ಯಾರ್ಥಗಳನ್ನು ಗ್ರಹಿಸಿದವನಾಗಿ, ಭಕ್ತಿಯ ಮಹಾತ್ಮ್ಯೆಯಿಂದ ಪರಿಶುದ್ಧಭಾವವನ್ನು ಹೊಂದಿದವನಾಗಿ, ಶಾಸ್ತ್ರೋಪದೇಶದಿಂದ ಜನಾರ್ದನನಾದ ಸ್ವಾಮಿಯನ್ನು ಸಾಕ್ಷಾತ್ಕರಿಸಿದೆನು. ತಾನೇ ಸಾಕ್ಷಾತ್ತಾಗಿ ಉಪದೇಶಿಸುವ ಯೋಗಕ್ಕೆಲ್ಲಾ ಈಶ್ವರನೆನಿಸುವ ಶ್ರೀಕೃಷ್ಣನಿಂದ ಯೋಗವನ್ನು ಸಾಕ್ಷಾತ್ಕರಿಸಿದೆನು" ಎಂಬುವದರಿಂದಲೂ ಗುರುವಿನಲ್ಲಿ ತೋರುವ ಭಕ್ತಿಯಿಂದಲೇ ಜ್ಞಾನಸಂಪತ್ತೆಂಬುದು ವ್ಯಕ್ತಪಡುತ್ತದೆ. ಜ್ಞಾನತಾರತಮ್ಯವು ಶಿಷ್ಯರುಗಳು ಕೇಳಿ ತಿಳಿಯುವದರಲ್ಲಿನ ತಾರತಮ್ಯದಿಂದಲ್ಲವೇ ಉಂಟಾಗತಕ್ಕದ್ದು ಎಂದರೆ, ಹಾಗಲ್ಲವು. ಜ್ಞಾನತಾರತಮ್ಯಕ್ಕೆ ಗುರುಭಕ್ತಿಯಲ್ಲಿರುವ ವ್ಯತ್ಯಾಸವೇ ಕಾರಣವೆಂಬದಾಗಿ " ಇಂಗನಲ್ಲಾರಕ್ಕು " ಎಂಬ ವಾಕ್ಯದಿಂದ ಸಮರ್ಥನವಾಡಿ ಹೇಳಿರುತ್ತಾರೆ.) ಇನ್ನು ಗುರುವಿನ ಅಪ್ರಕಾಶ, ಮಂತ್ರಪ್ರಕಾಶಗಳಿಂದ ಸಂಪದಾಯುಸ್ಸುಗಳು ಕ್ಷೀಣವಾಗುತ್ತವೆಯಾದುದರಿಂದ ಶಿಷ್ಯನನ್ನು ಪರೀಕ್ಷಿಸಿ, ಯೋಗ್ಯನಾದ ಸಚ್ಛಿಷ್ಯನಿಗೇನೇ ಬ್ರಹ್ಮಜ್ಞಾನ ಮಂತ್ರೋಪದೇಶಗಳನ್ನು ಉಪದೇಶಿಸತಕ್ಕದ್ದೆಂಬುವದನ್ನು ಉದಹರಿಸಿರುತ್ತಾರೆ. "ಆದರೆ ಆಚಕಾರ್ಯೋಽನ್ಯನಾಚಕಾರ್ಯೋಭವತಿ ಶ್ರುತಾತ್ಪರಿಹರವಾಣಃ " ಅಂದರೆ ಕೇಳಿ ತಿಳಿಯಬೇಕೆಂಬವನಿಗೆ ತಿಳಿಸದೇ ಇರುವ ಆಚಕಾರ್ಯನು ಅನಾಚಕಾರ್ಯನೆನಿಸುವನು ಎಂಬದಾಗಿ ಹೇಳಿದೆಯ

---

1 ಕಡುಕ - ತೀಕ್ಷ್ಣವಾಗಿ. 2 ಭಕ್ತದ್ವೇಷಿಗಳನ್ನು ಮರ್ದನಮಾಡುವವನು.
3 ಪೆತ್ತದು - ಬಂದು ಆಶ್ರಯಿಸಿದ್ದು.

ಉಪದೇಶಿತ್ತಾಲ್ "ಶಿಷ್ಯಪಾಪಂ ಗುರೋರಪಿ" ಎನ್ಕೈಯಾಲೇಆಚಾರ್ಯ

ಲ್ಲ, ಕೆಲವು ಶಿಷ್ಯರುಗಳನ್ನು ತಿರಸ್ಕರಿಸಬಹುದೇ ಎಂಬ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ. ಅತ್ಯಂತ ಗುಣಾಧಿಕರಾದ ಶಿಷ್ಯರು ಗಳಿಗೂ ಕೂಡ ಬಂದುವೇಳೆ ಅಧ್ಯಾತ್ಮವಿದ್ಯೆಯನ್ನು ಒಡನೆ ಉಪದೇಶಿಸದೇ ಇರುವ ಗುರುವಿಗೂ ಕೂಡ ನಿಷ್ಕೃತಿಯೂ (ಆಯುಸ್ಸು) ಕರ್ಮಕ್ಷಯವಾಗುವದಿಲ್ಲವೆಂಬಂಶವು ರೈಕ್ವರೇ ಮೊದಲಾದವರುಗಳ ವೃತ್ತಾಂತದಿಂದ ಪ್ರಸಿದ್ಧವಾದುದು.

ರೈಕ್ವರ ವೃತ್ತಾಂತವು—ಇದು ಛಾಂದೋಗ್ಯೋಪನಿಷತ್ತಿನಲ್ಲಿ ಬರುತ್ತದೆ. ಜಾನುಶ್ರುತಿಯೆಂಬ ಸಾರ್ವಭೌಮನು ತನ್ನ ರಾಜ್ಯದಲ್ಲಿ ಯಾರೊಬ್ಬರೂ ಅನ್ನಪಾನಾದಿಗಳಿಲ್ಲದೆ ಕ್ಲೇಶಪಡಕೂಡದೆಂಬಭಿಪ್ರಾಯದಿಂದ ಸರ್ವರಿಗೂ ವೃತ್ತಿಗಳನ್ನು ಕಲ್ಪಿಸಿ ಬಹುಧರ್ಮಿಷ್ಠನಾಗಿ ರಾಜ್ಯಪರಿಪಾಲನೆಮಾಡುತ್ತಿದ್ದನು. ಇಂಥಾವನಿಗೆ ಬ್ರಹ್ಮವಿದ್ಯೆಇಲ್ಲದೆಯೂ ಅದರಿಂದ ಮೋಕ್ಷಪ್ರಾಪ್ತಿಯಿಲ್ಲದೆಯೂ ಇರತಕ್ಕದ್ದು ಸರಿಯಲ್ಲವೆಂದು ಕೃಪಾಸಾಗರನು ತಾನೇ ಉಪಾಯವಾದುದರಿಂದ, ಇಬ್ಬರು ಋಷಿಗಳು ಹಂಸವೇಷವನ್ನು ತಾಳಿ ಜಾನುಶ್ರುತಿಯ ಹತ್ತಿರ ಹೋಗುವಹಾಗೆ ಸ್ವಾಮಿಯೇ ಪ್ರೇರೇಪಿಸಿದನು. ಆ ಇಬ್ಬರು ಋಷಿಗಳೂ ಆ ರಾಜನು ಅನ್ನದಾನಮಾಡುವ ಸಂಭ್ರಮದಿಂದ ಹರ್ಷಿತರಾಗಿ, ಆ ರಾಜನಿಗೆ ತಿಳಿಯದ ಹಾಗೆ ಈ ಹಂಸವೇಷವನ್ನು ತಾಳಿದವರಾಗಿ, ಅದರಲ್ಲೊಂದು ಹಂಸವು, ತನ್ನ ಸ್ನೇಹಿತನನ್ನು ಕುರಿತು "ಓ ಭಲ್ಲಾಕ್ಷನೇ, ಆ ಜಾನುಶ್ರುತಿಯ ತೇಜಸ್ಸು ಎಷ್ಟು ಪ್ರಕಾಶವಾದುದು, ನೀನುಹತ್ತಿರಹೋಗಬೇಡ ನಿನ್ನನ್ನು ದಹಿಸಬಿಟ್ಟೀತು" ಎನ್ನಲು, ಅದಕ್ಕೆ ಇನ್ನೊಂದು ಹಂಸವು ನಕ್ಕು "ಓ ಸ್ನೇಹಿತನೇ, ಈ ಐಹಿಕದಲ್ಲೇ ಮಗ್ನನಾದವನ ತೇಜಸ್ಸು ನಮಗೇನು ಮಾಡೀತು. ರೈಕ್ವರಾದರೆ ಕರ್ಮಜ್ಞಾನಗಳೆರಡರಿಂದುಂಟಾಗುವ ಸಂಪತ್ತನ್ನು

1 ಮನುಧರ್ಮಶಾಸ್ತ್ರ.

ನಕ್ಕು ನಿಷ್ಕೃ, ಕುಲ್ಮೈಯುಂಪಡಿಯೂ[1] ಮೆನ್ನುಮಿಡಂ ವರು
ವದು ವಿಚಾರಿಯಾದೇ ಇಂದ್ರನಕ್ಕು ಉಪದೇಶಿತ್ತು ತಾನುಂ

ವಡದವರು, ಈ ರಾಜನಾದರೋ ಆ ರೈಕ್ವರ ಹಾಗೆ ಬ್ರಹ್ಮವಿತ್ತೋ, ಈತನ ತೇಜಸ್ಸು ಏನುಮಾಡೀತೆಂದು ರಾಜನನ್ನು ಬಹು ನಿಕೃಷ್ಟವಾಗಿ ಹೇಳಲು", ಈ ಹಂಸಗಳ ಸಂವಾದವನ್ನು ಕೇಳಿದ ರಾಜನು ಈ ನಿಕೃಷ್ಟವಾಕ್ಯದಿಂದ ಬ್ರಹ್ಮಜ್ಞಾನ ತನಗಿಲ್ಲವೇ ಎಂಬ ಶೋಕವು ಹುಟ್ಟಲು ಬಹವೇ ತನ್ನ ಸಾರಥಿಯನ್ನು ಕರೆದು ರೈಕ್ವರನ್ನು ಕಂಡುಹಿಡಿಯುವ ಹಾಗೆ ಹೇಳಿಕಳುಹಿಸಿ, ಅವರಿರುವ ಸ್ಥಳವನ್ನು ತಿಳಿದು, ಅನೇಕ ಗೋ ಗಳು, ಹಾರ, ಹೇಸರಕತ್ತೆಗಳು ಕಟ್ಟಿದ ರಥ ಮುಂತಾದವುಗಳನ್ನು ಆ ರೈಕ್ವರಿಗೆ ಗುರುದಕ್ಷಿಣೆಯಾಗಿ ಸಮರ್ಪಿಸಿ, ಬ್ರಹ್ಮಜ್ಞಾನೋಪದೇಶವನ್ನು ಪ್ರಾರ್ಥಿಸಲು. ಆ ಮಹರ್ಷಿಯು ತನ್ನ ಜ್ಞಾನ ಚಕ್ಷುಸ್ಸಿನಿಂದ ಈ ಮಹನೀಯನಾದ ಶಿಷ್ಯನಿಗೆ ಬ್ರಹ್ಮಜ್ಞಾನವಿಲ್ಲದ ಶೋಕ ಉತ್ಪನ್ನವಾದುದರಿಂದ ಆತನನ್ನು ಶೂದ್ರ (ಅಂದರೆ ಶೋಕಾಕುಲನೆಂದು ಭಾವವು) ಎಂದು ಸಂಬೋಧನೆಮಾಡಿ, ಯಾವಾಗ ವಿದ್ಯೆಯಿಲ್ಲವೆ ಎಂಬ ಶೋಕವು ಹುಟ್ಟಿತೋ ಆಗ ಈತನು ಕ್ಷತ್ರಿಯನಾಗಿ ತ್ರೈವರ್ಣಿಕರವರಲ್ಲಿ ಸೇರಿರುವದರಿಂದ ಅಧ್ಯಾತ್ಮವಿದ್ಯೆಯನ್ನಧಿಕರಿಸಲು ಅಧಿಕಾರವಿದ್ದರೂ ಗುರುದಕ್ಷಿಣೆಯನ್ನು ಸಮರ್ಪಿಸಿದುದು ಆ ರಾಜನ ಅಂತಸ್ಥಿಗೆ ಯೋಗ್ಯವಾದುದಲ್ಲವಾದುದರಿಂದ, ಆ ರಾಜನನ್ನು ಕುರಿತು ಈ ಹಾರಗೋವುಗಳು ಮುಂತಾದವು ನಿನಗೇ ಇರಲಿ ಎನ್ನಲು, ಜಾನುಶ್ರುತಿಯು ಪುನಃ ಇನ್ನೂ ಹೆಚ್ಚು ಆಕಳುಗಳನ್ನೂ ವಿಪುಳಧನವನ್ನೂ, ತನ್ನ ಮಗಳನ್ನೂ ತಂದು ಸಮರ್ಪಿಸಿ, ಪುನಃ ಉಪಸರ್ಪಣಮಾಡಿದರು. ಅದನ್ನು ರೈಕ್ವರು ಸ್ವೀಕರಿಸಿದವರಾಗಿ ಜಾನುಶ್ರುತಿಯನ್ನು ಕುರಿತು ನೀನು ಗುರುಶುಶ್ರೂಷೆಯನ್ನು ಮಾಡದೇ ಇದ್ದರೂ ಅದಕ್ಕೆ ಬದಲಾಗಿ ಈ ಗುರುದಕ್ಷಿಣೆ ತಂದಿದ್ದರಿಂದ ನಿನಗೆ ಅಧಿಕಾರ ಉಂಟಾಯಿತೆಂದು ಹೇಳಿ ಬ್ರ

1 ಕುಲ್ಮೈಯುಂಪಡಿಯಾಂ - ಕ್ಷೀಣವಾಗುವದು.

ಬ್ರಹ್ಮವಿದ್ಯೆಯೈ ವುರಂದು ತಕ್ಕಶಿಷ್ಯನಾನ ನಾರದಭಗವಾನೈ ಯಿಟ್ಟು ಸರ್ವೇಶ್ವರನುಣರ್ತಿ[1] ವಿಕ್ಕವೇಂಡುಂಪಡಿ ಯಿರುಂದ ಚತುರ್ಮುಖಪಕ್ಕಲಿಲೆ ಕಂಡುಕೊಳ್ವದು. ಇಪ್ಪಡಿ "ಅಪ್ರಕಾಶಪ್ರಕಾಶಾಭ್ಯಾ" ಮೆಂಗಿರವಿರಂಡುಕುಕ್ಕಂ "ಕ್ಷೀಯೇತೆ ಸಂಪ

ಹ್ಮವಿದ್ಯೆಯನ್ನು ಉಪದೇಶಮಾಡಿದರು. ರೈಕ್ವರು ಮೊದಲುಸಲ ಜಾನುಶ್ರುತಿಗೆ ಉಪದೇಶಿಸದಿದ್ದರೂ ರೈಕ್ವರಮಹಿಮೆಗೆ ಏನೊಂದೂ ಪ್ರತ್ಯವಾಯ ಉಂಟಾಗಲಿಲ್ಲವೆಂಬುವದನ್ನು ಈ ವೃತ್ತಾಂತವು ಸೂಚಿಸುತ್ತದೆ. ಆದುದರಿಂದ "ಪರೀಕ್ಷ್ಯವಿವಿಧೋಪಾಯೈಃ ಕೃಪಯಾನಿಸ್ಪೃಹೋವದೇತ್" ಅಂದರೆ ಆಚಾರ್ಯನಾದವನು ಶಿಷ್ಯನನ್ನು ಸರ್ವಪ್ರಕಾರದಿಂದಲೂ ಚನ್ನಾಗಿ ಪರೀಕ್ಷಿಸಿ ಆತನು ಯೋಗ್ಯನಾಗಿ ಬ್ರಹ್ಮವಿದ್ಯೆಗೆ ಅರ್ಹನಾಗಿದ್ದಪಕ್ಷದಲ್ಲಿ ಅವನಲ್ಲಿ ತುಂಬಾ ಕೃಪೆಯನ್ನು ತೋರಿ ಪ್ರತಿಫಲವೇನನ್ನೂ ಅಪೇಕ್ಷಿಸದೆ ಆತನಿಗೆ ಉಪದೇಶಿಸತಕ್ಕದ್ದು. (ಇನ್ನು ಮುಂದೆ ಶಿಷ್ಯನಪ್ರಾರ್ಥನೇಮೇರಿಗೆ, ಪರೀಕ್ಷಿಸದೇ ಅಪಾತ್ರನಾವಪನಿಗೆ ಬ್ರಹ್ಮವಿದ್ಯೆ ಉಪದೇಶಿಸಿದರೆ ಪ್ರತ್ಯವಾಯ ಉಂಟೆಂದು ನಿದರ್ಶನಪೂರ್ವಕ "ಪೆತ್ತದು" ಎಂಬದಾಗಿ ಆರಂಭಿಸಿ ಸಮರ್ಥನ ಮಾಡುತ್ತಾರೆ.) ಬಂದು ಆಶ್ರಯಿಸಿದುದನ್ನೇ ಬಂದು ಗುಣವೆಂದು ಭಾವಿಸಿ, ಬಂದವನನ್ನು ಚನ್ನಾಗಿ ಪರೀಕ್ಷಿಸದೆ ಉಪದೇಶಿಸಿದರೆ,

ರಾಜ್ಞೋರಾಷ್ಟ್ರಕೃತಂಪಾಪಂ ರಾಜಪಾಪಂ ಪುರೋಧಸಃ ।
ಭರ್ತುಸ್ಸ್ತ್ರೀಕೃತಂಪಾಪಂ ಶಿಷ್ಯಪಾಪಂ ಗುರೋರಪಿ ॥

ಅಂದರೆ ರಾಷ್ಟ್ರಜನಗಳು ಮಾಡಿದಪಾಪವು ರಾಜನಿಗೂ, ರಾಜನ ಪಾಪವು ಆತನ ಪುರೋಹಿತನಿಗೂ, ಸ್ತ್ರೀಮಾಡಿದ ಪಾಪವು ಗಂಡನಿಗೂ, ಶಿಷ್ಯನ ಪಾಪವು ಗುರುವಿಗೂ ಸಂಬಂಧಿಸುತ್ತವೆ ಎಂದು ಹೇಳಿ

---

1 ಉಣರ್ತಿವಿಕ್ಕವೇಂಡುಪಡಿ-ಹೇಗೆ ಪುನಃ ಸ್ಮೃತಿಯುಂಟಾದೀತೆಂಬ ಹಾಗೆ.

ದಾಯುಷೀ " ಎಂಗಿರಫಲಂಗಳೈ ಔಚಿತ್ಯತ್ತಾಲುಂ, ಪ್ರಮಾಣ ಪ್ರಸಿದ್ಧಿಯಾಲುಂ ಕ್ರಮತ್ತಾಲೇ ಉದಾಹರಿತ್ತವಿತ್ತನೈ. ಇರಂಡಿಲು ಮಿರಂಡುಫಲವುನ್ನಿಯತ್ತಾಲುಂ ವಾಕ್ಯತ್ತಿಲ್ ಪರುಂ ವಿರೋಧಮಿಲ್ಲೈ.

ರುವದರಿಂದ, ಆಚಾರ್ಯನ ನಿಷ್ಠೆಯು (ಇದೇ ಅತನ ಸಂಪದಾಯು ಸ್ಸುಗಳು) ನಾಶವಾಗುವದು ಎಂಬುವದನ್ನು, ಇಂದ್ರನು ಬಂದು ಆಶ್ರಯಿಸಿದ ಒಡನೆಯೇ ಸರಿಯಾಗಿ ವಿಚಾರಿಸದೆ ಚತುರ್ಮುಖಬ್ರಹ್ಮನು ತನಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದುದರಿಂದ ಚತುರ್ಮುಖನಿಗೆ ತನ್ನ ಬ್ರಹ್ಮವಿದ್ಯೆಯೆಲ್ಲಾ ಮರತುಹೋಗಿ ಸರ್ವೇಶ್ವರನು ಹೇಗೆ ಜ್ಞಾನವನ್ನು ಕೊಟ್ಟಾನೋ ಎಂಬಪೇಕ್ಷೆಯಲ್ಲಿದ್ದು ತನ್ನ ಶಿಷ್ಯನಾದ ನಾರದ ಮಹರ್ಷಿಯಮೂಲಕ ಪುನಃ ಪಡೆದನೆಂಬೀ ಚತುರ್ಮುಖವೃತ್ತಾಂತದಿಂದ ತಿಳಿಮುಕೊಳ್ಳಬಹುದು. (ಇಂದ್ರನು ಸ್ವರ್ಗಭೋಗದಲ್ಲಿ ಮುಮುತೆಯುಳ್ಳವನಾಗಿಯೂ ಬ್ರಹ್ಮಜ್ಞಾನದಲ್ಲಿ ತುಂಬಾ ಆಸಕ್ತಿ ಇಲ್ಲದೆ ವಿರಕ್ತಿಭಾವಶೂನ್ಯನಾಗಿದ್ದುದರಿಂದ ಅಂಥವನಿಗೆ ವಿಚಾರಮಾಡದೇ ಚತುರ್ಮುಖನು ಉಪದೇಶಿಸಿದನಾದುದರಿಂದ, ಆ ಬ್ರಹ್ಮವಿದ್ಯೆಯೆಲ್ಲಾ ಅತನಿಗೆ ಮರೆತುಹೋಗಿ, ತನ್ನ ಮಗನಾದ ನಾರದಮಹರ್ಷಿಯಿಂದ

---

1 ಔಚಿತ್ಯತ್ತಾಲುಂ—ಇಲ್ಲಿ ಔಚಿತ್ಯ ಯಾವದು ಎಂದರೆ ಶ್ಲೋಕದಲ್ಲಿ " ಗುರುಂ ಪ್ರಕಾಶಯೇತ್ " ಮತ್ತು " ಮಂತ್ರಂಗೋಪಯೇತ್ " ಎಂದು ಎರಡು ವಿಧಿವಚನಗಳಿರುವದರಿಂದ ಅವುಗಳನ್ನು ಉಲ್ಲಂಘಿಸಿದರೆ ಕ್ರಮವಾಗಿ ಜ್ಞಾನಸಂಪತ್ತು ಮತ್ತು ನಿಷ್ಠೆಯ ನಾಶವು ಒಂದರಿಂದ ಒಂದು ಪ್ರಾಪ್ತವಾಗುತ್ತದೆಂದು ಅರ್ಥಹೇಳುವದು ಉಚಿತವೆಂದು ಭಾವವು. ಕಠಶಾಖಾಬಾಲಶ್ರುತಿಪ್ರಮಾಣಗಳಿಂದಲೂ. ರೈಕ್ವ, ಸಂಜಯಾಶ್ವಲಾಯನ, ಚತುರ್ಮುಖವೃತ್ತಾಂತಗಳ ಪ್ರಮಾಣಗಳಿಂದಲೂ ಹೀಗೆ ಅರ್ಥಮಾಡುವದು ನ್ಯಾಯವೆಂಬದಾಗಿ " ಪ್ರಮಾಣ ಪ್ರಸಿದ್ಧಿಯಾಲುಂ " ಎಂದು ಅಪ್ಪಣೆ ಕೊಡಿಸಿರುತ್ತಾರೆ.

ಆಕೈಯಾಲ್ ಸರ್ವಾವಸ್ಥೈಯಿಲುಂ ಗುರುಭಕ್ತಿಯಿಲ್ ಪರೀ
ವಾಹಮಾಕ ಗುರುವೈ ಪ್ರಕಾಶಿಕ್ಕವುಂ, ಮಹಾರತ್ನಗರ್ಭಮಾ
ನವಾಣಿಕ್ಕ ಚೊಪ್ಪಪ್ಪೊ ೀಲೆ ಇರುಕ್ಕಿರತಿರುಮಂತ್ರತ್ತಿನುಡೈಯ

ಪುನಃ ಉಪದೇಶಹೊಂದಿ ಬ್ರಹ್ಮವಿತ್ತಾದನು ಎಂದು ಬೃಹನ್ನಾರದೀಯ ಉಪಾಖ್ಯಾನವಿರುತ್ತದೆ.)

ಹೀಗೆ ಗುರುವನ್ನು ಪ್ರಕಾಶಮಾತದಿರುವದೂ, ಮಂತ್ರವನ್ನು ಪ್ರಕಾಶಮಾಡಿ ಬಹಿರಂಗ ಪಡಿಸುವದೂ ಎನ್ನುವ ಈ ಎರಡಕ್ಕೂ ಜ್ಞಾನಸಂಪತ್ತೂ ನಿಷ್ಠೆಯೂ ನಾಶವಾಗುವವು ಎಂಬ ಫಲಗಳು ಔಚಿತ್ಯವನ್ನು ಹೇಳುವದಕ್ಕಾಗಿಯೂ ಪ್ರಮಾಣಪ್ರಸಿದ್ಧಿ ಇರುವದರಿಂದಲೂ ಕ್ರಮವಾಗಿ ಗುರುವಿನ ಅಪ್ರಕಾಶಕ್ಕೆ ಜ್ಞಾನಸಂಪತ್ತಿನ ಕ್ಷೀಣತೆಯನ್ನೂ, ಮಂತ್ರಪ್ರಕಾಶಕ್ಕೆ ನಿಷ್ಠೆಯ ಕ್ಷೀಣತೆಯನ್ನೂ ಉದಾಹರಿಸಿದೆವೇ ವಿನಾ ಬೇರೆ ಇಲ್ಲವು. ಆದರೆ ಈ ಎರಡಕ್ಕೂ ಈ ಎರಡು ಫಲಗಳೂ ಉಂಟು ಎಂದರೆ ಗುರುವಿನ ಅಪ್ರಕಾಶದಿಂದ ಸಂಪದಾಯುಸ್ಸುಗಳ ಕ್ಷೀಣತೆಯೂ, ಹಾಗಯೇ ಮಂತ್ರಪ್ರಕಾಶದಿಂದಲೂ ಈ ಎರಡು ಫಲಗಳೂ ಸಂಭವಿಸುತ್ತವೆಂಬದಾಗಿ ಹೇಳಿ ಅನ್ವಯಿಸಿದರೂ ವಾಕ್ಯದಲ್ಲಿ ಏನೂ ವಿರೋಧ ಉಂಟಾಗುವದಿಲ್ಲವು.

ಆದುದರಿಂದ ಎಲ್ಲಾ ಅವಸ್ಥೆಗಳಲ್ಲೂ (ಅಂದರೆ ಜ್ಞಾನ ಉಂಟಾಗುವದಕ್ಕೆ ಮುಂಚಿತವಾಗಿಯೂ, ಜ್ಞಾನೋತ್ಪತ್ತಿಯುಂಟಾಗಿ ವೃದ್ಧಿಯಾಗುವ ಅವಸ್ಥೆಯಲ್ಲೂ, ತದನಂತರಾವಸ್ಥೆಯಾದ ಪ್ರಾರಬ್ಧಮೂಲಕ ಉಂಟಾಗುವ ಹರ್ಷ ಶೋಕಾವಸ್ಥೆ ಇವುಗಳಲ್ಲೆಲ್ಲಾ) ಸಂಪೂರ್ಣವಾದ ಗುರುಭಕ್ತಿಯು ಹೆಚ್ಚಿ ಪ್ರವಹಿಸುವ ಹಾಗೆ ಗುರುವನ್ನು ಪ್ರಕಾಶಗೊಳಿಸತಕ್ಕದ್ದು. (ಗುರುಭಕ್ತಿಯಿಂದಲೇ ಜ್ಞಾನೋತ್ಪತ್ತಿಯೆಂಬ ಭಾವವು. ಅನಂತರ ಗುರುಭಕ್ತಿ ಏತಕ್ಕೆಂದರೆ, ಜ್ಞಾನವು ಕಮ್ಮಿಯಾಗದೆ ವೃದ್ಧಿಹೊಂದುವದಕ್ಕಾಗಿ ಎಂಬ ಭಾವವು. ಹಾಗೆ ಜ್ಞಾನವು ವೃದ್ಧಿಹೊಂದಿ ಉಪಾಯಾನುಷ್ಠಾನವಾಡಿ ಕೃತಕೃತ್ಯತೆಯನ್ನು ಹೊಂದಿದನಂತರವೂ ಗುರುಭಕ್ತಿ ಏಕೆಂದರೆ ಕೃತಜ್ಞತಾಸೂಚಕವಾಗಿಯೂ ಪುನಃ

ಶೀರ್ಮೃಯುಂ[1] ತನ್ನಿಷ್ಠೆಯುಂ ಕೇಲ್ವೆಯಾವ್ಮೈಕ್ಯಾಕಚ್ಚಿಲ್[2] ವಾ
ನಪ್ರಯೋಜನಂಗಳೈಪತ್ತಶಿಷ್ಯಗುಣಪೂರ್ತಿಯಿಲ್ಲದಚಪಲರ್ಕ್ಕು
ವೆಳಿಯಿಡಾದೆ ಮುಂತ್ರತ್ತೈ ಮಿಕವುಂ ಶೆಮಿಕ್ಕವುವುಂ[3] ಪ್ರಾಪ್ತಂ.
ಇವ್ವಿಡತ್ತಿಲ್ ಗುರುಶಬ್ದಂ ಪರಮಗುರುಕ್ಕಳುಕ್ಕುಮುಪಲಕ್ಷಣಂ.

ಅಜ್ಞಾನಪ್ರಾಪ್ತವಾಗಿ ಉತ್ತರಾಫ಼ ಸಂಘಟನೆ ಇಲ್ಲದಿರುವದಕ್ಕಾಗಿ ಎಂದು ಭಾವಿಸತಕ್ಕದ್ದು. ಆದುದರಿಂದ ಗುರುಭಕ್ತಿಯಿಂದ ಗುರುಪ್ರಕಾಶವು ಸರ್ವಾವಸ್ಥೆಯಲ್ಲೂ ಅವಶ್ಯಕನೆಂಬ ಭಾವವು.) ಮತ್ತು ಶ್ರೇಷ್ಠತಮವಾದ ರತ್ನವನ್ನು ಗರ್ಭೀಕರಿಸಿರುವ ಮಾಣಿಕ್ಯಸಂಪುಟದೋಪಾದಿಯಲ್ಲಿ ಸಾರತಮವಾದುದನ್ನೆಲ್ಲಾ ಬಳಗೊಂಡಿರುವ ಮೂಲಮಂತ್ರದ ಮಹಿಮೆಯೂ, ಉಪದೇಶಿಸುವ ಗುರುವಿನ ನಿಷ್ಠೆಯೂ, ಏರಪೂ ಕಮ್ಮಿಯಾಗದೇ ಇರುವದಕ್ಕಾಗಿ ಖ್ಯಾತಿಯೋ ಇಲ್ಲವೇ ಇನ್ನ್ಯಾವದೋ ಕ್ಷುದ್ರವಾದ ಅಥವಾ ಅಲ್ಪವಾದ ಪ್ರಯೋಜನಂಗಳಿಗಾಗಿ ಸಚ್ಛಿಷ್ಯನಲ್ಲಿ ಯಾವ ಗುಣವಿರಬೇಕೋ ಅಂತಹ ಗುಣಗಳು ಪೂರ್ಣವಾಗಿರದೇ ಇರುವ ಚಪಲ ಮನಸ್ಕರಾದ ಶಿಷ್ಯರಿಗೆ ಇಂತಹ ಅಮೋಘ ಮಂತ್ರವನ್ನುಪದೇಶಿಸಿ ಬಹಿರಂಗಪಡಿಸದೆ, ಗೋಪ್ಯವಾಗಿಡತಕ್ಕದ್ದು ಮುಖ್ಯಕರ್ತವ್ಯವು. (ಗುರುವಿನಲ್ಲೂ ಮಂತ್ರದಲ್ಲೂ ತುಂಬಾ ವಿಶ್ವಾಸವಿಡತಕ್ಕದ್ದೆಂಬುವದಕ್ಕೆ ಅನೇಕ ಪ್ರಮಾಣಗಳುಂಟು.

ಮಂತ್ರೇತದ್ದೇವತಾಯಾಂಚ ತಥಾಮಂತ್ರಪ್ರದೇ ಗುರೌ।
ತ್ರಿಷುಭಕ್ತಿಸ್ಸದಾ ಕಾರ್ಯಾ ಸಾಹಿ ಪ್ರಥಮಸಾಧನಂ ॥

ಮಂತ್ರದಲ್ಲಿಯೂ ಆ ಮಂತ್ರಾಭಿಮಾನದೇವತೆಯಲ್ಲಿಯೂ, ಆ ಮಂತ್ರವನ್ನುಪದೇಶಿಸಿದ ಗುರುವಿನಲ್ಲಿಯೂ ಭಕ್ತಿಯಿರಬೇಕು, ಆ ಭಕ್ತಿಯೇ ಮುಖ್ಯಸಾಧನವು. ಮತ್ತು

---

1 ಶೀರ್ಮೃ - ಮಹಿಮೆ. 2 ಚೀಲ್ವಾನ - ಕೆಲವುಕ್ಷುದ್ರಗಳಾದ.
3 ಶೆಮಿಕ್ಕಮುಂವಾಪ್ತಂ - ಗೋಪನಮಾಡುವದು ಕರ್ತವ್ಯವು.

ಸಾಮಾನ್ಯಮಾಕವುಮಾಂ. ಮಂತ್ರಶಬ್ದಂ ಮಂತ್ರಾರ್ಥಂ ಮುದಲಾನ ರಹಸ್ಯಂಗಳುಕ್ಕುಂ ಪ್ರದರ್ಶನಪರಂ. ತಾನಿಂದ ರಹಸ್ಯಂಗಳೈಯನುಸಂಧಿಕ್ಕುಂ ಪೋದೆಲ್ಲಂ ಆಚಾರ್ಯಪರಂ ಪರೈಯೈಯನುಸಂಧಿಕ್ಕೈಯುಂ, ವಿಧಿಬಲಸ್ಪಾಪ್ತಿಂ.

ಮಂತ್ರೇ ತೀರ್ಥೇ ದ್ವಿಜೇದೇವೇ ದೈವಜ್ಞೇ ಭೇಷಜೇಗುರೌ।
ಯಶ್ಚ ಯಾವಾಂಶ್ಚ ವಿಶ್ವಾಸ ಸ್ತಸ್ಯಿದ್ಧಿ ರ್ಭವತಿ ತಾದೃಶೀ ॥

ಮಂತ್ರದಲ್ಲೂ, ಯಾತ್ರಾತೀರ್ಥದಲ್ಲೂ, ಬ್ರಾಹ್ಮಣನಲ್ಲೂ, ಈಶ್ವರನಲ್ಲೂ, ಪುರೋಹಿತನಲ್ಲೂ, ವೈದ್ಯನಲ್ಲೂ, ಗುರುವಿನಲ್ಲೂ, ಯಾವನಿಗೆ ಎಷ್ಟರಮಟ್ಟಿಗೆ ವಿಶ್ವಾಸವಿರುತ್ತದೋ ಅಷ್ಟರಮಟ್ಟಿಗೆ ಸಿದ್ಧಿಯುಂಟಾಗುತ್ತದೆ ಇತ್ಯಾದಿಪ್ರಮಾಣಗಳುಂಟು.)

(ಹೀಗೆ ಗುರುವಿನಲ್ಲೂ ಮಂತ್ರದಲ್ಲೂ ಭಕ್ತಿಯಿರಬೇಕೆಂದು ಹೇಳಿ ಮುಂದೆ ಗುರುಪರಂಪರೆಯಲ್ಲೂ ಭಕ್ತಿಯಿರಬೇಕೆಂಬುವದನ್ನು ಹೇಳುತ್ತಾರೆ.) ಇವ್ವಿಡತ್ತಿಲ್ - ಈ ಸಂದರ್ಭದಲ್ಲಿ ಅಂದರೆ "ಗುರುಂ ಪ್ರಕಾಶಯೇತ್" ಎಂಬ ಶ್ಲೋಕದಲ್ಲಿ, "ಗುರು" ಶಬ್ದವು ಪರಮ ಗುರುಗಳಾದ ಗುರುಪರಂಪರೆಯನ್ನೂ ಸೇರಿಸೇ ಹೇಳಿದುದೆಂಬದಾಗಿ ಭಾವಿಸತಕ್ಕದ್ದು. (ಈ ಗುರುಪರಂಪರೆಯಿಂದಲ್ಲವೆ ಈ ಮಂತ್ರವು ಪರಂಪರೆಯಾಗಿ ಉಪದೇಶಿಸಲ್ಪಟ್ಟದ್ದೂ ಅಲ್ಲದೆ ಅವರುಗಳಿಂದಲೇ ಅದರ ಮಾಹಾತ್ಮ್ಯಯು ಪ್ರಕಾಶವನ್ನು ಹೊಂದಿತು. ಆದುದರಿಂದ ಗುರುಶಬ್ದವು ವಾಸ್ತವಿಕವಾರ್ಥವಲ್ಲದೆ ಲಾಕ್ಷಣಿಕಾರ್ಥವನ್ನು ಕೂಡ ಉಳ್ಳದಾದ ಪ್ರಯುಕ್ತ "ಉಪಲಕ್ಷಣ"ವೆಂದು ಹೇಳಿರುತ್ತಾರೆ) ಹಾಗೆ ಲಾಕ್ಷಣಿಕವಾಗಿ ಭಾವಿಸದೆ ಗುರುಶಬ್ದಕ್ಕೆ ಸಾಮಾನ್ಯವಾಗಿಯೆ ಪರಮಗುರುಗಳಾದ ಗುರುಪರಂಪರೆ ಎಂಬದಾಗಿಯೂ ಭಾವಿಸಬಹುದು. (ಆದರೆ ಮಂತ್ರದ ಅರ್ಥವನ್ನಾದರೂ ಬಹಿರಂಗಪಡಿಸಬಹುದೇ ಎಂದರೆ ಅದೂ ಕೂಡದೆಂಬ ತಾತ್ಪರ್ಯದಿಂದ ಹೇಳುತ್ತಾರೆ.) "ಮಂತ್ರ" ಶಬ್ದವೂ ಕೂಡ ಇಲ್ಲಿ ಮಂತ್ರದ ಅರ್ಥವೇ ಮೊದಲಾದ ರಹಸ್ಯಾರ್ಥಗಳನ್ನು ಪ್ರದರ್ಶನವಾಗುವದೂ ಸೇರಿ ಹೇಳಲ್ಪಟ್ಟು, ಅದೂಕೂಡ ನಿಷೇಧಿಸಲ್ಪಟ್ಟರುತ್ತದೆ.

ಇವ್ವಾಚಾರ್ಯರ್ಕ್ಕಳುಡೈಯವನುಸಂಧಾನಂ, " ಸಂಭಾಷ್ಯಪುಣ್ಯಕೃತೋ ಮನಸಾಧ್ಯಾಯೇತ್[1] " ಎನ್ನಿರಪಡಿಯೆ ಪ್ರತಿಷಿದ್ಧಸಂಭಾಷಣತ್ತಿರ್ಕ್ಕುಪ್ರಾಯಶ್ಚಿತ್ತಮುಮಾಂ.

(ಆದರೆ ಶ್ರೀನಿಗಮಾಂತದೇಶಿಕರವರು ಇಂತಹ ಮಂತ್ರರಹಸ್ಯಾರ್ಥಗಳನ್ನು ವಿಶದೀಕರಿಸಿ ಗ್ರಂಥವನ್ನು ಬರಿಯಬಹುದೇ ಎಂದರೆ ಗುರುಭಕ್ತಿ ಇಲ್ಲದವನಿಗೆ ಇಂತಹ ಗ್ರಂಥಗಳಲ್ಲಿ ಅಭಿರುಚಿಯುಂಟಾಗಲಾರದ ಪ್ರಯುಕ್ತ ಬಾಧಕವಿಲ್ಲವೆಂಬ ಭಾವವು.) ಈ ಮಂತ್ರರಹಸ್ಯಗಳನ್ನು ಅನುಸಂಧಾನಮಾಡುವ ಕಾಲದಲ್ಲೆಲ್ಲಾ ಈ ಗುರುಪರಂಪರೆಯನ್ನು ಅನುಸಂಧಾನಮಾಡಬೇಕೆಂಬುವದು ಶಾಸ್ತ್ರಬಲದಿಂದ ಮುಖ್ಯ ಕರ್ತವ್ಯವು. (ಅಂದರೆ ತಾನೇ ಮಂತ್ರಜಪಮಾಡುವಾಗಲೂ, ಮಂತ್ರೋಪದೇಶವನ್ನು ಶಿಷ್ಯನಿಗೆ ಮಾಡುವಾಗಲೂ, ತಾನೇ ಮಂತ್ರಾರ್ಥ ಕಾಲಕ್ಷೇಪಮಾಡುವಾಗಲೂ ಅಥವಾ ಶಿಷ್ಯನಿಗೆ ಮಂತ್ರಾರ್ಥಕಾಲಕ್ಷೇಪಹೇಳುವಾಗಲೂ ಆ ಕಾಲಕ್ಷೇಪಗಳ ಪ್ರಾರಂಭೋಪಸಂಹಾರಗಳಲ್ಲೂ ಗುರುಪರಂಪರಾ ಧ್ಯಾನಪೂರ್ವಕವಾಗಿ ಅವರುಗಳ ತನಿಯಗಳನ್ನು ಹೇಳತಕ್ಕದ್ದು ಕರ್ತವ್ಯವೆಂಬದಾಗಿ ಶಾಸ್ತ್ರವು ಹೇಳುತ್ತದೆ ಎಂಬ ಭಾವವು. ಶ್ರುತಿಯು ಎಲ್ಲಿ ವಿಧಿಸಿರುತ್ತದೆ ಎಂದರೆ ಕಠಶ್ರುತಿಯಲ್ಲಿ " ಆಚಾರ್ಯಂ ಮನಸಾ ಧ್ಯಾತ್ವಾ ಮಂತ್ರ ಮಧ್ಯಾಪಯೇದ್ಗುರುಃ " ಎಂಬಬಾಗಿ ಹೇಳಿರುತ್ತದೆ. ಇಲ್ಲಿ " ಆಚಾರ್ಯಂ " ಎಂಬ ಶಬ್ದವು ತನ್ನ ಸ್ವಂತ ಆಚಾರ್ಯ ಮೊದಲುಗೊಂಡು ಪರಮಾಚಾರ್ಯನಾದ ಭಗವಂತನ ವರಿವಿಗೂ ಅನ್ವಯವನ್ನು ಸೂಚಿಸುತ್ತದೆಯಾದುದರಿಂದ ಜಾತ್ಯೇಕವಚನವಾಗಿ ಭಾವಿಸತಕ್ಕದ್ದು. ಆದುದರಿಂದ ಈ ಶ್ರುತಿಯ ಅರ್ಥವೇನೆಂದರೆ—ಆಚಾರ್ಯಪರಂಪರೆಯನ್ನು ಮನಸ್ಸಿನಲ್ಲಿ ಧ್ಯಾನಿಸಿದವನಾಗಿ ಗುರುವು ಶಿಷ್ಯನಿಗೆ ಮಂತ್ರವನ್ನುಪದೇಶಿಸತಕ್ಕದ್ದು. ಮತ್ತೂ

1 ಗೌತಮಧರ್ಮಶಾಸ್ತ್ರವಚನಂ " ನಮ್ಲೇಚ್ಛಾಶುಶ್ಯಧಾರ್ಮಿಕೈಸ್ಸಹಸಂಭಾಷೇತ " ಎಂಬುದು ಪೂರ್ವವಾಕ್ಯ.

ಎನ್ನಯಿರ್ ತನ್ತಳಿತ್ತವರೈ ಚ್ಚರಣಂಪುಕ್ಕು
ಯೊನಡೈವೇ ಯುವರ್ ಗುರುಕ್ಕಣಿರೈ ವಣಂಗಿ
ಪ್ಪಿನನುಳಾರ್ ಪೆರಂಬೂದೂರ್ ವಂದ ವಳ್ಳಲ್
ಪೆರಿಯನಂಬಿಯೊಳವಂದಾರ್ ಮಣಕ್ಕಾಲ್‌ನಂಬಿ

ಯದಾಹ್ಯಯಂ ಸ್ವಶಿಷ್ಯೇಭ್ಯೋ ರಹಸ್ಯಂ ವಕ್ತು ಮಿಚ್ಛತಿ ।
ತದಾತದಾನುಸಂದಧ್ಯಾತ್ಸ್ವಯಗ್ಗುರು ಪರಂಪರಾಂ ॥

" ಯಾವಾಗ ಈತನು ತನ್ನ ಶಿಷ್ಯರಿಗೆ ಮಂತ್ರರಹಸ್ಯಾರ್ಥಗಳನ್ನು ಹೇಳಲಪೇಕ್ಷಿಸುತ್ತಾನೋ ಆಯಾ ಕಾಲದಲ್ಲೆಲ್ಲಾ ಚೆನ್ನಾಗಿ ಗುರುವರಂಪರೆಯನ್ನನುಸಂಧಾನಮಾಡತಕ್ಕದ್ದು " ಇತ್ಯಾದಿ ಪ್ರಮಾಣಗಳಿರುತ್ತವೆ.

(ಇಂತಹ ಗುರುಪರಂಪರಾಧ್ಯಾನದ ಮತ್ತೊಂದು ಪ್ರಯೋಜನವನ್ನು ಸೂಚಿಸುತ್ತಾರೆ.) ಈ ಆಚಾರ್ಯಪರಂಪರೆಯ ಅನುಸಂಧಾನವು, " ನಮ್ಲೇಚ್ಛಾಶುಚ್ಯಧಾರ್ಮಿಕೈಸ್ಸಹ ಸಂಭಾಷೇತ " ಮ್ಲೇಚ್ಛರು, ಅಶುಚಿಯಾದವರು, ಅಧಾರ್ಮಿಕರು ಇವರುಗಳೊಡನೆ ಸಂಭಾಷಣೆ ಮಾಡತಕ್ಕದ್ದಲ್ಲವು ಎಂಬ ನಿಷೇಧವಾಕ್ಯಕ್ಕೆ ವಿದೋಧವಾಗಿ, ಸಂಭಾಷ್ಯ - ಸಂಭಾಷಣೆಮಾಡಿದ್ದೇಯಾದರೆ, ಪುಣ್ಯಶಾಲಿಗಳಾದ ಆಚಾರ್ಯಪರಂಪರೆಯನ್ನು ಮನಸ್ಸಿನಿಂದ ಧ್ಯಾನಿಸತಕ್ಕದ್ದೆಂಬ ವಚನವು ದೋಷಾವಹವಾದ ಸಂಭಾಷಣೆಗೆ ಪ್ರಾಯಶ್ಚಿತ್ತರೂಪವಾಗಿ ಪರಿಣಮಿಸುವದು.

ಮೊದಲು ಗುರುಪರಂಪರೆಯನ್ನು ಸ್ತೋತ್ರಮಾಡಿ, ಗುರುಪರಂಪರೆಯ ಅನುಸಂಧಾನವನ್ನು ತಾವೇ ಉಪದೇಶಿಸಿದುದನ್ನು ತಾವೇ ಆಚರಿಸುವದು ಕರ್ತವ್ಯವೆಂದು ಭಾವಿಸಿ, ತಾವೂ ಈ ರಹಸ್ಯಾರ್ಥಗಳ ಉಪದೇಶರೂಪವಾಗಿ ಗ್ರಂಥನಿರ್ಮಾಣಮಾಡಬೇಕೆಂದು ಆರಂಭಿಸಿರುವದರಿಂದ ಗುರುಪರಂಪರಾಪ್ರಣಾಮವು ಅವಶ್ಯವೆಂದೂ ಭಾವಿಸಿ ತಮ್ಮ ಗುರುಗಳು ಮೊದಲುಗೊಂಡು ಪರಮಾಚಾರ್ಯನಾದ ಸರ್ವೇಶ್ವರನವರಿವಿಗೂ ಗುರುಪರಂಪರೆಯ ಪಾದಗಳಿಗೆರಗುತ್ತಾರೆ.

ಅರ್ಥ—ಯಾರ್ - ದಾಸನಾದ ನಾನು, ಎನ್ನಯಿರ್ - ಸ್ವಾಮಿಗೆ

ನನ್ನೆರಿಯೈ ಯವರ್ಕ್ಕುರೈತ್ತ ವುಯ್ಯ್ಕೊಂಡಾರ್
ನಾಥಮುನಿ ಶಠಗೋಪರ್ ಶೇನೈನಾತರ್
ಇನ್ನಮುತ್ತ ತಿರುವುಕಳಿಂ ನ್ರಿವರೈಮುನ್ನಿ
ಟ್ಟಿಂಬುರುವಾರ್ ತಿರುವಡಿಗಳಡೈಕನ್ರೇನೆ ॥೩॥

ನಾನು ಶೇಷಭೂತನೆಂಬ ಜ್ಞಾನವಿಲ್ಲದೆ ಆತ್ಮನಾಶವಾಡಿಕೊಂಡ ನನಗೆ ಅಂತಹ ಜ್ಞಾನವನ್ನುಂಟುಮಾಡಿ ಜೀವಾತ್ಮಪರಮಾತ್ಮ ಸ್ವರೂಪವನ್ನು ತಿಳಿಸಿ ಸತ್ಯವನ್ನು, ತಂದು - ಉಪದೇಶಿಸಿ, ಅಳಿತ್ತವರೈ - ರಕ್ಷಿಸಿದ ನಮ್ಮ ಆಚಾರ್ಯರುಗಳನ್ನು, ಶರಣುಂಪುಕ್ಕು - ಶರಣುವಾಗಿ ಆಶ್ರಯಿಸಿ, ಅಡ್ಯೈವೆ - ಕ್ರಮವಾಗಿ, ಅವರ್‌ಗುರುಕ್ಕಳ್ - ಅವರ ಗುರುಗಳು ಹೀಗೆ, ನಿರೈ - ಪಜ್ತ್ತಿಯನ್ನು, ವಣಂಗಿ - ನಮಸ್ಕರಿಸಿ, ಪಿಱ - ಅನಂತರದಲ್ಲಿ, ಅರುಳಾಲ್ - ಕೃಪೆಯಿಂದ, ಪೆರಂಬೂದೂರ್‌ವಂದ ವಳ್ಳಲ - ಶ್ರೀಪೆರಂಬೂದೂರ್ ಎಂಬ ದಿವ್ಯಸ್ಥಳದಲ್ಲಿ ಅವತರಿಸಿದ ಪರಮೋದಾರರಾದ ಶ್ರೀಭಗವಾನ್ ಭಾಷ್ಯಕಾರರು (ಇವರು ತಮ್ಮ ಗುರುವಾದ ತಿರಕ್ಕೋಟ್ಟಯೂರ್ ನಂಬಿಯಿಂದ ಅನುಗ್ರಹಿಸಲ್ಪಟ್ಟ ದ್ವಯಮಂತ್ರಾರ್ಥವನ್ನು ಏಕಕಾಲದಲ್ಲೇ ತಮ್ಮ ಎಲ್ಲಾ ಸಚ್ಛಿಷ್ಯರಿಗೂ ಉಪದೇಶಿಸಿದ ಉದಾರಭಾವದಿಂದ, "ವಳ್ಳಲ್" ಎಂಬುದಾಗಿ ಪ್ರಯೋಗಿಸಿರುತ್ತಾರೆ.) ಪೆರಿಯನಂಬಿ - ಅವರ ಗುರುವಾದ ಮಹಾಪೂರ್ಣರು, ಆಳವಂದಾರ್ - ಅವರ ಗುರುವಾದ ಯಾಮುನಾಚಾರ್ಯರು, ಮಣಕ್ಕಾಲ್‌ನಂಬಿ - ಅವರ ಆಚಾರ್ಯರಾದ ಶ್ರೀರಾಮಮಿಶ್ರರು, ನನ್ನೆರಿಯೈ - ನಲ್-ಸಮೀಚೀನವಾದ, ನೆರಿಯೈ - ಮಾರ್ಗ ಅಂದರೆ ಪ್ರಪತ್ತಿಮಾರ್ಗ ಮಹಾತ್ಮ್ಯವನ್ನು, ಅವರ್ಕ್ಕು - ಆ ಮಣಕ್ಕಾಲ್‌ನಂಬಿಗೆ, ಉರೈತ್ತ - ಉಪದೇಶಿಸಿದ, ಉಯ್ಯ್ಯಕೊಂಡಾರ್ - ಪುಂಡರೀಕಾಕ್ಷರು, ನಾಥಮುನಿ- ಉಯ್ಯ್ಯಕೊಂಡಾರ್‌ರ ಆಚಾರ್ಯರಾದ ನಾಥಮುನಿಗಳು, ಶಠಗೋಪರ್ - ಅವರ ಆಚಾರ್ಯರಾದ ನಮ್ಮಾಳ್ವಾರವರು, ಶೇನೈನಾತರ್ - ಅವರಿಗೆ ಗುರುವಾದ ಶ್ರೀವಿಷ್ವಕ್ಸೇನರು, ಇನ್ನಮುತ್ತ - ಪರಮಭೋಗ್ಯವಾದ ಅಮೃತದೊಂದಿಗೆ, ತಿರುವುಗಳ್ - ಹುಟ್ಟಿದ ಶ್ರೀಮಹಾ

ಪ್ರಪದನಮಯೆ ವಿದ್ಯಾಭೇದೆ ಪ್ರತಿಷ್ಠಿತಚೇತಸಃ ।
ಪ್ರತಿಪದಮಿಹಪ್ರಜ್ಞಾಯಮಂದಿಶಂತು ದಯಾಧನಾಃ ।

ಲಕ್ಷ್ಮ್ಯಯು ಅಥವಾ ಭೋಗ್ಯವಾದ ಅಮೃತದೋಪಾದಿಯಲ್ಲಿ ಸ್ವಾಮಿಗೆ ಪರಮಭೋಗ್ಯಳಾದ ಶ್ರೀಮಹಾಲಕ್ಷ್ಮ್ಯಯು, ಏನ್ರವರೈ - ಎಂದು ಮೇಲೆಹೇಳಿದ ಈ ಆಚಾರ್ಯರುಗಳನ್ನು, ಮುನ್ನಿಟ್ಟು, ಮೊದಲು ಆಶ್ರಯಿಸಿ, ಎಂಬೆರುಮಾ - ನಮಗೆ ಶೇಷಿಯಾದ ಶ್ರೀಮನ್ನಾರಾಯಣನ, ತಿರುವಡಿಗಳ್ - ಶ್ರೀಪಾದಗಳನ್ನು, ಅಡೈಕಿನ್ರೇನೆ - ಆಶ್ರಯಿಸುತ್ತೇನೆ.

(ಈ ಮೇಲಿನ ಪಾಶುರದಿಂದ ಶ್ರೀಮಾ ನಿಗಮಾಂತಮಹಾದೇಶಿಕರವರು ತಮ್ಮ ಸ್ವಂತ ಆಚಾರ್ಯಪ್ರಾಚಾರ್ಯರು| ಮೊದಲುಗೊಂಡು ಕ್ರಮವಾಗಿ ಮಹನೀಯರಾದ ಗುರುಪರಂಪರೆಯಲ್ಲಿ ಮುಖ್ಯರಾದವರನ್ನು ಸೇರಿಸಿ ಅನುಸಂಧಾನಮಾಡುತ್ತಾರೆ. ಇಂತಹ ಅನುಸಂಧಾನವು ತಾವು ಈಗ ಉದ್ದೇಶಿಸಿರುವ ರಹಸ್ಯತ್ರಯಗಳ ಅರ್ಥಪ್ರಕಾಶರೂಪವಾದ ಕೈಂಕರ್ಯಕ್ಕೆ ಬೇಕಾದ ಜ್ಞಾನಸಂಪಾದಕವೆಂದು ಭಾವಿಸಿ ಈ ಪಾಶುರವನ್ನು ಅನುಗ್ರಹಿಸಿರುತ್ತಾರೆ.

ಹಿಂದಿನ ಪಾಶುರದಲ್ಲಿ ಗುರುಪರಂಪರಾನುಸಂಧಾನವು ತತ್ಪ್ರಾಪ್ತಿ ಪುರುಷಾರ್ಥ ಜ್ಞಾನಜನಕವೆಂದು ಹೇಳಿ ಈಗ ಪ್ರಕೃತದಲ್ಲಿ ತಾವು ಬರಿಯುವ ಗ್ರಂಥವು ಪ್ರಪದನಮಾರ್ಗಪ್ರತಿಪಾದಕವಾದುದರಿಂದ ತದ್ವಿಷಯವಾದ ಜ್ಞಾನಪ್ರಾಪ್ತಿಗೆ, ಅಂತಹ ಪ್ರಪತ್ತಿಮಾರ್ಗವನ್ನು ಪ್ರಕಟನಮಾಡಿದ ನಮ್ಮಾಳ್ವಾರ್, ಶುಕ, ವ್ಯಾಸ, ವಾಲ್ಮೀಕಿ ಮೊದಲಾದ ಮಹರ್ಷಿಗಳ ಅನುಸಂಧಾನವು ಅವಶ್ಯಕವೆಂದು ಭಾವಿಸಿ, ಅಂತಹ ಮಹನೀಯರ ಗ್ರಂಥಾವಲೋಕನದಿಂದ ಪರಿಪಕ್ವವಾದ ಜ್ಞಾನವುಳ್ಳವರು ತಮ್ಮ ಆಚಾರ್ಯರು ಎಂಬದಾಗಿ ಅಪ್ಪಣೆಕೊಡಿಸುತ್ತಾರೆ.)

ಅರ್ಥ—ಪ್ರಪದನಮಯೆ - ಶರಣಾಗತಿರೂಪವಾದ, ವಿದ್ಯಾಭೇದೆ - ೩ ವಿಧವಾದ ಉಪಾಸನಮಾರ್ಗ ಮತ್ತು ಪ್ರಪತ್ತಿಶಾಸ್ತ್ರಗ್ರಂಥಗಳಲ್ಲಿ, ಪ್ರತಿಷ್ಠಿತಚೇತಸಃ - ಸ್ಥಿರವಾಗಿ ನೆಲಿಸಿದ ಮನಸ್ಸುಳ್ಳ,

ಶಠರಿಪು ಶುಕ ವ್ಯಾಸ ಪ್ರಾಚೇತಸಾದಿ ನಿಬಂಧನ
ಶ್ರವಪರಿಣತ ಶ್ರದ್ಧಾಶುದ್ಧಾಶಯಾ ಮಮದೇಶಿಕಾಃ ॥

ದಯಾಧನಾಃ ಐಹಿಕದಲ್ಲೇ ಮಗ್ನರಾಗಿರುವವರನ್ನು ಹೇಗಾದರೂ ಮಾಡಿ ಉಜ್ಜೀವಿಸುವ ಹಾಗೆ ಮಾಡಬೇಕೆಂಬ ದಯೆಯೇ ಧನವಾಗಿಉಳ್ಳ, "ಶಠರಿಪು ಶುಕವ್ಯಾಸ ಪ್ರಾಚೇತಸಾದಿ ನಿಬಂಧನಶ್ರವಪರಿಣತಶ್ರದ್ಧಾಶುದ್ಧಾಶಯಾಃ" ಶಠರಿಪು - ನಮ್ಮಾಳ್ವಾರ್, ಶುಕ - ಶುಕಮಹರ್ಷಿ, ವ್ಯಾಸ - ವ್ಯಾಸಮಹರ್ಷಿ, ಪ್ರಾಚೇತಸ - ವಾಲ್ಮೀಕಿಮಹರ್ಷಿ, ಆದಿ - ಇವರೇ ಮೊದಲಾದವರ (ಆದಿ ಎಂಬುವದರಿಂದ ಪರಾಶರ ಶೌನಕರೇ ಮೊದಲಾದವರುಗಳು ಹೇಳಲ್ಪಟ್ಟರು), ನಿಬಂಧನ-ಗ್ರಂಥಗಳಾದ ತಿರುವಾಯ್‌ಮೊಳಿ ಭಾಗವತ, ಭಾರತ, ರಾಮಾಯಣ, ವಿಷ್ಣುಪುರಾಣ, ವಿಷ್ಣುಧರ್ಮವೆಂಬ ಕಾವ್ಯಗಳ, ಶ್ರವ - ಓದಿಸ್ವಾರಸ್ಯಗ್ರಹಣಮಾಡುವ ಶ್ರವದಿಂದ, ಪರಿಣತ-ಪರಿಪಕ್ವವಾದ, ಶ್ರದ್ಧಾ-ಭಕ್ತಿ ಅಥವಾ ಉತ್ಸಾಹದಿಂದ, ಶುದ್ಧಾಶಯಾಃ - ಅಂತಹ ಗ್ರಂಥಗಳುಪದೇಶದಿಂದ ಮೂರುವಿಧವಾದ ಅಜ್ಞಾನವು ತೊಲಗಿ, " ಶುದ್ಧಭಾವಂ ಗತೋಭಕ್ತ್ಯಾ " ಎಂದು ಹೇಳಿರುವಹಾಗೆ ಶುದ್ಧಭಾವವನ್ನು ಹೊಂದಿದ, ಮಮ - ನನ್ನ, ದೇಶಿಕಾಃ - ಆಚಾರ್ಯರುಗಳು, ಪ್ರತಿಪದಂ - ಪ್ರತಿಕ್ಷಣದಲ್ಲೂ, ಇಹ-ಇಲ್ಲಿ, ಪ್ರಜ್ಞಾದಾಯಂ - ಜ್ಞಾನವೆಂಬ ದಾಯಭಾಗವನ್ನು, (ಅವರುಗಳಿಗಿರುವ ಜ್ಞಾನದ ಸ್ವಲ್ಪ ಭಾಗವನ್ನಾಗಲಿ,) ದಿಶಂತು - ತೋರಿಸಲಿ, ಅಂದರೆ ಅವರ ಕೃಪೆಯಿಂದುಂಟಾಗಲಿ ಎಂಬರ್ಥವು.

ತಾತ್ಪರ್ಯ—ಮೇಲೆ ಹೇಳಿದ ಪಾಶುರಗಳಲ್ಲೆಲ್ಲಾ ಆಳ್ವಾರಾಚಾರ್ಯರುಗಳನುಸಂಧಾನವು ಮಾಡಲ್ಪಟ್ಟಿತು. ಅವರುಗಳು ಸಾರತಮವಾದ ಶರಣಾಗತಿಶಾಸ್ತ್ರವನ್ನು ನಮಗೆ ಪರಮಕೃಪಯಾಬೋಧಿಸಿರುತ್ತಾರೆ. ಅಂತಹ ಸಾರತಮಶಾಸ್ತ್ರದ ಉಪಪಾದನೆಯನ್ನು ತಾವೂ ಈಗ ಆರಂಭಿಸಿರುತ್ತಾರೆ. ಅಂತಹ ಶಾಸ್ತ್ರವನ್ನೇ ಉಪಪಾದಿಸಿದ ಮಹನೀಯರನ್ನು ಕೊಂಡಾಡಿಯೇ ಗ್ರಂಥಾರಂಭವನ್ನು ಮಾಡಬೇಕೆಂದೆಣಿಸಿ ಅಂತಹ ಮಹನೀಯರು ಯಾರೆಂಬುವದನ್ನು ತಿಳಿಸಿ, ಅಂಥಾವರ ಗ್ರಂಥ

ಸ್ವಾರಸ್ಯದಿಂದಲೇ ಪರಿಪಕ್ವವಾದ ಜ್ಞಾನವುಳ್ಳವರು ತಮ್ಮ ಆಚಾರ್ಯರು ಎಂದು ಹೇಳುತ್ತಾರೆ. ಹಾಗೆ ಪ್ರಪದನಶಾಸ್ತ್ರಮಾಹಾತ್ಮ್ಯವನ್ನು ನಮ್ಮಾಳ್ವಾರ್ರವರು ರಚಿಸಿದ ತಿರುವಾಯ್‌ಮೊಳಿಯಲ್ಲೂ, ಶುಕ ಮಹರ್ಷಿಯು ಭಾಗವತದಲ್ಲೂ, ವ್ಯಾಸಭಗವಾನ್‌ರವರು ಐದನೇವೇದವೆಂದೆನಿಸಿದ ಶ್ರೀಮಹಾಭಾರತದಲ್ಲೂ ವಾಲ್ಮೀಕಿಮಹರ್ಷಿಯು ಶ್ರೀಮದ್ರಾಮಾಯಣದಲ್ಲೂ ವ್ಯಕ್ತಪಡಿಸಿರುತ್ತಾರೆ. ಈ ಗ್ರಂಥಗಳಲ್ಲಿರುವ ಈ ಸ್ವಾರಸ್ಯಗ್ರಹಣಶ್ರಮದಿಂದ ಪರಿಪಕ್ವವಾದ ಜ್ಞಾನವು ತಮ್ಮ ಗುರುಗಳಿಗೆ ಉಂಟಾಯಿತೆಂಬಭಾವವು. ಈ ಮೇಲಿನ ಗ್ರಂಥಗಳಲ್ಲಿ ಶರಣಾಗತಿಧರ್ಮದ ಉಪಪಾದನವು ಅನೇಕ ಕಡೆಗಳಲ್ಲಿದ್ದರೂ ನಿದರ್ಶನಕ್ಕಾಗಿ ಅವುಗಳ ಒಂದೊಂದು ಉದಾಹರಣೆಯಿಂದ ತೋರಿಸಬಹುದು.

ನಮ್ಮಾಳ್ವಾರ್ ತಿರುವಾಯ್‌ಮೊಳಿಯಿಂದ –

ಅಕಲಕಿಲ್ಲೇನಿಱೈಯು ಮೆನ್ರಲರ್‌ಮೇಲ್ ಮಂಗೈಯುಱೈಮಾರ್‌ಪಾ।
ನಿಕರಿಱ್ಪಕಳಾ ಯುಲಕ ಮೂನ್ರುಡೈಯಾ ಯೆನ್ನೈಯಾಳ್ವಾನೇ ॥
ನಿಕರಿಲಮರರ್ ಮುನಿಕ್ಕಣಂಗಳ್ ವಿರುಂಬುನ್ದಿರುವೇಂಗಡತ್ತಾನೆ।
ಪುಕಲೊನ್ರಿಲ್ಲಾ ವಡಿಯೇನುನ್ನಡಿಕ್ಕೀೞಮರ್‌ನ್ದು ಪುಕನ್ದೇನೆ ॥

ಅಂದರೆ “ ಒಂದು ಕ್ಷಣವೂ ಕೂಡ ಪತಿಯನ್ನು ಬಿಟ್ಟು ಅಗಲಿರಲಾರನೆಂದು ಇರುವ ಮತ್ತು ಕಮಲವಾಸಿನಿಯಾದುದರಿಂದ ಮಾರ್ದವ ಭೋಗ್ಯತೆಗಳನ್ನು ಹೊಂದಿ ಆ ಕಾರಣದಿಂದ ವಾಲ್ಲಭ್ಯಾತಿಶಯವನ್ನು ಹೊಂದಿ, ಆಶ್ರಿತದೋಷಾನಭಿಜ್ಞೆಯಾದುದರಿಂದ ಪುರುಷಕಾರತ್ವವನ್ನು ವಹಿಸಲು ಯೋಗ್ಯಳಾದ ಶ್ರೀಮಹಾಲಕ್ಷ್ಮಿಯನ್ನು ವಕ್ಷಸ್ಥಲದಲ್ಲಿ ಧರಿಸಿರುವವನೇ, ನಿರತಿಶಯವಾದ ವಾತ್ಸಲ್ಯಸೌಶೀಲ್ಯಾದಿ ಕಲ್ಯಾಣಗುಣಗಳುಳ್ಳವನಾದುದರಿಂದ ಮಹಾಯಶಸ್ಸನ್ನು ಪಡೆದವನೇ, ಮೂರು ಲೋಕವೂ ತನ್ನ ಸ್ವತ್ತಾಗಿ ರಕ್ಷ್ಯವಾದುದೆಂದು ಭಾವಿಸಿರುವವನೇ, ನನ್ನನ್ನುದ್ಧಾರಮಾಡುವವನೇ, ನಿರತಿಶಯರಾದ ನಿತ್ಯಸೂರಿಗಳೂ ಋಷಿಗಳ ಸಮೂಹವೂ ಕೂಡ ಆಶೆಪಟ್ಟು ಆಶ್ರಯಿಸುವಹಾಗೆ ತಿರುಮಲೆಯಲ್ಲಿ ಬಿಹವಾಡಿರುವ ಶ್ರೀನಿವಾಸನೇ, ಬೇರೆಂದುಪಾಯವನ್ನು ತಿಳಿ

ಯದ ದಾಸನಾದ ನಾನು ನಿನ್ನ ಪಾದಕಮಲದ ಕೆಳಗೆ ಸೇರಿ ಅನನ್ಯ ಪ್ರಯೋಜನನಾಗಿ ನಿನ್ನನ್ನು ಆಶ್ರಯಿಸಿದೆನು."

ಭಾಗವತದಲ್ಲಿ—

ದೇವರ್ಷಿಭೂತಾತ್ಮ ನೃಣಾಂ ಪಿತೃಣಾಂ ನಕಿಂಕರೋ ನಾಯ
ಮೃಣೀಚ ರಾಜನ್ ।
ಸರ್ವಾತ್ಮನಾಯಶ್ಚ ಶರಣಂ ಶರಣ್ಯಂ ನಾರಾಯಣಂ ಲೋಕಗುರುಂ
ಪ್ರಪನ್ನಃ ॥

"ಯಾವನು ಪ್ರಪನ್ನನೆನಿಸಿ, ಆಶ್ರಯಿಸಲು ಯೋಗ್ಯನೆನಿಸಿ, ತನ್ನಲ್ಲಿರುವ ಕೃಪೋದಾರ್ಯಸೌಲಭ್ಯಸೌಶೀಲ್ಯವಾತ್ಸಲ್ಯಾತಿಶಯಗಳಿಂದ ಸರ್ವಲೋಕಕ್ಕೂ ಆಚಾರ್ಯನಾದ ಶ್ರೀಮನ್ನಾರಾಯಣನನ್ನು ಶರಣುಹೊಂದುವನೋ ಅವನು ದೇವತೆಗಳೂ ಋಷಿಗಳೂ ಭೂತಗಳೂ ಆತ್ಮರುಗಳೂ ಮನುಷ್ಯರೂ ಪಿತೃಗಳೂ ಇವರುಗಳಿಗೆಲ್ಲಾ ಶೇಷನಲ್ಲವು ಮತ್ತು ಅವರುಗಳ ಋಣವ್ಯಾವದೂ ಈತನಿಗೆ ಇರುವದಿಲ್ಲವು.

ಭಾರತದಲ್ಲಿ—

ಸರ್ವೇಷಾಮೇವ ಲೋಕಾನಾಂ ಪಿತಾಮಾತಾಚ ಮಾಧವಃ ।
ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ ॥

ಓ ಪುರುಷಶ್ರೇಷ್ಠರುಗಳಿರಾ, ಸರ್ವಲೋಕಲ್ಲಿಗೂ ತಂದೆಯೂ ತಾಯಿಯೂ ಸಹ ಆ ಲಕ್ಷ್ಮೀಪತಿಯೆ, ಆದುದರಿಂದ ಶರಣುಹೊಂದಿರಿ.

ರಾಮಾಯಣದಲ್ಲಿ—

ಸಕೃದೇವಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋದದಾಮ್ಯೇತದ್ವ್ರತಂಮಮ ॥

ಒಂದೇಸಲವಾದರೂ ನಿನ್ನವನಯ್ಯಾ ನಾನು, ಕಾಪಾಡು ಎಂದು ಬೇಡಿದ ಪ್ರಪನ್ನನಿಗೆ ಸರ್ವಭೂತಗಳಿಂದ ಭಯವಿಲ್ಲದಹಂಗೆ ಮಾಡಿ ಆತನನ್ನು ರಕ್ಷಿಸುವೆನು, ಇದೀಗ ನನ್ನ ಸತ್ಯಪ್ರತಿಜ್ಞೆಯು.

ಹೀಗೆ ಪ್ರಪತ್ತಿಧರ್ಮವು ಬಹುಸಾರಸ್ಯವಾಗಿ ಈ ಗ್ರಂಥಗಳಲ್ಲಿ ಉಪಬೃಂಹಿತವಾಗಿದೆ. ಇಲ್ಲಿ ಪ್ರಾಚೇತಸಾದಿ ಎಂದು ಆದಿಶಬ್ದಪ್ರಯೋ

ಏತೇ ಮಹ್ಯಮಪೋಢಮನ್ಮಥಶರೋನ್ಮಾಥಾಯ ನಾಥಾದಯಃ।
ಪ್ರೌಢ್ಯಂತಪ್ರತಿನಂದನೀಯ ವಿವಿಧೋದಂತಾ ಸ್ವದಂತಾಮಿಹ ॥

ಗವು ಶೌನಕಾದಿಗಳನ್ನು ಸೂಚಿಸುತ್ತದೆಂದು ಮೇಲೆಹೇಳಲ್ಪಟ್ಟಿತು. ಶೌನಕವಾಕ್ಯವು ಯಾವುದೆಂದರೆ—

ವೃಥೈವಭವತೋ ಯಾತಾ ಭೂಯಸೀಜನ್ಮಸಂತತಿಃ।
ತಸ್ಯಾಮನ್ಯತಮಾಂ ಜನ್ಮಸಂಚಿತ್ಯ ಶರಣಂವ್ರಜ ॥

ಅನೇಕವಾದ ಜನ್ಮಗಳ ಸಮೂಹವು ವ್ಯರ್ಥವಾದುದೇ ಆಯಿತು. ಅವುಗಳಲ್ಲೊಂದಾದ ಈ ಬಂದು ಜನ್ಮವನ್ನು ಆಲೋಚಿಸಿ ಸ್ವಾಮಿಯನ್ನು ಶರಣುಹೊಂದು.

ಈ ಆಚಾರ್ಯವರ್ಯರಿಗೆ ಗುರುಪರಂಪರಾಧ್ಯಾನದಲ್ಲಿ ಅವರಿಗಿರುವ ಭಕ್ತಿಯು ಅವರಾತಿಶಯದಿಂದ "ಏತೆ" ಎಂಬ ಮುಂದಿನ ಶ್ಲೋಕದಿಂದ ಪುನಃ ಸ್ತೋತ್ರವಾಡುತ್ತಾರೆ.

ಅರ್ಥ—ಏತೇ - ಹಿಂದೆ ಹೇಳಿದ ಮಹನೀಯರಾದ ಮತ್ತು ಪ್ರಸಿದ್ಧರಾದ, ನಾಥಾದಯಃ - ನಾಥಮುನಿಗಳೇ ಮೊದಲಾದ ದೇಶಿಕಾಃ-ಆಚಾರ್ಯರುಗಳು, ಅಪೋಢಮನ್ಮಥಶರೋನ್ಮಾಥಾಯ - (ಅಂತಹ ಆಚಾರ್ಯಕೃಪೆಯಿಂದ) ನಿರಸನವಾಡಲ್ಪಟ್ಟ ಮನ್ಮಥನ ಬಾಣಪ್ರಾಬಲ್ಯವುಳ್ಳ ಅಂದರೆ ಇಂದ್ರಿಯಗಳನ್ನೆಲ್ಲಾ ಜಯಿಸಿದ, ಮಹ್ಯಂ - ನನಗೆ, ಇಹ - ಈ ಸಂಸಾರಾವಸ್ಥೆಯಲ್ಲೇ, ಸ್ವದಂತಾಂ - ಭೋಗ್ಯತಮರಾದವರಾಗಲಿ, ಅಂದರೆ ಇಂತಹ ಪ್ರಸಿದ್ಧರಾದ ಉದಾರಿಗಳಾದ ನಾಥಮುನಿ ಮೊದಲಾದ ಆಚಾರ್ಯರುಗಳು, ಅವರುಗಳ ಕೃಪೆಯಿರುವದರಿಂದಲೇ ಇಂದ್ರಿಯಗಳ ಹಾವಳಿಯು ತಪ್ಪಿ, ವೈರಾಗ್ಯವುಂಟಾಗಿರುವ ನನಗೆ ಪ್ರಿಯತಮರಾಗಿರಲಿ, ಎಂಬರ್ಥವು. ಇಲ್ಲಿ ಎಲ್ಲಾ ಅರಿಷಡ್ವರ್ಗಗಳನ್ನೂ ಹೇಳದೆ ಕಾಮವಮಾತ್ರ ಹೇಳಿರುವದರ ಅಭಿಪ್ರಾಯವೇನೆಂದರೆ "ಕಾಮಾತ್ಕ್ರೋಧೋಭಿಜಾಯತೇ। ಕ್ರೋಧಾದ್ಭವತಿಸಂಮೋಹಃ॥" ಎಂಬದಾಗಿ ಗೀತೆಯಲ್ಲಿ ಹೇಳಿರುವಹಾಗೆ ಕಾಮದೊಂದಿಗೆ ಅನುಸರಿಸಿ ಮಿಕ್ಕೆಲ್ಲವೂ ಉಂಟಾಗುವದರಿಂದ "ಮನ್ಮಥ" ಶಬ್ದದಿಂದ ಕಾಮ

ಶ್ರದ್ಧಾತವ್ಯ ಶರಣ್ಯದಂಪತಿ ದಯಾದಿವ್ಯಾಪಗಾ ವ್ಯಾಪಕಾಃ ।
ಸ್ಪರ್ಧಾವಿಪ್ಲವ ವಿಪ್ರಲಂಭ ಪದವೀ ವೈದೇಶಿಕಾ ದೇಶಿಕಾಃ ॥೨॥

ಬಂದೇ ಹೇಳಲ್ಪಟ್ಟತೆಂದ ತಿಳಿಯತಕ್ಕದ್ದು. ಆ ಆಚಾರ್ಯರುಗಳು ಎಂಥಾವರೆಂದರೆ ಹೇಳುತ್ತಾರೆ.

ತ್ರಯ್ಯಂತಪ್ರತಿನಂದನೀಯ ವಿವಿಧೋದಂತಾಃ, ತ್ರಯ್ಯಂತ-ವೇದಾಂತಗಳಿಂದ, ಪ್ರತಿನಂದನೀಯ-ಶ್ಲಾಘಿಸಲು ಯೋಗ್ಯಗಳಾದ, ವಿವಧ-ನಾನಾಬಗೆಯಾದ, ಉದಂತಾಃ-ವೃತ್ತಾಂತಗಳುಳ್ಳವರು, ಅಂದರೆ ವೇದಾಂತವಾದ ತೈತ್ತರೀಯ ಮೊದಲಾದವುಗಳಲ್ಲಿ ಎನು ಹೇಳಲ್ಪಟ್ಟದೆಯೋ, ಅದರಂತೆಯೇ ಶ್ಲಾಘ್ಯವಾದ ಅನುಷ್ಠಾನವುಳ್ಳವರು, ಆ ವೇದಾಂತಗಳು ಹೇಳುವಾಗ, ಇವರುಗಳ ಶ್ಲಾಘ್ಯವಾದ ನಡತೆಗಳನ್ನು ಮುಂದಿಟ್ಟೇ ಏನಾದರೂ ಹೇಳಿತೋ ಎಂಬಭಿಪ್ರಾಯವು. ಅಥವಾ ವೇದಾಂತಗಳಿಗೆ ಇತರ ಸಿದ್ಧಾಂತಿಗಳು ಅಪಾರ್ಥಕಲ್ಪಿಸಿದರು. ನಮ್ಮ ಪೂರ್ವಾಚಾರ್ಯರುಗಳಾದರೋ ತಮ್ಮ ಶ್ಲಾಘ್ಯವಾದ ಉಕ್ತಿಗಳಿಂದ ಅಂಥವುಗಳನ್ನು ನಿರಸನಮಾಡಿದುದರಿಂದ "ಪ್ರತಿನಂದನೀಯವಿವಿಧೋದಂತಾಃ" ಎಂಬದಾಗಿ ಹೇಳಲ್ಪಟ್ಟರೆಂದು ಭಾವಿಸಬಹುದು. ಆದುದರಿಂದ ವೇದಾಂತೋಕ್ತಿಗಳನ್ನೇ ಸಾಧಿಸುವದು, ಆ ಉಕ್ತಿಗಳಿಗೆ ವಿರೋಧವಾದುದನ್ನು ನಿರಾಕರಿಸುವದು ಇವುಗಳೇ ಉದಂತಗಳೆಂಬ ಭಾವವು. ಇನ್ನೂ ನಮ್ಮಾಚಾರ್ಯರು ಎಂಥಾವರೆಂದರೆ—ಶ್ರದ್ಧಾತವ್ಯಶರಣ್ಯ ದಂಪತಿದಯಾದಿವ್ಯಾಪಗಾವ್ಯಾಪಕಾಃ, ಅಂದರೆ ಶ್ರದ್ಧಾತವ್ಯ - ಭಕ್ತರಿಗೆತನ್ನನ್ನು ಆಶ್ರಯಿಸಲು ಶ್ರದ್ಧೆಯನ್ನು ಹೊಂದಿಸುವ ಗುಣವುಳ್ಳ ಮತ್ತು ಶರಣ್ಯ - ಆಶ್ರಯಿಸಿದನಂತರ ರಕ್ಷಿಸಲು ಶಕ್ತಿಯುಳ್ಳ, ದಂಪತಿ - ಈ ಎರಡು ಗುಣಗಳೂ ಉಳ್ಳ ಲಕ್ಷ್ಮೀನಾರಾಯಣರ, ದಯಾ - ಕೃಪೆಯೆಂಬ, ದಿವ್ಯಾಪಗಾ - ಮಹತ್ತಾದ ಗಂಗಾನದಿಯಲ್ಲಿ, ವ್ಯಾಪಕಾಃ - ಅವಗಾಹನಮಾಡಿದವರು. ಅಂದರೆ, ಲಕ್ಷ್ಮೀನಾರಾಯಣರಿಬ್ಬರಿಗೂ ಶ್ರದ್ಧಾತವ್ಯತ್ವವೂ ಶರಣ್ಯತ್ವವೂ ಉಂಟು, ಉಪಾಯೋಪೇಯತ್ವವೆರಡೂ ಉಂಟು. ಲಕ್ಷ್ಮಿಗೆ "ಪ್ರಣಿಪಾತಪ್ರಸನ್ನಾಹಿ ಮೈಥಿಲೀಜನಕಾತ್ಮಜಾ"

ಎಂಬುವದರಿಂದ ಶ್ರದ್ಧಾತವ್ಯತ್ವವೂ, " ಲಕ್ಷ್ಮ್ಯಾಸಹಹೃಷೀಕೇಶೋ ದೇವ್ಯಾಕಾರುಣ್ಯರೂಪಯಾ । ರಕ್ಷಕಸ್ಸರ್ವಸಿದ್ಧಾಂತೇ ವೇದಾಂತೇಷು ಚಗೀಯತೆ " ಎಂದು ಹೇಳಿರುವಹಾಗೆ, ರಕ್ಷಕಳಾಗಿ ಪ್ರಾಪ್ಯಳೂ, ಮತ್ತು " ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ । ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ " " ಆರ್ಯರಿಗೆ ಪಾಪಿಗಳನ್ನೂ ಕರುಣೆಯಿಂದ ಉದ್ಧಾರಮಾಡುವದು ಯೋಗ್ಯವಾದುದು, ಯಾವುತಾನೇ ಅಪರಾಧಿಗಳಲ್ಲ" ಎಂದು ಆಂಜನೇಯನನ್ನು ಕುರಿತು ಹೇಳಿದ ಸೀತಾವಾಕ್ಯದಿಂದ ಆಕೆಯು ದಯಾಪರಳೂ ಅನುಗ್ರಹಮಯಳೂ ಎಂಬುವದು ವ್ಯಕ್ತಪಡುತ್ತದೆ. ಹಾಗೆಯೇ ನಾರಾಯಣನಿಗೂ " ಸರ್ವಸ್ಯಶರಣಂಸುಹೃತ್", " ಯದಿವಾರಾವಣಸ್ವಯಂ ", " ಅನೃತಂನೋಕ್ತಪೂರ್ವಂಮೇ ನಚ ವಕ್ಷ್ಯೇಕದಾಚನ " " ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ ", "ದ್ಯೌಃಪತೇತ್ಪೃಥವೀಶೀರ್ಯೇದ್ಧಿಮವಾಞ್ಶಕಲೀ ಭವೇತ್ । ಶುಷ್ಯೇತ್ತೋಯನಿಧಿಃ ಕೃಷ್ಣೇನಮೇಮೋಘಂ ವಚೋಭವೇತ್ " ಅಂದರೆ ಆಕಾಶವು ಬೀಳಬಹುದು, ಭೂಮಿಯು ಶೀಳಬಹುದು, ಹಿಮವತ್ಪರ್ವತವು ಚೂರಾಗಬಹುದು, ಸಮುದ್ರವು ಶೋಷಿಸಿ ಹೋಗಬಹುದು, ನನ್ನಲ್ಲಿ ಮಾತು ಎಂದಿಗೂ ವ್ಯರ್ಥವಾಗಲಾರದು. ಇತ್ಯಾದಿ ವಾಕ್ಯಗಳ ರೀತ್ಯಾ ಶ್ರದ್ಧಾತವ್ಯತ್ವ, ಶರಣ್ಯತ್ವ, ದಯೆ ಇವುಗಳುಂಟೆಂಬುದು ಸಿದ್ಧವು. ಇಂತಹ ಲೋಕದಂಪತಿಗಳ ದಯೆಯನ್ನು ಸಂಪಾದಿಸಿಕೊಂಡಿರುವವರು ನಮ್ಮಾಚಾರ್ಯರು ಎಂದು ಹೇಳುತ್ತಾರೆ. (ದಯೆಯನ್ನು ಗಂಗಾನದಿಗೆ ಹೋಲಿಸಿರುವದರಿಂದ ಗಂಗೆಯು ಹೇಗೆ ಕಲುಷಿತರಾದವರನ್ನು ಪರಿಶುದ್ಧಮಾಡುತ್ತದೆಯೋ ಹಾಗೆ ಸ್ವಾಮಿಯ ದಯೆಯು ನಮ್ಮ ಸಹಸ್ರಾಪರಾಧಗಳನ್ನೂ ಹೋಗಲಾಡಿಸುವಂಥಾದ್ದೆಂಬ ಭಾವವು. ಮತ್ತು ದಯೆಯನ್ನು ನದಿಗೆ ಹೋಲಿಸಿರುವದರಿಂದ ಪ್ರವಾಹದ ಹಾಗೆ ನಿತ್ಯವೂ ಉಂಟಾಗಿ ಆಶ್ರಿತರಕ್ಷಣೋದ್ಯೋಗದಲ್ಲಿದೆ ಎಂಬ ಭಾವವು. ಮತ್ತೂ " ಸ್ಪರ್ಧಾವಿಪ್ಲವ ವಿಪ್ರಲಂಭ ಪದವೀ ವೈದೇಶಿಕಾಃ " ಅಂದರೆ, ಸ್ಪರ್ಧಾ - ಅವಮಾನಪಡಿಸುವದು, ವಿಪ್ಲವ - ಅನಾಚಾರ, ವಿಪ್ರಲಂಭ - ವಂಚನೆ, ಇವುಗಳ, ಪದವೀ -

ವೂರ್ಗಕ್ಕೆ, ವೈದೇಶಿಕಾಃ - ಬಹಳ ದೂರವಿರುವವರು, ಸ್ವಾಮಿಯಹಾಗೆ ಅನೇಕ ಕಲ್ಯಾಣಗುಣಗಳಾದ ಸೌಲಭ್ಯ,ಸೌಶೀಲ್ಯ,ವಾತ್ಸಲ್ಯ, ದಯಾ ಮೊದಲಾದ ಗುಣಗಳನ್ನು ನಮ್ಮ ಆಚಾರ್ಯರು ಹೊಂದಿರುವರೇ ವಿನಾ ಮೇಲೆ ಹೇಳಿದ ಶ್ರುತಿನಿಂದಿತವಾದ ಹೇಯಗುಣಗಳ ಲೇಶವೂ ಇಲ್ಲದವರೆಂಬ ದಾಗಿ ಅರ್ಥವು.ಇನ್ನೂ "ವೈದೇಶಿಕಾಃ" ಬಹಳ ದೂರವರ್ತಿಯಾಗಿರುವ ವರೆಂದು ಹೇಳಿದುದರಿಂದ ಅವರ ಸಂಬಂಧಿಗಳಾದ ಅವರ ಶಿಷ್ಯರಿಗೂ ಕೂಡ ಅಂತಹ ಹೇಯಗುಣಸಂಬಂಧವಿಲ್ಲವೆಂಬ ಭಾವವು. "ಸ್ವದಂತಾಮಿಹ" ಎಂಬುದಾಗಿ, ಇಹ - ಈ ಲೋಕದಲ್ಲೇ ಅವರುಗಳು ಭೋಗ್ಯರಾಗಿ ಉಂಟಾಗಲಿ ಎಂಬ ಪ್ರಾರ್ಥನೆಯಭಿಪ್ರಾಯವೇನೆಂದರೆ, ಸ್ವಾಮಿಯೇ ಅವತಾರಗಳನ್ನು ಮಾಡಿ ಅತಿಮಾನುಷಕೃತ್ಯಗಳನ್ನು ಮಾಡಿದರೂ, ಹಾಗೆ ಅವತರಿಸಿದ ರಾಮಕೃಷ್ಣರನ್ನು ಮನುಷ್ಯರನ್ನಾಗಿಯೇ ಭಾವಿಸುವಾಗ, ನಿತ್ಯಸೂರಿಗಳು ಹೀಗೆ ಆಳ್ವಾರಾಚಾರ್ಯರಾಗಿ ಅವತರಿಸಿದ್ದಾರೆಂದು ಭಾವಿಸಿ ಅವರನ್ನು ಹಾಗೆ ಕೃತಜ್ಞತಾಭಾವದಿಂದ ಭೋಗ್ಯರಾದವರೆಂದು ಭಾವಿಸಿ ಪೂಜಿಸುವದು ಈ ಲೋಕದಲ್ಲಿ ದುರ್ಲಭವೆಂತಲೂ ಅಂತಹ ಜ್ಞಾನವು ತಮಗೆ ಇಲ್ಲಿಯೇ ಉಂಟಾಗಿ ಅವರನ್ನು ಪ್ರಿಯರಾಗಿ ಭಾವಿಸುವಹಾಗೆ ಸ್ವಾಮಿಯಾಗಲಿ ಎಂಬುದಾಗಿ ಪ್ರಾರ್ಥಿಸುತ್ತಾರೆ.

ಅವತಾರಿಕೆ--ಹಿಂದಿನ ಶ್ಲೋಕದಲ್ಲಿ ತಮ್ಮ ಆಚಾರ್ಯರುಗಳು ಭೋಗ್ಯರಾಗಿ ಪ್ರಿಯವಾಗಿರಲೆಂದು ಪ್ರಾರ್ಥನೆ ಮಾಡಿದರು. ಈ ಶ್ಲೋಕದಿಂದಲೂ " ಹೃದ್ಯಾ " ಎಂದು ಪ್ರಾರಂಭಿಸಿರುವದರಿಂದ ಗುರುಪಜ್ಞ್ತಿಯು ಹೇಗೆ ಪ್ರಿಯವಾದುದಾಯಿತೆಂಬುದನ್ನು ಸಮರ್ಥನೆ ಮಾಡಿ ಹೇಳಿರುತ್ತಾರೆ. ಅವರುಗಳು ನಾಲ್ಕು ದಿಕ್ಕುಗಳಲ್ಲೂ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸ್ಥಾಪನೆ ಮಾಡಿದುದಲ್ಲದೆ, ವಾದಗಳ ಮೂಲಕವಾಗಿಯೂ ಗ್ರಂಥಗಳ ಮೂಲಕವಾಗಿಯೂ ಇತರ ಅಪಸಿದ್ಧಾಂತಗಳನ್ನೆಲ್ಲಾ ಖಂಡಿಸಿ ಜಯಸೂಚಕವಾದ ಧ್ವಜಪಟವನ್ನು ಎತ್ತಿರುತ್ತಾರೆ. ಪರಸಿದ್ಧಾಂತನಿರಸನಮಾಡಿದ ಜಯಸೂಚನೆಗನುಗುಣವಾಗಿ ವೀರರಸ ತೋರುವ ಪದಗಳನ್ನೇ ಈ ಶ್ಲೋಕದಲ್ಲಿ ಉಪಯೋಗಿಸಿರುತ್ತಾರೆ.

ಹೃದ್ಮಾ ಹೃತ್ಪದ್ಮಸಿಂಹಾಸನ ರಸಿಕಹಯಗ್ರೀವಹೇಷೋರ್ಮಿಘೋಷ ಕ್ಷಿಪ್ತಪ್ರತ್ಯರ್ಥಿದೃಪ್ತಿರ್ಜಯತಿ[1] ಬಹುಗುಣಾಪಜ್ಞಿರಸ್ಮದ್ಗುರೂಣಾಂ।

ಗಾಳಿಯು ಅರಳೆಯನ್ನು ಹೊಡೆದುಕೊಂಡು ಹೋಗುವದನ್ನನುಕರಿಸುವ ಹಾಗೆ "ಸ್ಖಾತಿನಿಘ್ನೂತತತ್ತ್ವತ್" ಎಂಬದಾಗಿ ಪ್ರಯೋಗಿಸಿರುತ್ತಾರೆ.

ಅರ್ಥ—ಅಸ್ಮದ್ಗುರೂಣಾಂಪಜ್ಞಿಃ-ನಮ್ಮ ಗುರುಗಳ ಪಜ್ಞಿಯು, ಜಯತಿ - ಜಯಶೀಲವಾಗಿರುತ್ತದೆ. ವಾಲ್ಮೀಕಿಮಹರ್ಷಿಯೂ "ಜಯತ್ಯತಿಬಲೋರಾಮೋ" ಎಂದು "ಜಯತಿ" ಶಬ್ದಪ್ರಯೋಗವನ್ನು ಹೀಗೆಯೇ ಮಾಡಿರುತ್ತಾರೆ. ಇಲ್ಲಿ ಗುರುಪಜ್ಞಿ ಭಜನ ಹೇಗೋ ಹಾಗೆಯೇ ಅಲ್ಲಿಯೂ ರಾಮ, ಲಕ್ಷ್ಮಣ, ಸುಗ್ರೀವರುಗಳನ್ನು ಪರಂಪರೆಯಾಗಿ ಜಯತಿ ಎಂದು ಹೇಳಿರುತ್ತಾರೆ. ಆ ಗುರುಪಜ್ಞಿ ಎಂಥಾದ್ದೆಂದರೆ, ಬಹುಗುಣಾ - ತುಂಬಾ ಶಮದವಾದಿ ಮಹಾಭಾಗವತರಲ್ಲಿರಬೇಕಾದ ಸಮಸ್ತ ಕಲ್ಯಾಣಗುಣಗಳನ್ನೂ ಉಳ್ಳದ್ದು. ಇನ್ನೂ ಎಂಥದ್ದೆಂದರೆ, "ಹೃತ್ಪದ್ಮಸಿಂಹಾಸನರಸಿಕ ಹಯಗ್ರೀವ ಹೇಷೋರ್ಮಿಘೋಷ ಕ್ಷಿಪ್ತಪ್ರತ್ಯರ್ಥಿದೃಪ್ತಿಃ" ಅಂದರೆ ಹೃತ್ಪದ್ಮ - ಹೃದಯಕಮಲವೆಂಬ, ಸಿಂಹಾಸನ - ಸಿಂಹಾಸನದಲ್ಲಿ, ರಸಿಕ - ಇಷ್ಟವುಳ್ಳ, ಹಯಗ್ರೀವ - ಹಯಗ್ರೀವರೂಪಿಯಾದ ಪರಮಾತ್ಮನ, ಹೇಷ - ಕೆನೆಯುವ ಶಬ್ದಗಳೆ, ಊರ್ಮಿ - ಅಲೆಗಳ ಅಂದರೆ ಸಮೂಹಗಳಿಂದ್ ಕ್ಷಿಪ್ತ - ಕತ್ತರಿಸಲ್ಪಟ್ಟ, ಪ್ರತ್ಯರ್ಥ - ಅಪಸಿದ್ಧಾಂತಿಗಳಾದ ಶತ್ರುಪಕ್ಷದ, ದೃಪ್ತಿಃ - ಗರ್ವವುಳ್ಳದ್ದು ಅಂದರೆ ನಮ್ಮ ಹೃದಯದಲ್ಲಿರುವ ಸ್ವಾಮಿ ಹಯಗ್ರೀವನ ಕಟಾಕ್ಷದಿಂದ ನಮ್ಮ ಆಚಾರ್ಯಪಜ್ಞಿಯು ಇತರ ಅಪಸಿದ್ಧಾಂತಿಗಳ ಗರ್ವಭಂಗವನ್ನು ಮಾಡಿರುತ್ತದೆಂದು ಭಾವವು. ಶ್ರೀಮನ್ನಿಗಮಾಂತಮಹಾದೇಶಿಕರು ಹಯಗ್ರೀವೋಪಾಸಕರಾದುದರಿಂದ ಪರಮಾ

1 "ಜಯತಿ" ಎಂಬುವದರಿಂದ ಸರ್ವೋತ್ಕೃಷ್ಟತೆಯೂ, ಅನಂತ ಪ್ರಣಾಮವೂ ಸಹ ತೋರಿಬರುತ್ತೆ.

ದಿಕ್ಸ್ಥಾಬದ್ಧ ಚೈತ್ರಧ್ವಜಪಟಪವನಸ್ಫಾತಿ ನಿರ್ಧೂತತತ್ತತ್ಸಿದ್ಧಾಂತ
ಸ್ತೋಮತೂಲಸ್ತಬಕ ವಿಗಮನವ್ಯಕ್ತ ಸದ್ವರ್ತನೀಕಾ ॥೩॥

ತ್ಮನನ್ನುದ್ದೇಶಿಸಿ ಹೇಳುವ ಸಂದರ್ಭದಲ್ಲಿ ಹಯಗ್ರೀವಶಬ್ದ ಪ್ರಯೋಗಿಸುತ್ತಾರೆ. ಮನುಷ್ಯನ ಹೃದಯವು ಸರ್ವೇಶ್ವರನಿಗೆ ಆವಾಸಸ್ಥಾನವು. ಆದುದರಿಂದಲೇ ಶ್ರುತಿಯು " ಹೃದಯಂತದ್ವಿಜಾನೀಯಾದ್ವಿಶ್ವಸ್ಯಾಯತನಂ ಮಹತ್ " ಎಂದು ಹೇಳುತ್ತದೆ. ಸರ್ವಭೂತಾಂತರಾತ್ಮನು ಅಲ್ಲಿ ಇರುವದರಿಂದ ಹೃದಯ ಪ್ರದೇಶವು ಆತನಿಗೆ ಆವಾಸಸ್ಥಾನವು. " ತಸ್ಯಾಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ " ಆ ಹೃದಯದಲ್ಲಿರುವ ಅಗ್ನಿಯ ಮಧ್ಯದಲ್ಲಿ ಪರಮಾತ್ಮನಿದ್ದಾನೆಂದು ಶ್ರುತಿಯು ಹೇಳುತ್ತದೆ. ಮತ್ತು " ಈಶ್ವರಸ್ಸರ್ವಭೂತಾನಾಂ ಹೃದ್ದೇಶೇರ್ಜುನತಿಷ್ಠತಿ ಅಂದರೆ ಸರ್ವಭೂತಗಳಿಗೂ ಶೇಷಿಯಾಗಿ ಸ್ವಾಮಿಯಾಗಿರುವ ಪರಮಾತ್ಮನು ನಮ್ಮಗಳ ಹೃದಯಪ್ರದೇಶದಲ್ಲೇ ಇರುತ್ತಾನೆ " ಎಂದು ಗೀತೆಯಲ್ಲಿ ಹೇಳಿರುತ್ತದೆ. ಇನ್ನೂ " ಅಹಮಾತ್ಮಗುಡಾಕೇಶ ಸರ್ವಭೂತಾಶಯಸ್ಥಿತಃ " (ಗೀ. ೧೦, ೨೦) " ಸರ್ವಭೂತಾಶಯಸ್ಥಿತಃ " ಸರ್ವಭೂತಗಳ ಹೃದಯದಲ್ಲಿ ಸ್ವಾಮಿಯು ಇರುವನೆಂದು ಹೇಳಿರುತ್ತದೆ. ಇವೇ ಮೊದಲಾದ ಪ್ರಮಾಣಗಳಿಂದ ಸ್ವಾಮಿಯು ನಮ್ಮ ಹೃದಯವನ್ನೇ ಸಿಂಹಾಸನವಾಗಿ ಮಾಡಿಕೊಂಡು ಅಲ್ಲೇ ಪ್ರತಿಷ್ಠಿತನಾಗಿರುವನೆಂಬ ಭಾವದಿಂದ " ಹೃತ್ಪದ್ಮ ಸಿಂಹಾಸನ ರಸಿಕಹಯಗ್ರೀವನು ಸ್ವಾಮಿಯು ಎಂದು ಹೇಳಿರುತ್ತಾರೆ. ಅಂತಹ ಹಯಗ್ರೀವಸ್ವಾಮಿಯ " ಹೇಷೋರ್ಮಿಶ್ಲೋಷ " ಅಂದರೆ ಕುದುರೆಯು ಮುಖವುಳ್ಳವರಾದುದರಿಂದ ಕೆನೆಯುವದರ ತರಂಗಶ್ಲೋಷಗಳಿಂದ, ಕ್ಷಿಪ್ತಪ್ರತ್ಯರ್ಥಿದೃಪ್ತಿಃ, ಕ್ಷಿಪ್ತ - ಕತ್ತರಿಸಲ್ಪಟ್ಟ, ಪ್ರತ್ಯರ್ಥಿ - ಅಪಸಿದ್ಧಾಂತಿಗಳಾದ ಶತ್ರುಪಕ್ಷದವರ, ದೃಪ್ತಿಃ - ಅಹಂಕಾರವುಳ್ಳದ್ದು, ಅಂದರೆ ಶತ್ರುಪಕ್ಷದವರ ಅಪಸಿದ್ಧಾಂತಗಳ ಗರ್ವಭಂಗ ಮಾಡಿದವರು ತಮ್ಮ ಆಚಾರ್ಯರುಗಳು ಎಂದು ಹೇಳುತ್ತಾರೆ. ಇನ್ನೂ ಆ ಗುರುಪಜ್ಞ ಎಂಥಾದ್ದೆಂದರೆ ಹೇಳುತ್ತಾರೆ. " ದಿಕ್ಸ್ಥಾ

ಬದ್ಧಜೈತ್ರಧ್ವಜಪಟಪವನಸ್ಫಾತಿ ನಿರ್ಧೂತತತ್ತತ್ಸಿದ್ಧಾಂತಸೌಧೇಮ ತೂಲಸ್ತಬಕ ವಿಗಮನವ್ಯಕ್ತ ಸದ್ವರ್ತನೀಕಾ '' ಎಂಬುದಾಗಿ ಇದು ಒಂದೇ ಪದವು. ದಿಕ್ಸ್ಥಾ - ದಿಕ್ಕುಗಳೆಂಬುಪ್ಪರಿಗೆಗಳಲ್ಲಿ, ಆಬದ್ಧ - ಕಟ್ಟಲ್ಪಟ್ಟ, ಜೈತ್ರಧ್ವಜಪಟ - ಜೈತ್ರಯಾತ್ರೆಯ ಧ್ವಜಪಟಗಳ, ಪವನ - ಘಾಳಿಯ, ಸ್ಫಾತಿ - ಆಧಿಕ್ಯದಿಂದ, ನಿರ್ಧೂತ - ಕೊಡಹಲ್ಪಟ್ಟ ಅಂದರೆ ಘಾಳಿಯರಭಸದಿಂದ ಒಡಿಸಲ್ಪಟ್ಟ, ತತ್ತತ್ಸಿದ್ಧಾಂತಸೌಧೇಮ - ಆಯಾ ಅಪಸಿದ್ಧಾಂತಗಳ ಸಮೂಹವೆಂಬ, ತೂಲಸ್ತಬಕ - ಹತ್ತಿಯ ರಾಶಿಗಳ, ವಿಗಮನ - ಹಾರಿಸೋಣದರಿಂದ, ವ್ಯಕ್ತ - ಈಗ ಚೆನ್ನಾಗಿ ತೋರುವ, ಸದ್ವರ್ತನೀಕಾ - ಸಮೀಚೀನವಾದ ಮಾರ್ಗವುಳ್ಳದ್ದು ; ತಮ್ಮ ಆಚಾರ್ಯರುಗಳೂ ಅವರ ಶಿಷ್ಯವರ್ಗವೂ ಸಹ ವಾದಗಳಿಂದಲೂ ಮತ್ತೂ ಅನೇಕಗ್ರಂಥಗಳಿಂದಲೂ ಅಂತಹ ಅಪಸಿದ್ಧಾಂತಗಳನ್ನೆಲ್ಲಾ ಖಂಡಿಸಿ ತಮ್ಮ ಸಿದ್ಧಾಂತವು ಪ್ರಕಾಶಿಸುವ ಹಾಗೆ ಮಾಡಿದರೆಂಬ ಭಾವವು. ತಮ್ಮ ವಿಶಿಷ್ಟಾದ್ವೈತಸಿದ್ಧಾಂತವನ್ನೇ ಒಂದು ಋಜುವಾದ ಯಥಾರ್ಥವಾದ ಒಳ್ಳೇ ಮಾರ್ಗವೆಂಬುದಾಗಿಯೂ, ಆ ಮಾರ್ಗದಲ್ಲಿ ಮಾರ್ಗಕಾಣದಹಾಗೆ ಇತರ ಅಪಸಿದ್ಧಾಂತಗಳೆಂಬ ಅರಳೆಯ ರಾಶಿಗಳು ಬಿದ್ದು ಸರಿಯಾದ ಮಾರ್ಗವೇ ಕಾಣದೇ ಇದ್ದಹಾಗೆಯೂ ನಮ್ಮ ಆಚಾರ್ಯವರ್ಯರು ವಾದಗಳಿಂದಲೂ ಅನೇಕಗ್ರಂಥಗಳಿಂದಲೂ ಇಂತಹ ಅಪಸಿದ್ಧಾಂತಗಳನ್ನೆಲ್ಲಾ ಗೆದ್ದು ಸ್ಥಾಪಿಸಿದ ಧ್ವಜಪಟಗಳ ಗಾಳಿಯಿಂದ ಈ ಅಪಸಿದ್ಧಾಂತಗಳೆಂಬ ಅರಳೆಯೆಲ್ಲಾ ಹೊಡೆದುಕೊಂಡು ಹೋದುದರಿಂದ ನಮ್ಮ ಸಿದ್ಧಾಂತವು ಸರ್ವಸಮಂಜಸವಾದುದೆಂಬುವದು ಈಗ ಸ್ಪಷ್ಟವಾಗಿ ತೋರುತ್ತದೆಂಬ ತಾತ್ಪರ್ಯವು. ಶ್ರೀಮನಾಥಮುನಿಗಳ '' ನ್ಯಾಯತತ್ವವೂ, ಶ್ರೀಯಾಮುನೇಯರ ಸಿದ್ಧಿತ್ರಯವೂ, ಶ್ರೀಭಾಷ್ಯಕಾರರ ಶ್ರೀಭಾಷ್ಯವೂ, ಇತರ ಅಪಸಿದ್ಧಾಂತಗಳನ್ನೆಲ್ಲಾ ಖಂಡಿಸಿರುತ್ತವೆ. ಇವರುಗಳು ಸ್ಥಾಪಿಸಿದ ತತ್ವವನ್ನೇ ಇವರ ಈಚೆಗೆ ಬಂದ ಅನೇಕ ಶಿಷ್ಯಪ್ರಶಿಷ್ಯರಾದ ಮಹನೀಯರುಗಳು ಚನ್ನಾಗಿ ಉಪಪಾದಿಸಿ ಭರತಖಂಡದ ನಾಲ್ಕು ದಿಕ್ಕುಗಳಲ್ಲೂ ಈ ವಿಶಿಷ್ಟಾದ್ವೈತಸಿದ್ಧಾಂತವು ಸ್ಥಿರವಾಗಿ ನೆಲಗೊಳ್ಳುವ

ಹಾಗೆ ಮಾಡಿ ಧ್ವಜಪಟವನ್ನೆತ್ತಿದ್ದಾರೆಂದು ಹೇಳಿರುತ್ತಾರೆ. ಆಕಾರಣದಿಂದಲೇ ಇಂತಹ ಉತ್ಕೃಷ್ಟಗುರುಪರಂಪರೆಯಲ್ಲಿ ತಮಗೆ ನಿರತಿಶಯವಾದ ಪ್ರೀತಿಪುರಸ್ಸರವಾದ ಭಕ್ತಿಯುಂಟೆಂಬುವದನ್ನು ವ್ಯಕ್ತಪಡಿಸುವದಕ್ಕಾಗಿಯೂ ಇತರರೂ ಕೂಡ ತಮ್ಮ ಹಾಗೆಯೇ ಆಚಾರ್ಯಪರಂಪರೆಯಲ್ಲಿ ಭಕ್ತಿಯನ್ನಿಡಬೇಕೆಂಬುವದನ್ನು ತೋರ್ಪಡಿಸುವದಕ್ಕಾಗಿಯೂ "ಹೃದ್ಯಾ" ಎಂದು ಪ್ರಯೋಗಿಸಿರುತ್ತಾರೆ. ಆ ಶಿಷ್ಯವರ್ಗದಲ್ಲಿ ತಾವೂ ಸೇರಿದವರಾಗಿಯೂ ತಾವೂ ಕೂಡ ವಾದಮೂಲಕವಾಗಿಯೂ, ವಿಪುಳವಾದ ಶತದೂಷಿಣಿ ಮೊದಲಾದ ಗ್ರಂಥಗಳ ಮೂಲಕವಾಗಿಯೂ ಅಂತಹ ಧ್ವಜಪಟವನ್ನೇರಿಸುವ ಕೈಂಕರ್ಯವನ್ನು ತಮ್ಮಿಂದ ಆರಾಧಿತನಾದ ಹಯಗ್ರೀವಮೂರ್ತಿಯ ಕಟಾಕ್ಷಬಲದಿಂದ ತಾವೂ ನಡಿಸಿರುವ ಹಾಗೆ ಧ್ವನ್ಯರ್ಥವು ತೋರುತ್ತದೆ. ಅಥವಾ ಮೇಲೆ ಹೇಳಿದ ಗುರುಪಙ್ಕ್ತಿಯ ಕೃಪಾಪ್ರಭಾವದಿಂದ ಅಂತಹ ಅಪೂರ್ವ ಕೆಲಸವನ್ನೇ ತಾವೂ ಕೂಡ ನಡಿಸಲು ಸಂದೇಹವಿಲ್ಲವೆಂಬುವ ಕವಿಯ ಆಶಯವೂ ತೋರಿಬರುತ್ತದೆ. ತಮ್ಮ ಸಿದ್ಧಾಂತವು "ವ್ಯಕ್ತಸದ್ವರ್ತನೀಕಾ" ಎಂದು ಹೇಳಿರುವದರಿಂದ ಈ ಸಿದ್ಧಾಂತವೇನೂ ಹೊಸದಾಗಿ ಕಂಡುಹಿಡಿದುದಲ್ಲವು, ಆರ್ಷವಾಗಿ ವ್ಯಾಸಬೋಧಾಯನಾದಿಗಳು ಕೂಡ ಅವಲಂಬಿಸಿದುದಾದುರಿಂದ ಬಹಳ ಶ್ಲಾಘ್ಯವಾದುದೆಂಬಭಿಪ್ರಾಯವು. ಇನ್ನೂ ಆಚಾರ್ಯಪಙ್ಕ್ತಿಯು ಎಂಥಾದ್ದೆಂದರೆ "ಬಹುಗುಣಾ" ಅನೇಕ ಕಲ್ಯಾಣಗುಣಗಳಿಂದ ಯುಕ್ತರಾದವರು, ಆಚಾರ್ಯರೆನಿಸಲು ಎಂತಹ ಗುಣಗಳಿರಬೇಕೋ ಅಂತಹ ಎಲ್ಲಾ ಗುಣಗಳನ್ನುಳ್ಳವರೆಂದೂ ಅರ್ಥಹೇಳಬಹುದು. ಮುಂದಕ್ಕೆ ಆಚಾರ್ಯಕೃತ್ಯಾಧಿಕಾರದಲ್ಲಿ ಆ ಗುಣಗಳ್ಯಾವುವು ಎಂಬ ಪ್ರಶಂಸೆಯು ಮುಂದೆ ಜರುಗುತ್ತದೆ. ಆ ಗುಣಗಳನ್ನು "ನ್ಯಾಸವಿಂಶತಿಯ" ಪ್ರಥಮಶ್ಲೋಕದಲ್ಲಿ ಸೂಕ್ಷ್ಮವಾಗಿ ತೋರಿಸಿರುತ್ತಾರೆ.

ಸಿದ್ಧಂಸತ್ಸಂಪ್ರದಾಯೈಸ್ಥಿರಧಿಯಮನಘಂ ಶ್ರೋತ್ರಿಯಂಬ್ರಹ್ಮನಿಷ್ಠಂ
ಸತ್ವಸ್ಥಂ ಸತ್ಯವಾಚಂ ಸಮಯನಿಯತಯಾ ಸಾಧುವೃತ್ತ್ಯಾಸಮೇತಂ।

1006
RT503
Sale B-1

ಆರಣನೂಲ್ ವಳಿಚ್ಚೆವ್ವೈ ಯಳಿತ್ತಿಡುವ್ಮೈದುಕರ್ ಕ್ಕೋರ್
ವಾರಣವೂಯೆವರ್ ವಾದಕ್ಕತಲಿಗಣ್ ವೂಯ್ತ್ತ ಪಿರಾ।

ಡಂಭಾಸೂಯಾದಿಮುಕ್ತಂಜಿತವಿಷಯಗಣಂದೀರ್ಘಬಂಧುಂದಯಾಳುಂ
ಸ್ಖಾಲಿತ್ಯೇಶಾಸಿತಾರಂಸ್ವಪರಹಿತಪರಂ ದೇಶಿಕಂ ಭೂಷ್ಣುರೀಪೆ ಸ್ನೇತ್॥

ಎಂತಹ ಆಚಾರ್ಯನನ್ನು ವರಿಸತಕ್ಕದ್ದೆಂದರೆ ಹೇಳುತ್ತಾರೆ. ಅವರಲ್ಲಿ ಮುಂದೆ ಹೇಳಿರುವ ಗುಣಗಳಿರಬೇಕೆಂಬ ತಾತ್ಪರ್ಯವು.

(ಹೀಗೆ ಗುರುಭಕ್ತಿಯು ತಮಗೆ ಭಕ್ತ್ಯಪರಮಭೋಗ್ಯವಾದುದೆಂದು ಸಮರ್ಥನವಾಡಿ ಆ ಆಚಾರ್ಯಪಜ್ತಿಯಲ್ಲಿ ಯಾವಯಾವ ಮಹನೀಯರು ಮುಖ್ಯವಾಗಿ ಅನುಸಂಧೇಯರೆಂಬುದನ್ನು ತೋರ್ಪಡಿಸುವದಕ್ಕಾಗಿ ಪ್ರತ್ಯೇಕವಾಗಿ ಅಂಥಾವರನ್ನು ಭಜಿಸುತ್ತಾರೆ. ಮುನಿತ್ರಯರಾದ,ಶ್ರೀಭಾಷ್ಯಕಾರರು (ಶ್ರೀರಾಮಾನುಜಮುನಿ), ಆಳವಂದಾರ್ರು (ಶ್ರೀಯಾಮುನಮುನಿ) ಶ್ರೀಮನ್ನಾಥಮುನಿಗಳು ಈ ಮೂವರೂ ಸಿದ್ಧಾಂತಕ್ಕೆ ಮಾಡಿದುಪಕಾರವು ಅಮೋಘವಾದುದರಿಂದ ಮೂರು ಪಾಶುರಗಳಿಂದ ಅವರನ್ನು ಕೊಂಡಾಡುತ್ತಾರೆ. ಮೊದಲು ದರ್ಶನಸ್ಥಾಪಕರಾದ ಶ್ರೀಭಾಷ್ಯಕಾರರನ್ನು ಕುರಿತು ಹೇಳುತ್ತಾರೆ.)

ಅರ್ಥ—ಆರಣನೂಲ್ - ಉಪನಿಷತ್ತಿನ ಅರ್ಥಗಳನ್ನು ಪ್ರತಿಪಾದಿಸುವ ವೇದಾಂತಶಾಸ್ತ್ರದ (ಇದು ವ್ಯಾಸಸೂತ್ರಗಳಲ್ಲಿ ಅಡಗಿರುವಂಥಾದ್ದು) ವಳಿಚ್ಚೆವ್ವೈ - ಋಜುವಾದ ಮಾರ್ಗವು, (ಉಪನಿಷತ್ತುಗಳಿಗೆ ಲಾಕ್ಷಣಿಕಾರ್ಥಗಳನ್ನು ಹೇಳದೆ ಸಮುಂಜಸವಾದ ಅರ್ಥಗಳನ್ನು ಹೇಳುವದು. ಇದರಿಂದ ಭಗವಂತನು ಸರ್ವಸ್ವವನ್ನೂ ಶರೀರವಾಗಿ ಹೊಂದಿ ಅವುಗಳಿಗೆ ಆತ್ಮವಾಗಿಯೂ, ದಿವ್ಯಮಂಗಳವಿಗ್ರಹಯುಕ್ತನಾಗಿಯೂ ಉಭಯವಿಭೂತಿಯುಕ್ತನಾಗಿಯೂ, ಕಲ್ಯಾಣಗುಣಪರಿಪೂರ್ಣನಾಗಿಯೂ, ಅವಿದ್ಯಾದಿ ಹೇಯಗುಣರಹಿತನಾಗಿಯೂ ತಿಳಿಯೋಣವು.) ಇದನ್ನು ಅಳಿತ್ತುಡುಂ - ನಾಶವಾಡುವ, ಐದುಕರ್ಕ - ವೇದಬಾಹ್ಯರಾಗಿಯೂ ವೇದಗಳಿಗೆ ಅಪಾರ್ಥಹೇಳುವದರಿಂದ ಕುದೃಷ್ಟಿಗಳೆಂದು

ಏರಣಿ ಕೀರ್ತಿಯಿ ರಾಮಾನುಜಮುನಿ ಇನ್ನುರೈ ಶೇರ್
ಶೀರಣಿಶಿಂತೈಯಿನೋಂ ಶಿಂತೆಯೋವಿನಿತ್ತೀವಿನೈಯೆ ? ॥೪॥

ಹೇಳಿಸಿಕೊಳ್ಳುವ ೧೬ ವಿಧ ಸಿದ್ಧಾಂತಿಗಳಿಗೆ, ಓರ್ವಾರಣವಾಯ್ - ಬಂದು ಅದಿ್ವತೀಯವುತ್ತಗಜವಾಗಿ, (ಕೆಲವರು ವೇದಕ್ಕೆ ಪ್ರಾಮಾಣ್ಯವನ್ನು ಕೊಡದೆ ಯುಕ್ತಿಗಳನ್ನು ತಂದು ಅಶಾಸ್ತ್ರೀಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಇನ್ನು ಕೆಲವರು ಮನಸ್ಸಿನಲ್ಲಿ ತಾನೇ ಪರಮಾತ್ಮನು ಎಂಬೀ ಮೊದಲಾದ ತಪ್ಪು ಅಭಿಪ್ರಾಯಗಳನ್ನು ಇಟ್ಟುಕೊಂಡು ತದನುಸಾರವಾಗಿ ಶ್ರುತಿಗಳಿಗೆ ಅರ್ಥಕಲ್ಪನೆಮಾಡುವರು. ಇವರುಗಳು ಸರಿಯಾಗಿ ಸಮುಂಜಸವಾಗಿ ತೋರುವ ಅರ್ಥಗಳನ್ನು ಬಿಟ್ಟು ಬೇರೆ ಅರ್ಥಗಳನ್ನು ಬೋಧಿಸುವರು. ಇಂತಹ ಅಪಸಿದ್ಧಾಂತಗಳನ್ನೆಲ್ಲಾ ಬಹುಸುಲಭವಾಗಿ ತಮ್ಮ ಶ್ರೀ ಭಾಷ್ಯಾದಿ ಗ್ರಂಥಗಳಿಂದ ಶ್ರೀ ಭಾಷ್ಯಕಾರರು ನಿರಸನಮಾಡಿದರು ಎಂಬಭಿಪ್ರಾಯವು.) ಅವರ್ ವಾದಕ್ಕದಲಿಗಳ್ - ಆ ಬಾಹ್ಯ ಕುದೃಷ್ಟಿಗಳ ವಾದವೆಂಬ ಬಾಳೇಗಿಡಗಳನ್ನು, ಮಾಯ್ತ್ತ - ಛೇದಿಸಿದ, ಪಿರಾ-ಪರಮೋಪಕಾರಕರಾದ, ಏರಣಿಕೀರ್ತಿಯು-ಭೂಮಿಗೆ ಅಲಂಕಾರವಾದ ಕೀರ್ತಿಯುಳ್ಳ, ಇರಾಮಾನುಶಮುನಿ - ಶ್ರೀಭಗವಾ ರಾಮಾನುಜಾಚಾರ್ಯರವರ, ಇನ್ನುರೈ ಶೇರ್, ಇ - ಮನೋಹರವಾದ, ಪರಮಭೋಗ್ಯವಾದ, ಉರೈ - ದಿವ್ಯ ಸೂಕ್ತಿಗಳ, ಶೇರ್ - ಸಂಬಂಧದಿಂದ ಅಂದರೆ ಪರಿಚಯದಿಂದ, (ಬಾಹ್ಯಕುದೃಷ್ಟಿಗಳ ವಾದವನ್ನು ಬಾಳೇಗಿಡಕ್ಕೆ ಹೋಲಿಸಿರುವದರಿಂದ, ಆನೆಗೆ ಬಾಳೇಗಿಡದ ನಿರಸನವು ಎಷ್ಟು ಸುಲಭವೋ ಅಷ್ಟು ಸುಲಭವಾಗಿ ಶ್ರೀಭಾಷ್ಯಕಾರರು ಕುದೃಷ್ಟಿಬಾಹ್ಯರ ವಾದಗಳನ್ನು ಶ್ರೀಭಾಷ್ಯದಲ್ಲಿ ಮಾಡಿರುತ್ತಾರೆಂದು ಭಾವವು. ಶ್ರೀಭಾಷ್ಯಸೂಕ್ತಿಯ ಭೋಗ್ಯತೆಯಲ್ಲಿ ಸ್ವಾಮಿ ನಿಗಮಾಂತದೇಶಿಕರಿಗೆ ಪರಮಾದರವು. ಆದುದರಿಂದ " ಯತಿಪ್ರವರ ಭಾರತೀರಸಭರೇಣ ನೀತಂವಯಃ " ತಮ್ಮ ಆಯುಸ್ಸೆಲ್ಲಾ ಯತಿರಾಜರ ದಿವ್ಯ ಸೂಕ್ತಿಗಳ ಸ್ವಾರಸ್ಯಗ್ರಹಣದಲ್ಲೇ ಕಳೆದೆನು ಎಂದು ಅಭೀತಿಸ್ತವದಲ್ಲಿ ಹೇಳಿರುತ್ತಾರೆ.

ಆದುದರಿಂದ " ಇಕ್ಷ ಉರ್ಯೆ " ಅವರ ದಿವ್ಯ ಸೂಕ್ತಿಗಳು ಪರಮಭೋಗ್ಯವಾದುವೆಂಬುದಾಗಿ ಹೇಳಿರುತ್ತಾರೆ. ಆದುದರಿಂದ ನಮ್ಮ ಸಿದ್ಧಾಂತಸ್ಥಾಪಕರು ಏನು ಹೇಳುತ್ತಾರೆಂಬುವದನ್ನೂ ತಿಳಿದುಕೊಳ್ಳಲು ಪ್ರಯತ್ನಕೂಡ ಮಾಡದಿರುವದು ಶೋಚನೀಯವಾದುದಲ್ಲವೆ? ಅಂತಹ ದಿವ್ಯ ಸೂಕ್ತಿಗಳ ಪರಿಚಯದಿಂದ, ಶೀರಣಿಶಿಂದಿಯನೋಂ, ಶೀರ್ - ಕಲ್ಯಾಣಗುಣಗಳಿಂದ, ಅಣಿ-ಹೊಂದಲ್ಪಟ್ಟ, ಶಿಂದಿಯನೋಂ - ಮನಸ್ಸುಳ್ಳವರಾದ ನಾವು (ಅಂತಹ ಶ್ಲಾಘ್ಯವಾದ ಸೂಕ್ತಿಗಳಿಂದ ನಮ್ಮ ಜ್ಞಾನವು ಪರಿಶುದ್ಧವಾದುದಾಗಿ ಸತ್ಪ್ರೋದ್ರೇಕವು ಹೆಚ್ಚಿದ ಮನಸ್ಸುಳ್ಳವರಾದ ನಾವು) ಇನಿತ್ತು - ಇನ್ನುಮೇಲೆ, ಅಂದರೆ ಶ್ರೀಭಾಷ್ಯಕಾರ ಸೂಕ್ತಿರಸಾಸ್ವಾದನವಾದ ನಂತರ, ತೀವಿನೆಯೈ - ಪಾಪಗಳನ್ನು, ಶಿಂತೆಯೋಂ - ಚಿಂತಿಸುವದಿಲ್ಲವು. ಶರಣಾಗತಿಮಾಹಾತ್ಮ್ಯವನ್ನು ಅವರ ಶ್ರೀಭಾಷ್ಯಶರಣಾಗತಿಗದ್ಯ ಮುಂತಾದವುಗಳಿಂದರಿತವರಾಗಿ ಪ್ರಪದನಾನುಷ್ಠಾನವಮಾಡಿ ದ್ವಯಾನುಸಂಧಾನವಮಾಡುವ ನಮ್ಮಗಳಿಗೆ ಇನ್ನು ಕ್ರೂರವಾದ ನಮ್ಮ ಪಾಪಗಳ ಭಯವೆಲ್ಲಿರುತ್ತದೆ? ಸ್ವಾಮಿಯು ಅನುಗ್ರಹವು ನಮ್ಮಗಳಿಗೆ ಸ್ವತಸಿದ್ಧವಾದುದೆಂಬ ಭಾವವು.)

ತಾತ್ಪರ್ಯ—ಶ್ರೀಭಾಷ್ಯವೊದಲಾದ ಬಂಭತ್ತು ಅಮೋಘ ಕೃತಿಗಳನ್ನು ಬರದು ಇತರ ಚಾರ್ವಾಕ, ಬೌದ್ಧ, ಜೈನ ಮೊದಲಾದ ಕುವಾದಿಗಳನ್ನೂ ಶಾಂಕರ ಮೊದಲಾದ ವೇದಗಳಿಗೆ ಅಪಾರ್ಥಗಳನ್ನು ಹೇಳುವ ವಾದಿಗಳನ್ನೂ ನಿರಸನಮಾಡಿ, ವೇದಗಳಿಗೆ ಸರ್ವಸಮಂಜಸಾರ್ಥಗಳನ್ನು ಹೇಳಿ, ಜೀವಶೇಷತ್ವವನ್ನು ಸ್ಥಾಪನಮಾಡಿ, ಹೀಗೆ ಪರೋಪಕಾರವನ್ನು ಮಾಡಿ ಯಶಸ್ಸನ್ನು ಪಡೆದ ಮಹಾನುಭಾವರಾದ ಶ್ರೀಭಾಷ್ಯಕಾರರ ದಿವ್ಯಸೂಕ್ತಿಗಳಿಂದ ನಮ್ಮ ಮನಸ್ಸಿನ ಕಲ್ಮಷಗಳೆಲ್ಲಾ ಕಳದು ಮನವು ಪವಿತ್ರತೆಯನ್ನು ಹೊಂದಿತು. ಇನ್ನು ಮುಂದೆ ತಮಗೆ ಪಾಪಗಳ ಭೀತಿ ಇಲ್ಲವೆಂಬಭಿಪ್ರಾಯವು.

ಅನಂತರ ಇಂತಹ ಶ್ರೀಭಾಷ್ಯಕಾರರಿಗೂ ಗುರುಕೋಟಿಯಲ್ಲಿದ್ದು, ನಮ್ಮ ದರ್ಶನಸ್ಥಾಪನೆಗೆ ತುಂಬಾ ಉತ್ತೇಜನವನ್ನು ಕೊಟ್ಟು, ಶ್ರೀಭಾಷ್ಯಕಾರರಿಗೆ ದರ್ಶನಸ್ಥಾಪನೆ ವಿಷಯದಲ್ಲಿ ಏನೇನು ಮಾಡಬೇ

ನೀಳವಂದಿನ್ರು ವಿಧಿವಕ್ಕೆಯಾಲ್ ನಿನ್ಮೈವೋನ್ರಿಯು ನಾಂ
ಮಾಳವಂದಿನ್ನುಂ ವಿನ್ಮೆಯುಡಂ ಪೊನ್ರಿವಿಳುಂದುಳಲಾ।

ಕೆಂಬ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಅವೋಘಗ್ರಂಥಗಳನ್ನು ದಯಪಾಲಿಸಿ, ಆಗಿನ ರಾಜರುಗಳು ಶೈವಸಿದ್ಧಾಂತಗಳಿಗೆ ಕೊಡುತ್ತಿದ್ದ ಉತ್ತೇಜನವನ್ನು ಮುರಿದು ವೈಷ್ಣವ ಸಿದ್ಧಾಂತಸ್ಥಾಪನೆ ಮಾಡುವ ಹಾಗೆ ಮಾಡಿ, ಇಷ್ಟು ಪರಮೋಪಕಾರಮಾಡಿದುದಕ್ಕಾಗಿ ಶ್ರೀ ಆಳವಂದಾರ್ರವರನ್ನು ಈ ಪಾಶುರದಿಂದ ಸ್ತೋತ್ರ ಮಾಡಿರುತ್ತಾರೆ.

ಅರ್ಥ—ನೀಳ - ಬಹುಕಾಲವು, ವಂದು - ಬಂದು ಅಂದರೆ ಸಂಸಾರದಲ್ಲಿ ಬಂದು, ಜೀವನು ಈ ಸಂಸಾರದಲ್ಲಿ ಪುನಃಪುನಃ ಸೃಷ್ಟಿಗಳ ಮೊದಲು ಪ್ರಳಯಪರ್ಯಂತ ತೊಳಲಿರುತ್ತಾನೆ. " ವೃಥೈವಭವತೋ ಯಾತಾಭೂಯಸೀ ಜನ್ಮಸಂತತಿಃ " ಎಂದು ಹೇಳಿರುವ ಮೇರಿಗೆ ಪುನಃ ಪುನಃ ಜನ್ಮಸಮೂಹಗಳನ್ನೆತ್ತಿ ಸಂಸಾರದಲ್ಲಿ ತೊಳಲಿದುದೆಲ್ಲಾ ವ್ಯರ್ಥವಾದುದಾಗಿ ಎಂಬ ಭಾವವು, ಇನ್ರು - ಈ ಜನ್ಮದಲ್ಲಿ, ವಿದಿವಕ್ಕೆಯಾಲ್ - ಭಗವತ್ಕೃಪಾಯುಕ್ತವಾದ ಭಾಗ್ಯಾತಿಶಯದಿಂದ, ನಿನ್ಮೈವು - ಶೇಷತ್ವಜ್ಞಾನವನ್ನು ಒನ್ರಿಯನಾಂ - ಹೊಂದಿದ ನಾವುಗಳು, ಮಾಳವಂದು - ಪುನಃ ಸಂಸಾರವನ್ನು ಪ್ರವೇಶಿಸಿ, ಇನ್ನುಂ - ಇನ್ನು ಮೇಲೆ, ವಿನ್ಮೆಯುಡಂಬು - ಪಾಪಿಷ್ಠವಾದ ಈ ಪ್ರಕೃತಿಸಂಬಂಧವುಳ್ಳ ದೇಹದೊಂದಿಗೆ, ಒನ್ನಿ - ವಿಕೀಭವಿಸಿ, ವಿಳಂದುಳಲಾದು - ಈ ಸಂಸಾರವೆಂಬ ಗುಂಡಿಯಲ್ಲಿ ನಾವು ಬೀಳದಹಾಗೆ, ನಮ್ಮೈ ಆಳವಂದಾರೆನ್ - ನಮ್ಮನ್ನು ರಕ್ಷಿಸಲು ಬಂದರು ಎಂಬ ಅನ್ವರ್ಥನಾಮಧೇಯವುಳ್ಳ, ವೆನ್ನು - (ರಾಜಾಸ್ಥಾನದಲ್ಲಿದ್ದ ರಾಜಪುರೋಹಿತನಾದ ಅಕ್ಕ್ಯಾಳ್ವಾರ್ನೆಂಬ ಶೈವಸಿದ್ಧಾಂತಿಯನ್ನು) ಗೆದ್ದು, ಅರುಳ್ತಂದು - ನಮ್ಮಲ್ಲಿ ಕೃಪೆಯನ್ನು ಮಾಡಿ, ವಿಳಂಗಿಯಶ್ಶೀರ್ - ಪ್ರಕಾಶಮಾನವಾದ ಕೀರ್ತಿಯುಳ್ಳ, ಳವಂದಾರ್ - ಶ್ರೀಯಾಮುನಮುನಿಗಳ, ಅಡಿಯೋಂ - ದಾಸರಾದ ನಾವು, ಇನಿ - ಇನ್ನುಮೇಲೆ, ಅಲ್ವಳಕ್ಕ್, ಅಪಸಿದ್ಧಾಂತಗಳನ್ನು, ಪಡಿಯೋಂ - ಓದುವದಿಲ್ಲ.

ತಾಳವಂದಾರಿನ ವನ್ಪುರುಳ್ತಂದು ವಿಳಂಗಿಯುಶೀರ್
ಆಳವಂದಾರಡಿಯೋಂ ಪಡಿಯೋಮಿನಿಯುಲ್ ವಳಕ್ಕೆ ॥೫॥

ತಾತ್ಪರ್ಯ—"ಬಹೂ ನಿಮೇ್ವ ವ್ಯತೀತಾನಿ ಜನಾ್ಮನಿತವಜಾ ರ್ಜುನ[1]" ಎಂಬಲ್ಲಿಯೂ "ಬಹೂನಾಂಜನ್ಮನಾಮುಂತೇ್[2]" ಎಂಬಲ್ಲಿಯೂ ಮತ್ತು "ಪುನರಪಿಜನನಂ ಪುನರಪಿ ಮರಣಂ ಪುನರಪಿಜನನೀ ಜಠರೇ ಶಯನಂ" ಎಂಬಲ್ಲಿಯೂ ತೋ್ರುವಹಾಗೆ ಸೃಷ್ಟಿಗಳ ಮೊದಲುಗೊಂಡು, ಇನ್ನೂ ಈ ಕರ್ಮಭೂಮಿಯಲ್ಲೇ ನಾವು ಇರುವದರಿಂದ ಅನೇಕ ಜನ್ಮಸಂತತಿಗಳನ್ನು ಮರುಕಾಂತಾರರೂಪದಲ್ಲಿರುವ ಈ ಪೃಥ್ವಿಯಲ್ಲಿಯೂ ಇತರ ಕಡೆಯಲ್ಲಿಯೂ ಎತ್ತಿದೆವು ಈ ದೇಹವೇನೋ "ಜಾಯಮಾನಂಹಿಪುರುಷಂ ಯಂ ಪಶ್ಯೇನ್ಮಧುಸೂಧನಃ" ಎಂಬಂತೆ, ಸ್ವಾಮಿಯ ಕಟಾಕ್ಷದಿಂದುಂಟಾಗಿರುವದರಿಂದ ಈಗಲುತ್ತಮ ಜನ್ಮವು ಪ್ರಾಪ್ತವಾಗಿರುತ್ತದೆ."ಬ್ರಾಹ್ಮಣೇಷ್ವಪಿ ವೇದಜ್ಞೋ ಹ್ಯರ್ಥಜ್ಞೋ ಹ್ಯಧಿಕಸ್ತತಃ।ಅರ್ಥಜ್ಞಾತ್ಸಂಶಯಚ್ಛೆತ್ತಾ" ಅಂದರೆ ಎಲ್ಲಾ ವರ್ಣದವರಿಗಿಂತಲೂ ಬ್ರಾಹ್ಮಣ ಶ್ರೇಷ್ಠನು,ಅವರಲ್ಲಿ ವೇದಾಧ್ಯಾಯಿಯು ಶ್ರೇಷ್ಠನಿಂತಲೂ ಅದರಲ್ಲೂ ವೇದಾರ್ಥಗಳನ್ನು ಚೆನ್ನಾಗಿ ತಿಳಿದ ವೈಷ್ಣವನು ಶ್ರೇಷ್ಠನಿಂತಲೂ, ಅವರುಗಳಲ್ಲೂ ಸಂಶಯಗಳನ್ನು ಹೋಗಲಾಡಿಸಿ ಸಮುಂಜಸವಾದ ಜ್ಞಾನವನ್ನುಂಟುಮಾಡುವವನು ಶ್ರೇಷ್ಠನು ಎಂದು ಹೀಗೆಲ್ಲಾ ಹೇಳಿರುವದರಿಂದ ಒಳ್ಳೇ ವೈಷ್ಣವ ಬ್ರಾಹ್ಮಣಕುಲದಲ್ಲಿ ಜನ್ಮವು ಸ್ವಾಮಿಕಟಾಕ್ಷದಿಂದ ದೊರತಿರುತ್ತದೆ. ಇಂತಹ ಸುಸಮಯದಲ್ಲೇ, ದೇಹವೇ ಆತ್ಮ ಎಂಬ ಭ್ರಾಂತಿಯನ್ನು ತೊರೆದು ಈ ಪ್ರಾಕೃತದೇಹವು ಪುನಃ ಬಾರದ ಹಾಗೆ ಮಾಡಿಕೊಳ್ಳಲಿ ಎಂಬ ಉದಾರ ಭಾವದಿಂದ ನಮ್ಮನ್ನು ರಕ್ಷಿಸಲು ಏನಾದರೂ ಬಂದರೊ ಎಂಬ ಅರ್ಥವತ್ತಾದ ಆಳವಂದಾರೆಂಬ ಅಪರ ನಾಮವನ್ನು ಹೊಂದಿದ, ಮತದ ರಾಜಪುರೋಹಿತನಾದ ಶೈವಸಿದ್ಧಾಂತಿಯ ಗರ್ವಭಂಗವನ್ನು ಮಾಡಿ

1 ಗೀತೆ ೪, ೫. 2 ಗೀತೆ ೭, ೯.

ಕಾಳಂ ವಲಂಪುರಿಯನ್ನ ನರ್ಕಾದಲ ಯವರ್ಕ್ಕು
ತ್ತಾಳಂ ವಳಂಗಿತ್ತಮಿಳ್‌ಮರೈ ಯಿನ್ನಿಶೈ ತಂದವಳ್ಳಲ್ ।

ಶ್ರೀಯಾಮುನಮುನಿಗಳ ಪಾದಕಮಲವನ್ನು ಭಜಿಸಿ ಧನ್ಯರಾಗಿರುತ್ತೇವೆ. ಅವರ ಸಿದ್ಧಾಂತವನ್ನು ಗ್ರಹಿಸಿದ ನಂತರ ಇತರ ತುಚ್ಛ ಅಪಸಿದ್ಧಾಂತಗಳನ್ನು ನಾವು ಇನ್ನುಮೇಲೆ ಕಣ್ಣೆತ್ತಿಕೂಡ ನೋಡುವದಿಲ್ಲವು ಎಂಬಭಿಪ್ರಾಯವು.

(ಶ್ರೀಯಾಮುನಮುನಿಗಳು ಶೈವರಾದ ಅಕ್ಕಿಯಾಳ್ವಾನನ್ನು ಗೆದ್ದು ತಮ್ಮ ಮತವನ್ನು ಅವರು ಅವಲಂಬಿಸುವಹಾಗೆ ಮಾಡಿದ ಉಪಾಖ್ಯಾನವು ಶ್ರೀಆಳವಂದಾರರ ಸಂಗ್ರಹಚರಿತ್ರೆ ಪುಟಗಳು ೪೪-೪೬ ರಲ್ಲಿ ಉಪಪಾದಿಸಲ್ಪಟ್ಟಿದೆ.)

(ಈ ಮುಂದಿನ ಪಾಶುರದಿಂದ ಆಳವಂದಾರಿಗೆ ಪಿತಾಮಹರಾಗಿಯೂ ಆಚಾರ್ಯರಾಗಿ, ದ್ರಾವಿಡ ಪ್ರಬಂಧಗಳನ್ನು ಪ್ರಚುರಗೊಳಿಸಿದವರಾಗಿಯೂ ಇರುವ ನಾಥಮುನಿಗಳ ಅನುಸಂಧಾನವು ಕರ್ತವ್ಯವೆಂದು ಭಾವಿಸಿ ಅವರನ್ನು ಸ್ತುತಿಸುತ್ತಾರೆ.)

ಅರ್ಥ— ಕಾಳಂ - ಕಾಸಿಳೆ, ವಲಂಪುರಿ - ಬಲಮುರಿಶಂಖ ಇವುಗಳ ಜಯಘೋಷಧ್ವನಿಗೆ, ಅನ್ನ - ಸಮಾನರಾದ, ನಲ್ - ಸಮಾಚೀನವಾದ, ಕಾದಲ್ - ಗುರುಭಕ್ತಿಯುಳ್ಳ, ಅಡಿಯವರ್ಕ್ಕ - ದಾಸರಾವ ಅಂದರೆ ಶಿಷ್ಯರಾದ (ತಮ್ಮ ಸೋದರಳಿಯಂದಿರಾದ) ಮೇಲೆಯಕತ್ತಾಳ್ವಾರ್, ಕೀಳೆಯಕತ್ತಾಳ್ವಾರ್ ಇವರಿಬ್ಬರಿಗೂ, ತಾಳಂ - ತಾಳಶಾಸ್ತ್ರವನ್ನು (ದೇವಗಾನಶಾಸ್ತ್ರ), ವಳಂಗಿ - ಕೊಟ್ಟು ಅಂದರೆ ಉಪದೇಶಿಸಿ, ತಮಿಳ್‌ಮರೈ - ದ್ರಾವಿಡ ವೇದವಾದ ದಿವ್ಯಪ್ರಬಂಧದ, ಇನ್ನಿಶೈ - ಪರಮಭೋಗ್ಯವಾದ ಗಾನವನ್ನು, ತಂದ - ಕೊಟ್ಟ, ವಳ್ಳಲ್ - ಪರಮೋದಾರ ಸ್ವಭಾವವುಳ್ಳ, ಮತ್ತು ಮೂಳುಂ - ಆದರದಿಂದ, ತವನೆರಿ - ತಪೋಮಾರ್ಗವನ್ನು ಅಂದರೆ ಮುಮುಕ್ಷುಗಳಿಂದನುಷ್ಠೇಯವಾದ ಭಕ್ತಿಪ್ರಪತ್ತಿಮಾರ್ಗಗಳನ್ನು, ಮೂಟ್ಟಿಯ - ಲೋಕದ ಜನರು ಪ್ರವರ್ತಿಸುವಹಾಗೆ ಮಾಡಿದ, ನಾಥಮುನಿ - ನಾಥಮುನಿಗಳ

ಮೂಳುಂ ತವನೆರಿ ಮೂಟ್ಟಿಯ ನಾಥನುನಿ ಕಳಲೇ
ನಾಳುಂ ತೊಳು ತೆಳುವೋಮ್ ನಮುಕ್ಕರ್ ನಿಕರ್ ನಾನಿಲತ್ತೇ ॥೬॥

ಕಳಲೆ - ಪಾದಗಳಿಗೆ, ನಾಳುಂ-ಪ್ರತಿದಿನದಲ್ಲೂ, ತೊಳುದು-ಪ್ರಣಾಮ ವನ್ನು ಮಾಡಿ, ಎಳವೋಂ - ನಾವು ಉಜ್ಜೀವಿಸುವೆವು. ಆದುದರಿಂದ ನಮುಕ್ಕಾರ್ - ನಮಗೆ ಯಾರು, ಈನಾನಿಲತ್ತೆ - ನಾಲ್ಕುವಿಧ ಭೂ ಭಾಗದಲ್ಲಿ, ನಿಕರ್ - ಸಮಾನರು ಅಂದರೆ ನಮ್ಮಂಥಾ ಭಾಗ್ಯಶಾಲಿ ಗಳ್ಯಾರು ಎಂಬರ್ಥವು.

ತಾತ್ಪರ್ಯ—"ಕಾಳಂ ವಲಂಪುರಿಯನ್ನ" ಎಂದು ಹೇಳಿರುವದು ತಮ್ಮ ಸೋದರಳಿಯಂದಿರಿಗೆ ಮಾಡಿದ ಉಪದೇಶಗಳಿಂದ ಅಪಸಿದ್ಧಾಂತ ಗಳೆಲ್ಲಾ ನಿರಾಕರಿಸಲ್ಪಟ್ಟು ತಮ್ಮ ಸಿದ್ಧಾಂತಸ್ಥಾಪನೆಯ ಜಯ ಘೋಷ ವನ್ನು ಸೂಚಿಸುತ್ತದೆ. ಇವರು ನಮ್ಮಾಳ್ವಾರನ್ನು ಸಾಕ್ಷಾತ್ಕರಿಸಿ ಅಧಿಕ ರಿಸಿದ ದ್ರಾವಿಡಪ್ರಬಂಧದ ದೇವಗಾನಸದೃಶವಾದ ಗಾನವೂ ತಾಳವೂ ಅವರಲ್ಲತಗಿರುವ ಸಿದ್ಧಾಂತವೂ ಸಹ, ಎಲ್ಲರನ್ನೂ ವಶಮಾಡಿಕೊಳ್ಳುವ ಶಕ್ತಿ ಇರುವದರಿಂದ ಕಾಳಂವಲಂಪುರಿಯಹಾಗೆ ಇರುವ ತಮ್ಮ ಸೋದರಳಿಯಂದಿರ ಮೂಲಕ ಜಯಘೋಷವನ್ನು ಹೊಂದಿತು ಎಂಬ ಭಿಪ್ರಾಯವು. ಶ್ರೀಮನ್ನಾಥಮುನಿಗಳು ತಾವು ಅಧಿಕರಿಸಿದ ತಿರು ವಾಯ್‌ಮೊಳಿಯನ್ನು ತಮ್ಮ ಸೊದರಳಿಯಂದಿರಾದ ಕೀಳೈಯ ಗತಾತ್ತಳ್ವಾರ್, ಮೇಲೈಯಗತಾತ್ತಳ್ವಾರವರಿಗೆ ದಿವ್ಯ ದೇವಗಾನ ದೋಪಾದಿಯಲ್ಲಿ ಹಾಡುವಹಾಗೆ ಉಪದೇಶಿಸಿದರಾದಕಾರಣ ಅವ ರಿಗ ತಮ್ಮ ಗುರುಗಳಾದ ಶ್ರೀಮನ್ನಾಥಮುನಿಗಳಲ್ಲಿ " ಯಥಾದೇವೇ ತಥಾಗುರೌ " ಎಂಬುವ ಹಾಗೆ ನಿರತಿಶಯಭಕ್ತಿ ಇತ್ತೆಂದು ಹೇಳುವ ದಕ್ಕಾಗಿ " ನಲ್ಲತಲ್ " ಎಂದು ಪ್ರಯೋಗಿಸಿರುತ್ತಾರೆ. ಶ್ರೀಮ ನ್ನಾಥಮುನಿಗಳು ಯೋಗಾಭ್ಯಾಸನಿರತರಾಗಿ, ಯೋಗಮಾಹಾತ್ಮ್ಯವ ನ್ನೂ ಪ್ರಪತ್ತಿಮಾರ್ಗದ ಸ್ವಾರಸ್ಯವನ್ನೂ ಅರಿತವರಾಗಿ, ಈ ಲೋಕದ ಜನರು ಉಜ್ಜೀವಿಸಲಿ ಎಂಬ ಪರಮೋದಾರ ಭಾವದಿಂದ ಇತರರಿಗೆ ಉಪದೇಶಿಸಿದುದರಿಂದ " ತಂದವಳ್ಳಲ್ " ಎಂಬ ಪ್ರಯೋಗವನ್ನೂ

" ಮೂಳುಂತವನೆರಿಮೂಟ್ಟಯ " ಎಂಬ ಪ್ರಯೋಗವನ್ನೂ ಮಾಡಿರುತ್ತಾರೆ. ಆದುದರಿಂದ ಶ್ರೀಯಾವುನೇಯರು " ಲೋಕೇವತೀರ್ಣ ಪರಮಾರ್ಥಸಮಗ್ರಭಕ್ತ್ಯೋಗಾಯ ನಾಥಮುನಯೇಯಮಿನಾಂವ ರಾಯ " ಎಂದು ಹೇಳಿರುತ್ತಾರೆ. " ನಾಥಮುನಿಕಳಲೇ " ಎಂಬಲ್ಲಿಯ ' ಏವ ' ಎಂಬ ಅವಧಾರಣದ ಅಭಿಪ್ರಾಯವು, ಇಂತಹ ಭಾಗವತ ಪ್ರಪತ್ತಿಯಿಂದಲೆ ಸ್ವಾಮಿಯಿಂದ ನಾವು ಪಡೆಯಬಹುದಾದ ಸಕಲ ಮನೋರಥಗಳನ್ನೂ ಪಡೆಯಬಹುದೆಂಬುವದನ್ನು ಸೂಚಿಸುತ್ತದೆ.

" ನಮಕ್ಕಾರ್ ನಿಕರ್ " ನಮ್ಮಂಥಾ ಭಾಗ್ಯಶಾಲಿಗಳ್ಯಾರಿದ್ದಾರೆಂದು ಹೇಳಿದುದರಿಂದ ಶ್ರೀಮನಾಥಮುನಿಗಳು ನಮಗೆ ಮಾಡಿರುವ ಉಪಕಾರಗಳು ಬಹು ಮಹತ್ತಾದವು ಎಂದು ತಾತ್ಪರ್ಯವು. ಅಂತಹ ಉಪಕಾರಗಳು ಯಾವುವೆಂದರೆ :—

1. ಶ್ರೀಮನಾಥಮುನಿಗಳು ನಮ್ಮಾಳ್ವಾರ್ರವರ 'ಆರಾವಮುದೇ ಎಂಬ ತಿರುಕುಡಂದೆಯ ಸ್ವಾಮಿಯನ್ನು ಕುರಿತು ಹೇಳಿದ ತಿರುವಾಯ್‌ಮೊಳಿಯ ಅರ್ಥಸಾರವನ್ನು ಪರಿಗ್ರಹಿಸಿದವರಾಗಿ, ಅವರ ಪೂರಾ ಗ್ರಂಥಗಳನ್ನು ಅಧಿಕರಿಸಬೇಕೆಂಬ ಸ್ಥಿರಸಂಕಲ್ಪವುಳ್ಳವರಾಗಿ, ಯಾರಿಂದಲೂ ಸಂಗ್ರಹಿಸಲು ಸಾಧ್ಯವಾಗದೆ, ಪರಾಂಕುಶದಾಸರೆಂಬುವರು ಹೇಳಿದಹಾಗೆ " ಕಣ್ಣಿನುಣ್ ಶಿರತ್ತಾಂಬನ್ನು ೧೨,೦೦೦ ಸಲ ಅವೃತ್ತಿಮಾಡಿ ನಮ್ಮಾಳ್ವಾರನ್ನು ಸಾಕ್ಷಾತ್ಕರಿಸಿ. ಅವರಿಂದ ಆಳ್ವಾರ್ತಿರುನಗರಿಯ ಹುಣಸೇಮರದ ಕೆಳಗೇನೇ ದ್ರಾವಿಡ ಪ್ರಬಂಧಗಳ ಮಂತ್ರಾರ್ಥಗಳ ಸೂತ್ರಭಾಷ್ಯ ಸ್ವಾರಸ್ಯಾರ್ಥಗಳ ಉಪದೇಶವನ್ನು ಹೊಂದಿ ಅವುಗಳನ್ನು ಪ್ರಚುರಗೊಳಿಸಿದರು. ದ್ರಾವಿಡಪ್ರಬಂಧ ಪ್ರಚಾರಣೆಗೆ ಇವರೇ ಆದಿಯು.

2, ತಿರುಮಂಗೈಯಾಳ್ವಾರವರು ಶ್ರೀರಂಗದಲ್ಲಿ ಏರ್ಪಡಿಸಿದ್ದ ತಿರುವಧ್ಯಯನೋತ್ಸವವು ನಿಂತುಹೋಗಿದ್ದುದನ್ನು ಪುನಃ ಸಂಭ್ರಮದಿಂದ ನಡೆಯುವಹಾಗೆ ಶ್ರೀರಂಗದಲ್ಲೂ, ತಿರುಕ್ಕುಡಂದೆಯಲ್ಲೂ ಏರ್ಪಾಡುಮಾಡಿದರು.

3. ಕೀೞ್ಪಯಹತ್ತಾೞ್ವ್, ಮೇೞ್ಪಯಹತ್ತಾೞ್ವ್‌ರವರಿಗೆ

ದಿವ್ಯಪ್ರಬಂಧಗಳನ್ನು ದೇವಗಾನದಿಂದ ಹಾಡುವಹಾಗೆ ಶಿಕ್ಷಿಸಿ, ಅವರು ಅಧ್ಯಯನೋತ್ಸವಗಳಲ್ಲಿ ಅರೈಯರೆಂಬ ಹೆಸರಿನಿಂದ ಹಾಡುವಹಾಗೆ ಮಾಡಿದರು.

4. ಒಬ್ಬ ದಾಸಿಯಮೂಲಕ ಈ ದ್ರಾವಿಡಪ್ರಬಂಧಗಾನವನ್ನು ಅಲ್ಲಿಯ ಚೋಳರಾಜನು ಸನ್ಮಾನಿಸುವಹಾಗೆ ಮಾಡಿ ಆ ರಾಜನು ಇವರಿಗೆ ಶಿಷ್ಯನಾಗಿ ದಿವ್ಯಪ್ರಬಂಧಾದಿಗಳು ಪ್ರಚಾರಕ್ಕೆ ಬರುವಹಾಗೆ ಮಾಡಿದರು.

ಈ ಕಾರಣಗಳಿಂದ ನಮ್ಮ ಆಚಾರ್ಯರವರಿಗೆ ಶ್ರೀಮನಾಥ ಮುನಿಗಳಲ್ಲಿ ಗೌರವವು ಹೆಚ್ಚು. ಆದುದರಿಂದ ನಾಥಮುನಿಗಳನ್ನು ತಮ್ಮ ಗ್ರಂಥಗಳಲ್ಲಿ ಕೊಂಡಾಡಿರುತಾ್ತರೆ.

ಈ ಗ್ರಂಥಕರ್ತರು ನಾಥಮುನಿಗಳವತಾರಸ್ಥಳವಾದ ವೀರನಾರಾಯಣಪುರಕ್ಕೆ ದಯಮಾಡಿಸಿ, ಅಲ್ಲಿ ಪ್ರತಿಷ್ಠಿತರಾದ ನಾಥಮುನಿಗಳ ಸೇವೆಯನ್ನು ಮಾಡಿ, ನಿರತಿಶಯಭಕ್ತಿಯನ್ನು ತೋರಲು, ಅದಕ್ಕೆ ನಾಥಮುನಿಗಳು ಪ್ರೀತರಾಗಿ ತಮಗೆ ನಮ್ಮಾಳ್ವಾರ್ರವರು ಹೇಗೆ ಅನುಗ್ರಹಿಸಿದರೋ ಹಾಗೆ ತಾವೂ ಈ ದೇಶಿಕವರ್ಯರಿಗೆ ಸಂಪ್ರದಾಯ ವಿಷಯಗಳನ್ನೆಲ್ಲಾ ವಿಶದವಾಗಿ ತಿಳಿಯುವಹಾಗೆ ಅನುಗ್ರಹಿಸಿ, ಬಹು ಜನಗಳು ಉಜ್ಜೀವಿಸುವಹಾಗೆ ಅನೇಕ ಅಮೋಘಗ್ರಂಥಗಳನ್ನು ರಚಿಸುವಿರೆಂಬುದಾಗಿ ಸಾ್ವಮಿಹರಿಸಿದರೆಂದು ಅರ್ಚಕಮುಖೇನ ತಿಳಿದು, ಕೃತಕೃತ್ಯರಾಗಿ

ನಾಥೇನಮುನಿನಾತೇನ ಭವೇಯಂ ನಾಥವಾನಹಂ ।
ಯಸ್ಯೈನೈಗಮಿಕಂ ತತ್ವಂ ಹಸ್ತಾಮಲಕತಾಂಗತಂ ॥

ಎಂಬ ಶ್ಲೋಕದಿಂದ ಅವರನ್ನು ಸ್ತುತಿಸಿದರು. ಇದರ ಅಭಿಪ್ರಾಯವೇನೆಂದರೆ—ಯಾವ ನಾಥಮುನಿಗಳಿಗೆ ವೇದದಲ್ಲಿರುವ ಯಥಾರ್ಥತತ್ವವೆಲ್ಲವೂ ನಮ್ಮಾಳ್ವಾರವರಿಂದ ರಚಿಸಲ್ಪಟ್ಟ ದ್ರಾವಿಡಪ್ರಬಂಧಗಳ ಮೂಲಕವಾಗಿ ಕರತಲಾಮಲಕಪ್ರಾಯವಾಗಿ ತಮಗೂ ಇತರರಿಗೂ ಸಹ ವೇದ್ಯವಾಯಿತೋ, ಅಂತಹ ನಾಥಮುನಿಗಳಿಂದ ತಾನು ಸಾ್ವಮಿಯುಳ್ಳವನಾದೆನು. ಅಂದರೆ ಲೋಕಗುರುವನ್ನು ಪಡೆಯುವೆನೆಂದು ಭಾವವು.

ಇಂತಹ ಉಪಕಾರವು ತಮಗೆ ದೊರೆತಿದ್ದರಿಂದ ತಮಗಿಂತಲೂ ಭಾಗ್ಯಶಾಲಿಗಳಾರು ಎಂದು ಹೇಳುತಾ ್ತರೆ.

" ನಾನಿಲತೆ ್ತ" ಎಂದು ಹೇಳಿರುವದರಿಂದ ಎಲ್ಲಾ ಭೂಭಾಗಗಳ ಲ್ಲೂ ತಮ್ಮಂತಹ ಧನ್ಯರಿಲ್ಲವೆಂದು ಭಾವವು. ಭೂಮಿಯನು ್ನ ಐದಾ ಗಿ ಭಾಗಿಸಿರುತಾ ್ತರೆ, ಪಾಳೈ, ಮರುತ ್ತಂ, ಕೈತಲ್, ಕುರುಂಜಿ, ಮುಲ್ಲೈ ಎಂಬದಾಗಿ. ಆದರೆ ಪಾಳೈ ಎಂದರೆ ಮರುಭೂಮಿ, ಅಲ್ಲಿ ಯಾರೂ ಜನರು ವಾಸಮಾಡುವುದಿಲ್ಲವಾದುದರಿಂದ ಅದನು ್ನ ಬಿಟ್ಟು ಇನು ್ನ ನಾಲು ್ಕ ಭಾಗಳನು ್ನ ಮಾತ್ರ ಹೇಳಿದ್ದಾರೆಂದು ಊಹಿಸಬೇಕು.

ಈ ಪಾಶುರದ ಕೊನೇ ಮಂಗಳರೂಪವಾದ ವಾಕ ್ಯವಾದ "ನಮುಕ್ಕಾರ್ನಿಕರ್ನಾನಿಲಿತೆ ್ತ" ಎಂಬುದು, ಶ ್ರೀಮನ್ನಾಥಮುಗಳಿಗೆ ಮಾತ್ರವೇ ಅನ್ವಯಿಸದೆ, ಶ ್ರೀ ಭಾಷ ್ಯಕಾರರ್ ಮತು ್ತ ಶ ್ರೀ ಆಳ ವಂದಾರರಿಗೂ ಅನ ್ವಯಿಸುವದರಲ್ಲಿ ತುಂಬಾ ಸ ್ವಾರಸ ್ಯವುಂಟು. "ಅರಣ ನೂಲ್" ಪಾಶುರದಿಂದ ಶ್ರೀಭಾಷ ್ಯಕಾರರನ್ನು ಕೊಂಡಾಡಿ "ಶಿಂತಿ ಯು ನೋಂತೀವಿನೈಯೆ" ಎಂದು ಹೇಳಿದುದರಿಂದ ತಮಗೆ ಮನಃ ಪಾರಿಶುದ ್ಧ್ಯವೂ, " ನೀಳವಂದು " ಪಾಶುರದಿಂದ ಶ ್ರೀಯಾಮುನ ಮುನಿಗಳನ್ನು ಕೊಂಡಾಡಿ "ಪಡಿಯೋಮಿನಿ ಅಲ ್ವಳಕ್ಕೆ" ಎಂದು ಹೇಳಿ ರುವುದರಿಂದ ವಾಕ ್ಪಾರಿಶುದ ್ಧ್ಯವೂ, "ಕಾಳಂ ವಲಂಪುರಿ" ಎಂಬೀ ಪಾಶುರದಿಂದ ಶ ್ರೀನಾಥಮುನಿಗಳನ್ನು ಕೊಂಡಾಡಿ "ತೊಳುದೆಳವ್ವೋಂ" ಎಂಬುವುದರಿಂದ ಕಾಯಪಾರಿಶುದ ್ಧ್ಯವೂ, ಹೀಗೆ ಮುನಿತ ್ರಯ ರಿಂದ ಮನೋವಾಕ ್ಕಾಯ ಪರಿಶುದ ್ಧತೆಯೂ ತಮಗೆ ಉಂಟಾಯಿತೆಂದು "ನಮುಕ್ಕಾರ್ ನಿಕರ್ನಾನಿಲತೆ ್ತ" ಎಂದು ಮಂಗಳವನ್ನು ಹೇಳಿ ಗುರು ಪರಂಪರಾಸಾರವನ್ನು ಮುಗಿಸಿರುತಾ ್ತರೆ.

ಇತಿ ಕವಿತಾರ್ಕಿಕ ಸಿಂಹಸ ್ಯ ಸರ ್ವತಂತ ್ರಸ ್ವತಂತ ್ರಸ ್ಯ
ವೇದಾಂತಾಚಾರ್ಯಸ ್ಯಕೃತಿಷು.

ಗುರುಪರಂಪರಾಸಾರಸ ್ಸಂಪೂರ್ಣಃ.

ಶ ್ರೀಮತೇನಿಗಮಾಂತಮಹಾದೇಶಿಕಾಯನಮಃ.